# ಚಿಗುರು



ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು ।
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ – ಮಂಕುತಿಮ್ಮ ॥

## ಲೇಖನ ಮತ್ತು ಕವಿತೆಗಳ ಸಂಗ್ರಹ

ಸಂಪುಟ – 01, ಸಂಚಿಕೆ – 10



ಸಂಪಾದಕರು

ಡಾ. ವೀರೇಂದ್ರ ಕುಮಾರ್ ವಾಲಿ ಎಸ್

ಡಾ. ರವಿ ಹೆಚ್

# ಚಿಗುರು

ಲೇಖನ ಮತ್ತು ಕವಿತೆಗಳ ಸಂಗ್ರಹ


<u>ಸಂಪಾದಕರು</u>

ಡಾ. ವೀರೇಂದ್ರ ಕುಮಾರ್ ವಾಲಿ ಎಸ್

ಡಾ. ರವಿ ಹೆಚ್

## ಚಿಗುರು ವಾರ್ಷಿಕ ಸಂಚಿಕೆ – 2024–25

**Published By:**
Notion Press Publication
Notion Press Media Pvt Ltd,
No.50, Chettiyar Agaram Main Road,
Vanagaram, Chennai, Tamil Nadu 600095
Email ID: publish @ notionpress.com
Phone : 044 4631 5631

ಪುಸ್ತಕದ ಹೆಸರು : **ಚಿಗುರು (CHIGURU)**
(ಸಂಪುಟ –01 ಸಂಚಿಕೆ – 10)

**ಸಂಪಾದಕರು:**
ಡಾ. ವೀರೇಂದ್ರ ಕುಮಾರ್ ವಾಲಿ ಎಸ್.,
ಡಾ. ರವಿ ಹೆಚ್.,
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
**Email: hravi198206@gmail.com**
**veerendrakumarwalis@gmail.com**

**ಸಹ ಸಂಪಾದಕರು:**
ಡಾ. ಕಿರಣ್ ಕುಮಾರ್ ಕೆ ಎಸ್.,
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
**Email: kirankumbar.ks25@gmail.com**

ಮೊದಲ ಮುದ್ರಣ – ಜನವರಿ, 2025

ಪುಟಗಳು : 8+105 = 113

ಹಕ್ಕುಗಳು ©: ಆಯಾ ಲೇಖಕರದ್ದು

ಬೆಲೆ : 270=00 ರೂಪಾಯಿಗಳು

ISBN : 979-890269976-7

# ಭಾಷಾಸಂಘ – 2024-25

**ಮಹಾ ಪೋಷಕರು**



ಶ್ರೀ ಬಿ ಎಸ್ ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಪೋಷಕರು**



ಶ್ರೀ ಬಿ ವೈ ರಾಘವೇಂದ್ರ
ಕಾರ್ಯದರ್ಶಿಗಳು., ಸ್ವಾಮಿ ವಿವೇಕಾನಂದ
ವಿದ್ಯಾಸಂಸ್ಥೆ (ರಿ), ಶಿಕಾರಿಪುರ ಮತ್ತು
ಸಂಸದರು, ಶಿವಮೊಗ್ಗ ಲೋಕಸಭಾ ಕ್ಷೇತ್ರ

**ಅಧ್ಯಕ್ಷರು**



ಡಾ. ಶಿವಕುಮಾರ್ ಜಿ ಎಸ್
ಪ್ರಾಂಶುಪಾಲರು

**ಮಾರ್ಗದರ್ಶಕರು**



ಡಾ. ಕಿರಣ್ ಕುಮಾರ್ ಕೆ ಎಸ್
ಸಹಾಯಕ ಪ್ರಾಧ್ಯಾಪಕರು



ಡಾ. ವೀರೇಂದ್ರ ಕುಮಾರ್ ವಾಲಿ ಎಸ್
ಸಹಾಯಕ ಪ್ರಾಧ್ಯಾಪಕರು



ಡಾ. ರವಿ ಹೆಚ್
ಸಹಾಯಕ ಪ್ರಾಧ್ಯಾಪಕರು

# ಭಾಷಾ ಸಂಘದ ಸದಸ್ಯರುಗಳು


ಮೌನೇಶ್


ರಮೇಶ್ ಗುತ್ತೇದಾರ್


ಚಿನ್ಮಯ್ ಹೆಚ್ ಎಸ್


ಭಾಗ್ಯಶ್ರೀ ಮರೀಗೌಡ್ರು


ಮುರಿಗೇಶ್ ಎಲ್


ನಿರ್ಮಲಾ


ಪ್ರಿಯಾ ಎನ್


ನವನೀತಬಾಯಿ


ಸಂಗೀತಾ ಪಿ


ಬಿ. ಸುಹೀಲ್


ರಂಜಿತಾ ಅಣಜಿ


ನಾಗರತ್ನ


ಕವಿತಾ ಎಸ್


ಯಲ್ಲೇಶ್ವರಿ


ಐಶ್ವರ್ಯ ಕೆ ಎಸ್


ಅರ್ಚನಾ ಸಿ


ಗಗನ್ ಎಲ್ ನಾಯ್ಕ


ಇಂದು ಪಿ ಬೀಮರಾಯರ್


ಕಲ್ಮೇಶ್ ಎನ್ ಕೊಂಡಿಕೊಪ್ಪ


ಮೇಘನಾ ಎಂ.ಎಸ್


ಪೂಜಾ ಎ ಎಸ್


ರಂಜಿತಾ ಎಸ್


ರೋಹಿಣಿ ಎಂ


ರೂಪಿಣಿ ಜಿ


ಸಾಜನ್‌ಬಾನು ಬಾಗಿಲಮನಿ


ಶ್ರೀಶೈಲ ಸಿದ್ಧಪ್ಪ ಇಂಚಲ್

**ಸಂಪಾದಕೀಯ ...........**

ಭಾಷೆ ಮಾನವನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇರುವ ಒಂದು ಮಾಧ್ಯಮ. ವ್ಯಕ್ತಿ ತನ್ನಲ್ಲಿ ಉಂಟಾಗುವ ತುಮುಲಗಳನ್ನು, ಚಿಂತನೆಗಳನ್ನು, ನೋವು–ನಲಿವುಗಳನ್ನು, ಸುಖ–ದುಃಖಗಳನ್ನು ಬರಹದ ಮೂಲಕ ರೂಪ ಕೊಡುವ ಪ್ರಜ್ಞಾವಂತ ವ್ಯಕ್ತಿ ಮಾನವ ಮಾತ್ರ. ಕನ್ನಡ ನಾಡು ನುಡಿಗಳ ಕುರಿತು ಪ್ರತಿ ವರ್ಷದಂತೆ ಈ ವರ್ಷವೂ ಲೇಖನಗಳ ಬರಹಗಳಿಗೆ **"ಚಿಗುರು"** ಸಂಚಿಕೆ ಒಂದು ವೇದಿಕೆಯಾಗಿದೆ.

21ನೇ ಶತಮಾನದ ಕಾಲಘಟ್ಟದಲ್ಲಿ ಮಾತೃಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಅನಿವಾರ್ಯತೆಗೆ ಬಂದಿರುವುದು ವಿಷಾದನೀಯ. ಇಂತಹ ಸಂದರ್ಭಗಳಲ್ಲಿ ಬರವಣಿಗೆಯ ಗುಣಮಟ್ಟವನ್ನು ಅತ್ಯಂತ ಪರಿಣಾಮಕಾರಿಯಾಗಿ ಸಹೃದಯ ಓದುಗರಿಗೆ ಮುಟ್ಟಿಸುವ ಜವಾಬ್ದಾರಿ ಬರಹಗಾರರಿಗೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಪತ್ರಿಕೆಯಲ್ಲಿ ಬರೆಯಲ್ಪಟ್ಟ ಪ್ರತಿಯೊಂದು ಬರಹಗಳು ಉತ್ತಮ ಸಾಂಸ್ಕೃತಿಕತೆಯನ್ನು ಪ್ರತಿಬಿಂಬಿಸುತ್ತವೆ ಎಂಬುದು ನನ್ನ ಆಶಯ. ಶಾಲೆಗಳಲ್ಲಿ ಉಳಿಯದ ನಮ್ಮ ನಾಡಭಾಷೆ ಅಥವಾ ಮಾತೃಭಾಷೆ ಆಡುಭಾಷೆಯಾಗಿ ಮಾತ್ರ ಉಳಿಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕನ್ನಡ ನಾಡು ನುಡಿಯನ್ನು ಉಳಿಸಿ ಬೆಳೆಸಿಕೊಂಡು ಮುಂದಿನ ಭವಿಷ್ಯಕ್ಕೆ ಕೊಂಡ್ಯೊಯುವ ಜವಬ್ದಾರಿ ನಮ್ಮ ಮತ್ತು ಸರ್ಕಾರದ ಶಾಲೆಗಳಲ್ಲಿ ರೂಪಿತವಾದರೆ ಮಾತ್ರ ಭಾಷೆಯನ್ನು ಬೆಳೆಸಲು ಸಾಧ್ಯ. ಆದ್ದರಿಂದ ಕನ್ನಡ ಭಾಷೆ, ಸಂಸ್ಕೃತಿ, ಅಳಿವು, ಉಳಿವು, ಕಲಿಕೆಯ ಆಯಾಮಗಳು ಕನ್ನಡದ ಅಸ್ಮಿತೆಗಳು. ಆದ್ದರಿಂದ ಇಂತಹ ಸಾಧ್ಯತೆಗಳನ್ನು ಸ್ವಲ್ಪವಾದರೂ ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಿವಲ್ಲಿ ಚಿಗುರು ಹೊತ್ತಿಗೆ ಮುನ್ನಡೆಸಬಲ್ಲದು.

ಆದ್ದರಿಂದ, ಬರವಣಿಗೆ ಒಂದು ಪುಸ್ತಕದ ಆತ್ಮವಿದ್ದಂತೆ. ಇಲ್ಲಿಯ ಬರಹಗಳನ್ನು ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು, ಸಹಾಯಕ ಪ್ರಾಧ್ಯಾಪಕರುಗಳು ತಾವು ಕಂಡ ಕನ್ನಡದ ಬಗೆಗಿನ ಹಲವು ಆಯಾಮಗಳನ್ನು ಓದುಗರ ಪ್ರಜ್ಞೆಗೆ ಸಾಣೆ ಹಿಡಿಯುವ, ಸತ್ಯದ ಪರ ಜನಾಭಿಪ್ರಾಯವನ್ನು ರೂಪಿಸುವ **"ಚಿಗುರು"** ವಾರ್ಷಿಕ ಸಂಚಿಕೆಯಾಗಿದೆ. ಬಹುತೇಕ ಕನ್ನಡ ಸಾಹಿತ್ಯ, ಸಾಹಿತ್ಯಕ ಚರ್ಚೆಗಳು, ರಂಗಭೂಮಿ, ಚಲನಚಿತ್ರ, ಕಲೆ, ಶಿಕ್ಷಣ, ಜಾನಪದ, ಕನ್ನಡ ನಾಡು ನುಡಿ ಹೀಗೆ ಹಲವು ಸಾಂಸ್ಕೃತಿಕ ವಿಷಯಗಳ ಕುರಿತು ಅನಾವರಣವಾದ ಸುಂದರ ಹೊತ್ತಿಗೆ.

ಬರಹದ ವೈಶಿಷ್ಟ್ಯವೆಂದರೆ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನೂ ಆಕರ್ಷಿಸುವ ಗುಣವನ್ನು ಪಡೆದುಕೊಂಡಿರುತ್ತದೆ. ಓದುಗರಲ್ಲಿ ಅಭಿರುಚಿ ಮೂಡಿಸುವ ಕಾರ್ಯವನ್ನು ಬರಹ ಮಾಡುತ್ತದೆ. ಬರಹಗಳು ಲೇಖಕರ ಆತ್ಮಕೇಂದ್ರಿತ. ಸಮಾಜ, ಸಾಹಿತ್ಯ, ಸಂಸ್ಕೃತಿ ಕೇಂದ್ರಿತವೆ ಎಂಬ ಪ್ರಶ್ನೆಯೂ ಇದೆ. ಸಾಮಾನ್ಯವಾಗಿ ಬರಹದಲ್ಲಿ ಲೇಖಕರು ನಾನು ಎಂಬ ಪ್ರತ್ಯಯವನ್ನು ಬಳಸಿದರೂ ಅದು ಆತ್ಮಕೇಂದ್ರಿತ ಅಥವಾ ಅಹಮಿಕೆಯನ್ನು ಸೂಚಿಸುವ ಪದವಾಗಿ ಉಳಿಯುವುದಿಲ್ಲ. ಬದಲಿಗೆ ಬರಹಕ್ಕೆ ಸಂವಾದ ಸ್ವರೂಪವನ್ನು ನೀಡುತ್ತದೆ.

ಪ್ರಶಿಕ್ಷಣಾರ್ಥಿಗಳು, ಸಹಾಯಕ ಪ್ರಾಧ್ಯಾಪಕರುಗಳು ತಾವು ಕಂಡ ಕನ್ನಡದ ಬಗೆಗಿನ ಹಲವು ಆಯಾಮಗಳನ್ನು ಓದುಗರ ಪ್ರಜ್ಞೆಗೆ ಸಾಣೆ ಹಿಡಿಯವ, ಸತ್ಯದ ಪರ ಜನಾಭಿಪ್ರಾಯವನ್ನು ರೂಪಿಸುವ "ಚಿಗುರು" ವಾರ್ಷಿಕ ಸಂಚಿಕೆಯಾಗಿದೆ. ಬಹುತೇಕ ಕನ್ನಡ ಸಾಹಿತ್ಯ, ಸಾಹಿತ್ಯಕ ಚರ್ಚೆಗಳು, ರಂಗಭೂಮಿ, ಚಲನಚಿತ್ರ, ಕಲೆ, ಶಿಕ್ಷಣ, ಜಾನಪದ, ಕನ್ನಡ ನಾಡು ನುಡಿ ಹೀಗೆ ಹಲವು ಸಾಂಸ್ಕೃತಿಕ ವಿಷಯಗಳ ಕುರಿತು ಅನಾವರಣವಾದ ಸುಂದರ ಹೊತ್ತಿಗೆ ಇದಾಗಿದೆ ಎಂದು ಭಾವಿಸುತ್ತೇವೆ.

ಚಿಗುರು ಸಂಚಿಕೆಯು ಆಕರ್ಷಕವಾಗಿ ಮೂಡಿಬರಲು ಪ್ರೇರಣೆಯಾಗಿರುವವರು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸರ್ವಸದಸ್ಯರು ಸದಾ ನಮ್ಮ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ನೀಡುತ್ತಾ ಬಂದಿರುವ ಸರ್ವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಅಂತೆಯೇ, ಭಾಷಾ ಸಂಘದ ಪ್ರತಿ ಚಟುವಟಿಕೆಗಳಿಗೆ ಸದಾ ಬೆನ್ನೆಲುಬಾಗಿ ನಿಂತು ಯಶಸ್ವಿಯಾಗಲು ಕಾರಣೀಕರ್ತರಾದ ಕಾಲೇಜಿನ ಪ್ರಾಚಾರ್ಯರಾದ ಡಾ. ಶಿವಕುಮಾರ್ ಜಿ ಎಸ್‌ರವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಇನ್ನು ಭಾಷಾ ಸಂಘದ ಪ್ರತಿ ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಚಟುವಟಿಕೆಗಳ ರೂವಾರಿಗಳು ಮತ್ತು ಮಾರ್ಗದರ್ಶಕರಾದ ಡಾ. ಕಿರಣ್ ಕುಮಾರ್ ಕೆ ಎಸ್., ಡಾ. ರವಿ ಹೆಚ್, ಹಾಗೂ ಶಿಕ್ಷಣ ಮಹಾವಿದ್ಯಾಲಯದ ಎಲ್ಲಾ ಬೋಧಕ ಹಾಗೂ ಬೋಧಕೇತರ ವರ್ಗದವರಿಗೆ ಮತ್ತು ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಡಾ. ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

# ಪರಿವಿಡಿ


| ಕ್ರಮ ಸಂಖ್ಯೆ | ಸಂಗತಿಗಳು | ಪುಟ ಸಂಖ್ಯೆ |
|---|---|---|
| | ಭಾಷಾಸಂಘ 2024–25 ಮತ್ತು ಸರ್ವಸದಸ್ಯರು | iii - iv |
| | ಸಂಪಾದಕೀಯ | v -vi |
| 01 | ಭಾರತೀಯ ಶಿಕ್ಷಣ ವ್ಯವಸ್ಥೆಗೆ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪರಿಣಾಮಗಳು<br>**ಡಾ. ಶಿವಕುಮಾರ್ ಜಿ ಎಸ್., ಪ್ರಾಚಾರ್ಯರು** | 1 – 6 |
| 02 | ನವೀನ ಶಿಕ್ಷಣಶಾಸ್ತ್ರ ಮತ್ತು ತಂತ್ರಜ್ಞಾನ: ಎಐ ಬೋಧಕರು ಮತ್ತು ಬುದ್ಧಿವಂತ ಕಲಿಕಾ ವ್ಯವಸ್ಥೆಗಳು<br>**ಡಾ. ವೀರೇಂದ್ರ ಕುಮಾರ ವಾಲಿ ಎಸ್., ಸಹಾಯಕ ಪ್ರಾಧ್ಯಾಪಕರು** | 7 – 14 |
| 03 | ಶಾಲೆಯಲ್ಲಿ ಮಾತೃಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಸಲು ಇರುವ ಸಾಧನಗಳು ಮತ್ತು ತಂತ್ರಗಳು<br>**ಡಾ. ರವಿ ಹೆಚ್., ಸಹಾಯಕ ಪ್ರಾಧ್ಯಾಪಕರು** | 15 – 19 |
| 04 | ಸಂಪ್ರದಾಯಿಕ ಬೋಧನೆ ಮತ್ತು ಆಧುನಿಕ ಬೋಧನೆ: ಒಂದು ಸೈದ್ಧಾಂತಿಕ ಅವಲೋಕನ<br>**ಡಾ. ಕಿರಣ್ ಕುಮಾರ್ ಕೆ ಎಸ್., ಸಹಾಯಕ ಪ್ರಾಧ್ಯಾಪಕರು** | 20 – 23 |
| 05 | ಕರ್ನಾಟಕ ಏಕೀಕರಣ ಮತ್ತು ಕುವೆಂಪು<br>**ಡಾ. ದೇವರಾಜ ವೈ., ಸಹಾಯಕ ಪ್ರಾಧ್ಯಾಪಕರು** | 24 – 27 |
| 06 | ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ<br>**ಡಾ. ಯದುಕುಮಾರ್ ಎಂ., ಸಹಾಯಕ ಪ್ರಾಧ್ಯಾಪಕರು** | 28 – 30 |
| 07 | ವಿಶ್ವಮಾನವತೆಯ ದೀಪ: ರಾಷ್ಟ್ರಕವಿ ಕುವೆಂಪು (ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ)<br>**ಡಾ. ವಾಣಿನಾಯಕಿ ಡಿ ಸಿ., ಸಹಾಯಕ ಪ್ರಾಧ್ಯಾಪಕರು** | 31 – 32 |
| 08 | ವಚನ ಸಾಹಿತ್ಯ: ಭಾರತೀಯ ಜ್ಞಾನ ಪರಂಪರೆ, ಸಾಮಾಜಿಕ ಪರಿವರ್ತನೆ<br>**ಡಾ. ನಾಗೇಂದ್ರಪ್ಪ ಎಸ್., ಸಹಾಯಕ ಪ್ರಾಧ್ಯಾಪಕರು** | 33 – 35 |
| 09 | ಧೈರ್ಯ, ನಂಬಿಕೆ ಮತ್ತು ಭರವಸೆಯ ಪಯಣ<br>**ಶ್ರೀ ರವಿಕುಮಾರ್ ಎನ್.ಜಿ., ದೈಹಿಕ ಶಿಕ್ಷಣ ನಿರ್ದೇಶಕರು** | 36 – 37 |
| 10 | ಪ್ರಾಚೀನ ಗ್ರಂಥಾಲಯ ವ್ಯವಸ್ಥೆ ಮತ್ತು ಆಧುನಿಕ ಗ್ರಂಥಾಲಯ ವ್ಯವಸ್ಥೆಯ ನಡುವಿನ ವೈಶಿಷ್ಟ್ಯತೆಗಳು ಹಾಗೂ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಗ್ರಂಥಾಲಯ ವ್ಯವಸ್ಥೆ –<br>**ಶ್ರೀ ವಿಶ್ವನಾಥ ಜಿ., ಗ್ರಂಥಪಾಲಕರು** | 38 – 44 |
| 11 | ಕನ್ನಡದಲ್ಲಿ ತಂತ್ರಜ್ಞಾನದ ಮಹತ್ವ –<br>**ಶ್ರೀಮತಿ ಕವಿತಾ ಹರವಿಶೆಟ್ಟರ್., ಸಹಾಯಕ ಗ್ರಂಥಪಾಲಕರು** | 45 – 48 |
| 12 | ಹೆತ್ತ ತಾಯಿಗೆ ಕೊಟ್ಟಷ್ಟೇ ಗೌರವ, ಕನ್ನಡಕ್ಕೂ ನೀಡೋಣ<br>**ಕಲ್ಮೇಶ ಓ ಕೊಂಡಿಕೊಪ್ಪ., ಪ್ರಶಿಕ್ಷಣಾರ್ಥಿ** | 49 – 50 |
| 13 | ಡಿಜಿಟಲ್ ಯುಗದಲ್ಲಿ ಕನ್ನಡದ ಬಳಕೆ: ಹೊಸ ಸಾಧ್ಯತೆಗಳು ಮತ್ತು ಸವಾಲುಗಳು<br>**ಗಗನ್ ಎಲ್ ನಾಯಕ್., ಪ್ರಶಿಕ್ಷಣಾರ್ಥಿ** | 51 – 52 |
| 14 | ಕನ್ನಡ ಭಾಷೆಯ ಚರಿತ್ರೆ – **ಶ್ರೀಶೈಲ್ ಇಂಚಲ್ ಸಿದ್ಧಪ್ಪ., ಪ್ರಶಿಕ್ಷಣಾರ್ಥಿ** | 53 – 54 |
| 15 | ಕನ್ನಡ ಜಾನಪದ ಸೊಗಡು : ಮಣ್ಣಿನ ಮೂಲ ಸಂಸ್ಕೃತಿಯ ಜೀವಧಾರೆ<br>**ಅರ್ಚನಾ, ಸಿ., ಪ್ರಶಿಕ್ಷಣಾರ್ಥಿ** | 55 – 58 |

| | | |
|---|---|---|
| **16** | ಕನ್ನಡ ಭಾಷೆಯ ಶಿಕ್ಷಣದಲ್ಲಿನ ಸ್ಥಾನಮಾನ – **ಪೂಜಾ ಎ ಎಸ್., ಪ್ರಶಿಕ್ಷಣಾರ್ಥಿ** | 59 – 61 |
| **17** | ವಚನ ಸಾಹಿತ್ಯದ ಇತಿಹಾಸ – **ರೋಹಿಣಿ ಎಂ., ಪ್ರಶಿಕ್ಷಣಾರ್ಥಿ** | 62 – 63 |
| **18** | ಕನ್ನಡದ ಕೀರ್ತನಾಕಾರರು – **ರೂಪಿಣಿ ಜಿ., ಪ್ರಶಿಕ್ಷಣಾರ್ಥಿ** | 64 – 65 |
| **19** | ಕನ್ನಡದ ಬರವಣಿಗೆ – **ಸಾಜನ್ ಬಾನು ಬಾಗಿಲಮನೆ., ಪ್ರಶಿಕ್ಷಣಾರ್ಥಿ** | 66 – 67 |
| **20** | ಕನ್ನಡದ ಸಾಹಿತ್ಯದಲ್ಲಿ ಛಂದಸ್ಸು – **ರಂಜಿತಾ ಎನ್., ಪ್ರಶಿಕ್ಷಣಾರ್ಥಿ** | 68 – 69 |
| **21** | ಭಾಷಾ ಪ್ರಯೋಗಾಲಯ – **ಇಂದು ಪಿ., ಪ್ರಶಿಕ್ಷಣಾರ್ಥಿ** | 70 – 71 |
| **22** | ಪತ್ರಲೇಖನ – **ಮೇಘನಾ ಎಂ.ಎಸ್., ಪ್ರಶಿಕ್ಷಣಾರ್ಥಿ** | 72 – 73 |
| **23** | ಮಲೆನಾಡಿನ ಸೊಬಗು – **ಮುರುಗೇಶ್ ಎಲ್., ಪ್ರಶಿಕ್ಷಣಾರ್ಥಿ** | 74 – 75 |
| **24** | ಗೆಳೆತನವೆಂಬ ಆಪ್ತ ನಿಧಿ – **ನವನೀತಬಾಯಿ ಆರ್., ಪ್ರಶಿಕ್ಷಣಾರ್ಥಿ** | 76 |
| **25** | ಕುಟುಂಬವೆಂಬ ನಂದಗೋಕುಲ – **ರಮೇಶ್ ಎಂ ಗುತ್ತೇದಾರ್., ಪ್ರಶಿಕ್ಷಣಾರ್ಥಿ** | 77 – 81 |
| **26** | ಗಿರೀಶ್ ಕಾರ್ನಾಡ್ – **ನಾಗರತ್ನ ಎಂ., ಪ್ರಶಿಕ್ಷಣಾರ್ಥಿ** | 82 – 83 |
| **27** | ಭಾಷೆಯು ಭಾವನೆ ಕೆರಳಿಸುವ ಅಸ್ತ್ರ ಆಗದಿರಲಿ – **ನಿರ್ಮಲಾ ಎಂ., ಪ್ರಶಿಕ್ಷಣಾರ್ಥಿ** | 84 |
| **28** | ಕನ್ನಡಕ್ಕಾಗಿ ಬಾನುವಿನ ಸಾಧನೆ ನಮ್ಮ ಹೆಮ್ಮೆ – **ಸಂಗೀತ ಪಿ., ಪ್ರಶಿಕ್ಷಣಾರ್ಥಿ** | 85 – 86 |
| **29** | ಆಧುನಿಕ ಕನ್ನಡದಲ್ಲಿ ಆಡುಭಾಷೆಯ ಪ್ರಭಾವ –**ಭಾಗ್ಯಶ್ರೀ ಮರೀಗೌಡ್ರು., ಪ್ರಶಿಕ್ಷಣಾರ್ಥಿ** | 87 – 88 |
| **30** | ಶಿಕ್ಷಣದಲ್ಲಿ ಕನ್ನಡದ ಪಾತ್ರ – **ಪ್ರಿಯಾ ಎನ್., ಪ್ರಶಿಕ್ಷಣಾರ್ಥಿ** | 89 – 90 |
| **31** | ಸುಗ್ಗಿ ಕುಣಿತ – **ರಂಜಿತಾ ವಿ ಸಮ್ಮಸಗಿ., ಪ್ರಶಿಕ್ಷಣಾರ್ಥಿ** | 91 – 92 |
| **32** | ಡಾ. ಜಿ ಎಸ್ ಶಿವರುದ್ರಪ್ಪ – **ಯೆಲ್ಲೇಶ್ವರಿ., ಪ್ರಶಿಕ್ಷಣಾರ್ಥಿ** | 93 – 94 |
| **33** | ಮಾನವತಾವಾದಿ ಡಾ. ಕುವೆಂಪು – **ರಂಜಿತಾ ಅಣಜಿ., ಪ್ರಶಿಕ್ಷಣಾರ್ಥಿ** | 95 – 96 |
| **34** | ಕನ್ನಡ ನಾಡಗೀತೆಯ ವೈಶಿಷ್ಟ್ಯ – **ಮೌನೇಶ್ ಚಿತ್ತಾಪುರ., ಪ್ರಶಿಕ್ಷಣಾರ್ಥಿ** | 97 – 99 |
| **35** | ಹಣ – **ಬಿ. ಸುಹೀಲ್., ಪ್ರಶಿಕ್ಷಣಾರ್ಥಿ** | 100 |
| **36** | ಕನ್ನಡ ನಾಡು ನುಡಿ ಭಾಷೆ – **ಚಿನ್ಮಯ್., ಪ್ರಶಿಕ್ಷಣಾರ್ಥಿ** | 101 – 104 |
| **37** | 2024–25ನೇ ಸಾಲಿನ ಭಾಷಾಸಂಘದ ವಾರ್ಷಿಕ ಚಟುವಟಿಕೆಗಳ ಛಾಯಾಚಿತ್ರಗಳು | 105 |

# ಭಾರತೀಯ ಶಿಕ್ಷಣ ವ್ಯವಸ್ಥೆಗೆ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪರಿಣಾಮಗಳು

**ಡಾ. ಶಿವಕುಮಾರ್ ಜಿ ಎಸ್**
ಪ್ರಾಚಾರ್ಯರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
drshivakumargs@gmail.com

---

ಪೀಠಿಕೆ:

ಶಿಕ್ಷಣವು ಮಾನವ ಸಮಾಜದ ಅಭಿವೃದ್ಧಿಗೆ ಮೂಲಾಧಾರವಾದ ಅಂಶವಾಗಿದೆ. ಒಂದು ರಾಷ್ಟ್ರದ ಪ್ರಗತಿ ಅದರ ಶಿಕ್ಷಣದ ಗುಣಮಟ್ಟದಿಂದ ನೇರವಾಗಿ ಅವಲಂಬಿತವಾಗಿರುತ್ತದೆ. ಭಾರತದ ಶಿಕ್ಷಣ ವ್ಯವಸ್ಥೆ ಪ್ರಾಚೀನ ಕಾಲದಿಂದಲೇ ವಿಶ್ವಪ್ರಸಿದ್ಧವಾಗಿದ್ದು, ತಕ್ಷಶಿಲಾ, ನಳಂದ ಮುಂತಾದ ವಿಶ್ವವಿದ್ಯಾಲಯಗಳು ಅದರ ಸಾಕ್ಷಿಯಾಗಿವೆ. ಆದರೆ ಕಾಲಾಂತರದಲ್ಲಿ ಶಿಕ್ಷಣ ವ್ಯವಸ್ಥೆ ಹಲವು ಬದಲಾವಣೆಗಳನ್ನು ಅನುಭವಿಸಿತು. 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಷ್ಕರಿಸಿ, 2020ರಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (National Education Policy – NEP 2020) ಅನ್ನು ಸರ್ಕಾರವು ಘೋಷಿಸಿತು. ಈ ನೀತಿ 21ನೇ ಶತಮಾನಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ರೂಪಿಸುವ, ಸೃಜನಾತ್ಮಕತೆ, ಚಿಂತನಾ ಶಕ್ತಿ ಮತ್ತು ತಂತ್ರಜ್ಞಾನಾಧಾರಿತ ಕೌಶಲ್ಯಗಳನ್ನು ಬೆಳೆಸುವ ದೃಷ್ಟಿಯಿಂದ ಸಿದ್ಧವಾಗಿದೆ.

ಈ ಪ್ರಬಂಧದಲ್ಲಿ, ಭಾರತೀಯ ಶಿಕ್ಷಣ ವ್ಯವಸ್ಥೆಯ ಸ್ಥಿತಿ, ಹೊಸ ಶಿಕ್ಷಣ ನೀತಿಯ ಪ್ರಮುಖ ಅಂಶಗಳು ಹಾಗೂ ಅದರ ಪರಿಣಾಮಗಳನ್ನು ವಿಶ್ಲೇಷಿಸಲಾಗುತ್ತದೆ.

**ಭಾರತೀಯ ಶಿಕ್ಷಣ ವ್ಯವಸ್ಥೆಯ ಹಿನ್ನೆಲೆ :**

ಶಿಕ್ಷಣವು ಮಾನವ ಜೀವನದ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ಅದು ಕೇವಲ ವ್ಯಕ್ತಿಯ ಜ್ಞಾನವನ್ನು ವಿಸ್ತರಿಸುವುದಲ್ಲದೆ, ಸಾಮಾಜಿಕ ಜವಾಬ್ದಾರಿ, ಮೌಲ್ಯ, ನೈತಿಕತೆ ಮತ್ತು ಸಾಂಸ್ಕೃತಿಕ ಅರಿವುಗಳ ಅಭಿವೃದ್ಧಿಗೆ ಸಹ ಕಾರಣವಾಗುತ್ತದೆ. ಭಾರತದ ಶಿಕ್ಷಣ ವ್ಯವಸ್ಥೆಯ ಇತಿಹಾಸವು ಸಹಸ್ರಾರು ವರ್ಷಗಳಷ್ಟು ಹಳೆಯದು. ಅದು ಪ್ರಾಚೀನ, ಮಧ್ಯಯುಗ ಮತ್ತು ಆಧುನಿಕ ಕಾಲದ ವಿವಿಧ ಹಂತಗಳಲ್ಲಿ ಬದಲಾವಣೆಗೊಂಡು ಇಂದು ವಿಶ್ವದ ಅತಿ ದೊಡ್ಡ ಶಿಕ್ಷಣ ವ್ಯವಸ್ಥೆಗಳಲ್ಲಿ ಒಂದಾಗಿದೆ.

**1. ಪ್ರಾಚೀನ ಭಾರತೀಯ ಶಿಕ್ಷಣ ವ್ಯವಸ್ಥೆ**

ಪ್ರಾಚೀನ ಭಾರತವು ಶಿಕ್ಷಣದ ಕ್ಷೇತ್ರದಲ್ಲಿ ವಿಶ್ವದ ಮುಂಚೂಣಿಯಲ್ಲಿತ್ತು. ತಕ್ಷಶಿಲಾ, ನಳಂದ, ವಲ್ಲಭಿ ಮತ್ತು ವಿಜಯನಗರದಂತಹ ವಿಶ್ವವಿದ್ಯಾಲಯಗಳು ವಿಶ್ವಪ್ರಸಿದ್ಧವಾಗಿದ್ದುವು. ಶಿಕ್ಷಣದ ಉದ್ದೇಶವು ಕೇವಲ ಅಕ್ಷರಜ್ಞಾನವಲ್ಲ, ವ್ಯಕ್ತಿತ್ವದ ಸಂಪೂರ್ಣ ಅಭಿವೃದ್ಧಿಯೇ ಆಗಿತ್ತು.

ಗುರುಕುಲ ಪದ್ಧತಿಯು ಆ ಕಾಲದ ಶಿಕ್ಷಣದ ಮೂಲವಾಗಿದ್ದು, ಶಿಷ್ಯನು ಗುರುನ ಸಾನ್ನಿಧ್ಯದಲ್ಲಿ ವಾಸಿಸುತ್ತಾ ವಿದ್ಯಾಭ್ಯಾಸ ಮಾಡುತ್ತಿದ್ದನು. ಶಿಕ್ಷಣ ಉಚಿತವಾಗಿದ್ದು, ಅದನ್ನು ಧಾರ್ಮಿಕ ಹಾಗೂ ನೈತಿಕ ಮೌಲ್ಯಗಳೊಂದಿಗೆ ನೀಡಲಾಗುತ್ತಿತ್ತು.

ವಿಷಯಗಳಾಗಿ ವೇದಗಳು, ಉಪನಿಷತ್ತುಗಳು, ವ್ಯಾಕರಣ, ಗಣಿತ, ಖಗೋಳಶಾಸ್ತ್ರ, ವೈದ್ಯಶಾಸ್ತ್ರ, ಧರ್ಮಶಾಸ್ತ್ರ, ರಾಜನೀತಿ ಮತ್ತು ಶಿಲ್ಪಕಲೆಯಂತಹ ವಿಷಯಗಳನ್ನು ಕಲಿಸಲಾಗುತ್ತಿತ್ತು. ಕಲಿಕೆ ಪ್ರಾಯೋಗಿಕ ಹಾಗೂ ಅನುಭವಾತ್ಮಕವಾಗಿದ್ದು, ವಿದ್ಯಾರ್ಥಿಯ ಮನಸ್ಸು, ನೈತಿಕತೆ ಮತ್ತು ಕೌಶಲ್ಯವನ್ನು ಬೆಳಸುವಂತಿತ್ತು.

### 2. ಮಧ್ಯಯುಗೀನ ಶಿಕ್ಷಣ ವ್ಯವಸ್ಥೆ

ಮಧ್ಯಯುಗದಲ್ಲಿ, ವಿಶೇಷವಾಗಿ ಮುಸ್ಲಿಂ ಆಡಳಿತದ ಕಾಲದಲ್ಲಿ, ಭಾರತೀಯ ಶಿಕ್ಷಣ ವ್ಯವಸ್ಥೆ ಕೆಲವು ಬದಲಾವಣೆಗಳನ್ನು ಕಂಡಿತು. ಮದ್ರಸಾ ಮತ್ತು ಮಕ್ತಬ್ ಪದ್ಧತಿಗಳು ಪ್ರಚಲಿತವಾಗಿದ್ದುವು. ಇವುಗಳಲ್ಲಿ ಅರಬಿ, ಪರ್ಷಿಯನ್, ಇಸ್ಲಾಮಿಕ್ ಕಾನೂನು, ಸಾಹಿತ್ಯ, ಮತ್ತು ಗಣಿತ ವಿಷಯಗಳನ್ನು ಕಲಿಸಲಾಗುತ್ತಿತ್ತು.

ಈ ಸಮಯದಲ್ಲಿ ಸಂಸ್ಕೃತ ಮತ್ತು ಇಸ್ಲಾಮಿಕ್ ಶಿಕ್ಷಣದ ನಡುವೆ ವಿಭಜನೆ ಉಂಟಾಯಿತು. ಹಿಂದೂ ಮತ್ತು ಮುಸ್ಲಿಂ ಶಾಲೆಗಳು ಪ್ರತ್ಯೇಕವಾಗಿ ಬೆಳೆಯುವ ಮೂಲಕ ಸಾಮಾಜಿಕ ಸಮಾನತೆಯ ದೃಷ್ಟಿಯಿಂದ ಕೆಲವು ಅಡೆತಡೆಗಳು ಹುಟ್ಟಿಕೊಂಡುವು. ಆದರೂ ಈ ಕಾಲದಲ್ಲಿ ಸಹ ಸಾಹಿತ್ಯ, ಕಲೆ, ಸಂಗೀತ ಮತ್ತು ವಾಸ್ತುಶಿಲ್ಪದ ಅಭಿವೃದ್ಧಿಯು ನಡೆದಿತ್ತು.

### 3. ಬ್ರಿಟಿಷ್ ಆಡಳಿತಕಾಲದ ಶಿಕ್ಷಣ ವ್ಯವಸ್ಥೆ

ಆಧುನಿಕ ಭಾರತೀಯ ಶಿಕ್ಷಣ ವ್ಯವಸ್ಥೆಯು ಬಹುಪಾಲು ಬ್ರಿಟಿಷ್ ಆಡಳಿತದಿಂದ ರೂಪುಗೊಂಡಿತು. 19ನೇ ಶತಮಾನದಲ್ಲಿ ಬ್ರಿಟಿಷರು ಭಾರತದಲ್ಲಿ ಪಾಶ್ಚಾತ್ಯ ಶಿಕ್ಷಣವನ್ನು ಪರಿಚಯಿಸಿದರು. ಅವರ ಉದ್ದೇಶವು ಭಾರತೀಯರಲ್ಲಿ ಪಾಶ್ಚಾತ್ಯ ಶೈಲಿಯ ಕೆಲಸಗಾರರನ್ನು ಸಿದ್ಧಪಡಿಸುವುದಾಗಿತ್ತು, ಇದರಿಂದ ಆಡಳಿತ ಸುಗಮವಾಗುತ್ತದೆ ಎಂಬ ನಂಬಿಕೆ.

ಮ್ಯಾಕಾಲೇ ಮಿನಿಟ್ (1835) ಭಾರತದ ಶಿಕ್ಷಣದ ದಿಕ್ಕನ್ನು ಬದಲಿಸಿದ ಪ್ರಮುಖ ಘಟ್ಟ. ಲಾರ್ಡ್ ಮ್ಯಾಕಾಲೇ ಇಂಗ್ಲಿಷ್ ಶಿಕ್ಷಣವನ್ನು ಪ್ರೋತ್ಸಾಹಿಸಿ, ಭಾರತೀಯ ಭಾಷೆಗಳಲ್ಲಿ ನಡೆಯುತ್ತಿದ್ದ ಪರಂಪರೆಯ ಶಿಕ್ಷಣವನ್ನು ಕುಗ್ಗಿಸಿದನು. ಫಲವಾಗಿ, ಇಂಗ್ಲಿಷ್ ಮಾಧ್ಯಮದಲ್ಲಿ ಆಧುನಿಕ ವಿಷಯಗಳಾದ ವಿಜ್ಞಾನ, ಗಣಿತ, ಇತಿಹಾಸ, ಆರ್ಥಿಕಶಾಸ್ತ್ರ ಮತ್ತು ಸಾಹಿತ್ಯವನ್ನು ಕಲಿಸಲಾಗತೊಡಗಿತು.

ವುಡ್ಸ್ ಡಿಸ್ಪ್ಯಾಚ್ (1854) ಶಿಕ್ಷಣ ವ್ಯವಸ್ಥೆಯ ಸಂಘಟನೆಗೆ ಹೊಸ ರೂಪ ನೀಡಿತು. ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಹಂತಗಳ ವಿಭಜನೆ ನಡೆಯಿತು. ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಸಹಭಾಗಿತ್ವದಿಂದ ಶಿಕ್ಷಣದ ವ್ಯಾಪ್ತಿ ವಿಸ್ತರಿಸಿತು.

ಆದರೆ ಈ ಕಾಲದ ಶಿಕ್ಷಣವು ಉದ್ಯೋಗಾಧಾರಿತವಾಗಿದ್ದು, ರಾಷ್ಟ್ರಭಕ್ತಿಯುಳ್ಳ ಅಥವಾ ಚಿಂತನಾತ್ಮಕ ಶೈಕ್ಷಣಿಕ ಬೆಳವಣಿಗೆಗೆ ಅವಕಾಶ ಕಡಿಮೆ ಇತ್ತು. ಇದರ ಪರಿಣಾಮವಾಗಿ, ಶಿಕ್ಷಣವು ನಾಗರಿಕರ ಸಮಗ್ರ ಬೆಳವಣಿಗೆಯ ಬದಲು ಉದ್ಯೋಗಕ್ಕಾಗಿ ಮಾತ್ರವಾದ ಸಾಧನವಾಗಿ ಮಾರ್ಪಟ್ಟಿತು.

### 4. ಸ್ವಾತಂತ್ರ್ಯ ಚಳುವಳಿಯ ಕಾಲದ ಶಿಕ್ಷಣದ ಬದಲಾವಣೆಗಳು

19ನೇ ಮತ್ತು 20ನೇ ಶತಮಾನಗಳಲ್ಲಿ, ಭಾರತೀಯ ಚಿಂತಕರು ಶಿಕ್ಷಣದ ಸ್ವರೂಪದ ಬಗ್ಗೆ ತೀವ್ರ ಚಿಂತನೆ ನಡೆಸಿದರು. ಮಹಾತ್ಮ ಗಾಂಧೀಜಿಯವರ **"ನೈತಿಕ ತತ್ವಾಧಾರಿತ ಶಿಕ್ಷಣ"** (Basic Education or Nai Talim) ದೃಷ್ಟಿಕೋನವು ಮಹತ್ವಪೂರ್ಣ. ಗಾಂಧೀಜಿಯವರು ಶಿಕ್ಷಣವು ಹಸ್ತಕಾರ್ಯ, ಗ್ರಾಮೀಣ ಉದ್ಯೋಗ, ನೈತಿಕತೆ ಮತ್ತು ದೇಶಪ್ರೇಮವನ್ನು ಒಳಗೊಂಡಿರಬೇಕು ಎಂದು ಹೇಳಿದರು. ಇದಲ್ಲದೆ ರವೀಂದ್ರನಾಥ ಟಾಗೋರ್, ಶ್ರೀ ಅರವಿಂದೋ, ಸ್ವಾಮಿ ವಿವೇಕಾನಂದ, ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಮುಂತಾದ ಚಿಂತಕರು ಶಿಕ್ಷಣದ ಬಗ್ಗೆ ಹೊಸ ದೃಷ್ಟಿಕೋನವನ್ನು ನೀಡಿದರು. ಇವರ ಅಭಿಪ್ರಾಯದಲ್ಲಿ ಶಿಕ್ಷಣವು ಕೇವಲ ಬುದ್ಧಿವಿಕಾಸವಲ್ಲ, ಹೃದಯ, ಆತ್ಮ ಮತ್ತು ನೈತಿಕ ಬಲವನ್ನು ಬೆಳೆಸುವ ಸಾಧನವಾಗಿರಬೇಕು.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಶಿಕ್ಷಣ ರಾಷ್ಟ್ರಜಾಗೃತಿಯ ಪ್ರಮುಖ ಅಸ್ತ್ರವಾಯಿತು. ಅನೇಕ ರಾಷ್ಟ್ರೀಯ ಶಾಲೆಗಳು, ಸ್ವದೇಶಿ ಶಿಕ್ಷಣ ಚಳುವಳಿಗಳು ಹುಟ್ಟಿಕೊಂಡುವು. ಇದರಿಂದ ಭಾರತೀಯರು ತಮ್ಮ ಸಂಸ್ಕೃತಿಯ ಅರಿವಿನೊಂದಿಗೆ ಸ್ವತಂತ್ರ ಚಿಂತನೆಗೆ ತೊಡಗಿದರು.

**5. ಸ್ವಾತಂತ್ರ್ಯಾನಂತರದ ಶಿಕ್ಷಣ ವ್ಯವಸ್ಥೆ**

1947ರಲ್ಲಿ ಸ್ವಾತಂತ್ರ್ಯ ಸಿಕ್ಕ ನಂತರ, ಭಾರತದ ಮೊದಲ ಗುರಿಯಾಗಿದ್ದು ಜನರಿಗೆ ಸಮಾನ ಶಿಕ್ಷಣದ ಅವಕಾಶ ಒದಗಿಸುವುದು. ಸಂವಿಧಾನವು ಶಿಕ್ಷಣವನ್ನು ಮೂಲಭೂತ ಹಕ್ಕಿನ ರೂಪದಲ್ಲಿ ಪರಿಗಣಿಸಿತು. 1950ರ ಸಂವಿಧಾನದ ವಿಧಿ 45 ಪ್ರಕಾರ, 14 ವರ್ಷ ವಯಸ್ಸಿನವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಘೋಷಿಸಲಾಯಿತು.

1952ರಲ್ಲಿ ಸ್ಥಾಪಿತವಾದ Secondary Education Commission ಮತ್ತು 1964ರಲ್ಲಿ ರಾಧಾಕೃಷ್ಣನ್ ಆಯೋಗದ ಶಿಫಾರಸುಗಳ ಆಧಾರದ ಮೇಲೆ ಶಿಕ್ಷಣ ನೀತಿಗಳನ್ನು ರೂಪಿಸಲಾಯಿತು. 1968ರ ರಾಷ್ಟ್ರೀಯ ಶಿಕ್ಷಣ ನೀತಿ (NPE) ಪ್ರಥಮ ಸರ್ವಾಂಗೀಣ ನೀತಿಯಾಗಿದ್ದು, "ಸಮಾನತೆ", "ರಾಷ್ಟ್ರೀಯ ಏಕತೆ" ಮತ್ತು "ಶಿಕ್ಷಣದ ಗುಣಮಟ್ಟ"ಕ್ಕೆ ಒತ್ತು ನೀಡಿತು. 1986ರ ರಾಷ್ಟ್ರೀಯ ಶಿಕ್ಷಣ ನೀತಿ, ನಂತರ 1992ರ ಪರಿಷ್ಕರಣೆಗಳ ಮೂಲಕ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಮಹಿಳಾ ಶಿಕ್ಷಣ, ವೃತ್ತಿಪರ ತರಬೇತಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳ ಸ್ಥಾಪನೆಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಆದರೆ ಇವುಗಳ ನಡುವೆಯೂ ಕೆಲ ಸವಾಲುಗಳು ಉಳಿದುವು. ಉಳಿಕೆ ಪ್ರಮಾಣ, ಶಿಕ್ಷಕರ ಕೊರತೆ, ಗುಣಮಟ್ಟದ ಅಸಮಾನತೆ ಮತ್ತು ಉದ್ಯೋಗೋಚಿತ ಕೌಶಲ್ಯಗಳ ಅಭಾವ.

**6. ಆಧುನಿಕ ಕಾಲದ ಬದಲಾವಣೆಗಳು ಮತ್ತು ಸವಾಲುಗಳು**

21ನೇ ಶತಮಾನದಲ್ಲಿ ಜಾಗತೀಕರಣ, ತಂತ್ರಜ್ಞಾನ, ಮತ್ತು ಡಿಜಿಟಲೀಕರಣವು ಶಿಕ್ಷಣದ ಕ್ಷೇತ್ರದಲ್ಲೂ ದೊಡ್ಡ ಬದಲಾವಣೆ ತಂದಿವೆ. ಇಂಟರ್ನೆಟ್ ಮತ್ತು ಆನ್ಲೈನ್ ಪ್ಲಾಟ್ಫಾರ್ಮ್ಗಳ ಬಳಕೆಯಿಂದ ಕಲಿಕೆಯ ಪರಿಧಿ ವಿಸ್ತರಿಸಿದೆ. ಆದರೆ ಇದಕ್ಕೆ ಸಮಾನ ಪ್ರಾಪ್ಯತೆ ಎಲ್ಲರಿಗೂ ಲಭ್ಯವಿಲ್ಲದಿರುವುದು ಒಂದು ಸವಾಲಾಗಿದೆ. ಅದೇ ರೀತಿ, ಭಾರತದ ಜನಸಂಖ್ಯೆಯಲ್ಲಿ ಯುವಜನರ ಪ್ರಮಾಣ ಅತ್ಯಧಿಕವಾಗಿರುವುದರಿಂದ "Quality Education" ಒದಗಿಸುವ ಅಗತ್ಯ ತೀವ್ರವಾಗಿದೆ. rote learning (ಪಾಠಮಾಡುವ ಶಿಕ್ಷಣ) ಮತ್ತು ಪರೀಕ್ಷಾ ಕೇಂದ್ರಿತ ಪದ್ಧತಿಗಳು ಸೃಜನಾತ್ಮಕ ಚಿಂತನೆಗೆ ಅಡ್ಡಿಯಾಗಿವೆ.

ಈ ಸವಾಲುಗಳ ಮಧ್ಯೆ, 2020ರಲ್ಲಿ ಘೋಷಿಸಲಾದ ರಾಷ್ಟ್ರೀಯ ಶಿಕ್ಷಣ ನೀತಿ (NEP – 2020) ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. ಇದು ಶಿಕ್ಷಣವನ್ನು ಸರ್ವಾಂಗೀಣ, ಕೌಶಲ್ಯಾಧಾರಿತ, ಮತ್ತು ಸಮಾನತೆಯ ದೃಷ್ಟಿಯಿಂದ ಪುನರ್ರಚಿಸಲು ಪ್ರಯತ್ನಿಸುತ್ತದೆ. ಭಾರತೀಯ ಶಿಕ್ಷಣ ವ್ಯವಸ್ಥೆಯ ಹಿನ್ನೆಲೆ ಸಾವಿರಾರು ವರ್ಷಗಳ ಸಂಸ್ಕೃತಿ, ಧರ್ಮ, ಮತ್ತು ಜ್ಞಾನ ಪರಂಪರೆಯ ಮೇಲೆ ಆಧಾರಿತವಾಗಿದೆ. ಅದು ಕಾಲಕ್ರಮೇಣ ಬದಲಾವಣೆಗೊಂಡು ಪ್ರಾಚೀನ ಗುರುಕುಲ ಪದ್ಧತಿಯಿಂದ ಪಾಶ್ಚಾತ್ಯ ಶೈಕ್ಷಣಿಕ ವ್ಯವಸ್ಥೆಯವರೆಗೆ ವಿಭಿನ್ನ ಹಂತಗಳನ್ನು ಅನುಭವಿಸಿದೆ.

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಶಿಕ್ಷಣವು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ರಾಷ್ಟ್ರಾಭಿವೃದ್ಧಿಯ ಸಾಧನವಾಗಿ ಪರಿಗಣಿಸಲ್ಪಟ್ಟಿತು. ಆದರೂ, ಗುಣಮಟ್ಟದ ಶಿಕ್ಷಣವನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ನಿರಂತರ ಪ್ರಯತ್ನಗಳು ಅಗತ್ಯ. ಇಂದು ಭಾರತದ ಶಿಕ್ಷಣ ವ್ಯವಸ್ಥೆ ಪರಂಪರೆಯ ಮೌಲ್ಯಗಳನ್ನು ಉಳಿಸಿಕೊಂಡು, ಜಾಗತಿಕ ಸ್ಪರ್ಧಾತ್ಮಕ ಜಗತ್ತಿನಲ್ಲಿ ತನ್ನ ಸ್ಥಾನವನ್ನು ಬಲಪಡಿಸುವ ದಿಕ್ಕಿನಲ್ಲಿ ಸಾಗುತ್ತಿದೆ. ಈ ಪ್ರಯಾಣವು ಸಾಂಸ್ಕೃತಿಕ ಪೈಪೋಟಿಯೊಂದಿಗೆ ಹೊಸ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಅಳವಡಿಸಿಕೊಂಡಿರುವ ರಾಷ್ಟ್ರದ ವಿದ್ಯಾಭ್ಯಾಸದ ಪ್ರಗತಿಯನ್ನು ಪ್ರತಿನಿಧಿಸುತ್ತದೆ.

**ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮುಖ್ಯ ಉದ್ದೇಶಗಳು:**

1. **ಸರ್ವಾಂಗೀಣ ಮತ್ತು ಬಹುಶಾಖೀಯ ಶಿಕ್ಷಣ:** ವಿದ್ಯಾರ್ಥಿಯ ವ್ಯಕ್ತಿತ್ವದ ಎಲ್ಲಾ ಆಯಾಮಗಳ ಅಭಿವೃದ್ಧಿಯನ್ನು ಉದ್ದೇಶಿಸಿರುವುದು. ಕಲಿಕೆ ಕೇವಲ ಪುಸ್ತಕಾಧಾರಿತವಾಗಿರದೆ, ಸಂಸ್ಕೃತಿ, ಕೌಶಲ್ಯ ಮತ್ತು ಮೌಲ್ಯಗಳನ್ನು ಒಳಗೊಂಡಿರಬೇಕು.
2. **ಅನುಭವಾತ್ಮಕ ಮತ್ತು ಚಿಂತನಾತ್ಮಕ ಕಲಿಕೆ:** rote learning ಗೆ ಬದಲಾಗಿ "critical thinking", "problem solving", "experiential learning" ಗೆ ಪ್ರಾಮುಖ್ಯತೆ.
3. **ಹೊಸ ಶಾಲಾ ರಚನೆ – 5+3+3+4 ಮಾದರಿ:** ಹಿಂದಿನ 10+2 ಮಾದರಿಯ ಬದಲು, ಹೊಸ ಮಾದರಿಯು ಮಕ್ಕಳ ಮಾನಸಿಕ ಬೆಳವಣಿಗೆಯ ಹಂತಗಳನ್ನು ಆಧರಿಸಿದೆ:
   - ✓ 5 ವರ್ಷ: ಪ್ರಾಥಮಿಕ ಹಂತ (Foundation Stage)
   - ✓ 3 ವರ್ಷ: ತಯಾರಿ ಹಂತ (Preparatory Stage)
   - ✓ 3 ವರ್ಷ: ಮಧ್ಯಮ ಹಂತ (Middle Stage)
   - ✓ 4 ವರ್ಷ: ಪ್ರೌಢ ಹಂತ (Secondary Stage)
4. **ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (Foundational Literacy and Numeracy):** 2025ರೊಳಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಮೂಲಭೂತ ಓದು ಮತ್ತು ಗಣಿತದ ನೈಪುಣ್ಯ ನೀಡುವುದು.
5. **ಭಾಷಾ ನೀತಿ:** ತ್ರಿಭಾಷಾ ಸೂತ್ರದ ಅನುಸರಣೆ – ಪ್ರಾದೇಶಿಕ ಭಾಷೆಗೆ ಆದ್ಯತೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಣವನ್ನು ತಾಯಿಭಾಷೆಯಲ್ಲಿ ಅಥವಾ ಸ್ಥಳೀಯ ಭಾಷೆಯಲ್ಲಿ ನೀಡುವ ಪ್ರಸ್ತಾವನೆ.
6. **ಉನ್ನತ ಶಿಕ್ಷಣದಲ್ಲಿ ಬದಲಾವಣೆಗಳು:**
   - ➢ ಬಹುಶಾಖೀಯ ವಿಶ್ವವಿದ್ಯಾಲಯಗಳು.
   - ➢ 4 ವರ್ಷಗಳ ಪದವಿ ಕೋರ್ಸ್, ಮಧ್ಯದಲ್ಲಿ ನಿರ್ಗಮನೆಗೆ ಪ್ರಮಾಣಪತ್ರ ವ್ಯವಸ್ಥೆ.
   - ➢ ಸಂಶೋಧನೆಗೆ ಒತ್ತು, National Research Foundation ಸ್ಥಾಪನೆ.
7. **ಶಿಕ್ಷಕರ ತರಬೇತಿ ಮತ್ತು ಗುಣಮಟ್ಟದ ಸುಧಾರಣೆ**. ಶಿಕ್ಷಕರಿಗೆ ಹೊಸ ತರಬೇತಿ ನೀತಿ, ಆಧುನಿಕ ಪಾಠಪದ್ದತಿಗಳು ಮತ್ತು ನಿರಂತರ ವೃತ್ತಿಪರ ಅಭಿವೃದ್ಧಿ.
8. **ತಂತ್ರಜ್ಞಾನ ಮತ್ತು ಡಿಜಿಟಲ್ ಶಿಕ್ಷಣ:** ಡಿಜಿಟಲ್ ಪ್ಲಾಟ್ಫಾರ್ಮ್‌ಗಳ ಬಳಕೆ, ಆನ್ಲೈನ್ ಶಿಕ್ಷಣ, ಮತ್ತು ತಂತ್ರಜ್ಞಾನ ಸಮಾವೇಶ.
9. **ವೃತ್ತಿಪರ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ:** ಶಾಲಾ ಹಂತದಲ್ಲಿಯೇ ವೃತ್ತಿಪರ ಕೌಶಲ್ಯ ಕಲಿಕೆ ಪ್ರಾರಂಭಿಸುವುದು.

**ರಾಷ್ಟ್ರೀಯ ಶಿಕ್ಷಣ ನೀತಿಯ ಪರಿಣಾಮಗಳು:**

**1. ಶಿಕ್ಷಣದ ಗುಣಮಟ್ಟದಲ್ಲಿ ಸುಧಾರಣೆ**

NEP 2020ರ ಪ್ರಮುಖ ಪರಿಣಾಮವೆಂದರೆ ಗುಣಮಟ್ಟದ ಶಿಕ್ಷಣದತ್ತ ಬದಲಾವಣೆ. ಕಂಠಪಾಠದಿಂದ ಹೊರಬಂದು "ಚಿಂತನೆ ಮತ್ತು ಅನ್ವಯಿಕೆ" ಆಧಾರಿತ ಶಿಕ್ಷಣದತ್ತ ವಿದ್ಯಾರ್ಥಿಗಳು ಸಾಗುತ್ತಾರೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳ ಸೃಜನಾತ್ಮಕತೆ ಹಾಗೂ ಹೊಸ ಆವಿಷ್ಕಾರ ಸಾಮರ್ಥ್ಯ ಬೆಳೆಯುತ್ತದೆ.

**2. ಸಮಾನತೆ ಮತ್ತು ಒಳಗೊಳ್ಳುವಿಕೆ**

ನೀತಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ. ತಾಯಿಭಾಷೆಯ ಶಿಕ್ಷಣದ ಪ್ರಾಮುಖ್ಯತೆಯು ಗ್ರಾಮೀಣ ವಿದ್ಯಾರ್ಥಿಗಳಿಗೆ ಸಹಾಯಕ. ಜೊತೆಗೆ, ಡಿಜಿಟಲ್ ಉಪಕರಣಗಳ ಬಳಕೆಯಿಂದ ಶಿಕ್ಷಣ ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ ಸಾಧ್ಯತೆ ಇದೆ.

**3. ವೃತ್ತಿಪರ ಕೌಶಲ್ಯ ಮತ್ತು ಉದ್ಯೋಗಾವಕಾಶಗಳು**

ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ ವೃತ್ತಿಪರ ತರಬೇತಿಗೆ ಒತ್ತು ನೀಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಕೌಶಲ್ಯ ಪಡೆದು ಉದ್ಯೋಗೋಚಿತರಾಗಲು ಸಾಧ್ಯವಾಗುತ್ತದೆ.

**4. ಉನ್ನತ ಶಿಕ್ಷಣದಲ್ಲಿ ಬದಲಾವಣೆಗಳು**

ಬಹುಶಾಖೀಯ ಶಿಕ್ಷಣದ ಅವಕಾಶದಿಂದ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯಗಳನ್ನು ಆಯ್ಕೆಮಾಡಬಹುದು. 4 ವರ್ಷಗಳ ಪದವಿ ಕೋರ್ಸ್ನಿಂದ ಸಂಶೋಧನಾ ನೈಪುಣ್ಯ ಅಭಿವೃದ್ಧಿಯಾಗುತ್ತದೆ. National Research Foundation ದೇಶದಲ್ಲಿ ಸಂಶೋಧನಾ ಸಂಸ್ಕೃತಿಗೆ ಉತ್ತೇಜನ ನೀಡುತ್ತದೆ.

**5. ಶಿಕ್ಷಕರ ಪಾತ್ರದ ಪುನರ್ವ್ಯಾಖ್ಯಾನ**

ಶಿಕ್ಷಕರು ಕೇವಲ ಪಾಠಕರಾಗಿರದೆ ಮಾರ್ಗದರ್ಶಕರಾಗಿ, ಪ್ರೇರಕರಾಗಿ ರೂಪಾಂತರಗೊಳ್ಳಬೇಕೆಂಬ ಉದ್ದೇಶ. ಹೊಸ ತರಬೇತಿ ನೀತಿಗಳು ಅವರ ವೃತ್ತಿಪರ ಶಕ್ತಿಯನ್ನು ವೃದ್ಧಿಸಿವೆ.

**6. ತಂತ್ರಜ್ಞಾನ ಬಳಕೆಯ ಪರಿಣಾಮ**

COVID-19 ನಂತರದ ಕಾಲದಲ್ಲಿ ತಂತ್ರಜ್ಞಾನ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. NEP 2020 ಈ ಪರಿವರ್ತನೆಯನ್ನು ಅಧಿಕೃತವಾಗಿ ಅಂಗೀಕರಿಸಿದೆ. ಆನ್ಲೈನ್ ಶಿಕ್ಷಣ, ವರ್ಚುವಲ್ ತರಗತಿಗಳು, ಹಾಗೂ ಡಿಜಿಟಲ್ ಗ್ರಂಥಾಲಯಗಳ ಬಳಕೆಯಿಂದ ಶಿಕ್ಷಣದ ವ್ಯಾಪ್ತಿ ವಿಸ್ತರಿಸಿದೆ.

**7. ಸಂಶೋಧನೆ ಮತ್ತು ನವೀನತೆಯ ಉತ್ತೇಜನ**

ಹೊಸ ನೀತಿ ಸಂಶೋಧನೆಗೆ ಹೊಸ ಬಾಗಿಲು ತೆರೆದಿದೆ. ಸರ್ಕಾರ ಹಾಗೂ ಖಾಸಗಿ ಕ್ಷೇತ್ರಗಳ ಸಹಕಾರದಿಂದ "Research ecosystem" ಬಲಪಡಿಸಬಹುದು.

**8. ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳು**

ಶಿಕ್ಷಣದ ಗುಣಮಟ್ಟ ಸುಧಾರಿಸಿದರೆ ಅದು ನೇರವಾಗಿ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಪ್ರತಿಫಲಿಸುತ್ತದೆ. ಕೌಶಲ್ಯವಂತ ಯುವಜನರು ರಾಷ್ಟ್ರದ ಉತ್ಪಾದಕತೆಯನ್ನು ಹೆಚ್ಚಿಸುತ್ತಾರೆ.

**ಸವಾಲುಗಳು ಮತ್ತು ಅಡ್ಡಿ ಅಡಚಣೆಗಳು:**

1. **ಅಮಲೀಕರಣದ ಸವಾಲುಗಳು** – ಪ್ರತಿ ರಾಜ್ಯದ ಶಿಕ್ಷಣ ವ್ಯವಸ್ಥೆಯ ವ್ಯತ್ಯಾಸದಿಂದ ಏಕರೂಪತೆ ತರಲು ಕಷ್ಟ.
2. **ಆರ್ಥಿಕ ಸಂಪನ್ಮೂಲಗಳ ಕೊರತೆ** – ನೀತಿ ಯಶಸ್ವಿಯಾಗಲು ಹೆಚ್ಚಿನ ಹಣಕಾಸಿನ ಹೂಡಿಕೆ ಅಗತ್ಯ.
3. **ಶಿಕ್ಷಕರ ತರಬೇತಿ ಮತ್ತು ತಂತ್ರಜ್ಞಾನ ಪ್ರಾಪ್ಯತೆ** – ಗ್ರಾಮೀಣ ಪ್ರದೇಶಗಳಲ್ಲಿ ತಾಂತ್ರಿಕ ಸೌಲಭ್ಯಗಳ ಕೊರತೆ.
4. **ಭಾಷಾ ನೀತಿಯ ಸವಾಲುಗಳು** – ತಾಯಿಭಾಷೆಯಲ್ಲಿ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಕೊರತೆ ಮತ್ತು ಪಠ್ಯವಸ್ತುಗಳ ಲಭ್ಯತೆ ಸಮಸ್ಯೆಯಾಗಬಹುದು.

**ಭವಿಷ್ಯದ ದೃಷ್ಟಿಕೋನ:**

NEP 2020 ದೇಶದ ಶಿಕ್ಷಣ ವ್ಯವಸ್ಥೆಯನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸುವ ಶಕ್ತಿಯುತ ಚಟುವಟಿಕೆ. ಇದು "Knowledge-based Society" ನಿರ್ಮಾಣದತ್ತ ಸಾಗುತ್ತದೆ. ಮುಂದಿನ ವರ್ಷಗಳಲ್ಲಿ ನೀತಿಯ ಯಶಸ್ಸು ಅದರ ಸಮಗ್ರ ಮತ್ತು ಪರಿಣಾಮಕಾರಿ ಅನುಷ್ಠಾನದ ಮೇಲೆ ಅವಲಂಬಿತವಾಗಿರುತ್ತದೆ.

**ಉಪಸಂಹಾರ :**

ರಾಷ್ಟ್ರೀಯ ಶಿಕ್ಷಣ ನೀತಿ – 2020 ಭಾರತೀಯ ಶಿಕ್ಷಣ ವ್ಯವಸ್ಥೆಗೆ ಮಹತ್ತರವಾದ ಬದಲಾವಣೆಯನ್ನು ತರಬಲ್ಲ ನವೀನ ನೀತಿಯಾಗಿದೆ. ಇದು ಶಿಕ್ಷಣವನ್ನು ಸರ್ವಾಂಗೀಣ, ಸೃಜನಾತ್ಮಕ, ಕೌಶಲ್ಯಾಧಾರಿತ ಹಾಗೂ ಸಮಾನತೆಯ ದೃಷ್ಟಿಯಿಂದ ರೂಪಿಸುವ ಉದ್ದೇಶ ಹೊಂದಿದೆ. ಆದರೆ ಅದರ ಯಶಸ್ಸು ಸರ್ಕಾರ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರ ಸಹಕಾರದಿಂದ ಮಾತ್ರ ಸಾಧ್ಯ. ಈ ನೀತಿ ಭಾರತದ ಯುವಜನತೆಯನ್ನು ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳ ಸಮನ್ವಯದಿಂದ ವಿಶ್ವ ಮಟ್ಟದ ನಾಗರಿಕರಾಗಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ.

**ಆಧಾರ ಗ್ರಂಥಗಳು:**


1. Ministry of Education, Government of India. National Education Policy 2020.
2. NEP 2020 Official Document – https://www.education.gov.in
3. Rao, S. (2021). Impact of NEP 2020 on Indian Education System. Journal of Educational Studies.
4. Sharma, P. (2022). Reimagining Education in India: A Policy Perspective.
5. UNESCO Reports on Education (2021–2024).


*****

# ನವೀನ ಶಿಕ್ಷಣಶಾಸ್ತ್ರ ಮತ್ತು ತಂತ್ರಜ್ಞಾನ: ಎಐ ಬೋಧಕರು ಮತ್ತು ಬುದ್ಧಿವಂತ ಕಲಿಕಾ ವ್ಯವಸ್ಥೆಗಳು

**ಡಾ. ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
veerendrakumarwalis@gmail.com

**ಸಾರಾಂಶ:**

21 ನೇ ಶತಮಾನದಲ್ಲಿ ಶಿಕ್ಷಣವು ಸಾಂಪ್ರದಾಯಿಕ ತರಗತಿ–ಕೇಂದ್ರಿತ ವಿಧಾನಗಳಿಂದ ತಂತ್ರಜ್ಞಾನ–ಚಾಲಿತ, ಕಲಿಯುವವರ–ಕೇಂದ್ರಿತ ಪರಿಸರಗಳಿಗೆ ಬದಲಾಗುತ್ತಿದೆ. ನವೀನ ಶಿಕ್ಷಣಶಾಸ್ತ್ರವು ವೈಯಕ್ತಿಕಗೊಳಿಸಿದ, ಸಹಯೋಗಿ ಮತ್ತು ಹೊಂದಿಕೊಳ್ಳುವ ಕಲಿಕೆಗೆ ಒತ್ತು ನೀಡುತ್ತದೆ. ಕೃತಕ ಬುದ್ಧಿಮತ್ತೆ (AI) ಈ ರೂಪಾಂತರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ವಿಶೇಷವಾಗಿ ಹೊಂದಾಣಿಕೆಯ, ಸಂವಾದಾತ್ಮಕ ಮತ್ತು ಡೇಟಾ–ಚಾಲಿತ ಶಿಕ್ಷಣವನ್ನು ಒದಗಿಸುವ AI ಬೋಧಕರು ಮತ್ತು ಬುದ್ಧಿವಂತ ಕಲಿಕಾ ವ್ಯವಸ್ಥೆಗಳ (ILSs) ಮೂಲಕ.

ಬುದ್ಧಿವಂತ ಬೋಧನಾ ವ್ಯವಸ್ಥೆಗಳು (ITS) ಮತ್ತು ಇತರ ಪರಿಕರಗಳ ಮೂಲಕ ಕೃತಕ ಬುದ್ಧಿಮತ್ತೆ (AI) ನಿಂದ ನಡೆಸಲ್ಪಡುವ ನವೀನ ಶಿಕ್ಷಣಶಾಸ್ತ್ರಗಳು ವೈಯಕ್ತಿಕಗೊಳಿಸಿದ, ಹೊಂದಾಣಿಕೆಯ ಮತ್ತು ಆಕರ್ಷಕ ಕಲಿಕೆಯ ಅನುಭವಗಳನ್ನು ರಚಿಸುವ ಮೂಲಕ ಶಿಕ್ಷಣವನ್ನು ಪರಿವರ್ತಿಸುತ್ತಿವೆ. ಈ AI–ಚಾಲಿತ ವಿಧಾನಗಳು ನೈಜ–ಸಮಯದ ಪ್ರತಿಕ್ರಿಯೆಯನ್ನು ಒದಗಿಸುತ್ತವೆ, ವೈಯಕ್ತಿಕ ವಿದ್ಯಾರ್ಥಿಗಳ ಅಗತ್ಯಗಳಿಗಾಗಿ ವಿಷಯವನ್ನು ಕಸ್ಟಮೈಸ್ ಮಾಡುತ್ತವೆ ಮತ್ತು ಶ್ರೇಣೀಕರಣದಂತಹ ಆಡಳಿತಾತ್ಮಕ ಕಾರ್ಯಗಳನ್ನು ಸ್ವಯಂಚಾಲಿತಗೊಳಿಸುತ್ತವೆ, ಹೆಚ್ಚಿನ ಪ್ರಭಾವ ಬೀರುವ ಬೋಧನೆಯ ಮೇಲೆ ಕೇಂದ್ರೀಕರಿಸಲು ಶಿಕ್ಷಕರನ್ನು ಮುಕ್ತಗೊಳಿಸುತ್ತವೆ. ಹೆಚ್ಚಿನ ವಿದ್ಯಾರ್ಥಿ–ಕೇಂದ್ರಿತ ಕಲಿಕೆಯನ್ನು ಭರವಸೆ ನೀಡುವಾಗ, ಯಶಸ್ವಿ ಅನುಷ್ಠಾನಕ್ಕೆ ಡೇಟಾ ಗೌಪ್ಯತೆ, ಡಿಜಿಟಲ್ ಅಸಮಾನತೆ ಮತ್ತು ಸರಿಯಾದ ಅಧ್ಯಾಪಕರ ತರಬೇತಿ ಮತ್ತು ಬೆಂಬಲದಂತಹ ಸವಾಲುಗಳನ್ನು ಪರಿಹರಿಸುವ ಅಗತ್ಯವಿದೆ.

ಸುಸ್ಥಿರ ಶಿಕ್ಷಣದಲ್ಲಿ ೦ಖ ಮತ್ತು ಮಾಹಿತಿ ತಂತ್ರಜ್ಞಾನ (IT) ವ್ಯವಸ್ಥೆಗಳನ್ನು ಬಳಸುವುದರ ಒಂದು ಫಲಿತಾಂಶವೆಂದರೆ ವಿದ್ಯಾರ್ಥಿಗಳಿಗೆ ಅವರ ವಿಶಿಷ್ಟ ಕಲಿಕಾ ಶೈಲಿಗಳು ಮತ್ತು ಆದ್ಯತೆಗಳನ್ನು ಪೂರೈಸುವ ವೈಯಕ್ತಿಕಗೊಳಿಸಿದ ಕಲಿಕಾ ಅನುಭವಗಳನ್ನು ಒದಗಿಸುವ ಸಾಮರ್ಥ್ಯ. ಹೆಚ್ಚುವರಿಯಾಗಿ, AI ವ್ಯವಸ್ಥೆಗಳು ಶಿಕ್ಷಕರಿಗೆ ವಿದ್ಯಾರ್ಥಿಗಳ ಕಾರ್ಯಕ್ಷಮತೆ, ಭಾವನೆಗಳು ಮತ್ತು ತೊಡಗಿಸಿಕೊಳ್ಳುವಿಕೆಯ ಮಟ್ಟಗಳ ಬಗ್ಗೆ ಡೇಟಾ–ಚಾಲಿತ ಒಳನೋಟಗಳನ್ನು ಒದಗಿಸಬಹುದು, ಇದು ಅವರ ಬೋಧನಾ ವಿಧಾನಗಳು ಮತ್ತು ವಿಧಾನಗಳನ್ನು ಸರಿಹೊಂದಿಸಲು ಅಥವಾ ಅದಕ್ಕೆ ಅನುಗುಣವಾಗಿ ಸಹಾಯ ಅಥವಾ ಹಸ್ತಕ್ಷೇಪವನ್ನು ಒದಗಿಸಲು ಅನುವು ಮಾಡಿಕೊಡುತ್ತದೆ. ಆದಾಗ್ಯೂ, ಸುಸ್ಥಿರ ಶಿಕ್ಷಣದಲ್ಲಿ AI ಮತ್ತು IT ವ್ಯವಸ್ಥೆಗಳ ಬಳಕೆಯು ಗೌಪ್ಯತೆ ಮತ್ತು ಡೇಟಾ ಸುರಕ್ಷತೆಗೆ ಸಂಬಂಧಿಸಿದ ಸಮಸ್ಯೆಗಳು, ಕಲಿಕೆಯ ಮಾದರಿಗಳಲ್ಲಿನ ಸಂಭಾವ್ಯ ಪಕ್ಷಪಾತಗಳು ಸೇರಿದಂತೆ ಸವಾಲುಗಳನ್ನು ಸಹ ಒದಗಿಸುತ್ತದೆ. ಇದಲ್ಲದೆ, ಈ ವ್ಯವಸ್ಥೆಗಳ ನಿಯೋಜನೆಗೆ ತಂತ್ರಜ್ಞಾನ ಮತ್ತು ಮೂಲ ಸೌಕರ್ಯದಲ್ಲಿ ಗಮನಾರ್ಹ ಹೂಡಿಕೆಗಳು ಬೇಕಾಗುತ್ತವೆ, ಇದು ಶಿಕ್ಷಕರಿಗೆ ಸವಾಲಾಗಿರಬಹುದು. ಈ ವಿಮರ್ಶೆ ಪ್ರಬಂಧದಲ್ಲಿ, ಶಿಕ್ಷಣ ಮತ್ತು AI ತಂತ್ರಜ್ಞಾನವನ್ನು ಸಂಪರ್ಕಿಸಲು ನಾವು ಶಿಕ್ಷಣತಜ್ಞರು ಮತ್ತು ಮಾಹಿತಿ ತಂತ್ರಜ್ಞಾನ

ಪರಿಹಾರ ವಾಸ್ತುಶಿಲ್ಪಿಗಳಿಂದ ವಿಭಿನ್ನ ದೃಷ್ಟಿಕೋನಗಳನ್ನು ಒದಗಿಸುತ್ತೇವೆ. ಚರ್ಚಾ ಕ್ಷೇತ್ರಗಳಲ್ಲಿ ಸುಸ್ಥಿರ ಶಿಕ್ಷಣ ಪರಿಕಲ್ಪನೆಗಳು ಮತ್ತು ಸವಾಲುಗಳು, ತಂತ್ರಜ್ಞಾನ ವ್ಯಾಪ್ತಿ ಮತ್ತು ಫಲಿತಾಂಶಗಳು ಹಾಗೂ ಭವಿಷ್ಯದ ಸಂಶೋಧನಾ ನಿರ್ದೇಶನಗಳು ಸೇರಿವೆ. ಈ ಸವಾಲುಗಳನ್ನು ಪರಿಹರಿಸುವ ಮೂಲಕ ಮತ್ತು ಹೆಚ್ಚಿನ ಸಂಶೋಧನೆಯನ್ನು ಅನುಸರಿಸುವ ಮೂಲಕ, ನಾವು ಈ ತಂತ್ರಜ್ಞಾನಗಳ ಸಂಪೂರ್ಣ ಸಾಮರ್ಥ್ಯವನ್ನು ಅನ್ಲಾಕ್ ಮಾಡಬಹುದು ಮತ್ತು ಹೆಚ್ಚು ಸಮಾನ ಮತ್ತು ಸುಸ್ಥಿರ ಶಿಕ್ಷಣ ವ್ಯವಸ್ಥೆಯನ್ನು ಬೆಂಬಲಿಸಬಹುದು.

**ಕೀವರ್ಡ್‌ಗಳು:** ನವೀನ ಶಿಕ್ಷಣಶಾಸ್ತ್ರ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಬೋಧಕ, ಮಾಹಿತಿ ತಂತ್ರಜ್ಞಾನ ಮತ್ತು ಬುದ್ಧಿವಂತ ಕಲಿಕಾ ವ್ಯವಸ್ಥೆಗಳು.

---

AI ಅನ್ನು "ಸಂಘಗಳ ಆಧಾರದ ಮೇಲೆ ಯಾಂತ್ರೀಕರಣ" ಎಂದು ವ್ಯಾಖ್ಯಾನಿಸಬಹುದು. ಕಂಪ್ಯೂಟರ್‌ಗಳು ಡೇಟಾದಲ್ಲಿನ ಸಂಯೋಜನೆಗಳ ಆಧಾರದ ಮೇಲೆ ತಾರ್ಕಿಕತೆಯನ್ನು ಸ್ವಯಂಚಾಲಿತಗೊಳಿಸಿದಾಗ (ಅಥವಾ ತಜ್ಞರ ಜ್ಞಾನದಿಂದ ಕಳೆಯಲಾದ ಸಂಘಗಳು), ಂಖ ಗೆ ಎರಡು ಮೂಲಭೂತ ಬದಲಾವಣೆಗಳು ಸಂಭವಿಸುತ್ತವೆ ಮತ್ತು ಸಾಂಪ್ರದಾಯಿಕ ಎಡ್‌ಟೆಕ್ ಅನ್ನು ಮೀರಿ ಕಂಪ್ಯೂಟಿಂಗ್ ಅನ್ನು ಬದಲಾಯಿಸುತ್ತವೆ: (1) ಡೇಟಾವನ್ನು ಸೆರೆಹಿಡಿಯುವುದರಿಂದ ಡೇಟಾದಲ್ಲಿನ ಮಾದರಿಗಳನ್ನು ಪತ್ತೆ ಹಚ್ಚುವವರೆಗೆ ಮತ್ತು (2) ಬೋಧನಾ ಸಂಪನ್ಮೂಲಗಳಿಗೆ ಪ್ರವೇಶವನ್ನು ಒದಗಿಸುವುದರಿಂದ ಬೋಧನೆ ಮತ್ತು ಇತರ ಶೈಕ್ಷಣಿಕ ಪ್ರಕ್ರಿಯೆಗಳ ಬಗ್ಗೆ ನಿರ್ಧಾರಗಳನ್ನು ಸ್ವಯಂಚಾಲಿತ ಗೊಳಿಸುವವರೆಗೆ. ಮಾದರಿಗಳನ್ನು ಪತ್ತೆಹಚ್ಚುವುದು ಮತ್ತು ನಿರ್ಧಾರಗಳನ್ನು ಸ್ವಯಂ ಚಾಲಿತಗೊಳಿಸುವುದು

ಕಂಪ್ಯೂಟರ್ ವ್ಯವಸ್ಥೆಗೆ ನಿಯೋಜಿಸಬಹುದಾದ ಜವಾಬ್ದಾರಿಗಳ ಮಟ್ಟದಲ್ಲಿ ಹೆಚ್ಚಳವಾಗಿದೆ. AI ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ಮಾದರಿಗಳನ್ನು ಹೇಗೆ ಪತ್ತೆಹಚ್ಚಲಾಗುತ್ತದೆ ಎಂಬುದರಲ್ಲಿ ಪಕ್ಷಪಾತಕ್ಕೆ ಮತ್ತು ನಿರ್ಧಾರಗಳನ್ನು ಹೇಗೆ ಸ್ವಯಂಚಾಲಿತಗೊಳಿಸಲಾಗುತ್ತದೆ ಎಂಬುದರಲ್ಲಿ ಅನ್ಯಾಯಕ್ಕೆ ಕಾರಣವಾಗಬಹುದು. ಹೀಗಾಗಿ, ಶೈಕ್ಷಣಿಕ ವ್ಯವಸ್ಥೆಗಳು AI ವ್ಯವಸ್ಥೆಗಳ ಬಳಕೆಯನ್ನು ನಿಯಂತ್ರಿಸಬೇಕು. ಶಿಕ್ಷಣವನ್ನು ಸುಧಾರಿಸಲು AI ಅನ್ನು ಬಳಸುವ ಅವಕಾಶಗಳನ್ನು ಈ ವರದಿಯು ವಿವರಿಸುತ್ತದೆ, ಉದ್ಭವಿಸುವ ಸವಾಲುಗಳನ್ನು ಗುರುತಿಸುತ್ತದೆ ಮತ್ತು ಮತ್ತಷ್ಟು ನೀತಿ ಅಭಿವೃದ್ಧಿಯನ್ನು ಮಾರ್ಗದರ್ಶನ ಮಾಡಲು ಶಿಫಾರಸುಗಳನ್ನು ಅಭಿವೃದ್ಧಿಪಡಿಸುತ್ತದೆ.

AI ಬೋಧಕರು ಮತ್ತು ಬುದ್ಧಿವಂತ ಕಲಿಕಾ ವ್ಯವಸ್ಥೆಗಳು ಶಿಕ್ಷಣಶಾಸ್ತ್ರದಲ್ಲಿ ಒಂದು ಕ್ರಾಂತಿಯನ್ನು ಪ್ರತಿನಿಧಿಸುತ್ತವೆ. ಅವರು ವೈಯಕ್ತಿಕಗೊಳಿಸಿದ, ಅಂತರ್ಗತ ಮತ್ತು ಡೇಟಾ–ಚಾಲಿತ ಶಿಕ್ಷಣವನ್ನು ಒದಗಿಸುತ್ತಾರೆ, ಇದು Viksit Bharat 2047 ಮತ್ತು NEP 2020 ಗುರಿಗಳಿಗೆ ಅನುಗುಣವಾಗಿರುತ್ತದೆ. ಆದಾಗ್ಯೂ, ಯಶಸ್ವಿ ಏಕೀಕರಣಕ್ಕೆ ತಂತ್ರಜ್ಞಾನವನ್ನು ಮಾನವ ಮೌಲ್ಯಗಳೊಂದಿಗೆ ಸಮತೋಲನಗೊಳಿಸುವುದು, ನೈತಿಕ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಶಿಕ್ಷಕರು ಂಖ ಯೊಂದಿಗೆ ಸ್ಪರ್ಧಿಸುವ ಬದಲು ಅದರೊಂದಿಗೆ ಸಹಕರಿಸಲು ಅಧಿಕಾರ ನೀಡುವುದು ಅಗತ್ಯವಾಗಿರುತ್ತದೆ.

**ನವೀನ ಶಿಕ್ಷಣಶಾಸ್ತ್ರದ ಪರಿಕಲ್ಪನೆ**

- ಕಲಿಯುವ–ಕೇಂದ್ರಿತ: ವೈಯಕ್ತಿಕ ಅಗತ್ಯತೆಗಳು, ಆಸಕ್ತಿಗಳು ಮತ್ತು ಕಲಿಕೆಯ ವೇಗದ ಮೇಲೆ ಕೇಂದ್ರೀಕರಿಸುತ್ತದೆ.
- ತಂತ್ರಜ್ಞಾನ–ಸಂಯೋಜಿತ: ಬೋಧನೆಯನ್ನು ಬೆಂಬಲಿಸಲು ಡಿಜಿಟಲ್ ಪರಿಕರಗಳು, ಂಖ ಮತ್ತು ವಿಶ್ಲೇಷಣೆಗಳನ್ನು ಬಳಸುತ್ತದೆ.
- ಕೌಶಲ್ಯ–ಆಧಾರಿತ: ವಿಮರ್ಶಾತ್ಮಕ ಚಿಂತನೆ, ಸಮಸ್ಯೆ–ಪರಿಹರಿಸುವುದು, ಸೃಜನಶೀಲತೆ ಮತ್ತು ಸಹಯೋಗವನ್ನು ವರ್ಧಿಸುತ್ತದೆ.
- ಹೊಂದಿಕೊಳ್ಳುವ ಮತ್ತು ಅಂತರ್ಗತ: ವೈವಿಧ್ಯಮಯ ಕಲಿಯುವವರು ಮತ್ತು ಕಲಿಕಾ ಪರಿಸರಗಳನ್ನು ಬೆಂಬಲಿಸುತ್ತದೆ.

**AI ಬೋಧಕರು**

AI ಬೋಧಕರು ಮಾನವ ಬೋಧಕರನ್ನು ಅನುಕರಿಸಲು ಮತ್ತು ಶೈಕ್ಷಣಿಕ ಗುರಿಗಳನ್ನು ಸಾಧಿಸುವಲ್ಲಿ ಕಲಿಯುವವರಿಗೆ ಸಹಾಯ ಮಾಡಲು ವಿನ್ಯಾಸಗೊಳಿಸಲಾದ ವರ್ಚುವಲ್ ಅಥವಾ ಸಾಫ್ಟ್‌ವೇರ್ ಆಧಾರಿತ ವ್ಯವಸ್ಥೆಗಳಾಗಿವೆ.

**ವೈಶಿಷ್ಟ್ಯಗಳು:**

1. ವೈಯಕ್ತಿಕಗೊಳಿಸಿದ ಕಲಿಕೆಯ ಮಾರ್ಗಗಳು: ವಿಷಯವನ್ನು ವೈಯಕ್ತಿಕ ಪ್ರಗತಿಗೆ ಹೊಂದಿಕೊಳ್ಳುತ್ತದೆ. ನೈಜ–ಸಮಯದ ಪ್ರತಿಕ್ರಿಯೆ: ತಪ್ಪುಗಳನ್ನು ತಕ್ಷಣವೇ ಸರಿಪಡಿಸುತ್ತದೆ, ಸುಳಿವುಗಳನ್ನು ಒದಗಿಸುತ್ತದೆ ಮತ್ತು ಪರಿಹಾರಗಳನ್ನು ವಿವರಿಸುತ್ತದೆ. 24/7 ಪ್ರವೇಶಿಸುವಿಕೆ: ಸಮಯ ಅಥವಾ ಸ್ಥಳ ಅಡೆತಡೆಗಳಿಲ್ಲದೆ ಕಲಿಯುವುದು.
2. ಸಂವಾದಾತ್ಮಕ ತೊಡಗಿಸಿಕೊಳ್ಳುವಿಕೆ: ನೈಸರ್ಗಿಕ ಭಾಷಾ ಸಂಸ್ಕರಣೆ (NLP), ಚಾಟ್‌ಬಾಟ್‌ಗಳು ಮತ್ತು ಮಲ್ಟಿಮೀಡಿಯಾವನ್ನು ಬಳಸುತ್ತದೆ. ಉದಾಹರಣೆಗಳು: ChatGPT–ಆಧಾರಿತ ಕಲಿಕೆಯ ಸಹಚರರು. ಗಣಿತ ಬೋಧನೆಗಾಗಿ "MATHIA", AI-ಚಾಲಿತ ಭಾಷಾ ಬೋಧಕರು, ಇಂಟೆಲಿಜೆಂಟ್ ಲರ್ನಿಂಗ್ ಸಿಸ್ಟಮ್ಸ್ (ILSs), AI–ಚಾಲಿತ ವೇದಿಕೆಗಳಾಗಿವೆ, ಹೈಬ್ರಿಡ್ ತರಗತಿ ಕೊಠಡಿಗಳು: AI ಬೋಧಕರಿಂದ ಬೆಂಬಲಿತವಾದ ಮಾನವ ಶಿಕ್ಷಕರು, ಭಾವನೆ AI: ವಿದ್ಯಾರ್ಥಿಗಳ ಭಾವನೆಗಳನ್ನು ಪತ್ತೆಹಚ್ಚುವ ಮತ್ತು ಪ್ರತಿಕ್ರಿಯೆಗಳನ್ನು ಅಳವಡಿಸಿಕೊಳ್ಳುವ ವ್ಯವಸ್ಥೆಗಳು.
3. **ಜಾಗತಿಕ ಕಲಿಕಾ ಜಾಲಗಳು:** ಭಾಷೆಗಳು ಮತ್ತು ಸಾಂಸ್ಕೃತಿಕ ಅಡೆತಡೆಗಳನ್ನು ಂಖ ಸೇತುವೆ ಮಾಡುತ್ತದೆ.
4. **ಬುದ್ಧಿವಂತ ಮೌಲ್ಯಮಾಪನ:** ಜ್ಞಾನವನ್ನು ಮಾತ್ರವಲ್ಲದೆ ಕೌಶಲ್ಯ ಮತ್ತು ವರ್ತನೆಗಳನ್ನು ಅಳೆಯುವ AI. AI ಮತ್ತು ನವೀನ ಶಿಕ್ಷಣಶಾಸ್ತ್ರಗಳು ಹೇಗೆ ಒಟ್ಟಿಗೆ ಕಾರ್ಯನಿರ್ವಹಿಸುತ್ತವೆ
5. ವೈಯಕ್ತಿಕಗೊಳಿಸಿದ ಕಲಿಕೆ: AI–ಚಾಲಿತ ಬುದ್ಧಿವಂತ ಬೋಧನಾ ವ್ಯವಸ್ಥೆಗಳು (ITS) ವರ್ಚುವಲ್ ಒನ್–ಆನ್–ಒನ್ ಬೋಧಕರಾಗಿ ಕಾರ್ಯನಿರ್ವಹಿಸುತ್ತವೆ, ಕಲಿಕೆಯ ವೇದಿಕೆಗಳಲ್ಲಿ ಕಂಡುಬರುವಂತೆ ವಿದ್ಯಾರ್ಥಿಯ ವಿಶಿಷ್ಟ ಸಾಮರ್ಥ್ಯ ಮತ್ತು ದೌರ್ಬಲ್ಯಗಳಿಗೆ ಪಾಠಗಳ ತೊಂದರೆ, ವೇಗ ಮತ್ತು ಗಮನವನ್ನು ಅಳವಡಿಸಿಕೊಳ್ಳುತ್ತವೆ.

6. **ಹೊಂದಾಣಿಕೆಯ ವಿಷಯ ಮತ್ತು ಪ್ರತಿಕ್ರಿಯೆ:** ಈ ವ್ಯವಸ್ಥೆಗಳು ನೈಜ–ಸಮಯ, ಉದ್ದೇಶಿತ ಪ್ರತಿಕ್ರಿಯೆ, ಸುಳಿವುಗಳು ಮತ್ತು ಸ್ಕ್ಯಾಫೋಲ್ಡಿಂಗ್ ಅನ್ನು ಒದಗಿಸುತ್ತವೆ, ವಿದ್ಯಾರ್ಥಿಗಳು ಕಲಿಕೆಯ ಅಂತರವನ್ನು ನಿವಾರಿಸಲು ಮತ್ತು ಸಂಕೀರ್ಣ ಪರಿಕಲ್ಪನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಕರಗತ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.
7. **ವರ್ಧಿತ ಪ್ರವೇಶಸಾಧ್ಯತೆ:** ಭಾಷಣ ಗುರುತಿಸುವಿಕೆ ಮತ್ತು ಪಠ್ಯದಿಂದ ಭಾಷಣದಂತಹ AI ತಂತ್ರಜ್ಞಾನಗಳು ಅಂಗವೈಕಲ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಹೆಚ್ಚಿಸುತ್ತವೆ, ಆದರೆ ನೈಜ–ಸಮಯದ ಅನುವಾದ ಪರಿಕರಗಳು ಸ್ಥಳೀಯರಲ್ಲದವರನ್ನು ಬೆಂಬಲಿಸಬಹುದು.
8. **ಸ್ವಯಂಚಾಲಿತ ಮೌಲ್ಯಮಾಪನಗಳು:** AI ಸ್ವಯಂಚಾಲಿತ ಶ್ರೇಣೀಕರಣ ಪರಿಕರಗಳ ಮೂಲಕ ಶ್ರೇಣೀಕರಣ ಮತ್ತು ಮೌಲ್ಯಮಾಪನವನ್ನು ಸರಳಗೊಳಿಸುತ್ತದೆ, ಇದು ತ್ವರಿತ ಪ್ರತಿಕ್ರಿಯೆಯನ್ನು ಒದಗಿಸುತ್ತದೆ ಮತ್ತು ನ್ಯಾಯಯುತ, ಪಕ್ಷಪಾತವಿಲ್ಲದ ಮೌಲ್ಯಮಾಪನಗಳನ್ನು ಖಚಿತಪಡಿಸುತ್ತದೆ, ಶಿಕ್ಷಕರ ಗಮನಾರ್ಹ ಸಮಯ ಮತ್ತು ಶ್ರಮವನ್ನು ಉಳಿಸುತ್ತದೆ.
9. **ಸಹಯೋಗಿ ಮತ್ತು ಅನುಭವಿ ಕಲಿಕೆ:** AI–ಚಾಲಿತ ವೇದಿಕೆಗಳು ಸಹಯೋಗದ ಕಲಿಕೆಯನ್ನು ಸುಗಮಗೊಳಿಸಬಹುದು, ಆದರೆ ವರ್ಚುವಲ್ ರಿಯಾಲಿಟಿ (VR) ನಂತಹ ಇತರ ತಂತ್ರಜ್ಞಾನ–ವರ್ಧಿತ ಪರಿಕರಗಳು ತಲ್ಲೀನಗೊಳಿಸುವ, ಅನುಕರಿಸಿದ ಕಲಿಕೆಯ ಅನುಭವಗಳನ್ನು ನೀಡುತ್ತವೆ.

## AI–ಚಾಲಿತ ನಾವೀನ್ಯತೆಯ ಪ್ರಯೋಜನಗಳು

- **ಸುಧಾರಿತ ಕಲಿಕೆಯ ಫಲಿತಾಂಶಗಳು:** ಅನುಗುಣವಾದ ಸೂಚನೆ ಮತ್ತು ಬೆಂಬಲವನ್ನು ಒದಗಿಸುವ ಮೂಲಕ, ೦ಖ ವಿದ್ಯಾರ್ಥಿಗಳು ತಮ್ಮದೇ ಆದ ವೇಗದಲ್ಲಿ ಪ್ರಗತಿ ಸಾಧಿಸಲು ಮತ್ತು ಅವರ ಕಲಿಕೆಯ ಉದ್ದೇಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಾಧಿಸಲು ಸಹಾಯ ಮಾಡುತ್ತದೆ.
- **ಹೆಚ್ಚಿದ ನಿಶ್ಚಿತಾರ್ಥ:** ಸಂವಾದಾತ್ಮಕ ಕಲಿಕಾ ಪರಿಕರಗಳು ಮತ್ತು ವೈಯಕ್ತಿಕಗೊಳಿಸಿದ ವಿಧಾನಗಳು ವಿದ್ಯಾರ್ಥಿಗಳ ನಿಶ್ಚಿತಾರ್ಥವನ್ನು ಹೆಚ್ಚಿಸಬಹುದು ಮತ್ತು ಶೈಕ್ಷಣಿಕ ಸಾಮಗ್ರಿಗಳೊಂದಿಗೆ ಆಳವಾದ ಸಂಪರ್ಕಗಳನ್ನು ಬೆಳೆಸಬಹುದು.
- **ಹೆಚ್ಚಿನ ಶಿಕ್ಷಕರ ದಕ್ಷತೆ:** ಶ್ರೇಣೀಕರಣ ಮತ್ತು ಮೌಲ್ಯಮಾಪನ ಕಾರ್ಯಗಳ ಯಾಂತ್ರೀಕರಣವು ಶಿಕ್ಷಕರ ಮೇಲಿನ ಆಡಳಿತಾತ್ಮಕ ಹೊರೆಯನ್ನು ಕಡಿಮೆ ಮಾಡುತ್ತದೆ, ಅವರು ಬೋಧನೆ ಮತ್ತು ವಿದ್ಯಾರ್ಥಿ ಬೆಂಬಲದ ಮೇಲೆ ಹೆಚ್ಚು ಗಮನಹರಿಸಲು ಅನುವು ಮಾಡಿಕೊಡುತ್ತದೆ.
- **ಡೇಟಾ–ಚಾಲಿತ ಒಳನೋಟಗಳು:** AI ವ್ಯವಸ್ಥೆಗಳು ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಕುರಿತು ಮೌಲ್ಯಯುತವಾದ ಡೇಟಾವನ್ನು ಒದಗಿಸುತ್ತವೆ, ಬೋಧನಾ ತಂತ್ರಗಳನ್ನು ಪರಿಷ್ಕರಿಸಲು ಮತ್ತು ಒಟ್ಟಾರೆ ಶೈಕ್ಷಣಿಕ ಫಲಿತಾಂಶಗಳನ್ನು ಸುಧಾರಿಸಲು ಶಿಕ್ಷಕರಿಗೆ ಒಳನೋಟಗಳನ್ನು ನೀಡುತ್ತವೆ.

**ಸವಾಲುಗಳು ಮತ್ತು ಪರಿಗಣನೆಗಳು**

- ನೈತಿಕ ಬಳಕೆ ಮತ್ತು ಡೇಟಾ ಗೌಪ್ಯತೆ: ವಿದ್ಯಾರ್ಥಿಗಳ ಡೇಟಾದ ನೈತಿಕ ಮತ್ತು ಸುರಕ್ಷಿತ ಬಳಕೆಗಾಗಿ ಸಂಸ್ಥೆಗಳು ನೀತಿಗಳನ್ನು ಅಭಿವೃದ್ಧಿಪಡಿಸಬೇಕು, ಗೌಪ್ಯತೆ ಮತ್ತು ಂಖ ಪರಿಕರಗಳ ಜವಾಬ್ದಾರಿಯುತ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು.
- **ಡಿಜಿಟಲ್ ಅಸಮಾನತೆ:** ವಿಸ್ತರಿಸುವ ಡಿಜಿಟಲ್ ಅಂತರವನ್ನು ತಡೆಗಟ್ಟಲು ಎಲ್ಲಾ ವಿದ್ಯಾರ್ಥಿಗಳಿಗೆ ಡಿಜಿಟಲ್ ಪರಿಕರಗಳು ಮತ್ತು ವಿಶ್ವಾಸಾರ್ಹ ಇಂಟರ್ನೆಟ್ ಸಂಪರ್ಕಕ್ಕೆ ಸಮಾನ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಗಳು ಅಗತ್ಯವಿದೆ.
- **ಶಿಕ್ಷಕರ ತರಬೇತಿ:** ಅವರ ಬೋಧನಾ ಅಭ್ಯಾಸಗಳಲ್ಲಿ ಂಖ ಪರಿಕರಗಳನ್ನು ಪರಿಣಾಮಕಾರಿಯಾಗಿ ಸಂಯೋಜಿಸಲು ಮತ್ತು ಈ ಹೊಸ ಶಿಕ್ಷಣಶಾಸ್ತ್ರಗಳನ್ನು ಬಳಸಿಕೊಳ್ಳಲು ಶಿಕ್ಷಕರಿಗೆ ಸಾಕಷ್ಟು ತರಬೇತಿ ಮತ್ತು ವೃತ್ತಿಪರ ಅಭಿವೃದ್ಧಿಯ ಅಗತ್ಯವಿದೆ.
- **ಅತಿಯಾದ ಅವಲಂಬನೆಯನ್ನು ತಡೆಗಟ್ಟುವುದು:** ಪ್ರಯೋಜನಕಾರಿಯಾಗಿದ್ದರೂ, ಎಚ್ಚರಿಕೆಯಿಂದ ಮಾನವ ಮೇಲ್ವಿಚಾರಣೆಯಿಲ್ಲದೆ AI ಮೇಲಿನ ಅತಿಯಾದ ಅವಲಂಬನೆಯು ಅಭಿವೃದ್ಧಿಗೆ ಅಡ್ಡಿಯಾಗಬಹುದು, ಆದ್ದರಿಂದ ಮಾನವ ನೇತೃತ್ವದ ಶಿಕ್ಷಣವನ್ನು ಬೆಂಬಲಿಸಲು ಸಮತೋಲಿತ ವಿಧಾನವು ಅವಶ್ಯಕವಾಗಿದೆ.

ಬುದ್ಧಿವಂತ ಬೋಧನಾ ವ್ಯವಸ್ಥೆಗಳು ವೈವಿಧ್ಯಮಯ ವಿದ್ಯಾರ್ಥಿಗಳಿಗೆ ವೈಯಕ್ತಿಕಗೊಳಿಸಿದ ಕಲಿಕೆಯನ್ನು ಒದಗಿಸುವ ಮೂಲಕ ಶಿಕ್ಷಣವನ್ನು ಕ್ರಾಂತಿಗೊಳಿಸುತ್ತಿವೆ. ಈ ವ್ಯವಸ್ಥೆಗಳು ವಿದ್ಯಾರ್ಥಿಯ ಪ್ರಸ್ತುತ ಜ್ಞಾನ, ಕಲಿಕೆಯ ವೇಗ ಮತ್ತು ಆದ್ಯತೆಯ ಕಲಿಕಾ ಶೈಲಿಯನ್ನು ವಿಶ್ಲೇಷಿಸಲು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುತ್ತವೆ. ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ನಿರಂತರ ಮೌಲ್ಯಮಾಪನದ ಮೂಲಕ, ITS ಕಾರ್ಯಗಳ ಕಷ್ಟದ ಮಟ್ಟವನ್ನು ಸರಿಹೊಂದಿಸಬಹುದು, ಉದ್ದೇಶಿತ ಪ್ರತಿಕ್ರಿಯೆಯನ್ನು ನೀಡಬಹುದು ಮತ್ತು ಕಲಿಯುವವರ ನಿರ್ದಿಷ್ಟ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಸೂಚಿಸಬಹುದು. ಈ ಕ್ರಿಯಾತ್ಮಕ ವಿಧಾನವು ಪ್ರತಿಯೊಬ್ಬ ವಿದ್ಯಾರ್ಥಿಯು ಸವಾಲಿನ ಮತ್ತು ಸಾಧಿಸಬಹುದಾದ ಬೋಧನೆಯನ್ನು ಪಡೆಯುವುದನ್ನು ಖಚಿತಪಡಿಸುತ್ತದೆ, ಇದು ವಿಷಯದ ಆಳವಾದ ತಿಳುವಳಿಕೆ ಮತ್ತು ಧಾರಣವನ್ನು ಉತ್ತೇಜಿಸುತ್ತದೆ.

**ಐ ಟಿ ಎಸ್ ನ ವಾಸ್ತುಶಿಲ್ಪವು ಸಾಮಾನ್ಯವಾಗಿ ನಾಲ್ಕು ಪ್ರಮುಖ ಅಂಶಗಳನ್ನು ಒಳಗೊಂಡಿದೆ:**

- ✓ ಡೊಮೇನ್ ಮಾದರಿಯು ಕಲಿಸಬೇಕಾದ ಜ್ಞಾನ ಮತ್ತು ಕೌಶಲ್ಯಗಳನ್ನು ಒಳಗೊಳ್ಳುತ್ತದೆ, ಇದು ವ್ಯವಸ್ಥೆಯ ಬೋಧನಾ ವಿಷಯಕ್ಕೆ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ.
- ✓ ವಿದ್ಯಾರ್ಥಿ ಮಾದರಿಯು ಕಲಿಯುವವರ ಪ್ರಗತಿಯನ್ನು ಟ್ರ್ಯಾಕ್ ಮಾಡುತ್ತದೆ, ಸುಧಾರಣೆಗಾಗಿ ಸಾಮರ್ಥ್ಯಗಳು ಮತ್ತು ಕ್ಷೇತ್ರಗಳನ್ನು ಗುರುತಿಸುತ್ತದೆ.
- ✓ ಬೋಧನಾ ಮಾದರಿಯು ಡೊಮೇನ್ ಮತ್ತು ವಿದ್ಯಾರ್ಥಿ ಮಾದರಿಗಳಿಂದ ಡೇಟಾವನ್ನು ಆಧರಿಸಿ ಅತ್ಯಂತ ಪರಿಣಾಮಕಾರಿ ಬೋಧನಾ ತಂತ್ರಗಳನ್ನು ನಿರ್ಧರಿಸುತ್ತದೆ.
- ✓ ಬಳಕೆದಾರ ಇಂಟರ್ಫೇಸ್ ಮಾದರಿಯು ವಿದ್ಯಾರ್ಥಿ ಮತ್ತು ವ್ಯವಸ್ಥೆಯ ನಡುವಿನ ಸಂವಹನವನ್ನು ಸುಗಮಗೊಳಿಸುತ್ತದೆ, ಮಾಹಿತಿಯನ್ನು ಪ್ರಸ್ತುತಪಡಿಸುತ್ತದೆ ಮತ್ತು ಆಕರ್ಷಕ ರೀತಿಯಲ್ಲಿ ಇನ್‌ಪುಟ್ ಅನ್ನು ಸ್ವೀಕರಿಸುತ್ತದೆ.

ಬುದ್ಧಿವಂತ ಬೋಧನಾ ವ್ಯವಸ್ಥೆಗಳು ತಕ್ಷಣದ ಪ್ರತಿಕ್ರಿಯೆ ಮತ್ತು ಉದ್ದೇಶಿತ ಸೂಚನೆಯನ್ನು ನೀಡುತ್ತವೆ, ತೊಡಗಿಸಿಕೊಳ್ಳುವಿಕೆ, ಧಾರಣ ಮತ್ತು ಒಟ್ಟಾರೆ ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸುತ್ತವೆ. ಅವು ಸ್ಕೇಲೆಬಿಲಿಟಿ ಮತ್ತು ಡೇಟಾ ಒಳನೋಟಗಳನ್ನು ಸಹ ನೀಡುತ್ತವೆ, ಶಿಕ್ಷಣತಜ್ಞರು ಪ್ರಗತಿಯನ್ನು ಟ್ರ್ಯಾಕ್ ಮಾಡಲು ಮತ್ತು ಪ್ರತಿ ವಿದ್ಯಾರ್ಥಿಯನ್ನು ಪರಿಣಾಮಕಾರಿಯಾಗಿ ಬೆಂಬಲಿಸಲು ಸೂಚನೆಯನ್ನು ನಿರಂತರವಾಗಿ ಪರಿಷ್ಕರಿಸಲು ಅನುವು ಮಾಡಿಕೊಡುತ್ತದೆ. ಬುದ್ಧಿವಂತ ಬೋಧನಾ ವ್ಯವಸ್ಥೆಗಳು ಪ್ರತಿ ವಿದ್ಯಾರ್ಥಿಯ ನಿರ್ದಿಷ್ಟ ಅಗತ್ಯಗಳಿಗೆ ಶೈಕ್ಷಣಿಕ ವಿಷಯವನ್ನು ಹೊಂದಿಸುತ್ತವೆ. AI ಅನ್ನು ಬಳಸಿಕೊಂಡು, ಈ ವ್ಯವಸ್ಥೆಗಳು ವಿದ್ಯಾರ್ಥಿಯ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಆಧಾರದ ಮೇಲೆ ಪಾಠಗಳ ವೇಗ, ತೊಂದರೆ ಮತ್ತು ಗಮನವನ್ನು ಸರಿಹೊಂದಿಸುತ್ತವೆ.

ಈ ಮಟ್ಟದ ಗ್ರಾಹಕೀಕರಣವು ವಿದ್ಯಾರ್ಥಿಗಳು ತಮ್ಮ ತಿಳುವಳಿಕೆ ಮತ್ತು ಧಾರಣಶಕ್ತಿಯನ್ನು ಸುಧಾರಿಸಲು ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ ಸೂಚನೆಗಳನ್ನು ಪಡೆಯುವುದನ್ನು ಖಚಿತಪಡಿಸುತ್ತದೆ, ಇದು ಅವರಿಗೆ ತಮ್ಮದೇ ಆದ ವೇಗದಲ್ಲಿ ಪ್ರಗತಿ ಸಾಧಿಸಲು ಸಹಾಯ ಮಾಡುತ್ತದೆ. ಐಟಿಎಸ್ ವೈವಿಧ್ಯಮಯ ಕಲಿಕೆಯ ಶೈಲಿಗಳನ್ನು ಬೆಂಬಲಿಸುತ್ತದೆ, ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಮತ್ತು ಆಳವಾದ ಸಂಪರ್ಕವನ್ನು ಬೆಳೆಸಲು ಹೆಚ್ಚು ಪರಿಣಾಮಕಾರಿ ಮಾರ್ಗಗಳನ್ನು ನೀಡುತ್ತದೆ.

**ಬುದ್ಧಿವಂತ ಬೋಧನಾ ವ್ಯವಸ್ಥೆಯ ಸವಾಲುಗಳು ಮತ್ತು ಮಿತಿಗಳು**

1. ಬುದ್ಧಿವಂತ ಬೋಧನಾ ವ್ಯವಸ್ಥೆಗಳು ತಮ್ಮದೇ ಆದ ಸವಾಲುಗಳು ಮತ್ತು ಮಿತಿಗಳ ಗುಂಪನ್ನು ಒಳಗೊಂಡಿರುತ್ತವೆ, ಇದು ITS ಅನ್ನು ಸಾಂಪ್ರದಾಯಿಕ ಬೋಧನಾ ವಿಧಾನಗಳೊಂದಿಗೆ ಸಮತೋಲನಗೊಳಿಸುವ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ, ಇದರಿಂದಾಗಿ ಸುಸಂಗತವಾದ ಕಲಿಕಾ ಅನುಭವವನ್ನು ಸೃಷ್ಟಿಸುತ್ತದೆ.
2. ಒಂದು, ಈ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು ದುಬಾರಿಯಾಗಿದೆ, ಸಂಶೋಧನೆ ಮತ್ತು ತಂತ್ರಜ್ಞಾನದಲ್ಲಿ ಗಣನೀಯ ಹೂಡಿಕೆಯ ಅಗತ್ಯವಿರುತ್ತದೆ. ಸಂವಾದಾತ್ಮಕ ವಿಷಯ ಮತ್ತು ಹೊಂದಾಣಿಕೆಯ ಅಲ್ಗಾರಿದಮ್‌ಗಳನ್ನು ರಚಿಸುವುದು ದುಬಾರಿ ಮತ್ತು ಸಂಪನ್ಮೂಲ–ತೀವ್ರವಾಗಿರುತ್ತದೆ ಎಂಬ ಕಾರಣದಿಂದಾಗಿ, ದೃಢವಾದ ವ್ಯವಸ್ಥೆಗಳನ್ನು ನಿರ್ಮಿಸುವುದು ಸಮಯ ಮತ್ತು ಶ್ರಮವನ್ನು ತೆಗೆದುಕೊಳ್ಳುತ್ತದೆ.
3. ITS ಭಾವನಾತ್ಮಕ ಬುದ್ಧಿವಂತಿಕೆಯಂತಹ ಸೂಕ್ಷ್ಮ ವ್ಯತ್ಯಾಸಗಳೊಂದಿಗೆ ಹೋರಾಡಬಹುದು, ಆಗಾಗ್ಗೆ ಮಾನವ ಬೋಧಕರು ಒದಗಿಸಬಹುದಾದ ವೈಯಕ್ತಿಕ ಸ್ಪರ್ಶವನ್ನು ಹೊಂದಿರುವುದಿಲ್ಲ. ಈ ಮಿತಿಯು ವಿದ್ಯಾರ್ಥಿಗಳು ಮೃದು ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಅಥವಾ ಶಿಕ್ಷಕರು ನೀಡಬಹುದಾದ ಭಾವನಾತ್ಮಕ ಬೆಂಬಲವನ್ನು ಪಡೆಯುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು.
4. ITS ನ ಮತ್ತೊಂದು ಮಿತಿಯೆಂದರೆ ಅತಿಯಾದ ಅವಲಂಬನೆಯ ಅಪಾಯ – ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಮೌಲ್ಯಯುತವಾದ ಮುಖಾಮುಖಿ ಸಂವಹನಗಳನ್ನು ಸಂಭಾವ್ಯವಾಗಿ ಕಡಿಮೆ ಮಾಡುತ್ತದೆ. ಈ ಸಂವಹನಗಳು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸಲು ಮತ್ತು ಬಾಂಧವ್ಯವನ್ನು ಬೆಳೆಸಲು ಸಹಾಯ ಮಾಡುತ್ತವೆ, ಇವೆರಡೂ ಸಮಗ್ರ ಅಭಿವೃದ್ಧಿಗೆ ಅತ್ಯಗತ್ಯ.
5. ಹೆಚ್ಚುವರಿಯಾಗಿ, ITS ಪ್ರತಿಯೊಂದು ವಿಷಯಕ್ಕೂ ಸೂಕ್ತವಲ್ಲದಿರಬಹುದು. ಉದಾಹರಣೆಗೆ, ಇದು ಗಣಿತ ಅಥವಾ ಕೋಡಿಂಗ್‌ನಂತಹ ವಿಷಯಗಳಿಗೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆಯಾದರೂ, ಮಾನವಿಕ ಅಥವಾ ಸೃಜನಶೀಲ ಕ್ಷೇತ್ರಗಳಲ್ಲಿನ ವಿಷಯಗಳ ಸಂಕೀರ್ಣತೆ ಮತ್ತು ವ್ಯತ್ಯಾಸವು ಪರಿಣಾಮಕಾರಿ ಐಟಿಎಸ್ ಅನ್ನು ಅಭಿವೃದ್ಧಿಪಡಿಸುವುದನ್ನು ಹೆಚ್ಚು ಕಷ್ಟಕರವಾಗಿಸುತ್ತದೆ.

### ಬುದ್ಧಿವಂತ ಬೋಧನಾ ವ್ಯವಸ್ಥೆಗಳ ಭವಿಷ್ಯ

AI ತಂತ್ರಜ್ಞಾನ ಮುಂದುವರೆದಂತೆ, ಬುದ್ಧಿವಂತ ಬೋಧನಾ ವ್ಯವಸ್ಥೆಗಳು ಅಪಾರ ಭರವಸೆಯನ್ನು ತೋರಿಸುತ್ತವೆ. ವೈಯಕ್ತಿಕಗೊಳಿಸಿದ ಕಲಿಕೆಯು ಕೇಂದ್ರವಾಗಿ ಉಳಿದಿದೆ, ಪ್ರತಿ ವಿದ್ಯಾರ್ಥಿಯ ಕಲಿಕೆಯ ಶೈಲಿ, ಸಾಮರ್ಥ್ಯಗಳು ಮತ್ತು ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು AI ನಿರಂತರವಾಗಿ ಡೇಟಾವನ್ನು ವಿಶ್ಲೇಷಿಸುತ್ತದೆ. ಉದಾಹರಣೆಗೆ, ವಿದ್ಯಾರ್ಥಿಯು ಓದುವ ಗ್ರಹಿಕೆಯೊಂದಿಗೆ ಹೋರಾಡುತ್ತಿರುವಾಗ ಂಖ ಗುರುತಿಸಬಹುದು ಮತ್ತು ಆ ಕೌಶಲ್ಯಗಳನ್ನು ಹೆಚ್ಚಿಸಲು ಉದ್ದೇಶಿತ ವ್ಯಾಯಾಮಗಳನ್ನು ನೀಡಬಹುದು. ವಿದ್ಯಾರ್ಥಿಯ ಸಾಮರ್ಥ್ಯಗಳನ್ನು ಉತ್ತಮವಾಗಿ ಅಳೆಯಲು ನೈಜ ಸಮಯದಲ್ಲಿ ಹೊಂದಿಕೊಳ್ಳುವ ಹೊಂದಾಣಿಕೆಯ ಪರೀಕ್ಷೆಗಳನ್ನು ರಚಿಸುವ ಮೂಲಕ AI ಸಾಂಪ್ರದಾಯಿಕ ಮೌಲ್ಯಮಾಪನಗಳನ್ನು ಹೆಚ್ಚಿಸುತ್ತಿದೆ, ಇದರಿಂದಾಗಿ ಕಲಿಕೆಯ ಪ್ರಗತಿಯ ಹೆಚ್ಚು ನಿಖರವಾದ ಪ್ರತಿಬಿಂಬವನ್ನು ಒದಗಿಸಲು ಸಹಾಯ ಮಾಡುತ್ತದೆ.

ಶಿಕ್ಷಣ ಮತ್ತು ಬೆಂಬಲಕ್ಕೆ ಪ್ರವೇಶವನ್ನು ಸುಧಾರಿಸಲು ITS ಭರವಸೆ ನೀಡುತ್ತದೆ. ಖಾಸಗಿ ಬೋಧನಾ ಲಭ್ಯವಿಲ್ಲದ ದೂರದ ಪ್ರದೇಶಗಳಲ್ಲಿ, AI–ಚಾಲಿತ ಬೋಧನಾ ವ್ಯವಸ್ಥೆಗಳು ವಿವರಣೆಗಳನ್ನು ಒದಗಿಸುವ ಮತ್ತು ಸಂಕೀರ್ಣ ಸಮಸ್ಯೆಗಳ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಒಂದರಿಂದ ಒಂದು ಬೆಂಬಲವನ್ನು ನೀಡಬಹುದು. ವಿದ್ಯಾರ್ಥಿಗಳಿಗೆ ಪ್ರಯೋಜನವನ್ನು ನೀಡುವುದರ ಜೊತೆಗೆ, ಶ್ರೇಣೀಕರಣ ಮತ್ತು ಹಾಜರಾತಿ ಟ್ರ್ಯಾಕಿಂಗ್‌ನಂತಹ ಆಡಳಿತಾತ್ಮಕ ಕಾರ್ಯಗಳನ್ನು ಸ್ವಯಂಚಾಲಿತಗೊಳಿಸುವ ಮೂಲಕ ಂಖ ಶಿಕ್ಷಕರ ಬೆಂಬಲವನ್ನು ಕ್ರಾಂತಿಗೊಳಿಸುತ್ತಿದೆ. ಇದು ಶಿಕ್ಷಣತಜ್ಞರು ಬೋಧನೆ ಮತ್ತು ವಿದ್ಯಾರ್ಥಿಗಳ ಸಂವಹನದ ಮೇಲೆ ಕೇಂದ್ರೀಕರಿಸಲು ಅಮೂಲ್ಯ ಸಮಯವನ್ನು ಮುಕ್ತಗೊಳಿಸುತ್ತದೆ. ಖಖಖ ಹೆಚ್ಚು ವ್ಯಾಪಕವಾಗುತ್ತಿದ್ದಂತೆ, ಅವರು ಕಡಿಮೆ ಸೇವೆ ಸಲ್ಲಿಸಿದ ಸಮುದಾಯಗಳಿಗೆ ಉತ್ತಮ–ಗುಣಮಟ್ಟದ, ವೈಯಕ್ತಿಕಗೊಳಿಸಿದ ಕಲಿಕೆಯ ಅನುಭವಗಳನ್ನು ನೀಡುವ ಮೂಲಕ ಶೈಕ್ಷಣಿಕ ಅಸಮಾನತೆಯನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಂಖ ಯೊಂದಿಗೆ, ಕಡಿಮೆ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳು ಲಭ್ಯವಿಲ್ಲದ ಸೂಕ್ತವಾದ ಸಂಪನ್ಮೂಲಗಳು ಮತ್ತು ಸಾಮಗ್ರಿಗಳನ್ನು ಪ್ರವೇಶಿಸಬಹುದು – ಶೈಕ್ಷಣಿಕ ಅವಕಾಶಗಳಲ್ಲಿನ ಅಂತರವನ್ನು ಕಡಿಮೆ ಮಾಡುತ್ತದೆ.

### ಉಪಸಂಹಾರ

ಕಂಪ್ಯೂಟರ್ ಬೋಧನೆಯನ್ನು ಮೊದಲು 1960 ರ ದಶಕದ ಉತ್ತರಾರ್ಧದಲ್ಲಿ ತರಗತಿ ಕೊಠಡಿಗಳಲ್ಲಿ ಪರಿಚಯಿಸಲಾಯಿತು ಮತ್ತು ಅಂದಿನಿಂದ ಗಮನಾರ್ಹ ಸುಧಾರಣೆಗೆ ಒಳಗಾಗಿದೆ, ಆಗಾಗ್ಗೆ ಂಖ ಯಲ್ಲಿನ ಪ್ರಗತಿಗಳನ್ನು ಒಳಗೊಂಡಿದೆ. ಆ ನವೀಕರಿಸಿದ ಬೋಧನಾ ವ್ಯವಸ್ಥೆಗಳನ್ನು ಈಗ ಸಾಮಾನ್ಯವಾಗಿ ಇಂಟೆಲಿಜೆಂಟ್ ಟ್ಯೂಟರಿಂಗ್ ಸಿಸ್ಟಮ್ಸ್ (ITS) ಎಂದು ಕರೆಯಲಾಗುತ್ತದೆ. ITS ಗಳು ಸಾಮಾನ್ಯವಾಗಿ ಂಖ ಪ್ರೋಗ್ರಾಮಿಂಗ್‌ನೊಂದಿಗೆ ಸಜ್ಜುಗೊಂಡಿರುವ ಸಾಫ್ಟ್‌ವೇರ್ ಪ್ರೋಗ್ರಾಂಗಳಾಗಿವೆ, ಅದು ಕಲಿಯುವವರ ಪ್ರಗತಿಯನ್ನು ಪತ್ತೆಹಚ್ಚಬಹುದು, ಗ್ರಹಿಸಬಹುದು ಮತ್ತು ಹೊಂದಿಕೊಳ್ಳಬಹುದು. ಅವು ವಿದ್ಯಾರ್ಥಿಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುತ್ತವೆ, ತೊಂದರೆಗಳು ಮತ್ತು ದೋಷಗಳನ್ನು ಗುರುತಿಸುತ್ತವೆ, ರಚನಾತ್ಮಕ ವಿಷಯ ವಿಷಯವನ್ನು ನೀಡಲು ಮತ್ತು ಕಷ್ಟದ ಮಟ್ಟವನ್ನು ಸರಿಹೊಂದಿಸಲು ನ್ಯಾವಿಗೇಟ್ ಮಾಡುತ್ತವೆ, ಹೀಗಾಗಿ ಕಲಿಕೆಗೆ ಸೂಕ್ತ ಮಾರ್ಗವನ್ನು ಅಭಿವೃದ್ಧಿಪಡಿಸುತ್ತವೆ. ITS ನ ಒಂದು ಪ್ರಸಿದ್ಧ ಉದಾಹರಣೆಯೆಂದರೆ ಡ್ಯುಯೊಲಿಂಗೊ, ಇದು ಪ್ರತಿಯೊಬ್ಬ ಬಳಕೆದಾರರಿಗೆ ಬೋಧನೆಯನ್ನು ವೈಯಕ್ತೀಕರಿಸುವ ಭಾಷಾ ಕಲಿಕೆಗಾಗಿ ಮೊಬೈಲ್ ಅಪ್ಲಿಕೇಶನ್ ಆಗಿದೆ. ITS ಗಳು ಆಧುನಿಕ ಸಮಾಜದಲ್ಲಿ ಹೆಚ್ಚು ಪ್ರಚಲಿತವಾಗುತ್ತಿವೆ, ತರಗತಿ ಕೊಠಡಿಗಳಂತಹ ಸಾಂಪ್ರದಾಯಿಕ ಶೈಕ್ಷಣಿಕ ಪರಿಸರಗಳು ಮತ್ತು ದೂರಶಿಕ್ಷಣ ಅಥವಾ ವೃತ್ತಿಪರ ತರಬೇತಿಯಂತಹ ಪರ್ಯಾಯ ಕಲಿಕೆಯ ಸಂದರ್ಭಗಳನ್ನು ಬೆಂಬಲಿಸುತ್ತವೆ.

UNESCO ದ 2021 ರ ನೀತಿ ನಿರೂಪಕರಿಗೆ ಮಾರ್ಗದರ್ಶನದ ಪ್ರಕಾರ, ಅವು ಪ್ರಸ್ತುತ AIEd ನ ಹೆಚ್ಚು ವ್ಯಾಪಕವಾಗಿ ಅಧ್ಯಯನ ಮಾಡಲಾದ ಅಪ್ಲಿಕೇಶನ್ ಆಗಿದೆ.

ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ (AI) ಏಕೀಕರಣವು ಪರಿವರ್ತನಾತ್ಮಕ ಯುಗಕ್ಕೆ ನಾಂದಿ ಹಾಡುತ್ತದೆ, ಕ್ರಿಯಾತ್ಮಕ, ತಂತ್ರಜ್ಞಾನ–ಚಾಲಿತ ಪ್ರಪಂಚದ ಬೇಡಿಕೆಗಳನ್ನು ಪೂರೈಸಲು ಶಿಕ್ಷಣ ವಿಧಾನಗಳನ್ನು ಮರುರೂಪಿಸುತ್ತದೆ. ಈ ಪ್ರಬಂಧವು AI ನಿಂದ ಸಕ್ರಿಯಗೊಳಿಸಲಾದ ನವೀನ ಶಿಕ್ಷಣ ಪದ್ಧತಿಗಳನ್ನು ಪರಿಶೋಧಿಸುತ್ತದೆ, ಕಲಿಕೆಯನ್ನು ವೈಯಕ್ತೀಕರಿಸುವ, ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವ ಮತ್ತು ಶಿಕ್ಷಕರ ದಕ್ಷತೆಯನ್ನು ಹೆಚ್ಚಿಸುವ ಅವುಗಳ ಸಾಮರ್ಥ್ಯವನ್ನು ಒತ್ತಿಹೇಳುತ್ತದೆ. ಬುದ್ಧಿವಂತ ಬೋಧನಾ ವ್ಯವಸ್ಥೆಗಳು, ಉತ್ಪಾದಕ AI ಮತ್ತು ಮುನ್ಸೂಚಕ ವಿಶ್ಲೇಷಣೆಗಳಂತಹ AI–ಚಾಲಿತ ಪರಿಕರಗಳ ಪ್ರಸ್ತುತ ಭೂದೃಶ್ಯವನ್ನು ಮತ್ತು ವೈವಿಧ್ಯಮಯ ಕಲಿಯುವವರ ಅಗತ್ಯಗಳನ್ನು ಪರಿಹರಿಸುವಲ್ಲಿ ಅವುಗಳ ಪಾತ್ರವನ್ನು ಇದು ಪರಿಶೀಲಿಸುತ್ತದೆ. ಶಿಕ್ಷಣದಲ್ಲಿ AI ನ ಅನ್ವಯವು ಗಣನೀಯ ಪ್ರಯೋಜನಗಳನ್ನು ನೀಡುತ್ತದೆ, ಅಲ್ಗಾರಿದಮಿಕ್ ಪಕ್ಷಪಾತ, ಡೇಟಾ ಗೌಪ್ಯತೆ ಕಾಳಜಿಗಳು ಮತ್ತು ಶಿಕ್ಷಕರ ಸಿದ್ಧತೆಯಂತಹ ಸವಾಲುಗಳು ಮುಂದುವರಿಯುತ್ತವೆ. ಅಸ್ತಿತ್ವದಲ್ಲಿರುವ ಸಂಶೋಧನೆ ಮತ್ತು ಪ್ರಕರಣ ಅಧ್ಯಯನಗಳಿಂದ ಒಳನೋಟಗಳನ್ನು ಸಂಶ್ಲೇಷಿಸುವ ಮೂಲಕ, ಈ ಅಧ್ಯಯನವು AI–ಚಾಲಿತ ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದ ಅವಕಾಶಗಳು ಮತ್ತು ಅಡೆತಡೆಗಳನ್ನು ಗುರುತಿಸುತ್ತದೆ. ಸಂಶೋಧನೆಗಳು ನೈತಿಕ ಪರಿಗಣನೆಗಳ ಪ್ರಾಮುಖ್ಯತೆ, ಶಿಕ್ಷಕರಿಗೆ ವೃತ್ತಿಪರ ಅಭಿವೃದ್ಧಿಯ ಅಗತ್ಯತೆ ಮತ್ತು ಶಿಕ್ಷಣದಲ್ಲಿ AI ನ ಭವಿಷ್ಯವನ್ನು ರೂಪಿಸುವಲ್ಲಿ ಅಂತರಶಿಸ್ತೀಯ ಸಹಯೋಗದ ಪಾತ್ರವನ್ನು ಎತ್ತಿ ತೋರಿಸುತ್ತವೆ. ಶಿಕ್ಷಣತಜ್ಞರು, ನಿರ್ವಾಹಕರು ಮತ್ತು ನೀತಿ ನಿರೂಪಕರಿಗೆ AI ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಕಾರ್ಯಸಾಧ್ಯವಾದ ಶಿಫಾರಸುಗಳೊಂದಿಗೆ ಪ್ರಬಂಧವು ಮುಕ್ತಾಯಗೊಳ್ಳುತ್ತದೆ, ಅದರ ಏಕೀಕರಣವು ಶಿಕ್ಷಣದಲ್ಲಿ ಒಳಗೊಳ್ಳುವಿಕೆ, ಸಮಾನತೆ ಮತ್ತು ನಾವೀನ್ಯತೆಯ ಗುರಿಗಳೊಂದಿಗೆ ಹೊಂದಿಕೆಯಾಗುತ್ತದೆ ಎಂದು ಖಚಿತಪಡಿಸುತ್ತದೆ.

**ಆಧಾರಗ್ರಂಥಗಳು :**


1. M M Asad , S Shahzad , S H A Shah , F Sherwani , N M Almusharraf ChatGPT as artificial intelligence-based generative multimedia for English writing pedagogy: challenges and opportunities from an educator's perspective International Journal of Information and Learning Technology Posted: 2024
2. M Bearman , R Ajjawi Learning to work with the black box: Pedagogy for a world with artificial intelligence British Journal of Educational Technology , volume 54 , issue 5 , p. 1160 - 1173 Posted: 2023
3. S Carradini On the Current Moment in AI: Introduction to Special Issue on Effects of Artificial Intelligence Tools in Technical Communication Pedagogy, Practice, and Research, Part 1 Journal of Business and Technical Communication , volume 38 , issue 3 , p. 187 - 198 Posted: 2024.
4. Y Dai , Z Lin , A Liu , D Dai , W Wang Effect of an Analogy-Based Approach of Artificial Intelligence Pedagogy in Upper Primary Schools Journal of Educational Computing Research , volume 61 , issue 8 , p. 159 - 186 Posted: 2024

# ಶಾಲೆಯಲ್ಲಿ ಮಾತೃಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಸಲು ಇರುವ ಸಾಧನಗಳು ಮತ್ತು ತಂತ್ರಗಳು

**ಡಾ. ರವಿ ಹೆಚ್**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
hravi198206@gmail.com

**ಪೀಠಿಕೆ :**

ಮಾತೃಭಾಷೆ ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ಅತ್ಯಂತ ಮೂಲಭೂತನಾದ ಸಂವಹನದ ಮಾಧ್ಯಮ. ಇದು ಜ್ಞಾನಾರ್ಜನೆಗೆ ಬಾಗಿಲು ತೆರೆದಿಡುವುದಷ್ಟೇ ಅಲ್ಲದೆ, ಸಂಸ್ಕೃತಿ, ಪರಂಪರೆ, ಸಮಾಜ ಮತ್ತು ವೈಯಕ್ತಿಕ ಚಿಂತನೆಗಳ ಬೆಳವಣಿಗೆಯ ಮೂಲವಾಗಿದೆ. ಮಕ್ಕಳ ಮನೋವೈಜ್ಞಾನಿಕ ಬೆಳವಣಿಗೆ, ಇಂದ್ರಿಯಗಳ ಅಭಿವ್ಯಕ್ತಿ ಮತ್ತು ಸೃಜನಶೀಲತೆ ಮೊದಲಾದವುಗಳು ಮಾತೃಭಾಷೆಯ ಪರಿಚಿತ ವಾತಾವರಣದಲ್ಲಿ ಬೆಳೆಯುತ್ತವೆ. ಶಾಲಾ ಶಿಕ್ಷಣದಲ್ಲಿ ಮಾತೃಭಾಷೆಯ ಬೋಧನೆಯನ್ನು ಪರಿಣಾಮಕಾರಿಯಾಗಿಸಲು ಶಿಕ್ಷಕರು ಬಳಸುವ ಸಾಧನಗಳು, ನೂತನ ಶಾಸ್ತ್ರೀಯ ತಂತ್ರಗಳು ಮತ್ತು ತಂತ್ರಜ್ಞಾನಾಧಾರಿತ ವಿಧಾನಗಳು ಅತ್ಯಂತ ಮುಖ್ಯ.

NEP–2020 ಕೂಡ ಮಕ್ಕಳ ಆರಂಭಿಕ ಹಾಗೂ ಮೂಲಭೂತ ಶಿಕ್ಷಣ ಹಂತಗಳಲ್ಲಿ ಮಾತೃಭಾಷೆಯ ಬಳಕೆಯನ್ನು ವಿಶೇಷವಾಗಿ ಉತ್ತೇಜಿಸಿದೆ. ಈ ಸಂದರ್ಭದಲ್ಲಿ ಶಿಕ್ಷಕರು, ಸಂಶೋಧಕರು ಮತ್ತು ಶಿಕ್ಷಣ ಸಂಸ್ಥೆಗಳು ಮಾತೃಭಾಷಾ ಬೋಧನೆಯನ್ನು ಸಮೃದ್ಧಗೊಳಿಸಲು ವಿವಿಧ ಬೋಧನಾ ವಿಧಾನಗಳನ್ನು ಬಳಸುವ ಅಗತ್ಯ ಹೆಚ್ಚಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಲೇಖನವು ಮಾತೃಭಾಷಾ ಬೋಧನೆಯನ್ನು ಪರಿಣಾಮಕಾರಿಯಾಗಿಸಲು ಬಳಸಬಹುದಾದ ಸಾಧನಗಳು ಮತ್ತು ತಂತ್ರಗಳ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ವಿವರಿಸುತ್ತದೆ.

**ಮಾತೃಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಸಲು ಅಗತ್ಯವಿರುವ ಮೂಲಾಂಶಗಳು :**

1. **ಮನೋವೈಜ್ಞಾನಿಕ ಮತ್ತು ಭಾಷಾ ಬೆಳವಣಿಗೆಗೆ ಹೊಂದಿಕೊಳ್ಳುವಿಕೆ :** ಮಕ್ಕಳ ಆಸಕ್ತಿ, ಕುತೂಹಲ ಮತ್ತು ಜ್ಞಾನಾತ್ಮಕ ಮಟ್ಟಕ್ಕೆ ಹೊಂದುವ ರೀತಿಯಲ್ಲಿ ಪಾಠ ಪ್ರವಚನ ಕೈಗೊಳ್ಳುವುದು.
2. **ಭಾವನಾತ್ಮಕ ಸಂಪರ್ಕ :** ಮನೆ ಮತ್ತು ಶಾಲೆಯಗಳ ನಡುವೆ ಭಾಷಾ ಪರಿಸರದ ಸಮನ್ವಯ ಸಾಧಿಸುವುದು, ವಿದ್ಯಾರ್ಥಿಯಲ್ಲಿ ಭಾಷಾ ಬಳಕೆಯ ಬಗ್ಗೆ ಆತ್ಮವಿಶ್ವಾಸ ಹೆಚ್ಚಿಸುವುದು.
3. **ಅವಲೋಕನ, ವೀಕ್ಷಣೆ ಮತ್ತು ಸಂಶೋಧನಾ ಕಲಿಕೆ :** ವಿದ್ಯಾರ್ಥಿಯು ಸ್ವಯಂ ಓದಲು, ತನ್ನ ಕುತೂಹಲ ವ್ಯಕ್ತಪಡಿಸಲು, ಪ್ರಶ್ನಿಸಲು ಸಾಧ್ಯವಾಗುವ ಕಲಿಕಾ ವಿಧಾನಗಳನ್ನು ತರಗತಿಯಲ್ಲಿ ಬಳಸುವುದು.
4. **ಪರಿಸರ ಪ್ರೇರಣಾ ಚಟುವಟಿಕೆಗಳು :** ಜೀವನಾಧಾರಿತ ಕಲಿಕೆ ಮತ್ತು ಸ್ಥಳೀಯ ಇತಿಹಾಸ, ಸಂಸ್ಕೃತಿ–ಸಾಹಿತ್ಯಕ್ಕೆ ಆಧರಿಸಿದ ಚಟುವಟಿಕೆಗಳನ್ನು ಆಯೋಜಿಸುವುದು.

**ಮಾತೃಭಾಷೆ ಬೋಧನೆಯಲ್ಲಿ ಬಳಸಬಹುದಾದ ಪರಿಣಾಮಕಾರಿ ಸಾಧನಗಳು :**

**1. ಪಠ್ಯಪುಸ್ತಕಗಳು ಮತ್ತು ಪಠ್ಯವಸ್ತುಗಳು :**

✓ ಸರಳ, ನೈಜ ಮತ್ತು ಸ್ಥಳೀಯ ಸಂಸ್ಕೃತಿಯ ಉದಾಹರಣೆಗಳನ್ನು ಒಳಗೊಂಡ ಪಠ್ಯಪುಸ್ತಕಗಳ ಬಳಕೆ ಮಾಡುವುದು.

✓ ವಯೋಸಹಜ ಕಥೆಗಳು, ಸಂಭಾಷಣೆಗಳು, ಜನಪದ ಹಾಡುಗಳು, ಗಾದೆಗಳು ಮೊದಲಾದವುಗಳ ನಿಯತ ಬಳಕೆ.

✓ ಅಗತ್ಯದಲ್ಲಿ ದೃಶ್ಯ–ಶ್ರವ್ಯ ಸಾಧನಗಳ ಸಹಾಯಕದೊಂದಿಗೆ ಪಠ್ಯವಸ್ತುಗಳನ್ನು ಜೀವಂತಗೊಳಿಸುವುದು.

**2. ದೃಶ್ಯವಸ್ತುಗಳು (Visual Aids)**

✓ ಚಿತ್ರಗಳು, ಭಾವಚಿತ್ರಗಳು, ತೂಗುಪಟಗಳು, ಮಿಂಚುಪಟ್ಟಿಗಳು, ನಕ್ಷೆಗಳನ್ನು ಉಪಯೋಗಿಸಿ ಅರ್ಥೈಸುವುದು.

✓ ವರ್ಣಚಿತ್ರಗಳು, ಕಾರ್ಟೂನ್ ಚಿತ್ರಗಳು, ಪಾತ್ರಮಾಲಿಕೆಗಳು ತರಗತಿಗಳಲ್ಲಿ ಬಳಸಿ ಬೋಧಿಸುವುದು.

✓ ವಿದ್ಯಾರ್ಥಿಗಳ ಗಮನವನ್ನು ಸೆಳೆಯುವ ಮತ್ತ ಆಕರ್ಷಿಸುವ ಬಣ್ಣಬಣ್ಣದ ಕಲಿಕಾ ಸಾಮಗ್ರಿಗಳನ್ನು ಬರೆಯಲು, ಓದಲು ಬಳಸುವುದು.

**3. ಶ್ರವ್ಯ–ದೃಶ್ಯ ಸಾಧನಗಳು (Audio-Visual Tools) :**

✓ ಕಥಾವೀಡಿಯೋಗಳು, ಆನಿಮೇಟೆಡ್ ಪಾಠಗಳು, ಭಾಷಾ ಕೌಶಲ್ಯ ಅಭಿವೃದ್ಧಿಗೆ ಆಡಿಯೋ ಕ್ಲಿಪ್‌ಗಳನ್ನು ಸಂಗ್ರಹಿಸಿ ಉಪಯೋಗಿಸುವುದು.

✓ ರೇಡಿಯೋ ಕಾರ್ಯಕ್ರಮಗಳು, ಮಕ್ಕಳ ನಾಟಕ ಮತ್ತು ಹಾಡುಗಳನ್ನು ಕೇಳಿಸುವುದು ಜೊತೆಗೆ ತೋರಿಸುವುದು.

✓ ತರಗತಿಯಲ್ಲಿ ತಂತ್ರಜ್ಞಾನದ ಸಂಯೋಜನೆಗೆ ಅವಕಾಶ ಕಲ್ಪಿಸುವುದು.

**4. ಭಾಷಾ ಪ್ರಯೋಗಾಲಯ (Language Lab) :**

✓ ಉಚ್ಚಾರಣೆ, ಶ್ರವಣ ಕೌಶಲ್ಯ, ಶಬ್ದೋಚ್ಚಾರಣಾಭ್ಯಾಸಕ್ಕೆ ವಿಶೇಷ ಸಾಧನಗಳನ್ನು ಬಳಸುವುದು.

✓ ಡಿಜಿಟಲ್ ಭಾಷಾ ಅಭ್ಯಾಸದ ಸಾಪ್ಟ್‌ವೇರ್‌ಗಳನ್ನುಗಳು.

✓ ವಿದ್ಯಾರ್ಥಿಗಳಿಗೆ ಸ್ವಯಂ ಕಲಿಕೆ (Self-Learning Module) ಸಾಧ್ಯತೆಗಳನ್ನು ಉತ್ತೇಜಿಸುವುದು.

**5. ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಸಾಧನಗಳು :**

✓ ಅಂತರ್‌ಜಾಲ ಮಾಹಿತಿ (e-content), ತಂತ್ರಜ್ಞಾನಾಧಾರಿತ ತಥೆಪುಸ್ತಕಗಳು (digital storybooks).

✓ ಅಂತರ್‌ಜಾಲ ಆಧಾರಿತ ವೇದಿಕೆಗಳು (e-learning platforms (DIKSHA, NROER) ಮೊದಲಾದವುಗಳ ಸಹಯೋಗದೊಂದಿಗೆ ಕಲಿಕೆ ಮತ್ತು ಬೋಧನೆಯನ್ನು ಕೈಗೊಳ್ಳುವುದು.

✓ ಸಂವಹನಾತ್ಮಕ ಬಿಳಿಹಲಗೆ (Interactive Whiteboard), ಕಲಿಕಾ ಅಪಲಿಕೇಶನ್‌ಗಳು (Learning Apps) ಮತ್ತು ಭಾಷಾ ಆಟ (Language Games) ಗಳನ್ನು ಬಳಕೆ ಮಾಡುವುದು.

**6. ಗ್ರಂಥಾಲಯ ಮತ್ತು ಓದು ಚಟುವಟಿಕೆಗಳು :**

✓ ಶಾಲಾ ಗ್ರಂಥಾಲಯದಲ್ಲಿ ಮಕ್ಕಳಿಗಾಗಿ ಕಥಾ ಪುಸ್ತಕಗಳು, ಕವನ ಸಂಕಲನಗಳು, ಚಿತ್ರಕಥೆಗಳು ಮತ್ತು ಇತರ ಸಾಹಿತ್ಯಿಕ ಪುಸ್ತಕಗಳನ್ನು ಸಂಗ್ರಹಿಸಿ ಮಕ್ಕಳಿಗೆ ಅವಕಾಶ ಸಿಕ್ಕಾಗಲೆಲ್ಲಾ ಓದಲು ಬಿಡುವುದು.

✓ ಓದು ಮೇಳ, ಪುಸ್ತಕ ಪ್ರದರ್ಶನ, ಒಂದು ದಿನ – ಒಂದು ಕಥೆಯಂತಹ ಚಟುವಟಿಕೆಗಳನ್ನು ಆಯೋಜಿಸುವುದು.

**7. ನೈಜ ಜೀವನಾಧಾರಿತ ಕಲಿಕಾ ಸಾಮಗ್ರಿಗಳು :**

✓ ಸ್ಥಳೀಯ ಪರಿಸರ: ಮಾರುಕಟ್ಟೆ, ಹಬ್ಬ–ಹರಿದಿನಗಳು, ಜನಪದ ಸಂಸ್ಕೃತಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು, ಹಾಗೆಯೇ ಅದರ ಅನುಭವವನ್ನು ಬರೆದು ವರದಿ ಮಾಡಲು ತಿಳಿಸುವುದು.

✓ ಮನೆ ಮತ್ತು ಸಮುದಾಯದ ಭಾಷಾ ಬಳಕೆಯಲ್ಲಿ ಮಕ್ಕಳು ನಿರಂತರ ತೊಡಗುವಂತೆ ಪ್ರೇರೇಪಿಸುವುದು.

✓ ಸ್ಥಳೀಯ ಸಾಹಿತಿ, ಸಾಹಿತ್ಯ, ಸಂಪನ್ಮೂಲ ವ್ಯಕ್ತಿಗಳ ಭೇಟಿ, ಪರಂಪರಾಗತ ವಸ್ತುಗಳ ಸಂಗ್ರಹ ಮಾಡುವುದು.

**8. ಆಟ–ಆಧಾರಿತ ಕಲಿಕೆ (Play-Based Resources)**

✓ ಭಾಷಾ ಆಟಗಳು: ಪದಬಂಧ, ಸಡುಕೊ, ಗಾದೆ, ಪಡೆನುಡಿ, ನುಡಿಗಟ್ಟು ಜೋಡಣೆ, ರಸಪ್ರಶ್ನೆಯಂತಹ ಚಟುವಟಿಕೆಗಳನ್ನು ಅಯೋಜಿಸುವುದು.

✓ ಗುಂಪು ಆಟಗಳು: ಪಾತ್ರಾಭಿನಯ, ನಾಟಕ, ಸಂಭಾಷಣೆ ಆಟಗಳಲ್ಲಿ ಮಕ್ಕಳನ್ನು ತೊಡಗಿಸುವುದು.

**ಮಾತೃಭಾಷೆ ಬೋಧನೆಯಲ್ಲಿ ಪರಿಣಾಮಕಾರಿ ತಂತ್ರಗಳು :**

**1. ಕಥಾನಿವೇದನಾ ತಂತ್ರ (Storytelling Method) :**

ಕಥೆಗಳು ಮಕ್ಕಳ ಕಲಿಕೆಯಲ್ಲಿ ಅತ್ಯುತ್ತಮ ಸಾಧನ. ಕಥೆಗಳ ಮೂಲಕ ಮಕ್ಕಳಲ್ಲಿ ಶಬ್ದಸಂಪತ್ತು ವೃದ್ಧಿ, ವಾಕ್ಯ ರಚನೆ ಕೌಶಲ್ಯ, ಕಲ್ಪನೆ ಮತ್ತು ಸೃಜನಶೀಲತೆ, ಶ್ರವಣ ಮತ್ತು ವಾಚನ ಕೌಶಲಗಳು ವೃದ್ಧಿಯಾಗುತ್ತವೆ.

**2. ಸಂಭಾಷಣಾ ತಂತ್ರ (Conversation Method) :**

ಶಿಕ್ಷಕ–ವಿದ್ಯಾರ್ಥಿ ಮತ್ತು ವಿದ್ಯಾರ್ಥಿ–ವಿದ್ಯಾರ್ಥಿಗಳ ನಡುವೆ ಸಂಭಾಷಣೆಯ ಅಭ್ಯಾಸ ಮಾಡುವುದು, ದಿನನಿತ್ಯ ಭಾಷಾ ಬಳಕೆಯ ಪರಿಸ್ಥಿತಿಯನ್ನು ಸೃಷ್ಟಿಸುವುದು. ಮತ್ತು ಪ್ರಶ್ನೋತ್ತರ ಪದ್ಧತಿ ಮತ್ತು ಸಂವಾದಗಳು ಭಾಷೆಯ ಚೈತನ್ಯವನ್ನು ಹೆಚ್ಚಿಸುತ್ತದೆ.

**3. ಸಮೂಹ ಮತ್ತು ಜೋಡಿ ಕಲಿಕೆ ತಂತ್ರಗಳು (Group & Pair Activities) :**

ಚುಟುಕು ಚರ್ಚೆಗಳು, ಜೋಡಿ ಓದು, ಜಾನಪದ ಹಾಡುಗಳ ಅಭ್ಯಾಸ, ಗುಂಪಿನಲ್ಲಿ ಕಥೆ ರಚನೆ, ನಾಟಕ ಪ್ರದರ್ಶನ ಮತ್ತು ತಂಡಭಾವ, ಸಂವಹನ ಕೌಶಲ್ಯ ಮತ್ತು ಸಾಮಾಜಿಕ ಕಲಿಕೆಗೆ ಉತ್ತೇಜನ ನೀಡುವುದು.

**4. ಕ್ರಿಯಾತ್ಮಕ ಕಲಿಕೆ (Activity-Based Learning) :**

ಚಿತ್ರಕ್ಕೆ ಶೀರ್ಷಿಕೆ ಬರೆಯುವುದು, ಪ್ರಶ್ನೆಗಳಿಗೆ ಉತ್ತರ ಹುಡುಕುವುದು, ಕವನಕ್ಕೆ ನೃತ್ಯ/ಸಂಗೀತ ಸಂಯೋಜನೆ, ಚಿತ್ರ–ಕಥೆ–ನೆನಪು ಚಟುವಟಿಕೆಗಳನ್ನು ಅಯೋಜಿಸುವುದು.

**5. ಅನುಕರಣಾ ತಂತ್ರ (Role Play Method) :**

ನಾಟಕ, ಪೌರಾಣಿಕ ಪಾತ್ರಗಳ ಅಭಿನಯ, ಮಾರುಕಟ್ಟೆ, ಆಸ್ಪತ್ರೆ, ಶಾಲೆ ಮೊದಲಾದ ದಿನನಿತ್ಯದ ಪಾತ್ರಗಳನ್ನು ಅನುಕರಣೆ ಮಾಡುವುದು.

**6. ಧ್ವನಿ–ಶ್ರವಣ ತಂತ್ರ (Phonetic and Listening Technique) :**

ಸಾಹಿತ್ಯ ವಾಚನ, ಶಬ್ದಗಳ ಸರಿಯಾದ ಉಚ್ಚಾರಣೆ, ಗಾದೆ, ಪದಬಂಧ–ಪದಪ್ರಯೋಗ ಅಭ್ಯಾಸ ಮತ್ತು ಶ್ರವಣ ಅಭ್ಯಾಸದ ಮೂಲಕ ಭಾಷಾ ರುಚಿ ಬೆಳೆಸುವುದು.

**7. ಸಂಶೋಧನಾ ತಂತ್ರ (Inquiry-Based Learning) :**

'ಇದು ಏಕೆ?', 'ಇದು ಹೇಗೆ?' ಎಂಬ ಪ್ರಶ್ನೆಗಳ ಜಾಡಿನಲ್ಲಿ ಕಲಿಕೆ, ಸ್ಥಳೀಯ ಸಂಸ್ಕೃತಿ–ಪರಂಪರೆ ಕುರಿತು ಮಾಹಿತಿ ಸಂಗ್ರಹ ಮತ್ತು ಗ್ರಂಥಾಲಯ ಮತ್ತು ಅಂತರ್‌ಜಾಲ ಮೂಲಗಳಿಂದ ಮಾಹಿತಿ ಸಂಗ್ರಹಣೆ ಮಾಡುವುದು.

**8. ಸಮಗ್ರ ಭಾಷಾ ವಿಧಾನ (Integrated Language Approach) :**

ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರಹಗಳ ಕೌಶಲ್ಯಗಳನ್ನು ಒಟ್ಟಿಗೆ ಬೆಳೆಸುವ ವಿಧಾನವನ್ನು ಅನುಸರಿಸುವುದು. ಹಾಗೂ ಪಾಠದಲ್ಲಿ – ಚಿತ್ರ, ಕಥೆ, ಕವನ, ಚಟುವಟಿಕೆ, ಸಂಭಾಷಣೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಭಾಷಾಸಂಪತ್ತು ವೃದ್ಧಿಯಾಗುತ್ತದೆ.

**9. ಮೌಲ್ಯಮಾಪನದ ನವೀನ ವಿಧಾನಗಳು :**

ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (CCE). ದತ್ತಕಾರ್ಯಾಧಾರಿತ ಮೌಲ್ಯಮಾಪವನ, ವೈಯಕ್ತಿಕ ಹಿಮ್ಮಾಹಿತಿ ಪಡೆಯುವುದು ಮತ್ತು ಅವಲೋಕನವನ್ನು ಬಳಸುವುದು.

**ಶಾಲಾ ಪರಿಸರದಲ್ಲಿ ಶಿಕ್ಷಕರ ಪಾತ್ರ :**

1. ಭಾಷಾ ವಾತಾವರಣ ನಿರ್ಮಾಣ – ತರಗತಿಯಲ್ಲಿ ಮಾತೃಭಾಷೆಯ ನೈಸರ್ಗಿಕ ಬಳಕೆಗೆ ಪ್ರೋತ್ಸಾಹಿಸುವುದು.
2. ಸಹಾನುಭೂತಿ ಮತ್ತು ಧೈರ್ಯ – ವಿದ್ಯಾರ್ಥಿಗಳ ತಪ್ಪುಗಳನ್ನು ಪ್ರೋತ್ಸಾಹಿಕ ಕ್ರಮವಾಗಿ ನೋಡಬೇಕು.

3. ಸೃಜನಶೀಲ ಬೋಧನೆ – ನಾಟ್ಯ, ಸಂಗೀತ, ಚಟುವಟಿಕೆ, ಆಟಗಳ ಮೂಲಕ ಬೋಧನೆ ಮಾಡಬೇಕು.
4. ಪೋಷಕರೊಂದಿಗೆ ಸಂವಹನ – ಮನೆಯಲ್ಲಿ ಮಾತೃಭಾಷೆಯ ಅಭ್ಯಾಸಕ್ಕೆ ಪೋಷಕರಿಗೆ ಮಾರ್ಗದರ್ಶನ ನೀಡಬೇಕು.
5. ಸಂಸ್ಕೃತಿ–ಸಾಹಿತ್ಯ ಸಂಪರ್ಕ – ಸ್ಥಳೀಯ ಹಬ್ಬಗಳು, ಜನಪದ ಕಲಾ ಪರಂಪರೆ, ಜನಪದ ಸಾಹಿತ್ಯದ ಪರಿಚಯ ಮಾಡಿಸಬೇಕು.

**ಮಾತೃಭಾಷೆ ಕಲಿಕೆಯ ಪರಿಣಾಮಗಳು :**

ಮಾತೃಭಾಷೆಯಿಂದ ಮಕ್ಕಳ ಜ್ಞಾನಾರ್ಜನೆ ಸುಲಭವಾಗುತ್ತದೆ, ಆತ್ಮವಿಶ್ವಾಸ ವೃದ್ಧಿಯಾಗುತ್ತದೆ, ಚಿಂತನಾ ಶಕ್ತಿಯ ವಿಕಸನವಾಗುತ್ತದೆ, ವಿದ್ಯಾಭ್ಯಾಸದಲ್ಲಿ ಉತ್ಸಾಹ ಮೂಡುತ್ತದೆ, ಸಾಮಾಜಿಕ, ಸಂಸ್ಕೃತಿಕ ಸಂವಹನ ಶಕ್ತಿ ಬೆಳೆಯುತ್ತದೆ ಜೊತೆಗೆ ಇತರ ಭಾಷೆಗಳನ್ನು ಕಲಿಯುವ ಸಾಮರ್ಥ್ಯ ಮತ್ತು ಗೌರವದಲ್ಲಿ ಹೆಚ್ಚಳವಾಗುತ್ತದೆ.

**ಉಪಸಂಹಾರ :**

ಮಾತೃಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ; ಅದು ವಿದ್ಯಾರ್ಥಿಯ ವ್ಯಕ್ತಿತ್ವ, ಸಂಸ್ಕೃತಿ, ಮನೋವೈಜ್ಞಾನಿಕ ಮನೋಭಾವದ ಬೆಳವಣಿಗೆ, ಜ್ಞಾನಾಭಿವೃದ್ಧಿ ಮತ್ತು ರಚನಾಶೀಲತೆಗೆ ಮೂಲಭೂತ. ಶಾಲಾ ಶಿಕ್ಷಣದಲ್ಲಿ ಮಾತೃಭಾಷಾ ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡಲು ಶಿಕ್ಷಕರು ಅನೇಕ ಸಾಧನಗಳು ಮತ್ತು ತಂತ್ರಗಳನ್ನು ಬಳಸಬಹುದಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದರಿಂದ ವಿದ್ಯಾರ್ಥಿಗಳು ಜ್ಞಾನವನ್ನು ಆಳವಾಗಿ ಗ್ರಹಿಸಿಕೊಳ್ಳುತ್ತಾರೆ, ತಮ್ಮ ಸಾಮಾಜಿಕ ಮತ್ತು ಭಾವನಾತ್ಮಕ ಜಗತ್ತಿನೊಂದಿಗೆ ಬಲವಾದ ನಂಟನ್ನು ಹೊಂದುತ್ತಾರೆ ಮತ್ತು ಇತರ ಭಾಷೆಗಳ ಕಲಿಕೆಗೆ ಗಟ್ಟಿಯಾದ ನೆಲೆ ಹೊಂದುತ್ತಾರೆ. ಆದ್ದರಿಂದ ಶಿಕ್ಷಕರು ನವೀನ ವಿಧಾನಗಳನ್ನು ಅಳವಡಿಸಿಕೊಂಡು ಮಾತೃಭಾಷೆ ಬೋಧನೆಯನ್ನು ಸುಧಾರಿಸುವುದು ಅತ್ಯಾವಶ್ಯಕ.

**ಆಧಾರ ಗ್ರಂಥಗಳು:**


- ರಾಷ್ಟ್ರೀಯ ಶಿಕ್ಷಣ ನೀತಿ 2020. ಭಾರತ ಸರ್ಕಾರ.
- ಯುನೆಸ್ಕೋ (2016). ಮಾತೃಬಾಷಾ ಆಧಾರಿತ ಬಹುಭಾಷಾ ಶಿಕ್ಷಣ.
- Vygotsky, L. (1978). *Mind in Society: The Development of Higher Psychological Processes.*
- Bruner, J. (1990). *Acts of Meaning.*
- Kumar, Krishna. (2004). *What is Worth Teaching?*
- NCERT. (2005). *National Curriculum Framework (NCF).*

# ಸಂಪ್ರದಾಯಿಕ ಬೋಧನೆ ಮತ್ತು ಆಧುನಿಕ ಬೋಧನೆ: ಒಂದು ಸೈದ್ಧಾಂತಿಕ ಅವಲೋಕನ

**ಡಾ. ಕಿರಣ್‌ಕುಮಾರ್ ಕೆ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
kirankumar.ks25@gmail.com

---

**ಪೀಠಿಕೆ :**

ಶಿಕ್ಷಣವು ಮಾನವ ಸಮಾಜದ ಅಭಿವೃದ್ಧಿಗೆ ಅತ್ಯಂತ ಮುಖ್ಯವಾದ ಸಾಧನವಾಗಿದೆ. ಕಾಲಕ್ರಮೇಣ ಸಮಾಜ, ತಂತ್ರಜ್ಞಾನ, ಆರ್ಥಿಕ ವ್ಯವಸ್ಥೆ ಹಾಗೂ ಮಾನವ ಚಿಂತನೆಗಳಲ್ಲಿ ಉಂಟಾಗುವ ಬದಲಾವಣೆಗಳೊಂದಿಗೆ ಶಿಕ್ಷಣ ವ್ಯವಸ್ಥೆಯೂ ರೂಪಾಂತರಗೊಳ್ಳುತ್ತಾ ಬಂದಿದೆ. ಈ ರೂಪಾಂತರಗಳ ಪರಿಣಾಮವಾಗಿ ಬೋಧನಾ ವಿಧಾನಗಳಲ್ಲಿಯೂ ಸ್ಪಷ್ಟವಾದ ವ್ಯತ್ಯಾಸಗಳನ್ನು ನಾವು ಗಮನಿಸಬಹುದು. ಸಂಪ್ರದಾಯಿಕ ಬೋಧನೆ (Traditional Teaching) ಮತ್ತು ಆಧುನಿಕ ಬೋಧನೆ (Modern Teaching) ಎಂಬ ಎರಡು ಪ್ರಮುಖ ಬೋಧನಾ ಪರಿಕಲ್ಪನೆಗಳು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಸಂಪ್ರದಾಯಿಕ ಬೋಧನೆ ಗುರುಕೇಂದ್ರಿತವಾಗಿದ್ದು, ಪಠ್ಯಪುಸ್ತಕ ಹಾಗೂ ಉಪನ್ಯಾಸಾಧಾರಿತವಾಗಿರುವುದಾದರೆ, ಆಧುನಿಕ ಬೋಧನೆ ವಿದ್ಯಾರ್ಥಿಕೇಂದ್ರಿತ, ಚಟುವಟಿಕಾಧಾರಿತ ಹಾಗೂ ತಂತ್ರಜ್ಞಾನಸಹಿತವಾಗಿದೆ.

ಈ ಲೇಖನವು ಸಂಪ್ರದಾಯಿಕ ಮತ್ತು ಆಧುನಿಕ ಬೋಧನೆಗಳ ಸೈದ್ಧಾಂತಿಕ ಹಿನ್ನೆಲೆ, ಲಕ್ಷಣಗಳು, ಬೋಧನಾ ವಿಧಾನಗಳು, ಲಾಭ–ಮಿತಿಗಳು ಹಾಗೂ ಇಂದಿನ ಶಿಕ್ಷಣದಲ್ಲಿ ಅವುಗಳ ಪ್ರಾಮುಖ್ಯತೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡುತ್ತದೆ. ಬೋಧನೆಯ ಸ್ವರೂಪದಲ್ಲಿ ಉಂಟಾದ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವುದು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅಗತ್ಯವಾಗಿದ್ದು, ಸಮಗ್ರ ಶಿಕ್ಷಣದ ದೃಷ್ಟಿಯಿಂದ ಎರಡೂ ವಿಧಾನಗಳ ಸಮನ್ವಯ ಅಗತ್ಯವೆಂಬುದನ್ನು ಈ ಲೇಖನ ಒತ್ತಿಹೇಳುತ್ತದೆ.

**ಸಂಪ್ರದಾಯಿಕ ಬೋಧನೆ : ಸೈದ್ಧಾಂತಿಕ ಅವಲೋಕನ :**

ಸಂಪ್ರದಾಯಿಕ ಬೋಧನೆ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿರುವ ಶಿಕ್ಷಣ ವಿಧಾನವಾಗಿದೆ. ಭಾರತೀಯ ಗುರುಕುಲ ಪದ್ಧತಿ, ಮಧ್ಯಯುಗದ ಪಾಠಶಾಲೆಗಳು ಮತ್ತು ಕಾಲೋನಿಯಲ್ ಶಿಕ್ಷಣ ವ್ಯವಸ್ಥೆಗಳೆಲ್ಲವು ಸಂಪ್ರದಾಯಿಕ ಬೋಧನೆಯ ರೂಪಾಂತರಗಳೇ. ಈ ಬೋಧನಾ ವಿಧಾನದಲ್ಲಿ ಗುರುವೇ ಜ್ಞಾನ ಮೂಲವಾಗಿದ್ದು, ವಿದ್ಯಾರ್ಥಿಗಳು ಶ್ರವಣ, ಸ್ಮರಣೆ ಮತ್ತು ಪುನರಾವರ್ತನೆಯ ಮೂಲಕ ಜ್ಞಾನವನ್ನು ಪಡೆದುಕೊಳ್ಳುತ್ತಿದ್ದರು.

**ಸಂಪ್ರದಾಯಿಕ ಬೋಧನೆಯ ಲಕ್ಷಣಗಳು**

1. **ಗುರುಕೇಂದ್ರಿತ ವಿಧಾನ** – ಶಿಕ್ಷಕನು ತರಗತಿಯ ಕೇಂದ್ರಬಿಂದುವಾಗಿದ್ದು, ಪಾಠದ ಸಂಪೂರ್ಣ ನಿಯಂತ್ರಣ ಅವನ ಕೈಯಲ್ಲಿರುತ್ತದೆ.
2. **ಉಪನ್ಯಾಸಾಧಾರಿತ ಬೋಧನೆ** – ಮಾತಿನ ಮೂಲಕ ಜ್ಞಾನ ವರ್ಗಾವಣೆ ಮುಖ್ಯವಾಗಿರುತ್ತದೆ.
3. **ಪಠ್ಯಪುಸ್ತಕಾಧಾರಿತ ಶಿಕ್ಷಣ** – ಪಠ್ಯಕ್ರಮ ಮತ್ತು ಪಠ್ಯಪುಸ್ತಕವೇ ಜ್ಞಾನಕ್ಕೆ ಮೂಲವಾಗಿರುತ್ತದೆ.

4. **ಶಿಸ್ತು ಮತ್ತು ನಿಯಮಗಳಿಗೆ ಒತ್ತು** – ತರಗತಿಯಲ್ಲಿ ಮೌನ, ಶಿಸ್ತು, ವಿಧೇಯತೆ ಮುಖ್ಯ ಮೌಲ್ಯಗಳಾಗಿರುತ್ತವೆ.
5. **ಪರೀಕ್ಷಾಕೇಂದ್ರಿತ ಮೌಲ್ಯಮಾಪನ** – ನೆನಪಿನ ಶಕ್ತಿ ಮತ್ತು ಬರವಣಿಗೆಯ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ.

**ಸಂಪ್ರದಾಯಿಕ ಬೋಧನೆಯ ಸೈದ್ಧಾಂತಿಕ ಹಿನ್ನೆಲೆ**

ಸಂಪ್ರದಾಯಿಕ ಬೋಧನೆ ಮುಖ್ಯವಾಗಿ ವ್ಯವಹಾರವಾದ (Behaviorism) ಮತ್ತು ಜ್ಞಾನ ಸಂಗ್ರಹ ಸಿದ್ಧಾಂತಗಳ ಮೇಲೆ ಆಧಾರಿತವಾಗಿದೆ. ಈ ಸಿದ್ಧಾಂತಗಳ ಪ್ರಕಾರ, ಕಲಿಕೆ ಎಂದರೆ ಶಿಕ್ಷಕ ನೀಡುವ ಮಾಹಿತಿಯನ್ನು ವಿದ್ಯಾರ್ಥಿ ಸ್ವೀಕರಿಸುವ ಪ್ರಕ್ರಿಯೆ. ವಿದ್ಯಾರ್ಥಿಯು ಕ್ರಿಯಾಶೀಲ ಕಲಿಕಾರ್ಥಿಯಾಗದೆ, ಜ್ಞಾನವನ್ನು ಸ್ವೀಕರಿಸುವ ಪಾತ್ರದಲ್ಲಿರುತ್ತಾನೆ.

**ಸಂಪ್ರದಾಯಿಕ ಬೋಧನೆಯ ಲಾಭಗಳು :**

- ✓ ಶಿಸ್ತುಬದ್ಧ ಕಲಿಕೆ ಸಾಧ್ಯವಾಗುತ್ತದೆ.
- ✓ ವಿಶಾಲ ತರಗತಿಗಳನ್ನು ನಿರ್ವಹಿಸಲು ಅನುಕೂಲ.
- ✓ ಪಠ್ಯಕ್ರಮವನ್ನು ಕಡಿಮೆ ಸಮಯದಲ್ಲಿ ಪೂರ್ಣಗೊಳಿಸಬಹುದು.
- ✓ ಸಾಂಸ್ಕೃತಿಕ ಮೌಲ್ಯಗಳು ಮತ್ತು ಪರಂಪರೆಯ ಸಂರಕ್ಷಣೆ.

**ಸಂಪ್ರದಾಯಿಕ ಬೋಧನೆಯ ಮಿತಿಗಳು :**

- ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಗೆ ಕಡಿಮೆ ಅವಕಾಶ.
- ವ್ಯಕ್ತಿಗತ ವ್ಯತ್ಯಾಸಗಳಿಗೆ ಸ್ಪಂದನೆ ಕಡಿಮೆ.
- ಕಲಿಕೆ ಯಾಂತ್ರಿಕವಾಗುವ ಸಾಧ್ಯತೆ.
- ನೈಜ ಜೀವನದ ಸಮಸ್ಯೆಗಳೊಂದಿಗೆ ಸಂಪರ್ಕ ಕಡಿಮೆ.

**ಆಧುನಿಕ ಬೋಧನೆ : ಸೈದ್ಧಾಂತಿಕ ಅವಲೋಕನ :**

ಆಧುನಿಕ ಬೋಧನೆ 20ನೇ ಶತಮಾನದಲ್ಲಿ ಮನೋವಿಜ್ಞಾನ, ಶಿಕ್ಷಣ ತತ್ವಶಾಸ್ತ್ರ ಮತ್ತು ತಂತ್ರಜ್ಞಾನಗಳ ಪ್ರಗತಿಯ ಪರಿಣಾಮವಾಗಿ ಅಭಿವೃದ್ಧಿಗೊಂಡಿತು. ಜಾನ್ ಡ್ಯೂವಿ, ಪಿಯಾಜೆ, ವೈಗೋಟ್ಸ್ಕಿ ಮುಂತಾದ ಚಿಂತಕರು ಈ ಬೋಧನಾ ಪರಿಕಲ್ಪನೆಗೆ ತಾತ್ವಿಕ ಆಧಾರ ಒದಗಿಸಿದ್ದಾರೆ. ಆಧುನಿಕ ಬೋಧನೆ ವಿದ್ಯಾರ್ಥಿಯನ್ನು ಕಲಿಕೆಯ ಕೇಂದ್ರಬಿಂದುವಾಗಿ ಪರಿಗಣಿಸುತ್ತದೆ.

**ಆಧುನಿಕ ಬೋಧನೆಯ ಲಕ್ಷಣಗಳು :**

1. **ವಿದ್ಯಾರ್ಥಿಕೇಂದ್ರಿತ ವಿಧಾನ** – ಕಲಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯೇ ಸಕ್ರಿಯ ಪಾತ್ರವಹಿಸುತ್ತಾನೆ.
2. **ಚಟುವಟಿಕಾಧಾರಿತ ಕಲಿಕೆ** – ಪ್ರಾಜೆಕ್ಟ್, ಚರ್ಚೆ, ಗುಂಪುಕಾರ್ಯ, ಪ್ರಯೋಗಗಳು ಮುಂತಾದವುಗಳ ಮೂಲಕ ಕಲಿಕೆ ನಡೆಯುತ್ತದೆ.

3. **ತಂತ್ರಜ್ಞಾನ ಬಳಕೆ** – ಡಿಜಿಟಲ್ ಸಾಧನಗಳು, ಸ್ಮಾರ್ಟ್ ತರಗತಿಗಳು, ಆನ್ಲೈನ್ ಸಂಪನ್ಮೂಲಗಳ ಬಳಕೆ.
4. **ಅನುಭವಾಧಾರಿತ ಕಲಿಕೆ** – ನೈಜ ಅನುಭವಗಳ ಮೂಲಕ ಜ್ಞಾನ ನಿರ್ಮಾಣ.
5. **ನಿರಂತರ ಮತ್ತು ಸಮಗ್ರ ಮೌಲ್ಯಮಾಪನ** – ಪರೀಕ್ಷೆಯ ಜೊತೆಗೆ ಚಟುವಟಿಕೆ, ಪ್ರಾಜೆಕ್ಟ್, ಪ್ರದರ್ಶನಗಳ ಮೌಲ್ಯಮಾಪನ.

**ಆಧುನಿಕ ಬೋಧನೆಯ ಸೈದ್ಧಾಂತಿಕ ಹಿನ್ನೆಲೆ :**

ಆಧುನಿಕ ಬೋಧನೆ ನಿರ್ಮಾಣವಾದ (Constructivism), ಮಾನವತಾವಾದ (Humanism) ಮತ್ತು ಸಾಮಾಜಿಕ ಕಲಿಕೆ ಸಿದ್ಧಾಂತಗಳ ಮೇಲೆ ಆಧಾರಿತವಾಗಿದೆ. ಈ ಸಿದ್ಧಾಂತಗಳ ಪ್ರಕಾರ, ಕಲಿಕೆ ಎಂದರೆ ವಿದ್ಯಾರ್ಥಿಯು ತನ್ನ ಅನುಭವಗಳ ಮೂಲಕ ಜ್ಞಾನವನ್ನು ನಿರ್ಮಿಸಿಕೊಳ್ಳುವ ಪ್ರಕ್ರಿಯೆ. ಶಿಕ್ಷಕನು ಮಾರ್ಗದರ್ಶಕ ಮತ್ತು ಸಹಾಯಕನ ಪಾತ್ರ ವಹಿಸುತ್ತಾನೆ.

**ಆಧುನಿಕ ಬೋಧನೆಯ ಲಾಭಗಳು :**

- ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಯ ಅಭಿವೃದ್ಧಿ.
- ವ್ಯಕ್ತಿಗತ ಅಗತ್ಯಗಳು ಮತ್ತು ಸಾಮರ್ಥ್ಯಗಳಿಗೆ ಸ್ಪಂದನೆ.
- ಕಲಿಕೆ ಅರ್ಥಪೂರ್ಣ ಮತ್ತು ಜೀವನೋಪಯೋಗಿಯಾಗುತ್ತದೆ.
- ತಂತ್ರಜ್ಞಾನ ಜ್ಞಾನ ಮತ್ತು 21ನೇ ಶತಮಾನದ ಕೌಶಲ್ಯಗಳ ಅಭಿವೃದ್ಧಿ.

❖ **ಆಧುನಿಕ ಬೋಧನೆಯ ಮಿತಿಗಳು :**

❖ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಅವಶ್ಯಕತೆ.
❖ ಶಿಕ್ಷಕರಿಗೆ ವಿಶೇಷ ತರಬೇತಿ ಅಗತ್ಯ.
❖ ಎಲ್ಲಾ ವಿಷಯಗಳಿಗೆ ಸಮಾನವಾಗಿ ಅನ್ವಯಿಸದಿರುವ ಸಾಧ್ಯತೆ.
❖ ಸಮಯ ಮತ್ತು ಸಂಪನ್ಮೂಲಗಳ ಹೆಚ್ಚಿನ ಬಳಕೆ.

**ಸಂಪ್ರದಾಯಿಕ ಮತ್ತು ಆಧುನಿಕ ಬೋಧನೆ : ಹೋಲಿಕೆ**

ಸಂಪ್ರದಾಯಿಕ ಬೋಧನೆ ಜ್ಞಾನ ವರ್ಗಾವಣೆಗೆ ಒತ್ತು ನೀಡಿದರೆ, ಆಧುನಿಕ ಬೋಧನೆ ಜ್ಞಾನ ನಿರ್ಮಾಣಕ್ಕೆ ಒತ್ತು ನೀಡುತ್ತದೆ. ಸಂಪ್ರದಾಯಿಕ ವಿಧಾನದಲ್ಲಿ ಶಿಸ್ತು ಮತ್ತು ನಿಯಂತ್ರಣ ಮುಖ್ಯವಾಗಿದ್ದರೆ, ಆಧುನಿಕ ವಿಧಾನದಲ್ಲಿ ಸ್ವಾತಂತ್ರ್ಯ ಮತ್ತು ಸಹಭಾಗಿತ್ವ ಮುಖ್ಯವಾಗುತ್ತದೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಈ ಎರಡೂ ವಿಧಾನಗಳ ಸಮನ್ವಯ ಅತ್ಯಗತ್ಯವಾಗಿದೆ.

**ಉಪಸಂಹಾರ :**

ಸಂಪ್ರದಾಯಿಕ ಮತ್ತು ಆಧುನಿಕ ಬೋಧನೆಗಳು ಪರಸ್ಪರ ವಿರೋಧಿಗಳಲ್ಲ, ಬದಲಾಗಿ ಪರಸ್ಪರ ಪೂರಕವಾಗಿವೆ. ಸಂಪ್ರದಾಯಿಕ ಬೋಧನೆಯ ಶಿಸ್ತು, ಮೌಲ್ಯಾಧಾರಿತ ಶಿಕ್ಷಣ ಮತ್ತು ವಿಷಯ ಆಳವಾದ ತಿಳುವಳಿಕೆ ಇಂದಿಗೂ ಅಗತ್ಯವಾಗಿದ್ದು, ಆಧುನಿಕ ಬೋಧನೆಯ ಚಟುವಟಿಕಾಧಾರಿತ, ತಂತ್ರಜ್ಞಾನಸಹಿತ ಮತ್ತು ವಿದ್ಯಾರ್ಥಿಕೇಂದ್ರಿತ

ವಿಧಾನಗಳು ಕಾಲಾನುಗತವಾಗಿ ಅನಿವಾರ್ಯವಾಗಿವೆ. ಸಮಗ್ರ ಮತ್ತು ಪರಿಣಾಮಕಾರಿ ಶಿಕ್ಷಣಕ್ಕಾಗಿ ಶಿಕ್ಷಕರು ಪರಿಸ್ಥಿತಿಗೆ ಅನುಗುಣವಾಗಿ ಎರಡೂ ವಿಧಾನಗಳ ಸಮನ್ವಯವನ್ನು ಅಳವಡಿಸಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳ ಬೌದ್ಧಿಕ, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ ಸಾಧ್ಯವಾಗುತ್ತದೆ.

ಉಲ್ಲೇಖಗಳು

1. ಜಾನ್ ಡ್ಯೂವಿ – Democracy and Education.
2. ಪಿಯಾಜೆ, ಜೆ. – The Psychology of Intelligence.
3. ವೈಗೋಟ್ಸ್ಕಿ, ಎಲ್. ಎಸ್. – Mind in Society.
4. NCERT – Teaching and Learning Frameworks.
5. NEP 2020 – ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ.
6. ಶಂಕರ, ಎನ್. – ಶಿಕ್ಷಣ ತತ್ತ್ವಶಾಸ್ತ್ರ.
7. ಕೊಠಾರಿ ಆಯೋಗ ವರದಿ – Education and National Development.

*****

## ಶಿವಶರಣ ಅಲ್ಲಮಪ್ರಭು ಶಿಕಾರಿಪುರ ತಾಲ್ಲೂಕಿನವರು



# ಕರ್ನಾಟಕ ಏಕೀಕರಣ ಮತ್ತು ಕುವೆಂಪು

**ಡಾ. ದೇವರಾಜ ವೈ**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
ydevaraja@gmail.com

**ಸಾರಾಂಶ :**

ಕನ್ನಡ, ಕರ್ನಾಟಕ ಮತ್ತು ಕುವೆಂಪು ಈ ಮೂರೂ ಈಗ ಅವಿಭಾಜ್ಯವಾದ ಮತ್ತು ಅಭಿನ್ನವಾದ ವಸ್ತುಗಳಾಗಿವೆ, ತತ್ತ್ವಗಳಾಗಿವೆ, ಶಕ್ತಿಗಳಾಗಿವೆ. ಕನ್ನಡ ಮತ್ತು ಕರ್ನಾಟಕ ಕುವೆಂಪು ಅವರನ್ನು ಕಡೆದಂತೆ, ಕುವೆಂಪು ಕನ್ನಡ ಮತ್ತು ಕರ್ನಾಟಕಗಳ ಕೀರ್ತಿ ಮಹಿಮೆಗಳನ್ನು ಮುಗಿಲೆತ್ತರಕ್ಕೇರಿಸಿದ್ದಾರೆ, ಜಗದಗಲಕ್ಕೂ ಹರಡಿದ್ದಾರೆ. ಕುವೆಂಪು ಅವರು ರಾಜಕೀಯದೊಳಗಿರಲಿ, ಆಚೆಯಿರಲಿ ಕುಳಿತಲ್ಲಿಂದಲೇ ವಿದ್ಯಮಾನಗಳನ್ನು ಗ್ರಹಿಸುವ ಶಕ್ತಿ ಅವರ ಕಲ್ಪನಾ ಪ್ರತಿಭೆಗಿದೆ. ಕನ್ನಡದ ಪಾರಮ್ಯಕ್ಕಾಗಿ, ನಾಡಿನ ಏಕೀಕರಣಕ್ಕಾಗಿ ಬರಹ, ಬಾಷಣಗಳ ಮೂಲಕ ನಿರಂತರವಾಗಿ ಹೋರಾಟ ನಡೆಸಿದ್ದಾರೆ. ಸಂಕುಚಿತ ದೃಷ್ಟಿಯ ಜಡವಾದಿ ಪ್ರಗತಿ ವಿರೋಧಿ ರಾಜಕೀಯ ವಿರುದ್ಧವಾಗಿ ಸಮರವನ್ನೇ ಘೋಷಿಸಿದ್ದುಂಟು. ಕನ್ನಡ ನಾಡು ಒಂದಾಗಬೇಕು, ಕನ್ನಡ ಜನ ಒಂದಾಗಬೇಕು ಎಂದು ಹಂಬಲಿಸಿ ಲೇಖನ ಬಾಷಣಗಳ ಮೂಲಕ ಹಂಬಲವನ್ನು ತೋಡಿಕೊಳ್ಳುತ್ತ, ರಾಜ–ಕಾರಣಿಗಳಿಗೂ ಯುವಕರಿಗೂ ಪ್ರಚೋದಕ ಶಕ್ತಿಯಾಗಿ, ಪ್ರವಾದಿಯಾಗಿ ಕಾಣಿಸಿಕೊಳ್ಳುತ್ತಾರೆ. ಮೈಮನಗಳಲ್ಲಿ, ಕನ್ನಡತನ ಹರಿದಾಡುವುದಾದರೆ ಮೆಟ್ಟುವ ನೆಲ ಕರ್ನಾಟಕವಾಗುತ್ತದೆ. ಕರ್ನಾಟಕ ಏಕೀಕರಣ ಆಗಬೇಕೆಂಬುದೇ ಕುವೆಂಪು ಅವರ ಆಶಯವಾಗಿತ್ತು ಎಂಬುದೇ ಲೇಖನದ ಉದ್ದೇಶವಾಗಿದೆ.

**ಕೀ ಪದಗಳು :** ಭರತ ಖಂಡದ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ, ಕನ್ನಡ, ಕರ್ನಾಟಕ, ಕುವೆಂಪು.

ರಾಷ್ಟ್ರದ ಸ್ವಾತಂತ್ರ್ಯನಂತರ ಕರ್ನಾಟಕ ಏಕೀಕರಣದ ಹೋರಾಟ ತೀವ್ರವಾಗಿ ಜರುಗುತ್ತಿದ್ದ ಕಾಲದಲ್ಲಿ ಯಾವ ಮುಲಾಜಿಗೂ ಸೊಪ್ಪು ಹಾಕದೆ, ಅದರ ಪರವಾಗಿ ತಮ್ಮೆಲ್ಲ ಶಕ್ತಿಯನ್ನು ಧಾರೆಯೆರೆದವರು ಕುವೆಂಪು. ಕನ್ನಡದ ಪಾರಮ್ಯಕ್ಕಾಗಿ, ನಾಡಿನ ಏಕೀಕರಣಕ್ಕಾಗಿ ಬರಹಹ, ಬಾಷಣಗಳ ಮೂಲಕ ನಿರಂತರವಾಗಿ ಹೋರಾಟ ನಡಸಿದ್ದಾರೆ. ಕರ್ನಾಟಕ ಏಕೀಕರಣ ಹಳೆಯ ಮೈಸೂರಿನ ಬಹುಭಾಗದ ಜನರಿಗೆ ಬೇಕಾಗಿರಲಿಲ್ಲ. ಆದರೆ ಕುವೆಂಪುರವರು ಅವರ ವೈರುಧ್ಯದ ನಂಜನ್ನೆಲ್ಲ ಉಂಡು ನಂಜುಂಡನಂತೆ ಯಾರಿಗೂ ಹೆದರದೆ, ಬೆಚ್ಚದೆ, ಹಿಂಜರಿಯದೆ ಕರ್ನಾಟಕ ಏಕೀಕರಣ ಮುಂಚೂಣಿಯಲ್ಲಿ ನಿಂತರು.

ಕನ್ನಡ ನಾಡು ಒಂದಾಗ ಬೇಕು, ಕನ್ನಡ ಜನ ಒಂದಾಗಿ ಬಾಳ ಬೇಕು ಎಂದು ಹಂಬಲಿಸಿ, ಲೇಖನ ಬಾಷಣಗಳ ಮೂಲಕ ಹಂಬಲವನ್ನು ತೋಡಿಕೊಳ್ಳುತ್ತ, ರಾಜಕಾರಣಿಗಳಿಗೂ ಯುವಕರಿಗೂ ಅವರು ಪ್ರಚೋದಕ ಶಕ್ತಿಯಾಗಿ ಪ್ರವಾದಿಯಾಗಿ ಕಾಣಿಸಿಕೊಳ್ಳುತ್ತಾರೆ. ಸಂಸ್ಕೃತಿ ಕರ್ನಾಟಕ ಸ್ಥಾಪನೆ ಅವರ ಪ್ರಧಾನೋದ್ದೇಶವೇ ಹೊರತು, ರಾಜಕೀಯ ಕರ್ನಾಟಕ ಸ್ಥಾಪನೆಯಿಂದ ತಮ್ಮ ಉದ್ದೇಶ ಈಡೇರುವುದಾದರೆ ಅದು ಬೇಡವೆನ್ನುವುದಿಲ್ಲ. ಈ ಉದ್ದೇಶ ಸಾಧನೆಗಾಗಿ ಅವರು ಹಲವಾರು ರೀತಿ ಶ್ರಮಿಸಿದ್ದಾರೆ. ಕವನ ರಚಿಸಿ ಭಾವಾವೇಶದಿಂದ ಸಾರ್ವಜನಿಕ ವೇದಿಕೆಗಳಲ್ಲಿ ಓದಿ ಜನ ಹೃದಯವನ್ನು ಪ್ರಚೋದಿಸಿದ್ದಾರೆ; ಬಾಷಣ ಮಾಡಿ ತರುಣರ ರಕ್ತವನ್ನು ಕುದಿಸಿದ್ದಾರೆ; ತಮ್ಮ ಬಳಿಗೆ ಬಂದವರನ್ನು ಮಾತಿನ ಮೋಡಿಯಿಂದ ಮತಾಂತರಗೊಳಿಸಿ ದೀಕ್ಷೆ

ಕೊಟ್ಟಿದ್ದಾರೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ಕರ್ನಾಟಕದಲ್ಲಿ ಸೇರಲು ಸಕಾಲವಲ್ಲವೆಂದು ತೀರ್ಮಾನ ಕೈಗೊಂಡ ಸಂದರ್ಭದಲ್ಲಿ;

**ದೀಕ್ಷೆಯ ತೊಡು ಇಂದೇ;**
**ಕಂಕಣ ಕಟ್ಟಿಂದೇ!**
**ಕನ್ನಡ ನಾಡೊಂದೇ;**
**ಇನ್ನೆಂದೂ ತಾನೊಂದೇ!**
**ಇಡು ನಿನ್ನಯ ಸತಿಯಾಣೆ!**
**ಇಡು ನಿನ್ನಯ ಪತಿಯಾಣೆ!**
**ಮಕ್ಕಳ ಮೇಲಾಣೆ!**
**ಗುರುದೇವನ ಆಣೆ!**
**ನನ್ನಾಣೆ!**
**ನಿನ್ನಾಣೆ!**
**ಕನ್ನಡ ಜನರೆಲ್ಲರ ಮೇಲಾಣೆ!**
**ಕನ್ನಡ ನಾಡೊಂದಾಗದೆ ಮಾಣೆ!**

ಕರ್ನಾಟಕ ಮಂತ್ರ ದೀಕ್ಷೆಯನ್ನು ರಚಿಸುತ್ತಾರೆ. ಎಲ್ಲೆಲ್ಲಿಯೂ ಪರಸ್ಪರ ಸಂದೇಹ, ದ್ವೇಷ, ಮಾತ್ಸರ್ಯ, ಉದ್ವಿಗ್ನತೆ, ಉರಿಯುತ್ತಿದ್ದ ಪ್ರಲಯೋಪಮ ಸಂದರ್ಭದಲ್ಲಿ ಕನ್ನಡನಾಡಿನ ಪ್ರಾಚೀನ ಕವಿ, ಗುರು, ಸಂತ, ರಾಜ ಸಮೂಹದ ಸಾಕ್ಷಿತ್ವದಲ್ಲಿ ಕನ್ನಡನಾಡಿನ ಪಶುಪಕ್ಷಿಗಳಿಗೆಲ್ಲ ಕೇಳಿಸುವಂತೆ, ಕನ್ನಡ ನಾಡಿನ ಪ್ರಾಕೃತಿಕ ಶಕ್ತಿಗಳ ಮೇಲಾಣೆಯಿಟ್ಟು ಸತಿಸುತರ ಮೇಲೆ ಗುರುದೇವರ ಮೇಲೆ ಕನ್ನಡ ಜನರೆಲ್ಲರ ಮೇಲೆ ಆಣೆಯಿಟ್ಟು ದೀಕ್ಷಾ ಗೀತೆಯನ್ನು ಉದ್ಘೋಷಿಸುತ್ತಾರೆ

ಕವಿ ರವೀಂದ್ರರು ಭಾರತ ರಾಷ್ಟ್ರಕ್ಕೆ ಜನಗಣಮನ ನೀಡಿದಂತೆ ತಾವೂ 'ಕರ್ನಾಟಕಕ್ಕೆ ಒಂದು ರಾಷ್ಟ್ರಗೀತೆ ನೀಡುವ ಪ್ರಯತ್ನವೆಂಬಂತೆ ಕುವೆಂಪು 1924 ರಲ್ಲಿಯೇ ಕರ್ಣಾಟಕ ರಾಷ್ಟ್ರಗೀತೆ' ಯನ್ನು ರಚಿಸಿದರು. ಕುವೆಂಪು ಈ ಗೀತೆಯನ್ನು ರಚಿಸಿದಾಗ ಭಾರತವಿನ್ನೂ ಸ್ವಾತಂತ್ರ್ಯವಾಗಿರಲಿಲ್ಲ. ಭಾರತ ಸ್ವಾತಂತ್ರ್ಯದ ಕನಸು ಆಗ ತಾನೇ ಮೊಳೆಯುತ್ತಿತ್ತು. ಅಲ್ಲದೆ ಕರ್ನಾಟಕ ಎಂಬ ರಾಜ್ಯವೂ ಅಸ್ತಿತ್ವದಲ್ಲಿರಲಿಲ್ಲ. ಕರ್ನಾಟಕಕ್ಕೆ, ಈಗಿರುವ ಭೌಗೋಳಿಕ ಎಲ್ಲೆಗಳಿರಲಿಲ್ಲ. ಕರ್ನಾಟಕದ ಭೂಭಾಗ ಆಗ ಮೈಸೂರು ರಾಜ್ಯವೆಂದು ಕರೆಯಲ್ಪಡುತ್ತಿತ್ತು. ಏಕೆಂದರೆ ಈ ಭಾಗವನ್ನು ಕನ್ನಡ ಅರಸರಾದ ಮೈಸೂರು ಒಡೆಯರು ಆಳುತ್ತಿದ್ದರು. ಆದರೆ ಮೈಸೂರಿನ ಭೂಭಾಗವಷ್ಟೇ ಕನ್ನಡದ ನಾಡಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಭಾಗಗಳು ಒಂದುಗೂಡುತ್ತವೆ ಎಂಬ ಕನಸೂ ಕನ್ನಡಿಗರಿಗೆ ಅಂದು ಇರಲಿಲ್ಲ. ಈ ಹಿನ್ನೆಲೆಯಲ್ಲಿ ಗೀತೆಯ ವಿಶ್ಲೇಷಣೆ ಪಡೆಯುತ್ತದೆ. ವಾಸ್ತವದಲ್ಲಿ ನಮ್ಮ ನಾಡಿಗೆ 'ಕರ್ನಾಟಕ' ಎಂಬ ಹೆಸರಿಡುವ ಕಲ್ಪನೆಯೇ ಆಗ ಇರಲಿಲ್ಲ. ಅಂಥ ಸಂದರ್ಭದಲ್ಲಿ ಶ್ರೀ ಕುವೆಂಪು ಮೈಸೂರಿಗರಾಗಿಯೂ, ಮೈಸೂರು ರಾಜ್ಯದ ರಾಜಪ್ರಭುತ್ವದಡಿಯಲ್ಲಿ ಬದುಕುವ ಒಬ್ಬ ಸರ್ಕಾರಿ ನೌಕರರಾಗಿಯೂ 'ಕರ್ನಾಟಕ' ಎಂಬ ಪದಕ್ಕೆ ಅಂಟಿಕೊಂಡು ಹೋರಾಡಿದ ದಿಟ್ಟರು. 'ಕರ್ನಾಟಕ ಏಕೀಕರಣಕ್ಕೆ ಅಪಸ್ವರಗಳು ಬಂದಾಗ 'ಅಖಂಡ ಕರ್ನಾಟಕ' ಅಲ್ತೋ ನಿಮ್ಮ ಬೂಟಾಟದ ರಾಜಕೀಯ ನಾಟಕ' ಎಂದು ಸಿಡಿದೇಳುತ್ತಾರೆ.

ಏಕೀಕರಣದ ವಿಚಾರ ರಾಜಕೀಯ ವಿಷಯವೆಂದೂ ಸರ್ಕಾರಿ ನೌಕರರು ಆ ಬಗ್ಗೆ ಉಸಿರೆತ್ತ ಕೂಡದೆಂದೂ, ಅಂದಿನ ಕೆ. ಸಿ. ರೆಡ್ಡಿ ಸರ್ಕಾರ ಕುವೆಂಪುರವರಿಗೆ ಎಚ್ಚರಿಕೆಯ ಪತ್ರವೊಂದನ್ನು ಕಳಿಸುತ್ತದೆ. ಆದರೆ ಕುವೆಂಪು ನಗು ನಗುತ್ತಲೇ ತಮ್ಮ ಬಳಿ ಬಂದವರ ಮುಂದೆ ಆ ಎಚ್ಚರಿಕೆಯ ಪತ್ರವವನ್ನೊದುತ್ತಾ ಇವರೆಷ್ಟೇ ಎಗರಾಡಿದರೂ ಏಕೀಕರಣ ಮಾತ್ರ ತಪ್ಪುವುದಿಲ್ಲ ಎಂದು ಘೋಷಿಸುತ್ತಾರೆ. ಆ ಸಂದರ್ಭದಲ್ಲಿ ಇತಿಹಾಸ ಪ್ರಸಿದ್ಧವೂ, ಅನನ್ಯವೂ ಆದ 'ಅಖಂಡ ಕರ್ಣಾಟಕ' ಎಂಬ ದಾರ್ಶನಿಕ ಕವಿತೆ ಕವಿಯ ಲೇಖನಿಯಿಂದ ಉದ್ಭವಿಸುತ್ತದೆ.

**ಅಖಂಡ ಕರ್ಣಾಟಕ**
**ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ**
**ಹರಸುತಿಹನು ದೇವಗಾಂಧಿ;**
**ಮಂತ್ರಿಸುಹುದು ಋಷಿಯ ನಾಂದಿ;**
**ತನಗೆ ತಾನೆ ಋತಸ್ಯಂದಿ**
**ಅವಂದ್ಯ ಕವಿಯ ಕಲ್ಪನೆ!**

ರಾಜಕೀಯ ಮೂಲವಾದ ದುರುದ್ದೇಶಗಳ ಈಡೇರಿಕೆ ಕುವೆಂಪು ಅವರ ಅಖಂಡ ಕರ್ಣಾಟಕದ ಕಲ್ಪನೆಯ ಗುರಿಯಲ್ಲ, ಅಖಂಡ ಕರ್ಣಾಟಕವೆಂಬುದು ಬೂಟಾಟದ ರಾಜಕೀಯ ನಾಟಕವಲ್ಲ. ಆತ್ಮ ಸಂಸ್ಕೃತಿಯ ಉದ್ಧಾರ ಮತ್ತು ಪರಮಾತ್ಮ ಸಾಕ್ಷಾತ್ಕಾರವೇ ಏಕೀಕೃತ ಕರ್ಣಾಟಕದ ಪರಮಗಂತವ್ಯ. ಸಾಮಾನ್ಯ ಜನರ ಆಶೆ ಆಕಾಂಕ್ಷೆಗಳು ಕವಿಹೃದಯವನ್ನು ಮಿಡಿಯುತ್ತವೆ. ಯಾವುದು ಅನೇಕರಿಗೆ ಕನಸಾಗಿ ತೋರುತ್ತದೆಯೋ ಅದು ಕವಿಯ ಕಣ್ಣಿಗೆ ನನಸಾಗಿ ತೋರುತ್ತದೆ.

**ಇಂದು ಬಂದು ನಾಳೆ ಸಂದು**
**ಹೋಹ ಸಚಿವಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರ ಕರ್ಣಕುಂಡಲ!**

ಕುವೆಂಪುರವರ ಕಲ್ಪನೆಯ ಸಚಿವ ಮಂಡಲ ಶಾಶ್ವತವಾದುದು. ಸರ್ಕಾರ ಬರುತ್ತವೆ, ಹೋಗುತ್ತವೆ ಕವಿ ಮಾತ್ರ ಅಚ್ಯುತನಾಗಿ ಉಳಿಯುತ್ತಾನೆ. ಇಂದಲ್ಲ ನಾಳೆ ಕವಿಯ ಕಾಣ್ಕೆ ಸತ್ಯವಾಗಲೇಬೇಕಾಯಿತು. ಗಾಂಧೀಜಿಯವರದೂ ಕವಿದೃಷ್ಟಿ ಅವರು ಕಂಡದ್ದೆಲ್ಲ ಸತ್ಯವಾಯಿತು. ಕವಿ ಕಂಡ 'ಕರ್ನಾಟಕ ಸಾಮ್ರಾಜ್ಯದ ಚಕ್ರವರ್ತಿ ನೃಪತುಂಗ; ಮುಖ್ಯಮಂತ್ರಿ ಪಂಪ: ರನ್ನ, ಜನ್ನ, ಹರಿಹರ, ನಾರಾಯಣ, ಷಡಕ್ಷರಾದಿ ಕವಿಗಳನ್ನೊಳಗೊಂಡ ನಿತ್ಯ ಸಚಿವ ಮಂಡಳಿಯದು. ಕವಿಯ ಲೇಖನ ಕಠಾರಿಯಾಗಿ ಹಂಗಾಮಿ ಸಚಿವನ ಗರ್ವದ ಡೊಳ್ಳನ್ನು ತಿವಿಯುತ್ತದೆ.

ಕರ್ನಾಟಕ ಏಕೀಕರಣಕ್ಕಾಗಿ ದೀಕ್ಷೆಯ ತೊಡು ಇಂದೇ; ಕಂಕಣ ಕಟ್ಟಿಂದೇ!... ಎಂದು ಕರೆ ನೀಡಿದ ಕವಿ, ಆ ಆದರ್ಶ ಈಡೇರಿದಾಗ ಪುಲಕಿತರಾಗಿ ಉದ್ಗರಿಸುತ್ತಾರೆ;

**ನಿನ್ನ ಕನ್ನಡನಾಡನೊಂದುಗೂಡಿಸಿ ಕಾಯಿ;**
**ನಿನ್ನ ಕನ್ನಡ ನುಡಿಯನಾಡಿ ಧನ್ಯವಾಗಲಿ ನಮ್ಮ ಬಾಯಿ:**
**ಅನ್ಯಭಾಷಾ ಮೋಹದಾಸ್ಯಕ್ಕೆ ಪಕ್ಕಾಗದಿರಲೆಮ್ಮ ತಾಯಿ!**
**ನಿನ್ನ ಭಾರತಭೂಮಿ ನಿನ್ನುನ್ನತಿಗೆ ಬೆಳೆದು ನಿಲ್ಗೆ**

ಭಾರತ ಭಾಷಾವಾರು ಪ್ರಾಂತರಚನೆಯಾದಾಗ ಕವಿಚೇತನ ಸಂತುಷ್ಟಿಗಳಿಂದ ನಲಿದಾಡಿತು. ಚಿತ್ರದುರ್ಗದ 'ಕರ್ನಾಟಕ ಸಂಘ'ದ ಆಶ್ರಯದಲ್ಲಿ ಕುವೆಂಪು ಮಾತನಾಡುತ್ತ ತಮ್ಮ ಸಂತೋಷಾತಿಶಯವನ್ನು ಭಾವಾವೇಶದಿಂದ ವ್ಯಕ್ತಪಡಿಸಿದರು. 'ನಾವು ಪುಣ್ಯವಂತರು, ಒಂದೇ ಒಂದು ಜೀವಮಾನದಲ್ಲಿ ಸ್ವಾತಂತ್ರ್ಯಸಿದ್ದಿ ಮತ್ತು ಪ್ರಾಂತರಚನೆಗಳೆರಡನ್ನೂ ಕಂಡಿದ್ದೇವೆ. ನನಸೊ ಕನಸೊ ಎಂದು ಭ್ರಮೆ ಮೂಡಿಸುವಷ್ಟು ಆಶ್ಚರ್ಯಕರವಾಗಿ ಇವೆರಡೂ ಸಂಭವಿಸಿವೆ. ಈಮಹಾದ್ಘಟನೆಗಳು ಪುಕ್ಕಟೆಯಾಗಿ ಸಿದ್ಧಿಸಿಲ್ಲ. ಚಳವಳಿ ಯುದ್ಧರೂಪವನ್ನು ತಾಳದಿದ್ದರೂ ಬಲಿರೂಪವನ್ನು ತಾಳಿತ್ತು. ಸ್ವಾತಂತ್ರ್ಯಕಾಳಿ ಸಾಕಷ್ಟು ಬಲಿತೆಗೆದುಕೊಂಡೇ ಪ್ರಸನ್ನಳಾದದ್ದು. ಆನೇಕ ಸ್ತ್ರೀಪುರುಷರ ಆಶ್ರುತರ್ಪಣದ ಜೊತೆಗೆ ಅದೆಷ್ಟು ಮಕ್ಕಳ ತರುಣದೇಹಗಳು ಬಲಿಯಾದವು? ನಾಡಿನ ಜನ ಏಕರೀತಿಯಾಗಿ ಅಪೇಕ್ಷಿಸಿದರೆ ಎಂಥ ಶಕ್ತಿಯೂ ಮಣಿಯಬೇಕಾಗುತ್ತದೆ. ಸಾಹಿತಿಗಳು ಮೊದಲಿನಿಂದಲೂ ಕನ್ನಡನಾಡು ಒಂದಾಗಬೇಕೆಂದು ಸಾರುತ್ತಿದ್ದಾರೆ. ಕನ್ನಡನಾಡಿನ ಮೇಲಣ ಕಟ್ಟಭಿಮಾನ ಅವರ ಭಾರತೀಯತ್ವಕ್ಕೆ ಧಕ್ಕೆ ತಂದಿಲ್ಲ. ಕನ್ನಡತನ –ಭಾರತೀಯತ್ವಗಳನ್ನು ಕುರಿತಾದ ಕವಿಯ ಆದರದ ನಿಲುಮೆ, ಕನ್ನಡನಾಡಿನ ಮಹಿಮೆ ಹಿರಿಮೆಗಳನ್ನು ಕೊಂಡಾಡುವಾಗಲೂ

**ಜಯ್ ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ನಾಟಕ ಮಾತೆ!**

ಎಂದು ಸಂಭೋದಿಸುತ್ತಾರೆ. ಭಾರತಾಂಬೆಯೆ ಕನ್ಯೆ ಕನ್ನಡಾಂಬೆಯೇ ಧನ್ಯೆ! ಎಂದು ಮುಕ್ತಕಂಠದಿಂದ ಉದ್ಘೋಷಿಸುತ್ತಾರೆ. ಕವಿಯ ಪ್ರಾದೇಶಿಕ ಪ್ರೇಮ ಪ್ರತ್ಯೇಕವಾಗಿ ನಿಲ್ಲದೆ ದೇಶಪ್ರೇಮದ ಅಂಗವಾಗಿ ಕಾಣಿಸಿಕೊಳ್ಳುತ್ತದೆ.

**ಭಾರತಾಂಬೆಯೆ ಜನಿಸಿ ನಿನ್ನೊಳು ಧನ್ಯನಾದೆನು ದೇವಿಯೆ**
**ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೆ**

ಕವಿ ಭಾರತೀಯರಾಗಿ ಹುಟ್ಟಿದ್ದೇ ಹೆಮ್ಮೆ ಎಂದು ಹರ್ಷದಿಂದ ಹಾಡುತ್ತಾರೆ. ಕನ್ನಡ, ಕರ್ನಾಟಕ ಮತ್ತು ಕುವೆಂಪು ಈ ಮೂರು ಈಗ ಅವಿಭಾಜ್ಯವಾದ ಮತ್ತು ಅಭಿನ್ನವಾದ ವಸ್ತುಗಳಾಗಿವೆ, ಶಕ್ತಿಗಳಾಗಿವೆ. ಕನ್ನಡ, ಮತ್ತು ಕರ್ನಾಟಕ ಕುವೆಂಪು ಅವರನ್ನು ಪಡೆದಂತೆ, ಕುವೆಂಪು, ಕರ್ನಾಟಕದ ಕೀರ್ತಿ ಮಹಿಮೆಗಳನ್ನು ಮುಗಿಲೆತ್ತರಕ್ಕೇರಿಸಿದ್ದಾರೆ. ಜಗದಗಲಕ್ಕೂ ಹರಡಿದ್ದಾರೆ. ಒಟ್ಟಾರೆ ಕುವೆಂಪುರವರು ಸುಮಾರು ಅರ್ಧ ಶತಮಾನಗಳ ದೀರ್ಘಾವಧಿಯ ತಪಶ್ಶಕ್ತಿಯನ್ನು ನಾಡು ನುಡಿಗಳ ಶ್ರೇಯೋತ್ಕರ್ಷಕ್ಕಾಗಿ ಧಾರೆಯೆರೆದಿದ್ದಾರೆಂದರೆ ಉತ್ಪ್ರೇಕ್ಷೆಯಾಗಲಾರದು.

**ಪರಾಮರ್ಶನ ಗ್ರಂಥಗಳು:**

1. ಸಿ.ಪಿ.ಕೆ. (2014). ಕುವೆಂಪು ಸಾಹಿತ್ಯಾವಲೋಕನ. ಅಖಿಲಾ ಏಜೆನ್ಸೀಸ್. ಮೈಸೂರು.

2. ದೇಜಗೌ. (2014). ಕುವೆಂಪು ಸಾಹಿತ್ಯ ವಿಲೋಕನ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.

3. ದೇಜಗೌ. (2006). ಕುವೆಂಪು ದರ್ಶನ: ಸಂಪುಟ–1. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

4. ದೇಜಗೌ. (2007). ಕುವೆಂಪು ದರ್ಶನ: ಸಂಪುಟ–2. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

# ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ

**ಡಾ. ಯದುಕುಮಾರ್ ಎಂ.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
yadukumarm@ymail.com



ಮಕ್ಕಳು ದೇಶದ ಭವಿಷ್ಯ ನಿರ್ಮಾಪಕರು. ಅವರ ಸಮಗ್ರ ಬೆಳವಣಿಗೆಗೆ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು. ಮಕ್ಕಳ ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ನೈತಿಕ ಬೆಳವಣಿಗೆ ಪೋಷಕರ ಪ್ರೀತಿ, ಮಾರ್ಗದರ್ಶನ ಮತ್ತು ಆದರ್ಶದಿಂದಲೇ ಸಾಧ್ಯವಾಗುತ್ತದೆ. ಮಕ್ಕಳ ಜೀವನದ ಮೊದಲ ಗುರುಗಳು ಪೋಷಕರೇ. ಮಗುವಿನ ವ್ಯಕ್ತಿತ್ವ, ನಡವಳಿಕೆ ಮತ್ತು ಚಿಂತನೆಗಳ ಮೇಲೆ ಪೋಷಕರ ಪ್ರಭಾವ ಅಪಾರ. ಪ್ರೀತಿಯಿಂದ ಕೂಡಿದ ಕುಟುಂಬ ವಾತಾವರಣ ಮಕ್ಕಳಲ್ಲಿ ಆತ್ಮವಿಶ್ವಾಸ, ಭದ್ರತೆ ಮತ್ತು ಸಂತೋಷವನ್ನು ಬೆಳೆಸುತ್ತದೆ. ಪೋಷಕರು ಮಕ್ಕಳನ್ನು ಅರ್ಥಮಾಡಿಕೊಂಡು ಪ್ರೋತ್ಸಾಹಿಸಿದಾಗ ಅವರು ತಮ್ಮ ಸಾಮರ್ಥ್ಯವನ್ನು ಗುರುತಿಸಿ ಮುನ್ನಡೆಯಲು ಸಾಧ್ಯವಾಗುತ್ತದೆ.

ಶಿಕ್ಷಣವು ಮಕ್ಕಳ ಜೀವನದಲ್ಲಿ ಪ್ರಮುಖ ಸ್ಥಾನ ಹೊಂದಿದೆ. ಪೋಷಕರು ಮಕ್ಕಳಿಗೆ ಅಧ್ಯಯನದ ಮಹತ್ವವನ್ನು ತಿಳಿಸಿ, ಕಲಿಕೆಯತ್ತ ಆಸಕ್ತಿ ಮೂಡಿಸಬೇಕು. ಕೇವಲ ಅಂಕಗಳಿಗಷ್ಟೇ ಒತ್ತು ನೀಡದೆ, ಜೀವನ ಮೌಲ್ಯಗಳು, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಗೆ ಉತ್ತೇಜನ ನೀಡುವುದು ಅಗತ್ಯ. ಶಿಸ್ತು ಎಂಬುದು ಕಠಿಣ ನಿಯಂತ್ರಣವಲ್ಲ; ಅದು ಪ್ರೀತಿ, ಸಹನೆ ಮತ್ತು ಸ್ಪಷ್ಟ ಮಾರ್ಗದರ್ಶನದಿಂದ ರೂಪುಗೊಳ್ಳಬೇಕು.

ನೈತಿಕ ಮತ್ತು ಸಾಮಾಜಿಕ ಮೌಲ್ಯಗಳ ಬೆಳವಣಿಗೆಯಲ್ಲಿಯೂ ಪೋಷಕರ ಪಾತ್ರ ಮಹತ್ವದಾಗಿದೆ. ಸತ್ಯನಿಷ್ಠೆ, ಶ್ರಮ, ಗೌರವ, ಸಹಾನುಭೂತಿ, ಹೊಣೆಗಾರಿಕೆ ಮುಂತಾದ ಗುಣಗಳನ್ನು ಮಕ್ಕಳು ಪೋಷಕರ ನಡೆನುಡಿಯಿಂದಲೇ ಕಲಿಯುತ್ತಾರೆ. ಪೋಷಕರು ಸ್ವತಃ ಉತ್ತಮ ಮಾದರಿಯಾಗಿದ್ದರೆ ಮಕ್ಕಳು ಸಹ ಅದನ್ನು ಅನುಸರಿಸುತ್ತಾರೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಒತ್ತಡ ಮತ್ತು ಗೊಂದಲಗಳನ್ನು ಎದುರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಪೋಷಕರು ಮಕ್ಕಳ ಮಾತುಗಳನ್ನು ಸಹನಶೀಲತೆಯಿಂದ ಆಲಿಸಿ, ಅವರ ಭಾವನೆಗಳಿಗೆ ಸ್ಪಂದಿಸಬೇಕು. ಸ್ನೇಹಪೂರ್ಣ ಸಂಬಂಧವನ್ನು ಬೆಳೆಸಿದರೆ ಮಕ್ಕಳು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾರೆ.

**ಪೋಷಕರ ವರ್ತನೆಯಿಂದ ಮಕ್ಕಳ ಮೇಲಿನ ಪರಿಣಾಮ:**

- **ಅತಿಯಾದ ಗದರಿಕೆ ಮತ್ತು ದಂಡನೆ:** ಮಕ್ಕಳಲ್ಲಿ ಭಯ, ಆತಂಕ ಮತ್ತು ಆತ್ಮವಿಶ್ವಾಸದ ಕೊರತೆ ಉಂಟಾಗುತ್ತದೆ.
- **ಅತಿಯಾದ ನಿರೀಕ್ಷೆಗಳು:** ಸಾಧನೆಗೆ ಒತ್ತಡ ಬಿದ್ದು ಮಾನಸಿಕ ಒತ್ತಡ ಹೆಚ್ಚಾಗುತ್ತದೆ.

- **ಮಕ್ಕಳ ಮಾತುಗಳನ್ನು ಕಡೆಗಣಿಸುವುದು:** ಭಾವನಾತ್ಮಕ ದೂರ ಮತ್ತು ನಿರಾಶೆ ಉಂಟಾಗುತ್ತದೆ.
- **ಹೋಲಿಕೆ ಮಾಡುವುದು:** ಇತರ ಮಕ್ಕಳೊಂದಿಗೆ ಹೋಲಿಸುವುದರಿಂದ ಹೀನಮನೋಭಾವ ಬೆಳೆಯುತ್ತದೆ.
- **ಅತಿಯಾದ ನಿಯಂತ್ರಣ:** ಸ್ವತಂತ್ರ ಚಿಂತನೆ ಮತ್ತು ನಿರ್ಧಾರಶಕ್ತಿಗೆ ಅಡ್ಡಿಯಾಗುತ್ತದೆ.
- **ಪ್ರೀತಿಯ ಕೊರತೆ:** ಭದ್ರತೆಯ ಕೊರತೆ ಮತ್ತು ಅಸುರಕ್ಷಿತ ಭಾವನೆ ಮೂಡುತ್ತದೆ.
- **ಅಸಂಗತ ಶಿಸ್ತು:** ಒಂದೇ ವಿಷಯಕ್ಕೆ ಬೇರೆ ಬೇರೆ ನಿಯಮಗಳು ಗೊಂದಲ ಉಂಟುಮಾಡುತ್ತವೆ.
- **ತಪ್ಪುಗಳನ್ನು ಸಹಿಸದಿರುವುದು:** ತಪ್ಪುಗಳಿಂದ ಕಲಿಯುವ ಅವಕಾಶ ತಪ್ಪುತ್ತದೆ.
- **ಕುಟುಂಬ ಕಲಹಗಳು:** ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತವೆ.
- **ಮಕ್ಕಳ ಆಸಕ್ತಿಗಳನ್ನು ನಿರ್ಲಕ್ಷಿಸುವುದು:** ಪ್ರತಿಭೆ ಬೆಳೆಯಲು ಅವಕಾಶ ಸಿಗದು.

**ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಹೊಣೆಗಾರಿಕೆ**

- **ಪ್ರೀತಿ ಮತ್ತು ಕಾಳಜಿ ತೋರಿಸಬೇಕು:** ಮಕ್ಕಳಿಗೆ ಭದ್ರತೆ ಮತ್ತು ಆತ್ಮವಿಶ್ವಾಸ ಮೂಡುವಂತೆ ವರ್ತಿಸಬೇಕು.
- **ಸಹನಶೀಲರಾಗಿರಬೇಕು:** ಮಕ್ಕಳ ತಪ್ಪುಗಳಿಗೆ ಕೋಪಗೊಳ್ಳದೆ ಶಾಂತವಾಗಿ ತಿಳಿಸಿ ಮಾರ್ಗದರ್ಶನ ನೀಡಬೇಕು.
- **ಮಕ್ಕಳ ಮಾತುಗಳನ್ನು ಆಲಿಸಬೇಕು:** ಅವರ ಭಾವನೆಗಳು ಮತ್ತು ಸಮಸ್ಯೆಗಳಿಗೆ ಸ್ಪಂದಿಸಬೇಕು.
- **ಪ್ರೋತ್ಸಾಹಿಸಬೇಕು:** ಮಕ್ಕಳ ಪ್ರಯತ್ನ ಮತ್ತು ಸಾಧನೆಗಳನ್ನು ಮೆಚ್ಚಬೇಕು.
- **ಶಿಸ್ತು ಮತ್ತು ಸ್ವಾತಂತ್ರ್ಯದ ಸಮತೋಲನ ಇರಬೇಕು:** ಅತಿಯಾದ ನಿಯಂತ್ರಣ ಅಥವಾ ಅತಿಯಾದ ಬಿಡುವು ತಪ್ಪಬೇಕು.
- **ಉತ್ತಮ ಮಾದರಿಯಾಗಿರಬೇಕು:** ಪೋಷಕರ ನಡೆನುಡಿ ಮಕ್ಕಳಿಗೆ ಆದರ್ಶವಾಗಿರಬೇಕು.
- **ನೈತಿಕ ಮೌಲ್ಯಗಳನ್ನು ಕಲಿಸಬೇಕು:** ಸತ್ಯ, ಶ್ರಮ, ಗೌರವ, ಸಹಾನುಭೂತಿ ಬೆಳೆಸಬೇಕು.
- **ಶಿಕ್ಷಣಕ್ಕೆ ಬೆಂಬಲ ನೀಡಬೇಕು:** ಕಲಿಕೆಗೆ ಸೂಕ್ತ ವಾತಾವರಣ ಒದಗಿಸಬೇಕು.
- **ತಪ್ಪುಗಳಿಂದ ಕಲಿಯಲು ಅವಕಾಶ ಕೊಡಬೇಕು:** ವಿಫಲತೆಯನ್ನು ಕಲಿಕೆಯ ಭಾಗವಾಗಿ ಸ್ವೀಕರಿಸಬೇಕು.
- **ಸ್ನೇಹಪೂರ್ಣ ಸಂಬಂಧ ಬೆಳೆಸಬೇಕು:** ಮಕ್ಕಳಿಗೆ ಭಯವಿಲ್ಲದೆ ಮಾತಾಡುವ ಸ್ವಾತಂತ್ರ್ಯ ನೀಡಬೇಕು.

**ಮಕ್ಕಳ ಬೆಳವಣಿಗೆಗಾಗಿ ಪೋಷಕರ ಜೀವನ ಬದಲಾವಣೆ**

- **ಸ್ವಂತ ಸಮಯವನ್ನು ತ್ಯಾಗ ಮಾಡುವುದು:** ಮಕ್ಕಳೊಂದಿಗೆ ಸಮಯ ಕಳೆಯಲು ತಮ್ಮ ಆರಾಮವನ್ನು ಬಿಟ್ಟುಕೊಡುವುದು.
- **ಆರ್ಥಿಕ ತ್ಯಾಗ:** ಮಕ್ಕಳ ಶಿಕ್ಷಣ ಮತ್ತು ಅಗತ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.
- **ಸ್ವಂತ ಆಸೆಗಳನ್ನು ಹಿಂಬಿಡುವುದು:** ಮಕ್ಕಳ ಭವಿಷ್ಯಕ್ಕಾಗಿ ತಮ್ಮ ಹವ್ಯಾಸಗಳು ಅಥವಾ ಇಚ್ಛೆಗಳನ್ನು ಕಡಿಮೆ ಮಾಡುವುದು.
- **ದೈಹಿಕ ಶ್ರಮವನ್ನು ಸಹಿಸುವುದು:** ಮಕ್ಕಳ ಆರೈಕೆಗಾಗಿ ದಣಿವನ್ನು ಲೆಕ್ಕಿಸದೆ ಕೆಲಸ ಮಾಡುವುದು.

- **ಸಹನಶೀಲತೆ ಮತ್ತು ತಾಳ್ಮೆ: ಮಕ್ಕಳ ತಪ್ಪುಗಳು ಮತ್ತು ಚಂಚಲತೆಯನ್ನು ಸಹಿಸುವುದು.**
- **ಸ್ವಾರ್ಥವನ್ನು ತ್ಯಜಿಸುವುದು:** ನಿರ್ಧಾರಗಳಲ್ಲಿ ಮಕ್ಕಳ ಹಿತವನ್ನು ಮೊದಲಿಗೆ ಇಡುವುದು.
- **ಆರಾಮ ಮತ್ತು ಸೌಕರ್ಯಗಳ ತ್ಯಾಗ:** ಮಕ್ಕಳ ಅಗತ್ಯಗಳಿಗಾಗಿ ವೈಯಕ್ತಿಕ ಸುಖಗಳನ್ನು ಕಡಿಮೆ ಮಾಡುವುದು.
- **ನಿರಂತರ ಮಾರ್ಗದರ್ಶನ:** ಸಮಯ ಹಾಗೂ ಶಕ್ತಿಯನ್ನು ಮಕ್ಕಳಿಗೆ ಮಾರ್ಗದರ್ಶನ ನೀಡಲು ಮೀಸಲಿಡುವುದು.
- **ಭಾವನಾತ್ಮಕ ತ್ಯಾಗ:** ಮಕ್ಕಳ ನೋವು, ಚಿಂತೆಗಳನ್ನು ತಮ್ಮದಾಗಿ ಭಾವಿಸುವುದು.
- **ನಿರೀಕ್ಷೆಗಳ ನಿಯಂತ್ರಣ:** ತಮ್ಮ ಕನಸುಗಳನ್ನು ಮಕ್ಕಳ ಮೇಲೆ ಒತ್ತಡವಾಗಿ ಹೇರುವುದನ್ನು ತ್ಯಜಿಸುವುದು.

ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅಮೂಲ್ಯವಾದದ್ದು. ಜವಾಬ್ದಾರಿಯುತ, ಪ್ರೀತಿಪೂರ್ಣ ಮತ್ತು ಮಾರ್ಗದರ್ಶಕ ಪೋಷಕರು ಇದ್ದರೆ ಮಕ್ಕಳಲ್ಲಿ ಉತ್ತಮ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಅಂತಹ ಮಕ್ಕಳು ಮುಂದೆ ಉತ್ತಮ ನಾಗರಿಕರಾಗಿ ಸಮಾಜದ ಅಭಿವೃದ್ಧಿಗೆ ಸಹಕಾರ ನೀಡುತ್ತಾರೆ.

*****

## ಶಿವಶರಣೆ ಅಕ್ಕಮಹಾದೇವಿ ಶಿಕಾರಿಪುರ ತಾಲ್ಲೂಕಿನವರು



# ವಿಶ್ವಮಾನವತೆಯ ದೀಪ: ರಾಷ್ಟ್ರಕವಿ ಕುವೆಂಪು (ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ)

**ಡಾ. ವಾಣಿನಾಯಕಿ ಡಿ ಸಿ**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
vaninayaki@gmail.com

---

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅಜರಾಮರ ಸ್ಥಾನ ಪಡೆದಿರುವ ಮಹಾಕವಿ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ, ಪ್ರಸಿದ್ಧನಾಮ ಕುವೆಂಪು, ಅವರು ಕವಿ, ಕಾದಂಬರಿಕಾರ, ಚಿಂತಕ, ಶಿಕ್ಷಣತಜ್ಞ ಹಾಗೂ ಸಂಸ್ಕೃತಿಪ್ರೇಮಿಯಾಗಿ ಕನ್ನಡ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ಡಿಸೆಂಬರ್ 29, 1904ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಗ್ರಾಮದಲ್ಲಿ ಜನಿಸಿದರು. ಅವರ ಹುಟ್ಟೂರಿನ ಹೆಸರೇ ಮುಂದೆ ಅವರ ಕಾವ್ಯನಾಮವಾಗಿ ಪ್ರಸಿದ್ಧವಾಯಿತು.

ಕುವೆಂಪು ಅವರ ಪ್ರಾಥಮಿಕ ಶಿಕ್ಷಣ ಗ್ರಾಮೀಣ ವಾತಾವರಣದಲ್ಲಿಯೇ ನಡೆಯಿತು. ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದು, ಸಾಹಿತ್ಯ ಮತ್ತು ತತ್ವಚಿಂತನೆಗಳಲ್ಲಿ ಗಾಢ ಆಸಕ್ತಿ ಬೆಳೆಸಿಕೊಂಡರು. ಬಾಲ್ಯದಿಂದಲೇ ಪ್ರಕೃತಿ, ಜನಜೀವನ ಮತ್ತು ಮಾನವೀಯ ಮೌಲ್ಯಗಳು ಅವರ ಸಾಹಿತ್ಯದ ಪ್ರಮುಖ ಪ್ರೇರಣೆಯಾಗಿದ್ದವು.

ಕುವೆಂಪು ಅವರು ಕನ್ನಡ ಸಾಹಿತ್ಯಕ್ಕೆ ಹೊಸ ಚೈತನ್ಯ ತಂದ ಮಹಾಕವಿ. ನವೋದಯ ಸಾಹಿತ್ಯ ಚಳವಳಿಯ ಪ್ರಮುಖ ನಾಯಕರಾಗಿದ್ದ ಅವರು, ಕನ್ನಡ ಕಾವ್ಯಕ್ಕೆ ಆಧುನಿಕತೆ, ಸ್ವಾತಂತ್ರ್ಯ ಮತ್ತು ವೈಚಾರಿಕತೆಯನ್ನು ತಂದರು. ಅವರ ಪ್ರಸಿದ್ಧ ಮಹಾಕಾವ್ಯ “ಶ್ರೀ ರಾಮಾಯಣ ದರ್ಶನಂ” ಕನ್ನಡ ಸಾಹಿತ್ಯದ ಮಹತ್ವದ ಕೃತಿ ಆಗಿದ್ದು, ಇದಕ್ಕೆ ಅವರಿಗೆ 1967ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಇದು ಕನ್ನಡಕ್ಕೆ ದೊರೆತ ಮೊದಲ ಜ್ಞಾನಪೀಠ ಗೌರವವಾಗಿತ್ತು.

ಕುವೆಂಪು ಅವರ ಸಾಹಿತ್ಯ ಕೇವಲ ಕಲಾತ್ಮಕತೆಯಲ್ಲದೆ ತತ್ವಶಾಸ್ತ್ರೀಯ ಆಳವನ್ನು ಹೊಂದಿದೆ. ಅವರ “ವಿಶ್ವಮಾನವ ಸಂದೇಶ” ಮಾನವರೆಲ್ಲ ಒಂದೇ ಎಂಬ ಭಾವನೆಯನ್ನು ಸಾರುತ್ತದೆ. ಜಾತಿ, ಧರ್ಮ, ಭಾಷೆ, ದೇಶಗಳ ಗಡಿಗಳನ್ನು ಮೀರಿ ಮಾನವೀಯತೆಯೇ ಶ್ರೇಷ್ಠವೆಂದು ಅವರು ಪ್ರತಿಪಾದಿಸಿದರು. ಈ ಚಿಂತನೆಗಳು ಇಂದಿಗೂ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿವೆ.

ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಕಥೆ – ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ಕುವೆಂಪು ತಮ್ಮ ಛಾಪು ಮೂಡಿಸಿದ್ದಾರೆ. “ಕಾನೂರು ಹೆಗ್ಗಡಿತಿ”, “ಮಲೆಗಳಲ್ಲಿ ಮದುಮಗಳು”, “ಕಾವ್ಯಾನಂದ”, “ಆತ್ಮಶ್ರೀ” ಮುಂತಾದ ಕೃತಿಗಳು ಅವರ ಸಾಹಿತ್ಯ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತವೆ. ಅವರ ಆತ್ಮಕಥೆ “ಕನಸುಗಾರ ಮತ್ತು ವಾಸ್ತವ” ಕನ್ನಡ ಆತ್ಮಕಥಾ ಸಾಹಿತ್ಯದ ಮಹತ್ವದ ಕೃತಿಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿಯೂ ಕುವೆಂಪು ಮಹತ್ವದ ಪಾತ್ರ ವಹಿಸಿದರು. ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಕಾರ್ಯನಿರ್ವಹಿಸಿ, ಕನ್ನಡವನ್ನು ಉನ್ನತ ಶಿಕ್ಷಣದ ಮಾಧ್ಯಮವಾಗಿ ಬೆಳೆಸಲು ಶ್ರಮಿಸಿದರು. “ಕನ್ನಡವೇ ಆಡಳಿತ ಭಾಷೆಯಾಗಬೇಕು” ಎಂಬ ಅವರ ದೃಢ ನಿಲುವು ಭಾಷಾ ಚಳವಳಿಗೆ ಬಲ ನೀಡಿತು.

ಕುವೆಂಪು ಅವರಿಗೆ ಪದ್ಮಭೂಷಣ, ಕರ್ನಾಟಕ ರತ್ನ, ರಾಷ್ಟ್ರಕವಿ ಎಂಬ ಅನೇಕ ಗೌರವಗಳು ಲಭಿಸಿವೆ. ಅವರು ನವೆಂಬರ್ 11, 1994ರಂದು ಇಹಲೋಕ ತ್ಯಜಿಸಿದರೂ, ಅವರ ಸಾಹಿತ್ಯ ಮತ್ತು ಚಿಂತನೆಗಳು ಕನ್ನಡ ನಾಡಿನ ಹೃದಯದಲ್ಲಿ ಸದಾ ಜೀವಂತವಾಗಿವೆ.

ಕುವೆಂಪು ಅವರ ಜೀವನ ಮತ್ತು ಕೃತಿಗಳು ವಿದ್ಯಾರ್ಥಿಗಳಿಗೆ ಸೃಜನಶೀಲತೆ, ಮಾನವೀಯತೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಪಾಠಗಳನ್ನು ಕಲಿಸುತ್ತವೆ. ಅವರು ಕನ್ನಡ ಸಾಹಿತ್ಯದ ಗರ್ವವೂ, ವಿಶ್ವಮಾನವತೆಯ ದಾರಿ ದೀಪವೂ ಆಗಿದ್ದಾರೆ.

**ಉಲ್ಲೇಖಗಳು :**


1. ಕುವೆಂಪು. ಶ್ರೀ ರಾಮಾಯಣ ದರ್ಶನಂ. ಕನ್ನಡ ಸಾಹಿತ್ಯ ಪರಿಷತ್ತು.
2. ಕುವೆಂಪು. ಕನಸುಗಾರ ಮತ್ತು ವಾಸ್ತವ. ಉದಯ ರವಿ ಪ್ರಕಾಶನ.
3. ಡಾ. ಜಿ. ಎಸ್. ಶಿವರುದ್ರಪ್ಪ. ನವೋದಯ ಸಾಹಿತ್ಯ ಚಳವಳಿ. ಸಾಹಿತ್ಯ ಅಕಾಡೆಮಿ.
4. ಕನ್ನಡ ಸಾಹಿತ್ಯ ಪರಿಷತ್ತು. ಕುವೆಂಪು ಸ್ಮರಣ ಸಂಚಿಕೆ.
5. ಕರ್ನಾಟಕ ಸರ್ಕಾರ. ರಾಷ್ಟ್ರಕವಿ ಕುವೆಂಪು – ಜೀವನ ಮತ್ತು ಸಾಧನೆ.
6. ವಿಶ್ವವಿದ್ಯಾಲಯ ಅನುದಾನ ಆಯೋಗ (UGC) – ಕನ್ನಡ ಸಾಹಿತ್ಯ ಅಧ್ಯಯನ ಗ್ರಂಥಗಳು.


*****

## ಶಿವಶರಣೆ ಸತ್ಯಕ್ಕ ಶಿಕಾರಿಪುರ ತಾಲ್ಲೂಕಿನವರು



# ವಚನ ಸಾಹಿತ್ಯ: ಭಾರತೀಯ ಜ್ಞಾನ ಪರಂಪರೆ, ಸಾಮಾಜಿಕ ಪರಿವರ್ತನೆ

**ಡಾ. ನಾಗೇಂದ್ರಪ್ಪ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
nagendrappa8@gmail.com

ವಚನ ಸಾಹಿತ್ಯವನ್ನು ಕೇವಲ 12ನೇ ಶತಮಾನದ ಕನ್ನಡ ಸಾಹಿತ್ಯ ರೂಪವೆಂದು ನೋಡುವುದು ಅದರ ಮಹತ್ವವನ್ನು ಕಡಿಮೆ ಮಾಡುವಂತಾಗುತ್ತದೆ. ವಚನ ಸಾಹಿತ್ಯವು ಒಂದು ಸಾಮಾಜಿಕ ತತ್ವಶಾಸ್ತ್ರೀಯ ಚಳವಳಿ, ಒಂದು ಪ್ರಜಾಸತ್ತಾತ್ಮಕ ಧ್ವನಿ, ಮತ್ತು ಅನುಭವಾಧಾರಿತ ಜ್ಞಾನ ವ್ಯವಸ್ಥೆಯಾಗಿದೆ. ಬಸವಣ್ಣನವರ ನೇತೃತ್ವದಲ್ಲಿ ಉದ್ಭವಿಸಿದ ಈ ಚಳವಳಿ, ಪರಂಪರೆಯ ಶ್ರೇಣೀಕರಣ, ಧಾರ್ಮಿಕ ಕೃತಕತೆ, ಹಾಗೂ ಸಾಮಾಜಿಕ ಅಸಮಾನತೆಗಳ ವಿರುದ್ಧ ಒಂದು ಜ್ಞಾನಾತ್ಮಕ ಪ್ರತಿರೋಧವಾಗಿತ್ತು.

ಶಿಕ್ಷಕ ಶಿಕ್ಷಣದ ಪರಿಧಿಯಲ್ಲಿ (Teacher Education), ವಚನ ಸಾಹಿತ್ಯವು ಮೌಲ್ಯಾಧಾರಿತ ಶಿಕ್ಷಣ (Value Education), ಸಾಮಾಜಿಕ ನ್ಯಾಯ (Social Justice) ಮತ್ತು ಮಾನವೀಯ ಸಂವೇದನೆ (Human Sensitivity) ಗಳ ತತ್ವಾತ್ಮಕ ನೆಲೆಯನ್ನು ಒದಗಿಸುತ್ತದೆ.

## ವಚನ ಸಾಹಿತ್ಯದ ಜ್ಞಾನಶಾಸ್ತ್ರೀಯ (Epistemological) ನೆಲೆ

ವಚನ ಸಾಹಿತ್ಯವು ಶಾಸ್ತ್ರಾಧಾರಿತವಲ್ಲ; ಅದು ಅನುಭವಾಧಾರಿತ ಜ್ಞಾನವನ್ನು (Experiential Knowledge) ಪ್ರಧಾನವಾಗಿಟ್ಟುಕೊಳ್ಳುತ್ತದೆ. ಇದು ಪಾಶ್ಚಾತ್ಯ ಶಿಕ್ಷಣ ತತ್ವಗಳಲ್ಲಿ ಕಂಡುಬರುವ ಪ್ರಾಗ್ಮಾಟಿಸಂ (Pragmatism) ಮತ್ತು ನಿರ್ಮಾಣಾತ್ಮಕತೆಯ (Constructivism) ಸಹಸಂಬಂಧ ಹೊಂದಿದೆ.

**ಅಲ್ಲಮ ಪ್ರಭುವಿನ ವಚನ:**

ಅನುಭವವಿಲ್ಲದೆ ಅರಿವು ಇಲ್ಲ

ಈ ವಚನವು, ಜ್ಞಾನವು ಹೊರಗಿನಿಂದ ಹೇರಲ್ಪಡುವುದಲ್ಲ; ಅದು ಅನುಭವದಿಂದ ನಿರ್ಮಾಣವಾಗುತ್ತದೆ ಎಂಬ ತತ್ವವನ್ನು ಸ್ಪಷ್ಟಪಡಿಸುತ್ತದೆ. ಇಂದಿನ ಪಠ್ಯಕ್ರಮದಲ್ಲಿ ಒತ್ತಿ ಹೇಳಲಾಗುವ Reflective Practice, Internship-based Learning, ಮತ್ತು Activity-based Pedagogyಗಳ ತತ್ವದ ಮೂಲವನ್ನು ಇಲ್ಲಿ ಕಾಣಬಹುದು.

## ವಚನ ಸಾಹಿತ್ಯ ಮತ್ತು ಸಾಮಾಜಿಕ ಸಮಾನತೆಯ ಶಿಕ್ಷಣ (Education for Equity)

ವಚನ ಚಳವಳಿ ಸಮಾನತೆಯ ಶಿಕ್ಷಣದ ಪ್ರಾರಂಭಿಕ ರೂಪವಾಗಿದೆ. ಶರಣರು ಜಾತಿ, ಲಿಂಗ, ವೃತ್ತಿ ಮತ್ತು ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ಮಾನವ ಮೌಲ್ಯವನ್ನು ಅಳೆಯುವುದನ್ನು ತಿರಸ್ಕರಿಸಿದರು.

ಅಕ್ಕ ಮಹಾದೇವಿಯ ವಚನ: ಹೆಣ್ಣೆಂಬುದೊಂದು ದೇಹದ ಗುರುತು; ಆತ್ಮಕ್ಕೆ ಲಿಂಗವಿಲ್ಲ

ಈ ವಚನವು Gender-neutral Education, Feminist Pedagogy, ಮತ್ತು Inclusive Educationಗೆ ಅತ್ಯಂತ ಪ್ರಸ್ತುತವಾಗಿದೆ. ಶಿಕ್ಷಕ ಶಿಕ್ಷಣದಲ್ಲಿ ಈ ಚಿಂತನೆಗಳನ್ನು ಅಳವಡಿಸುವುದರಿಂದ, ಭವಿಷ್ಯದ ಶಿಕ್ಷಕರು ಸಾಮಾಜಿಕ ನ್ಯಾಯದ ಪೋಷಕರಾಗುತ್ತಾರೆ.

**ವಚನ ಸಾಹಿತ್ಯ ಮತ್ತು ಶಿಕ್ಷಕನ ವೃತ್ತಿಪರ ನೈತಿಕತೆ** (Professional Ethics of Teachers)

ಶಿಕ್ಷಕನ ನೈತಿಕತೆ ಪಠ್ಯಜ್ಞಾನಕ್ಕಿಂತ ಶ್ರೇಷ್ಠ. ವಚನ ಸಾಹಿತ್ಯವು ಶಿಕ್ಷಕರ ವೃತ್ತಿಪರ ನೈತಿಕತೆಯನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

ಬಸವಣ್ಣನವರ ವಚನ: ನೋಡಿದಂತೆ ಹೇಳು, ಹೇಳಿದಂತೆ ಮಾಡು

ಈ ವಚನವು: ಪಾರದರ್ಶಕತೆ (Transparency), ನೈತಿಕ ಸ್ಥಿರತೆ (Moral Consistency), ಆದರ್ಶ ವರ್ತನೆ (Role Modelling), ಇವುಗಳ ಮಹತ್ವವನ್ನು ಶಿಕ್ಷಕರಿಗೆ ನೆನಪಿಸುತ್ತದೆ. ಓಇಕ–2020 ಯಲ್ಲಿ ಸೂಚಿಸಲಾದ Teacher as Role Model ಎಂಬ ಪರಿಕಲ್ಪನೆಯ ತತ್ತ್ವಾತ್ಮಕ ನೆಲೆ ಇಲ್ಲಿ ಸ್ಪಷ್ಟವಾಗಿದೆ.

**ವಚನ ಸಾಹಿತ್ಯ ಮತ್ತು ವಿಮರ್ಶಾತ್ಮಕ ಚಿಂತನೆ** (Critical Pedagogy)

ವಚನಗಳು ಪ್ರಶ್ನಿಸುವ ಸ್ವಭಾವ ಹೊಂದಿವೆ. ಅವು ಅಧಿಕಾರವನ್ನು ಪ್ರಶ್ನಿಸುತ್ತವೆ, ಅಂಧಶ್ರದ್ಧೆಯನ್ನು ನಿರಾಕರಿಸುತ್ತವೆ.

ಚನ್ನಬಸವಣ್ಣನ ವಚನ: ಹೊರಗಿನ ಶುದ್ಧಿಯಲ್ಲ, ಒಳಗಿನ ಶುದ್ಧಿಯೇ ಮುಖ್ಯ

ಇದು ಪೌಲೋ ಫ್ರೈರೆಯ Critical Pedagogy ಯೊಂದಿಗೆ ತಾಳಮೇಳ ಹೊಂದಿದೆ. ಶಿಕ್ಷಕರು ವಿದ್ಯಾರ್ಥಿಗಳನ್ನು ಕೇವಲ ಮಾಹಿತಿಯ ಗ್ರಾಹಕರನ್ನಾಗಿ ಮಾಡದೆ, ಸಮಾಜವನ್ನು ಪ್ರಶ್ನಿಸುವ ವಿಮರ್ಶಕರಾಗಿ ರೂಪಿಸುವುದಕ್ಕೆ ವಚನ ಸಾಹಿತ್ಯ ಪಾಠದ **ಸಾಧನವಾಗುತ್ತದೆ**.

**ವಚನ ಸಾಹಿತ್ಯ ಮತ್ತು ಮೌಲ್ಯಾಧಾರಿತ ಪಠ್ಯಕ್ರಮ** (Value-Integrated Curriculum)

ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ವಿಷಯವಾಗಿ ಬೋಧಿಸುವುದಕ್ಕಿಂತ, ಪಠ್ಯಕ್ರಮದಲ್ಲಿ ಸಹಜವಾಗಿ ಅಳವಡಿಸುವುದು ಪರಿಣಾಮಕಾರಿ.

ಸಿದ್ಧರಾಮನ ವಚನ: ದಾನವಿಲ್ಲದೆ ಧರ್ಮವಿಲ್ಲ

ಈ ವಚನವು Service Learning, Community Engagement, ಮತ್ತು Experiential Citizenship Educationಗೆ ದಿಕ್ಕು ನೀಡುತ್ತದೆ. ತರಬೇತಿಯಲ್ಲಿ ವಚನಾಧಾರಿತ ಪಾಠಯೋಜನೆ ರೂಪಿಸುವುದರಿಂದ, ಶಿಕ್ಷಕರು ಸಮಾಜಮುಖಿ ಶಿಕ್ಷಣದ ಕಾರ್ಯಕರ್ತರಾಗುತ್ತಾರೆ.

## NEP–2020 ಮತ್ತು ಭಾರತೀಯ ಜ್ಞಾನ ಪರಂಪರೆಯಲ್ಲಿ ವಚನ ಸಾಹಿತ್ಯ

ರಾಷ್ಟ್ರೀಯ ಶಿಕ್ಷಣ ನೀತಿ– 2020 ಭಾರತೀಯ ಜ್ಞಾನ ಪರಂಪರೆಯನ್ನು ಶಿಕ್ಷಣದ ಕೇಂದ್ರದಲ್ಲಿ ಇಡುತ್ತದೆ. ವಚನ ಸಾಹಿತ್ಯವು: ಸ್ಥಳೀಯ ಜ್ಞಾನ (Local Knowledge), ನೈತಿಕ ಚಿಂತನೆ, ಸಮಗ್ರ ವ್ಯಕ್ತಿತ್ವ ವಿಕಾಸ, ಭಾಷಾ ಸಂವೇದನೆ, ಎಲ್ಲವನ್ನೂ ಒಟ್ಟುಗೂಡಿಸುತ್ತದೆ. ಇದು ಭಾರತೀಯ ತತ್ತ್ವಶಾಸ್ತ್ರವನ್ನು ಆಧುನಿಕ ಪೆಡಗಾಜಿಯೊಂದಿಗೆ ಸಂಪರ್ಕಿಸುವ ಜೀವಂತ ಸೇತುವೆ.ಇದರಿಂದ ಶಿಕ್ಷಕ ಶಿಕ್ಷಣವು ಮಾಹಿತಿ ಕೇಂದ್ರಿತವಾಗದೇ, ಅರ್ಥಪೂರ್ಣ ಹಾಗೂ ಮಾನವೀಯವಾಗುತ್ತದೆ.

ವಚನ ಸಾಹಿತ್ಯವು ಪಠ್ಯವಲ್ಲ; ಅದು ಪೆಡಗಾಜಿಯ ಆತ್ಮ. ಬಸವಣ್ಣ ಮತ್ತು ಶರಣರ ಚಿಂತನೆಗಳು ಇಂದಿನ ಶಿಕ್ಷಣ ಸಂಕಷ್ಟಗಳಿಗೆ ಉತ್ತರ ನೀಡಬಲ್ಲವು.. ವಿದ್ಯಾರ್ಥಿಗಳು ಮತ್ತು Teacher Educator ವಚನ ಸಾಹಿತ್ಯವನ್ನು ಶೈಕ್ಷಣಿಕವಾಗಿ ಅಳವಡಿಸಿಕೊಂಡರೆ: ಮೌಲ್ಯಸಂಪನ್ನ ಶಿಕ್ಷಕರು ರೂಪುಗೊಳ್ಳುತ್ತಾರೆ, ಶಿಕ್ಷಣ ಸಮಾಜಮುಖಿಯಾಗುತ್ತದೆ, ಜ್ಞಾನ ಮಾನವೀಯವಾಗುತ್ತದೆ

ಬಸವಣ್ಣನವರ ವಚನ: ಸತ್ಯವಿಲ್ಲದೆ ಧರ್ಮವಿಲ್ಲ, ದಯೆಯಿಲ್ಲದೆ ಜ್ಞಾನವಿಲ್ಲ

ಇದೇ ವಚನ ಸಾಹಿತ್ಯದ ಸಾರವೂ, ಶಿಕ್ಷಣದ ಪರಮ ಗುರಿಯೂ ಆಗಿದೆ.

*****

**ಶಿವಶರಣ ಅಲ್ಲಮಪ್ರಭುವಿನ ಜನ್ಮಸ್ಥಳ ಬಳ್ಳಿಗಾವಿಯ ಸುಪ್ರಸಿದ್ಧ ಕೇದಾರೇಶ್ವರ ದೇವಾಲಯ**



# ಧೈರ್ಯ, ನಂಬಿಕೆ ಮತ್ತು ಭರವಸೆಯ ಪಯಣ

**ಶ್ರೀ ರವಿಕುಮಾರ್ ಎನ್.ಜಿ**
ದೈಹಿಕ ಶಿಕ್ಷಣ ನಿರ್ದೇಶಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
ravikumarng79@gmail.com

---

ಜೀವನವೆಂಬ ನದಿಯ ತೀರದಲ್ಲಿ ನಿಂತು,
ನಾನು ಕೇಳಿದೆ — ಏಕೆ ಈ ಅಲೆಗಳು?
ಪ್ರತಿ ಅಲೆಯೂ ಹೇಳಿತು – "ಇದು ಪರೀಕ್ಷೆ,
ಆದರೆ ನಂಬಿಕೆ ಇದ್ದರೆ ದಾರಿ ಸಿಕ್ಕೀತು."

ನೋವಿನ ಮಳೆ ಸುರಿದಾಗಲೂ,
ನಂಬಿಕೆಯ ಬೀಜ ಮರವಾಗುತ್ತದೆ.
ಕತ್ತಲಿನ ರಾತ್ರಿಯಲ್ಲೂ ದೇವರ ದೀಪ ಬೆಳಗುತ್ತದೆ,
ಅದು ಕಣ್ಣೀರು ತೊಳೆದು ಹೃದಯ ಶಾಂತಗೊಳಿಸುತ್ತದೆ.

ಒಂದು ದಿನ
ಬದುಕೇ ನಿಂತಂತಾಯಿತು – ಮೌನದಲ್ಲಿ ನಿಶ್ವಾಸದ ನುಡಿಗಳು.
ಕಾರು ಮಗುಚಿತು, ಕಾಲ ನಿಂತಿತು,
ಆದರೆ ದೇವರ ಕೈ ನನ್ನ ಹೃದಯ ಹಿಡಿದಿತ್ತು.
ನೋವಿನ ಮಧ್ಯೆ ಪ್ರಾರ್ಥನೆ ಹುಟ್ಟಿತು,
ಭಯದ ನಡುವೆ ದೇವರ ನೆನಪು ಬೆಳೆದಿತು.
ರಕ್ತದ ಹನಿಯಲ್ಲಿ ಆಶೆಯ ಹೂವೊಂದು ಅರಳಿತು,
ಅದು ಜೀವದ ಹೊಸ ಪಾಠವಾಗಿ ಮೂಡಿತು.

ಪತ್ನಿಯ ಕಣ್ಣುಗಳಲ್ಲಿ ಕಂಡೆ
ವ್ಯಥೆಯಿಗಿಂತ ದೊಡ್ಡ ನಂಬಿಕೆಯ ಕಿರಣ.
ಅವರು ಮಾತಾಡಲಾರದೆ ಇದ್ದರೂ,
ಅವರ ಮೌನವೇ ದೇವರ ಧ್ವನಿಯಾಯಿತು.

ಅಸಹಾಯಕತೆಯ ಕ್ಷಣದಲ್ಲಿ
ಹತ್ತಿರ ನಿಂತರು ಕೆಲವು ಹೃದಯಗಳು.
ತ್ರಿಮೂರ್ತಿಗಳ ಅವತಾರದಂತೆ ಪ್ರತ್ಯಕ್ಷರಾದರು–
ವೃತ್ತಿಬಾಂಧವರು, ಸ್ನೇಹಿತರು, ಗುರುಗಳು, ಬಂಧುಗಳು,
ಅವರ ಪ್ರಾರ್ಥನೆಗಳು ನನ್ನ ಜೀವದ ಶಕ್ತಿಯಾಯಿತು.

ಆ ರಾತ್ರಿ ದೇವರು ದೂರ ಇರಲಿಲ್ಲ,
ಅವರು ಆಸ್ಪತ್ರೆಯ ಬೆಳಕಿನಲ್ಲಿ ಇದ್ದರು,
ವೈದ್ಯರ ಕೈಗಳಲ್ಲಿ ಇದ್ದರು,
ಅಜ್ಞಾತ ದಾತರ ರಕ್ತದ ಹನಿಯಲ್ಲೂ ಇದ್ದರು.

ನಾನು ತಿಳಿದೆ –
ದೇವರು ದೇವಾಲಯದಲ್ಲಷ್ಟೇ ಇಲ್ಲ,
ಅವರು ಮಾನವೀಯತೆಯೊಳಗಿದ್ದಾರೆ.
ಅವರು ಕಣ್ಣೀರಿನಲ್ಲೂ, ನಗುವಿನಲ್ಲೂ ವಾಸಿಸುತ್ತಾರೆ.

ಬದುಕು ಎಂದರೆ ಕೇವಲ ಉಸಿರಲ್ಲ,
ಅದು ನಂಬಿಕೆಯ ಪ್ರಯಾಣ.
ಕತ್ತಲಿನೊಳಗೆಯೂ ದೇವರ ಕಿರಣ ಹುಡುಕುವುದು,
ಮತ್ತೆ ಎದ್ದು ನಿಲ್ಲುವ ಧೈರ್ಯವೇ ನಿಜವಾದ ಬದುಕು.

ನಮ್ಮ ಬದುಕು ಪರೀಕ್ಷೆಯ ಹಾದಿ,
ಆದರೆ ಪ್ರತಿ ನೋವು ಒಂದು ಪಾಠ.
ಪ್ರತಿ ಕಣ್ಣೀರು ಒಂದು ಪ್ರಾರ್ಥನೆ,
ಪ್ರತಿ ಬೆಳಗು ಹೊಸ ದಯೆಯ ಉಡುಗೊರೆ.

ಇಂದು ನಾನು ನಿಂತಿದ್ದೇನೆ ದೇವರ ಮುಂದೆ
ಕೃತಜ್ಞ ಹೃದಯದಿಂದ, ಶಾಂತ ಆತ್ಮದಿಂದ.
ನನ್ನ ಪತ್ನಿಯ ಬದುಕು ದೇವರ ಅದ್ಭುತ,
ನನ್ನ ಮಗನ ನಗು ದೇವರ ಆಶೀರ್ವಾದ.

ನೋವು ಬಂದರೂ ನಗುತ್ತೇನೆ,
ಕತ್ತಲು ಬಂದರೂ ಪ್ರಾರ್ಥಿಸುತ್ತೇನೆ,
ಏಕೆಂದರೆ ಈಗ ನನಗೆ ಗೊತ್ತಾಗಿದೆ
ಧೈರ್ಯ, ನಂಬಿಕೆ ಮತ್ತು ಭರವಸೆಯೇ ದೇವರ ರೂಪ.

ಜೀವನ ತಿರುಗುತ್ತದೆ, ಕಾಲ ಬದಲಾಗುತ್ತದೆ,
ಆದರೆ ದೇವರ ಕರುಣೆ ಶಾಶ್ವತ.
ಮನುಷ್ಯರ ಒಳ್ಳೆಯತನ ದೇವರ ಅಸ್ತಿತ್ವದ ಸಾಬೀತು.

ಇದು ಕೇವಲ ನನ್ನ ಕಥೆಯಲ್ಲ
ಇದು ಪ್ರತಿ ಹೃದಯದ ಪಾಠ
ಅಲ್ಲಿ ದೇವರ ದಾರಿ ಕಷ್ಟದ ಮೂಲಕ ಹಾದು ಹೋಗುತ್ತದೆ,
ಆದರೆ ಅಂತ್ಯದಲ್ಲಿ ಬೆಳಕು — ಆಶೆಯ ಬೆಳಕು — ಹೂ ಬೀಳುತ್ತದೆ.

# ಪ್ರಾಚೀನ ಗ್ರಂಥಾಲಯ ವ್ಯವಸ್ಥೆ ಮತ್ತು ಆಧುನಿಕ ಗ್ರಂಥಾಲಯ ವ್ಯವಸ್ಥೆಯ ನಡುವಿನ ವೈಶಿಷ್ಟ್ಯತೆಗಳು ಹಾಗೂ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಗ್ರಂಥಾಲಯ ವ್ಯವಸ್ಥೆ

**ಶ್ರೀ ವಿಶ್ವನಾಥ ಜಿ**
ಗ್ರಂಥಪಾಲಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
vishwanathg79@gmail.com

**ಪೀಠಿಕೆ :**

ಮಾನವ ಇತಿಹಾಸದಲ್ಲಿ ಜ್ಞಾನ ಸಂಗ್ರಹ, ಸಂರಕ್ಷಣೆ ಮತ್ತು ಹಂಚಿಕೆ ಎಂಬ ತತ್ವವು ಮಾನವ ನಾಗರಿಕತೆಯ ಬೆಳವಣಿಗೆಯ ಮೂಲಭೂತ ಅಂಶವಾಗಿದೆ. ಈ ಉದ್ದೇಶವನ್ನು ಸಾಧಿಸಲು ಮಾನವನು ನಿರ್ಮಿಸಿದ ಅತ್ಯಂತ ಅಮೂಲ್ಯ ಸಂಸ್ಥೆ ಗ್ರಂಥಾಲಯ. ಗ್ರಂಥಾಲಯವು ಕೇವಲ ಪುಸ್ತಕಗಳ ಸಂಗ್ರಹಾಲಯವಲ್ಲ, ಅದು ಸಮಾಜದ ಬೌದ್ಧಿಕ ಶಕ್ತಿಯ ಪ್ರತಿಬಿಂಬವಾಗಿದೆ.

ಪ್ರಾಚೀನ ಕಾಲದಲ್ಲಿ ಗ್ರಂಥಾಲಯಗಳು ಜ್ಞಾನಕೇಂದ್ರಗಳಾಗಿದ್ದು, ಧರ್ಮ, ದರ್ಶನ, ಸಾಹಿತ್ಯ, ವಿಜ್ಞಾನ ಮತ್ತು ಕಲೆಗಳ ಅಧ್ಯಯನದ ಕೇಂದ್ರಗಳಾಗಿದ್ದುವು. ಆದರೆ ಆಧುನಿಕ ಯುಗದಲ್ಲಿ, ಗ್ರಂಥಾಲಯಗಳ ಸ್ವರೂಪವು ಸಂಪೂರ್ಣವಾಗಿ ಬದಲಾಗಿದೆ. ಇಂದಿನ ಗ್ರಂಥಾಲಯಗಳು ಕೇವಲ ಪಠ್ಯಪುಸ್ತಕಗಳು ಅಥವಾ ಹಸ್ತಪ್ರತಿಗಳ ಸಂಗ್ರಹಕ್ಕೆ ಸೀಮಿತವಾಗಿರದೆ, ಡಿಜಿಟಲ್ ತಂತ್ರಜ್ಞಾನ, ಇಂಟರ್ನೆಟ್, ಇ–ಪುಸ್ತಕಗಳು ಮತ್ತು ಮಾಹಿತಿ ನಿರ್ವಹಣಾ ವ್ಯವಸ್ಥೆಗಳಿಂದ ಕೂಡಿದ ಸ್ಮಾರ್ಟ್ ಜ್ಞಾನಕೇಂದ್ರಗಳಾಗಿವೆ.

ಈ ಲೇಖನದಲ್ಲಿ ಪ್ರಾಚೀನ ಗ್ರಂಥಾಲಯ ವ್ಯವಸ್ಥೆ ಮತ್ತು ಆಧುನಿಕ ಗ್ರಂಥಾಲಯ ವ್ಯವಸ್ಥೆಗಳ ಉಗಮ, ಸ್ವರೂಪ, ಕಾರ್ಯಪದ್ಧತಿ ಮತ್ತು ವೈಶಿಷ್ಟ್ಯತೆಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಜೊತೆಗೆ, ಇವುಗಳ ನಡುವಿನ ಪ್ರಮುಖ ಭೇದಗಳು ಹಾಗೂ ಪರಸ್ಪರ ಸಂಬಂಧವನ್ನು ಅಧ್ಯಯನ ಮಾಡಲಾಗಿದೆ.

## 1. ಪ್ರಾಚೀನ ಗ್ರಂಥಾಲಯ ವ್ಯವಸ್ಥೆಯ ಉಗಮ ಮತ್ತು ಬೆಳವಣಿಗೆ

ಪ್ರಾಚೀನ ಗ್ರಂಥಾಲಯಗಳ ಇತಿಹಾಸವು ಮಾನವ ನಾಗರಿಕತೆಯ ಆರಂಭದಷ್ಟೇ ಹಳೆಯದು. ಮಾನವನು ಅಕ್ಷರಶ್ರದ್ಧೆಯನ್ನು ಕಂಡುಹಿಡಿದ ಕ್ಷಣದಿಂದಲೇ ಜ್ಞಾನವನ್ನು ಲಿಖಿತ ರೂಪದಲ್ಲಿ ಸಂಗ್ರಹಿಸುವ ಪ್ರಯತ್ನ ಆರಂಭವಾಯಿತು. ಮೊದಲಿಗೆ ಮಣ್ಣಿನ ಫಲಕಗಳು, ತಾಳೆ ಪತ್ರಗಳು, ಪಾಪೈರಸ್ ಕಾಗದಗಳು ಮುಂತಾದ ಮಾಧ್ಯಮಗಳಲ್ಲಿ ಜ್ಞಾನ ಸಂಗ್ರಹವಾಯಿತು.

### 1.1. ಪ್ರಾಚೀನ ವಿಶ್ವದ ಗ್ರಂಥಾಲಯಗಳು

**1. ಅಸ್ಸಿರಿಯದ ನಿನಿವೆಯ ಅಶುರ್ಬಾನಿಪಾಲ್ ಗ್ರಂಥಾಲಯ (7ನೇ ಶತಮಾನ BCE)**

ಇದು ಮಾನವ ಇತಿಹಾಸದಲ್ಲಿನ ಮೊದಲ ಸುಸಂಘಟಿತ ಗ್ರಂಥಾಲಯವೆಂದು ಪರಿಗಣಿಸಲಾಗಿದೆ. ಸುಮಾರು 30,000 ಕಾದ ಮಣ್ಣಿನ ಫಲಕಗಳನ್ನು ಸಂಗ್ರಹಿಸಿತ್ತು. ಇದರಲ್ಲಿನ ವಿಷಯಗಳು ಸಾಹಿತ್ಯ, ಕಾನೂನು, ವೈದ್ಯಶಾಸ್ತ್ರ ಮತ್ತು ಧಾರ್ಮಿಕ ಪಠ್ಯಗಳನ್ನು ಒಳಗೊಂಡಿದ್ದುವು.

2. **ಈಜಿಪ್ಟಿನ ಅಲೆಕ್ಸಾಂಡ್ರಿಯಾ ಗ್ರಂಥಾಲಯ (3ನೇ ಶತಮಾನ BCE) :** ಪ್ರಾಚೀನ ವಿಶ್ವದ ಅತ್ಯಂತ ಪ್ರಸಿದ್ಧ ಗ್ರಂಥಾಲಯ. ಇದು ಸುಮಾರು 700,000 ಹಸ್ತಪ್ರತಿಗಳ ಸಂಗ್ರಹವಾಗಿತ್ತು ಎಂದು ಇತಿಹಾಸಕಾರರು ಅಂದಾಜಿಸುತ್ತಾರೆ. ಇದು ವಿಶ್ವದ ಪಂಡಿತರ ಅಧ್ಯಯನ ಕೇಂದ್ರವಾಗಿತ್ತು.

3. **ಗ್ರೀಕ್ ಮತ್ತು ರೋಮನ್ ಗ್ರಂಥಾಲಯಗಳು :** ಅಥೆನ್ಸ್, ರೋಮ್ ಮತ್ತು ಪರ್ಗಮಮ್ ನಗರಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ನಡೆದಿದೆ. ಗ್ರೀಕ್ ತತ್ವಜ್ಞಾನಿಗಳು ಗ್ರಂಥಾಲಯವನ್ನು ಶಿಕ್ಷಣ ಮತ್ತು ಸಂಶೋಧನೆಯ ಕೇಂದ್ರವಾಗಿ ಬಳಸಿದರು.

### 1.2. ಪ್ರಾಚೀನ ಭಾರತೀಯ ಗ್ರಂಥಾಲಯಗಳು :

ಭಾರತದಲ್ಲಿಯೂ ಗ್ರಂಥಾಲಯ ಪರಂಪರೆ ಬಹಳ ಪುರಾತನವಾಗಿದೆ. ವೇದ ಕಾಲದಿಂದಲೇ ಜ್ಞಾನವನ್ನು ಶ್ರವಣ, ಪಠಣ ಮತ್ತು ಸಂಗ್ರಹಣೆಯ ಮೂಲಕ ಕಾಪಾಡಲಾಗುತ್ತಿತ್ತು. ನಂತರ ತಾಳೆ ಪತ್ರಗಳಲ್ಲಿ ಪಠ್ಯಗಳನ್ನು ಬರೆಯುವ ಪದ್ಧತಿ ರೂಢಿಯಾಯಿತು.

1. **ತಕ್ಷಶಿಲಾ ಮತ್ತು ನಾಳಂದಾ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು ;** ನಾಳಂದಾದಲ್ಲಿ **"**ಧರ್ಮಗಂಜ**"** ಎಂದು ಕರೆಯಲ್ಪಡುವ ಭವ್ಯ ಗ್ರಂಥಾಲಯವಿತ್ತು. ಇದು ಮೂರು ಮಹಡಿಗಳ ಕಟ್ಟಡವಾಗಿದ್ದು, ಸಾವಿರಾರು ಗ್ರಂಥಗಳ ಸಂಗ್ರಹ ಹೊಂದಿತ್ತು. ಬೌದ್ಧ, ಹಿಂದು ಮತ್ತು ಜೈನ ತತ್ವಶಾಸ್ತ್ರಗಳ ಪಠ್ಯಗಳು ಇಲ್ಲಿ ದೊರೆಯುತ್ತವೆಯೆಂದು ದಾಖಲೆಗಳು ಹೇಳುತ್ತವೆ.

2. **ವಿಕ್ರಮಶೀಲ ಮತ್ತು ವಲ್ಲಭಿ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು :** ಈ ಗ್ರಂಥಾಲಯಗಳು ದಕ್ಷಿಣ ಏಷ್ಯಾದ ಸಂಶೋಧಕರಿಗೆ ಅಧ್ಯಯನದ ಪ್ರಮುಖ ಕೇಂದ್ರಗಳಾಗಿದ್ದುವು.

3. **ದೇವಾಲಯ ಗ್ರಂಥಾಲಯಗಳು ;** ಹಂಪಿ, ಶ್ರವಣಬೆಳಗೊಳ, ಕಾಶಿ ಮುಂತಾದ ಪ್ರದೇಶಗಳಲ್ಲಿ ದೇವಾಲಯಗಳಲ್ಲಿ ಗ್ರಂಥ ಸಂಗ್ರಹಗಳು ಇದ್ದುವು. ಪುರೋಹಿತರು ಮತ್ತು ಪಂಡಿತರು ಇವುಗಳನ್ನು ನಿರ್ವಹಿಸುತ್ತಿದ್ದರು.

### 1.3. ಪ್ರಾಚೀನ ಗ್ರಂಥಾಲಯಗಳ ಕಾರ್ಯ ಮತ್ತು ನಿರ್ವಹಣೆ

ಪ್ರಾಚೀನ ಗ್ರಂಥಾಲಯಗಳು ಮುಖ್ಯವಾಗಿ ಧಾರ್ಮಿಕ, ದಾರ್ಶನಿಕ ಹಾಗೂ ವೈಜ್ಞಾನಿಕ ಗ್ರಂಥಗಳ ಸಂಗ್ರಹವಾಗಿದ್ದುವು. ಇವುಗಳನ್ನು ಪಂಡಿತರು ಮತ್ತು ವಿಧ್ಯಾರ್ಥಿಗಳು ಉಪಯೋಗಿಸುತ್ತಿದ್ದರು.

ಗ್ರಂಥಪಾಲಕರು (scribe) ಹಸ್ತಪ್ರತಿಗಳನ್ನು ನಕಲಿಸಿ ಸಂಗ್ರಹಿಸುತ್ತಿದ್ದರು. ಪುಸ್ತಕಗಳ ಸಂರಕ್ಷಣೆಗೆ ವಿಶಿಷ್ಟ ವಿಧಾನಗಳು ಬಳಕೆಯಲ್ಲಿದ್ದುವು. ಅವುಗಳಲ್ಲಿ ತಾಳೆ ಪತ್ರಗಳ ಮೇಲಿನ ಲೇಪನ, ತಾಮ್ರದ ಪೆಟ್ಟಿಗೆಗಳಲ್ಲಿ ಸಂಗ್ರಹಣೆ ಇತ್ಯಾದಿ.

### 1.4. ಪ್ರಾಚೀನ ಗ್ರಂಥಾಲಯಗಳ ಕುಸಿತ

ಯುದ್ಧಗಳು, ದಾಳಿಗಳು ಮತ್ತು ಪ್ರಕೃತಿ ವಿಕೋಪಗಳಿಂದ ಅನೇಕ ಪ್ರಾಚೀನ ಗ್ರಂಥಾಲಯಗಳು ನಾಶವಾದುವು. ನಾಳಂದಾ ಗ್ರಂಥಾಲಯವನ್ನು ಮುಸ್ಲಿಂ ಆಕ್ರಮಣಕಾರರಿಂದ ಬೆಂಕಿಗೆ ಹಚ್ಚಲಾಗಿದ್ದು, ಅದು ತಿಂಗಳ ಕಾಲ ಹೊತ್ತಿ ಉರಿದಿತ್ತು ಎನ್ನಲಾಗಿದೆ. ಈ ನಾಶವು ಮಾನವ ಜ್ಞಾನ ಇತಿಹಾಸಕ್ಕೆ ಅಳಿಯದ ಹಾನಿ ತಂದಿತು.

## 2. ಆಧುನಿಕ ಗ್ರಂಥಾಲಯ ವ್ಯವಸ್ಥೆಯ ಉಗಮ ಮತ್ತು ಬೆಳವಣಿಗೆ

ಆಧುನಿಕ ಗ್ರಂಥಾಲಯ ಪರಿಕಲ್ಪನೆ 17ನೇ ಮತ್ತು 18ನೇ ಶತಮಾನಗಳಲ್ಲಿ ಯುರೋಪಿನಲ್ಲಿ ಬೆಳೆಯಿತು. ಮುದ್ರಣಯಂತ್ರದ ಆವಿಷ್ಕಾರ (15ನೇ ಶತಮಾನದಲ್ಲಿ ಗುಟೆನ್ಬರ್ಗ್ನಿಂದ) ಪುಸ್ತಕಗಳ ಉತ್ಪಾದನೆಯನ್ನು ಸುಲಭಗೊಳಿಸಿತು. ಇದರ ಪರಿಣಾಮವಾಗಿ ಗ್ರಂಥಾಲಯಗಳು ಸಾಮಾನ್ಯ ಜನರಿಗೆ ಲಭ್ಯವಾಗತೊಡಗಿದುವು.

### 2.1. ಸಾರ್ವಜನಿಕ ಗ್ರಂಥಾಲಯ ಚಳುವಳಿ

19ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಮತ್ತು ಅಮೆರಿಕಾದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ನಡೆಯಿತು. ಇದರ ಉದ್ದೇಶ ಜನಸಾಮಾನ್ಯರಿಗೆ ಉಚಿತವಾಗಿ ಓದುವ ಮತ್ತು ಕಲಿಯುವ ಅವಕಾಶ ಒದಗಿಸುವುದು. 1850ರಲ್ಲಿ ಬ್ರಿಟಿಷ್ ಪಬ್ಲಿಕ್ ಲೈಬ್ರರಿ ಆಕ್ಟ್ ಜಾರಿಗೆ ಬಂತು.

### 2.2. ಭಾರತದಲ್ಲಿ ಆಧುನಿಕ ಗ್ರಂಥಾಲಯಗಳ ಬೆಳವಣಿಗೆ

ಭಾರತದಲ್ಲಿ ಆಧುನಿಕ ಗ್ರಂಥಾಲಯಗಳ ಬೆಳವಣಿಗೆಯು ಬ್ರಿಟಿಷ್ ಆಡಳಿತದಿಂದ ಪ್ರಾರಂಭವಾಯಿತು.

1. 1836ರಲ್ಲಿ ಕೋಲ್ಕತ್ತಾದಲ್ಲಿ ಏಷ್ಯಾಟಿಕ್ ಸೊಸೈಟಿ ಗ್ರಂಥಾಲಯ ಸ್ಥಾಪಿಸಲಾಯಿತು.
2. 1919ರಲ್ಲಿ ಕೊನಾರ್ಕ್ ಲೈಬ್ರರಿ ಆಕ್ಟ್ ಮೂಲಕ ಸಾರ್ವಜನಿಕ ಗ್ರಂಥಾಲಯಗಳ ನಿಯಮಾವಳಿ ಬಂದಿತು.
3. ರಾಜಾ ರಾಮಮೋಹನ ರಾಯ್ ಲೈಬ್ರರಿ ಫೌಂಡೇಶನ್ (RRRLF) 1972ರಲ್ಲಿ ಸ್ಥಾಪಿತವಾಗಿ ಭಾರತದ ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸಿತು.
4. ಇಂದಿನ ಭಾರತದಲ್ಲಿ ರಾಷ್ಟ್ರೀಯ ಮಟ್ಟದ ಗ್ರಂಥಾಲಯಗಳಾದ ಕೊಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯ, ದೆಹಲಿ ಸಾರ್ವಜನಿಕ ಗ್ರಂಥಾಲಯ, ಸಾಂಸ್ಕೃತಿಕ ಗ್ರಂಥಾಲಯಗಳು ಮತ್ತು ರಾಜ್ಯ ಮಟ್ಟದ ಗ್ರಂಥಾಲಯ ಜಾಲಗಳು ಸ್ಥಾಪಿತವಾಗಿವೆ.

## 3. ಆಧುನಿಕ ಗ್ರಂಥಾಲಯಗಳ ತಂತ್ರಜ್ಞಾನ ಪರಿವರ್ತನೆಗಳು

1. **ಡಿಜಿಟಲ್ ಗ್ರಂಥಾಲಯಗಳು (Digital Libraries) :**ಇಂಟರ್ನೆಟ್ನ ಮೂಲಕ ವಿಶ್ವದಾದ್ಯಂತ ಮಾಹಿತಿ ಹಂಚಿಕೊಳ್ಳುವ ವ್ಯವಸ್ಥೆ. ಉದಾಹರಣೆ: Google Books, Project Gutenberg.
2. **Automation ಮತ್ತು RFID ತಂತ್ರಜ್ಞಾನ :** ಪುಸ್ತಕ ಸಂಗ್ರಹಣೆ, ಹಂಚಿಕೆ ಮತ್ತು ಹಿಂದಿರುಗಿಸುವ ಪ್ರಕ್ರಿಯೆ ಸ್ವಯಂಚಾಲಿತವಾಗಿದೆ.
3. **ಇ–resources ಮತ್ತು Databases :** ಇಂದಿನ ಗ್ರಂಥಾಲಯಗಳಲ್ಲಿ ಇ–ಜರ್ನಲ್ಗಳು, ಇ–ಪುಸ್ತಕಗಳು, ಸಂಶೋಧನಾ ಡೇಟಾಬೇಸ್ಗಳು ಲಭ್ಯ.
4. **Open Access Movement :** ಜ್ಞಾನವನ್ನು ಎಲ್ಲರಿಗೂ ಮುಕ್ತವಾಗಿ ನೀಡುವ ಚಳುವಳಿ. ಆಧುನಿಕ ಗ್ರಂಥಾಲಯಗಳು ಇದರ ಭಾಗವಾಗಿವೆ.

5. **Hybrid Libraries :** ಮುದ್ರಿತ ಮತ್ತು ಡಿಜಿಟಲ್ ಸಂಪನ್ಮೂಲಗಳ ಸಂಯೋಜಿತ ರೂಪ.

**4. ಪ್ರಾಚೀನ ಮತ್ತು ಆಧುನಿಕ ಗ್ರಂಥಾಲಯಗಳ ನಡುವಿನ ಪ್ರಮುಖ ವೈಶಿಷ್ಟತೆಗಳು**

| ಅಂಶಗಳು | ಪ್ರಾಚೀನ ಗ್ರಂಥಾಲಯ ವ್ಯವಸ್ಥೆ | ಆಧುನಿಕ ಗ್ರಂಥಾಲಯ ವ್ಯವಸ್ಥೆ |
|---|---|---|
| ಉಗಮದ ಕಾಲ | ಕ್ರಿಸ್ತ ಪೂರ್ವ ಯುಗದಿಂದ | ಕ್ರಿಸ್ತ ಶಕ 18–19ನೇ ಶತಮಾನಗಳಿಂದ |
| ಮಾಧ್ಯಮ | ತಾಳೆ ಪತ್ರ, ಮಣ್ಣಿನ ಫಲಕ, ಪಾಪೈರಸ್ ಕಾಗದ, | ಡಿಜಿಟಲ್ ಮಾಧ್ಯಮ, ಇ–ಪುಸ್ತಕಗಳು |
| ಪ್ರವೇಶ ಹಕ್ಕು | ನಿರ್ದಿಷ್ಟ ಪಂಡಿತರು, ವಿದ್ಯಾರ್ಥಿಗಳು ಮಾತ್ರ | ಸಾರ್ವಜನಿಕರಿಗೆ ಮುಕ್ತ ಪ್ರವೇಶ |
| ಉದ್ದೇಶ | ಧಾರ್ಮಿಕ, ತತ್ವಶಾಸ್ತ್ರ ಅಧ್ಯಯನ | ಶಿಕ್ಷಣ, ಸಂಶೋಧನೆ, ಮಾಹಿತಿ ಹಂಚಿಕೆ |
| ಗ್ರಂಥಪಾಲಕರು | ಪಂಡಿತರು ಅಥವಾ ಪುರೋಹಿತರು | ತರಬೇತಿ ಪಡೆದ ವೃತ್ತಿಪರ ಗ್ರಂಥಪಾಲಕರು |
| ಸಂಗ್ರಹ | ವಿಧಾನ ಕೈಬರಹ ಹಸ್ತಪ್ರತಿಗಳು | ಮುದ್ರಿತ ಮತ್ತು ಡಿಜಿಟಲ್ ಸಂಗ್ರಹಣೆ |
| ಸಂರಕ್ಷಣಾ ತಂತ್ರಜ್ಞಾನ | ಕೈಯಿಂದ ಲೇಪನ, ತಾಮ್ರಪೆಟ್ಟಿಗೆಗಳು | ಡಿಜಿಟಲ್ ಆರ್ಕೈವ್, ಡೇಟಾ ಬ್ಯಾಕಪ್, ಸಂಗ್ರಹ ತಂತ್ರಜ್ಞಾನ |
| ಮಾಹಿತಿ ಹುಡುಕಾಟ ವಿಧಾನ | ಕೈಪಿಡಿ ಅಥವಾ ಮಾನವ ಸ್ಮರಣೆ | ಡಿಜಿಟಲ್ ಕ್ಯಾಟಲಾಗ್, ಡೇಟಾಬೇಸ್, ಆನ್ಲೈನ್ ಹುಡುಕಾಟ |
| ಸೇವಾ ವ್ಯಾಪ್ತಿ | ಸ್ಥಳೀಯ ಮತ್ತು ಸೀಮಿತ | ವಿಶ್ವವ್ಯಾಪಿ, ಇಂಟರ್ನೆಟ್ ಆಧಾರಿತ |
| ಸಂಪರ್ಕ ಮಾಧ್ಯಮ | ಮುಖಾಮುಖಿ ಅಧ್ಯಯನ | ವರ್ಚುವಲ್, ಆನ್ಲೈನ್, ಮೊಬೈಲ್ ಅಪ್ಲಿಕೇಶನ್ಗಳು |

**5. ಗ್ರಂಥಾಲಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಪಾತ್ರ :** ಪ್ರಾಚೀನ ಕಾಲದಲ್ಲೂ, ಆಧುನಿಕ ಕಾಲದಲ್ಲೂ ಗ್ರಂಥಾಲಯಗಳು ಸಮಾಜದ ಜ್ಞಾನಪರಿಣಾಮದಲ್ಲಿ ಪ್ರಮುಖ ಪಾತ್ರ ವಹಿಸಿವೆ. ಪ್ರಾಚೀನ ಕಾಲದಲ್ಲಿ, ಪಂಡಿತರು ಮತ್ತು ಶಾಸ್ತ್ರಾರ್ಥಿಗಳು ಗ್ರಂಥಾಲಯಗಳ ಮೂಲಕ ಸಂಶೋಧನೆ ನಡೆಸಿ ಧಾರ್ಮಿಕ ಮತ್ತು ತತ್ವಜ್ಞಾನವನ್ನು ವಿಸ್ತರಿಸಿದರು. ಆಧುನಿಕ ಕಾಲದಲ್ಲಿ, ಗ್ರಂಥಾಲಯಗಳು ಸಾಮಾಜಿಕ ಸಮಾನತೆ, ಜೀವಮಾನಪೂರ್ತಿ ಕಲಿಕೆ (Lifelong Learning), ಮತ್ತು ಡಿಜಿಟಲ್ ಸಾಕ್ಷರತೆ ಉತ್ತೇಜನದ ಕೇಂದ್ರಗಳಾಗಿವೆ.

**6. ಭಾರತದಲ್ಲಿನ ಗ್ರಂಥಾಲಯ ಅಭಿವೃದ್ಧಿಯ ಸವಾಲುಗಳು :**

1. **ಹಣಕಾಸಿನ ಕೊರತೆ** – ಸಾರ್ವಜನಿಕ ಗ್ರಂಥಾಲಯಗಳ ನಿರ್ವಹಣೆಗೆ ಅಗತ್ಯವಾದ ಸಂಪನ್ಮೂಲಗಳ ಕೊರತೆ.

2. **ಡಿಜಿಟಲ್ ಅಂತರ (Digital Divide)** – ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಮತ್ತು ತಂತ್ರಜ್ಞಾನ ಪ್ರಾಪ್ಯತೆ ಕಡಿಮೆ.

3. **ಪರಿಣತ ಗ್ರಂಥಪಾಲಕರ ಕೊರತೆ** – ತರಬೇತಿ ಮತ್ತು ನವೀಕರಣದ ಅಗತ್ಯ.

4. **ಪುಸ್ತಕ ಓದುವ ಅಭ್ಯಾಸದ ಕುಸಿತ** – ಸ್ಮಾರ್ಟ್ಫೋನ್ಗಳು ಮತ್ತು ಸಾಮಾಜಿಕ ಮಾಧ್ಯಮಗಳಿಂದ ಓದು ಪ್ರಮಾಣ ಕಡಿಮೆಯಾಗಿದೆ.

**7. ಭವಿಷ್ಯದ ಗ್ರಂಥಾಲಯ ವ್ಯವಸ್ಥೆ**

ಭವಿಷ್ಯದ ಗ್ರಂಥಾಲಯಗಳು Smart Libraries ಆಗಿರಲಿವೆ — Artificial Intelligence, Virtual Reality ಮತ್ತು Cloud Computing ಆಧಾರಿತವಾಗಿ ಕಾರ್ಯನಿರ್ವಹಿಸುವ ಕೇಂದ್ರಗಳು.

- AI ಆಧಾರಿತ ಶಿಫಾರಸು ವ್ಯವಸ್ಥೆಗಳು ಓದುಗರ ಆಸಕ್ತಿಗೆ ತಕ್ಕಂತೆ ಪುಸ್ತಕಗಳನ್ನು ಸೂಚಿಸಲಿವೆ.
- Augmented Reality ಗ್ರಂಥಾಲಯಗಳು ಶಿಕ್ಷಣ ಮತ್ತು ಸಂಶೋಧನೆಗೆ ಹೊಸ ಅನುಭವ ನೀಡಲಿವೆ.
- Open Knowledge Network ಮೂಲಕ ಜ್ಞಾನವನ್ನು ಸರ್ವಜನೀನವಾಗಿ ಲಭ್ಯವಾಗುವಂತೆ ಮಾಡಲಾಗುತ್ತದೆ.

**8. ಪ್ರಾಚೀನ ಮತ್ತು ಆಧುನಿಕ ಗ್ರಂಥಾಲಯಗಳ ನಡುವಿನ ಸಂಬಂಧ**

ಆಧುನಿಕ ಗ್ರಂಥಾಲಯಗಳ ಮೂಲ ತತ್ವವೇ ಪ್ರಾಚೀನ ಗ್ರಂಥಾಲಯಗಳಿಂದ ಬಂದದ್ದು ಅವುಗಳೆಂದರೆ ಜ್ಞಾನ ಹಂಚಿಕೆ, ಸಂಗ್ರಹಣೆ ಮತ್ತು ಸಂರಕ್ಷಣೆ.

ಪ್ರಾಚೀನ ಗ್ರಂಥಾಲಯಗಳು ಆಧುನಿಕ ಗ್ರಂಥಾಲಯಗಳ ತತ್ವಶಾಸ್ತ್ರೀಯ ನೆಲೆಯನ್ನು ಹಾಕಿದುವು. ಇಂದಿನ ಗ್ರಂಥಾಲಯಗಳು ಆ ಪರಂಪರೆಯನ್ನು ತಂತ್ರಜ್ಞಾನದಿಂದ ಬಲಪಡಿಸಿವೆ.

**ಉಪಸಂಹಾರ :**

ಪ್ರಾಚೀನ ಮತ್ತು ಆಧುನಿಕ ಗ್ರಂಥಾಲಯಗಳು ಕಾಲ, ತಂತ್ರಜ್ಞಾನ ಮತ್ತು ಸಾಮಾಜಿಕ ಪರಿಸ್ಥಿತಿಗಳ ಪ್ರಕಾರ ಬದಲಾದರೂ, ಅವರ ಮೂಲ ಉದ್ದೇಶ "ಜ್ಞಾನವನ್ನು ಸಂಗ್ರಹಿಸಿ ಹಂಚುವುದು" ಅದು ಎಂದಿಗೂ ಅಚಲವಾಗಿದೆ. ಪ್ರಾಚೀನ ಗ್ರಂಥಾಲಯಗಳು ಮಾನವ ನಾಗರಿಕತೆಯ ಬೌದ್ಧಿಕ ಪಯಣದ ಆರಂಭವಾಗಿದ್ದರೆ, ಆಧುನಿಕ ಗ್ರಂಥಾಲಯಗಳು ಆ ಪಯಣವನ್ನು ಡಿಜಿಟಲ್ ಯುಗದತ್ತ ಮುಂದುವರಿಸುತ್ತಿವೆ.

ಇಂದಿನ ಸಮಾಜದಲ್ಲಿ ಗ್ರಂಥಾಲಯಗಳು ಕೇವಲ ಪುಸ್ತಕ ಸಂಗ್ರಹಾಲಯವಲ್ಲ; ಅದು ಜೀವಮಾನಪೂರ್ತಿ ಕಲಿಕೆಯ ಕೇಂದ್ರ, ಸಂಶೋಧನಾ ಪ್ರಯೋಗಾಲಯ ಮತ್ತು ಮಾಹಿತಿಯ ನ್ಯಾಯಸಮ್ಮತ ಹಂಚಿಕೆದಾರ. ಹೀಗಾಗಿ, ಪ್ರಾಚೀನ ಪರಂಪರೆಯ ಜ್ಞಾನಪಾವಿತ್ರ್ಯವನ್ನು ಕಾಯ್ದುಕೊಂಡು, ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಗ್ರಂಥಾಲಯ ವ್ಯವಸ್ಥೆಯೇ ಭವಿಷ್ಯದ ಭಾರತದ ಬೌದ್ಧಿಕ ಶಕ್ತಿ.

**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಗ್ರಂಥಾಲಯ ವ್ಯವಸ್ಥೆ :**

**ಗ್ರಂಥಾಲಯ ಉದ್ದೇಶ :**

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯವು ಉತ್ತಮ ಗ್ರಂಥಾಲಯವಾಗಿದ್ದು ಪ್ರಮುಖ ಉದ್ದೇಶಗಳನ್ನು ಹೊಂದಿದೆ.

1. ಓದುವ ಹವ್ಯಾಸಗಳನ್ನು ಉತ್ತೇಜಿಸುವುದು.
2. ಓದುಗನಿಗೆ ವಿಶೇಷ ಗೌರವ ಓದುಗನ ವಾಚನದ ಅಗತ್ಯಗಳನ್ನು ಪೂರೈಸುವುದು.
3. ಪ್ರತಿ ಓದುಗರಿಗೆ ಪುಸ್ತಕ ಮತ್ತು ಮಾಹಿತಿಯನ್ನು ಒದಗಿಸುವುದು.
4. ಗ್ರಂಥಾಲಯಕ್ಕೆ ಬೇಟಿ ನೀಡುವ ವ್ಯಕ್ತಿ ಯಾರೇ ಆಗಲಿ. ಆತ ಅಮೂಲ್ಯ ಅನನ್ಯ ವೈಕ್ತಿ ಎಂದು ಭಾವಿಸಿ, ಆತನ ಅಮೂಲ್ಯವಾದ ಸಮಯ ಪೋಲಾಗದಂತೆ ಕ್ರಮವಹಿಸುವುದು.
5. ಗ್ರಂಥಾಲಯವು ಒಂದು ಬೆಳೆಯುತ್ತಿರುವ ಸಂಸ್ಥೆ ಯಾಗಿದ್ದು ಅದನ್ನು ಅಭಿವೃದ್ಧಿಗೆ ಪೂರಕಗೊಳಿಸುವುದು.
6. ಗ್ರಂಥಾಲಯವನ್ನು ಗಣಕೀಕರಿಸುವುದು.

**ಗ್ರಂಥಾಲಯ ಸೇವೆಗಳು :**

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಉತ್ತಮ ಸೇವೆಯನ್ನು ಒದಗಿಸುತ್ತಾ ಬಂದಿರುತ್ತದೆ. ಈ ಕೆಳಗಿನ ಸೇವೆಗಳನ್ನು ನಮ್ಮ ಗ್ರಂಥಾಲಯದಲ್ಲಿ ಒದಗಿಸಲಾಗಿದೆ.

1. ಕೊಡುಕೊಳ್ಳುವಿಕೆ
2. ಪರಾಮರ್ಶ ಸೇವೆ
3. ಸ್ಕ್ಯಾನ್ ಮತ್ತು ಜೆರಾಕ್ಸ್ ಸೇವೆ
4. ಗಣಕಯಂತ್ರ ಮತ್ತು ಮುದ್ರಣ
5. ಮಾಹಿತಿ ಪ್ರಧರ್ಶನ ಮತ್ತು ಪ್ರಕಟಣೆ
6. ವೈ–ಪೈ ಲ್ಯಾನ್
7. ಲೈಬ್ರಿಯ ಯಾಂತ್ರೀಕೃತ
8. ಅಂತರ್ಜಾಲ ಬಳಕೆ
9. ಉದ್ಯೋಗ ಮತ್ತು ಮಾಹಿತಿ ಪ್ರದರ್ಶನ
10. ಹೊಸ ಆಗಮನದ ಪುಸ್ತಕಗಳ ಪ್ರಧರ್ಶಿಸುವು
11. ಓಪ್ಯಾಕ್
12. ಬುಕ್ ಬ್ಯಾಂಕ್ ಸೇವೆ
13. ಹಳೇಯ ಪ್ರಶ್ನೆಪತ್ರಿಕೆಗಳು
14. ಎನ್‌ಲಿಸ್ಟ್
15. ದಿನಪತ್ರಿಕೆಗಳ ಸಂಗ್ರಹ
16. ಸೂಚನಾ ಫಲಕ ಮಾಹಿತಿ ಪ್ರಧರ್ಶನ

**ಗ್ರಂಥಾಲಯದ ಸೌಲಭ್ಯಗಳು :**

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯವು ಸ್ಥಾಪನೆಯದದ್ದು 1996 ರಂದು ಆರಂಭದಲ್ಲಿ 1400 ಪುಸ್ತಕಗಳನ್ನು ಹೊಂದಿತ್ತು. ಗ್ರಂಥಾಲಯವು ಸ್ಥಿರವಾಗಿ ಬೆಳೆದಿದೆ ಮತ್ತು ಇಂದು 13713 ಪುಸ್ತಕಗಳನ್ನು ಮತ್ತು 10 ನಿಯತಕಾಲಿಕೆಗಳನ್ನು ಮತ್ತು 09 ದಿನ ಪತ್ರಿಕೆಗಳನ್ನು ಹೊಂದಿದೆ ಗ್ರಂಥಾಲಯದಲ್ಲಿ 12 ಕಂಪ್ಯೂಟರ್ ಸೌಲಭ್ಯವನ್ನುಹೊಂದಿದೆ. ಲಿಬ್‌ಸಾಫ್ಟ್ ಸಾಫ್ಟ್ ವೇರ್ ಸೌಲಭ್ಯ, ಅಂತರ್ಜಾಲ ವ್ಯವಸ್ಥೆ, ವೈ–ಪೈ, ಸಂಪನ್ಮೂಲ ಕೇಂದ್ರ, ಸೌಲಭ್ಯವನ್ನು ಹೊಂದಿರುತ್ತದೆ.

**ಗ್ರಂಥಾಲಯದ ಉಪಯೋಗ :**

ನಮ್ಮ ಗ್ರಂಥಾಲಯದಲ್ಲಿ ಪುಸ್ತಕಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಎಲೆಕ್ಟ್ರಾನಿಕ್ ಸಂಪನ್ಮೂಲಗಳನ್ನು ಒದಗಿಸುತ್ತದೆ .ಎಲ್ಲಾ ವಿಷಯಗಳು ಮತ್ತು ವಿಭಾಗಗಳಲ್ಲಿ ಕಲಿಕೆಯನ್ನು ಬೆಂಬಲಿಸುತ್ತದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಪಠ್ಯಪುಸ್ತಕಗಳು, ಉಲ್ಲೇಖ ಸಾಮಗ್ರಿಗಳು ಮತ್ತು ಅಧ್ಯಯನ ಸಾಧನಗಳೊಂದಿಗೆ ಸಹಾಯ ಮಾಡುತ್ತದೆ.ತರಗತಿಯ ಕಲಿಕೆ ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ವಿದ್ವಾಂಸಾತ್ಮಕ ನಿಯತಕಾಲಿಕೆಗಳು, ಸಂಶೋಧನಾ ವರದಿಗಳು, ಪ್ರಬಂಧಗಳು ಮತ್ತು ಡೇಟಾಬೇಸ್‌ಗಳನ್ನು ನೀಡುತ್ತದೆ. ವಿಶ್ವಾಸಾರ್ಹ ಮತ್ತು ಅಧಿಕೃತ ಮಾಹಿತಿಯನ್ನು ಹುಡುಕುವಲ್ಲಿ ಸಂಶೋಧಕರಿಗೆ ಸಹಾಯ ಮಾಡುತ್ತದೆ. ಆನಂದ ಮತ್ತು ಆಜೀವ ಕಲಿಕೆಗಾಗಿ ಓದುವುದನ್ನು ಪ್ರೋತ್ಸಾಹಿಸುತ್ತದೆ. ವಿಮರ್ಶಾತ್ಮಕ ಚಿಂತನೆ ಮತ್ತು ಕಲ್ಪನೆಯನ್ನು ಅಭಿವೃದ್ಧಿಪಡಿಸುತ್ತದೆ. ಇ–ಪುಸ್ತಕಗಳು, ಇ–ಜರ್ನಲ್‌ಗಳು, ಆನ್‌ಲೈನ್ ಡೇಟಾಬೇಸ್‌ಗಳು ಮತ್ತು ಇಂಟರ್ನೆಟ್ ಪ್ರವೇಶವನ್ನು ಒದಗಿಸುತ್ತದೆ. ಓದುವುದು, ಅಧ್ಯಯನ ಮಾಡುವುದು ಮತ್ತು ಗುಂಪು ಚರ್ಚೆಗಳಿಗೆ ಶಾಂತ ವಾತಾವರಣವನ್ನು ನೀಡುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳು, ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿ ಮಾರ್ಗದರ್ಶನಕ್ಕಾಗಿ ಸಂಪನ್ಮೂಲಗಳನ್ನು ಒದಗಿಸುತ್ತದೆ

**ಗ್ರಂಥಾಲಯದಲ್ಲಿನ ಒಟ್ಟು ಸಂಗ್ರಹ :**

ಪುಸ್ತಕಗಳು : 13713, ಶಿಕ್ಷಣ ನಿಯತಕಾಲಿಕೆಗಳು :10, ಮಾಸ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು : 05, ದಿನ ಪತ್ರಿಕೆಗಳು : 06

**ಉಪಸಂಹಾರ :**

ಗ್ರಂಥಾಲಯವು ಮಾನವ ನಾಗರಿಕತೆಯಜ್ಞಾನ ಭಂಡಾರವಾಗಿದೆ.ಅದರಇತಿಹಾಸವು ಮಾನವ ಬೌದ್ಧಿಕ ಅಭಿವೃದ್ಧಿಯ ಇತಿಹಾಸದೊಂದಿಗೆ ನೇರವಾಗಿ ಸಂಬಂಧಿಸಿದೆ. ಪ್ರಾಚೀನ ಕಾಲದಿಂದ ಡಿಜಿಟಲ್‌ಯುಗದವರೆಗೂ ಗ್ರಂಥಾಲಯಗಳು ಶಿಕ್ಷಣ, ಸಂಶೋಧನೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಅಪಾರಕೊಡುಗೆ ನೀಡಿವೆ. ಮಾಹಿತಿ ಸ್ಫೋಟದ ಈ ಯುಗದಲ್ಲಿ ಗ್ರಂಥಾಲಯಗಳ ಪಾತ್ರ ಇನ್ನಷ್ಟು ಮಹತ್ವ ಪಡೆದುಕೊಂಡಿದ್ದು, ಜ್ಞಾನವನ್ನು ವ್ಯವಸ್ಥಿತವಾಗಿ ಮತ್ತು ನಂಬಿಗಸ್ತವಾಗಿ ಒದಗಿಸುವ ಕೇಂದ್ರಗಳಾಗಿ ಅವು ಮುಂದುವರಿಯುತ್ತವೆ. ಆದ್ದರಿಂದ ಗ್ರಂಥಾಲಯಗಳ ಅಭಿವೃದ್ಧಿ ರಾಷ್ಟ್ರದ ಬೌದ್ಧಿಕ ಪ್ರಗತಿಯ ಸೂಚಕವಾಗಿದೆ.

**ಆಧಾರ ಗ್ರಂಥಗಳು :**

1. Ranganathan, S. R. (1931). Five Laws of Library Science. Madras Library Association.
2. Kumar, P. S. G. (2008). Foundations of Library and Information Science.
3. UNESCO (2020). Public Library Manifesto.
4. Government of India. National Mission on Libraries (NML). Ministry of Culture.
5. Murthy, T. A. V. (2010). Digital Libraries in India: A Review.
6. Encyclopaedia Britannica. Entries on Ancient Libraries and Library Science.
7. Roy, B. & Sharma, N. (2019). Evolution of Library Systems in India. Journal of Library Studies.
8. Website: https://www.nationallibrary.gov.in

# ಕನ್ನಡದಲ್ಲಿ ತಂತ್ರಜ್ಞಾನದ ಮಹತ್ವ

**ಶ್ರೀಮತಿ ಕವಿತಾ ಹರವಿಶೆಟ್ಟರ್**
ಸಹಾಯಕ ಗ್ರಂಥಪಾಲಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
Kavithahm82@gmail.com

ಕನ್ನಡವನ್ನು ಕಂಪ್ಯೂಟರೀಕರಣಗೊಳಿಸಬೇಕು.ಈ ಭಾಷೆಯನ್ನು ತಂತ್ರಜ್ಞಾನದಲ್ಲಿ ಬಳಸುವಂತಾದರೆ ಮಾತ್ರ ಕನ್ನಡದ ಅಸ್ತಿತ್ವ ಉಳಿದು, ಮುಂದುವರಿಯಲು ಸಾಧ್ಯವೆಂಬ ಅರಿವು ಈಗ ಹೆಚ್ಚುತ್ತಿದೆ.ತಂತ್ರಜ್ಞಾನದಲ್ಲಿ ಭಾಷೆಯ ಬಳಕೆ ಚೆನ್ನಾಗಿ ಆಗಬೇಕು.ಇದರಿಂದ ಭಾಷೆಯ ಅಭಿವೃದ್ದಿಯೂ ಆಗುತ್ತದೆ. ಈ ನಿಟ್ಟಿನಲ್ಲಿ ಹೊಸ ಆವಿಷ್ಕಾರಗಳಿಗೆ ರಾಜ್ಯ ಸರ್ಕಾರ ಎಲ್ಲ ರೀತಿಯ ಬೆಂಬಲ ನೀಡಬೇಕು.ಕೋವಿಡ್ ಸಾಂಕ್ರಮಿಕದ ನಂತರ ಶಿಕ್ಷಣ ಮತ್ತು ಕಲಿಕಾ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳಾಗಿವೆ.ಈ ಬದಲಾವಣೆಗೆ ತಕ್ಕಂತೆ ತಂತ್ರಜ್ಞಾವು ಮಹತ್ತರವಾಗಿ ಬದಲಾಗಿದೆ,

ಕನ್ನಡ ಭಾಷೆಯ ಕಲಿಕೆಯಲ್ಲಿ ಪುಟ್ಟ ಹುಡುಗಿಯೊಬ್ಬಳು ಗಣಕದ ಪರದೆಯ ಮೇಲೆ ಮೂಡಿಬಂದ ಕನ್ನಡದ 'ಆ' ಎಂಬ ಅಕ್ಷರದ ತುಂಡುಗಳನ್ನು ಸರಿಯಾಗಿ ಜೋಡಿಸುತ್ತಿದ್ದಾಳೆ.ಅಕ್ಷರವನ್ನು ಪೂರ್ತಿಯಾಗಿ ಜೋಡಿಸಿದಾಗ ಶಬ್ಬಾಶ್ ಎಂಬ ಧ್ವನಿ ಕೇಳಿ ಬರುತ್ತದೆ ಈಗ 'ಆ' ಆಕ್ಷರದ ಕೆಳಗೆ ಮೂಡಿ ಬಂದಿರುವ ಸ್ಪೀಕರಿನ ಚಿತ್ರದ ಮೇಲೆ ಮೌಸಿಂದ ಕ್ಲಿಕ್ ಮಾಡಿದಾಗ ಗಣಕದ ಪರದೆಯ ಮೇಲೆ 'ಅ' ಅಕ್ಷರದಿಂದ ಆರಂಭವಾಗುವ 'ಅಮ್ಮ' ಎನ್ನುವ ಪದ ಮತ್ತು ಅಮ್ಮನ ಚಿತ್ರ ಮೂಡಿ ಬರುತ್ತದೆ.ಅಮ್ಮ ಎನ್ನುವ ಪದದ ಮೇಲೆ ಕ್ಲಿಕ್ ಮಾಡಿದಾಗ ಗಣಕದ ಸ್ಪೀಕರಿನಿಂದ 'ಅಮ್ಮ' ಎನ್ನುವ ಪದದ ಉಚ್ಚಾರ ಕೇಳಿಸುತ್ತದೆ.ಹೀಗೆ ಆ ಹುಡುಗಿ ಗಣಕದಲ್ಲಿ ಆಟವೊಂದನ್ನು ಆಡುವ ಮೂಲಕ ಕನ್ನಡ ಅಕ್ಷರಗಳನ್ನು ಕಲಿಯುತ್ತಾಳೆ.

ಪ್ರಸ್ತುತವಾಗಿ ಡಾ.ರಾಜ್‌ಕುಮಾರ್ ಲರ್ನಿಂಗ್ ಆಫ್ ಕೂಡ ಕನ್ನಡದ ತಂತ್ರಜ್ಞಾನ ಆಧಾರಿತವಾದ ಕಲಿಕಾ ಉಪಕರಣವಾಗಿದೆ.ಇದು ಕನ್ನಡದ ಖ್ಯಾತ ಚಲನಚಿತ್ರ ನಟ ದಿ ಪುನೀತ್ ರಾಜ್ ಕುಮಾರ್ ಅವರ ನೇತೃತ್ವದಲ್ಲಿ ಲೋಕಾರ್ಪಣೆಗೊಂಡಿತು.ಈ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ನಾಗರಿಕರ ಸಬಲೀಕರಣ ಹಾಗೂ ಸರ್ವರನ್ನೊಳಗೊಂಡ ಜಾಗೃತ ಮತ್ತು ಸುಸ್ಥಿರ ಸಮಾಜವು ರಾಜ್ಯದಾದ್ಯಂತ ಬೆಳೆಯಲು ಅನುವಾಗುವಂತೆ ಹಲವಾರು ವಿಜ್ಞಾನ ಮತ್ತು ತಂತ್ರಜ್ಞಾನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಂಡು ಬರುತ್ತಿವೆ.

**ತಂತ್ರಜ್ಞಾನದ ಉಪಯೋಗಗಳು :**

**1. ಕನ್ನಡ ಭಾಷೆಯಲ್ಲಿ ಮಾಹಿತಿ ಮತ್ತು ಜ್ಞಾನ ಸುಲಭ ಪ್ರವೇಶವನ್ನು ನೀಡುತ್ತದೆ:**

ತಾಂತ್ರಿಕ ಪ್ರಗತಿಗಳು ಜನರಿಗೆ ವಿವಿಧ ಮಾಹಿತಿಯ ಮೂಲಗಳನ್ನು ತ್ವರಿತವಾಗಿ ಪ್ರವೇಶಿಸಲು ಅವಕಾಶ ಮಾಡಿ ಕೊಟ್ಟಿವೆ.ಇದರಿಂದ ಅಂತರ್ಜಾಲದ ಆವಿಷ್ಕಾರವಾಯಿತು.ಅಂತರ್ಜಾಲಕ್ಕೆ ಮುಂಚಿತವಾಗಿ ಮಾಹಿತಿಗೆ ಹೆಚ್ಚು ಅಥವಾ ಕಡಿಮೆ ನಿರ್ಬಂದಿತ ಪ್ರವೇಶ ಮಾತ್ರವಿದ್ದಿತು.ಏಕೆಂದರೆ ಇದನ್ನು ಗ್ರಂಥಾಲಯಗಳಿಗೆ ಹಾಜರಾಗುವುದರಿಂದ ಮಾತ್ರ ಪಡೆಯಬಹುದಾಗಿತ್ತು ಎಲ್ಲರೂ ಪುಸ್ತಕದಂಗಡಿ ಅಥವಾ ಗ್ರಂಥಾಲಯಕ್ಕೆ ಹೋಗಲು ಸಾಧ್ಯವಿಲ್ಲ ಆದರೆ ಈಗ ಮನೆಯಿಂದ ನಮಗೆ ಬೇಕಾದ ಎಲ್ಲ ಪುಸ್ತಕಗಳನ್ನು ಇಂಟರ್ನೆಟ್ ಮೂಲಕ ಪಡೆಯಬಹುದು.ಅನೇಕ ವೃತ್ತಿಪರರು ತಮ್ಮ ಸಂಶೋಧನೆಯನ್ನು ನಡೆಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದರು.ಇಂದು ಹೆಚ್ಚಿನ ಸಂಖ್ಯೆಯಲ್ಲಿ ಎಲೆಕ್ಟ್ರಾನಿಕ್ ಕಾರ್ಯವಿಧಾನಗಳಿಂದ ಹೊಂದಿದ್ದು ಅವರ ಕೆಲಸಕ್ಕೆ ಅದು ಅಗತ್ಯವಾದ ಗ್ರಂಥ ಸೂಚಿಯನ್ನು ಆಯಾ ಭಾಷೆಯಲ್ಲಿ

ತ್ವರಿತವಾಗಿ ಪಡೆಯಲು ಅನುವು ಮಾಡಿ ಕೊಡುತ್ತದೆ ಇದರಲ್ಲೇ ಯಾರಾದರೂ ಆನ್‌ಲೈನ್ ಕೋರ್ಸ ತೆಗೆದುಕೊಳ್ಳಬಹುದು ಮತ್ತು ಅವರು ತಿಳಿದುಕೊಳ್ಳಲು ಬಯಸುವ ಯಾವುದೇ ವಿಷಯದ ಬಗ್ಗೆ ಕಲಿಯಬಹುದು.

2. **ಆಯಾ ಭಾಷೆಯಲ್ಲಿ ತ್ವರಿತವಾಗಿ ಸಂವಹನ ಮಾಡುವ ಸಾಧ್ಯತೆ :** ಪ್ರಸ್ತುತ ತಂತ್ರಜ್ಞಾನವು ಪ್ರಪಂಚದಾದ್ಯಂತ ಜನರು ಮತ್ತು ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಕಾಪಾಡಿಕೊಳ್ಳಲು ನಮಗೆ ಅನುಮತಿಸುತ್ತದೆ.ಇದು ಉದ್ಯಮಿಗಳಿಗೆ ಮತ್ತು ವಿಭಿನ್ನ ಕಂಪನಿಗಳಿಗೆ ಅನುಕೂಲಕರವಾಗಿದೆ. ಏಕೆಂದರೆ, ಅವರು ತಮ್ಮ ಗ್ರಾಹಕರೊಂದಿಗೆ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಸಂವಹನ ನಡೆಸಬಹುದು. ಈಗ ಉತ್ಪನ್ನಗಳನ್ನು ಖರೀದಿಸಲು ಹೊರಹೋಗುವ ಅಗತ್ಯವಿಲ್ಲ.ಏಕೆಂದರೆ ಪದಾರ್ಥಗಳನ್ನು ಗ್ರಾಹಕರು ತಮ್ಮ ಸಾಧನದಿಂದ ಕೇವಲ ಒಂದು ಕ್ಲಿಕ್ ನಲ್ಲಿ ಮನೆಗೆ ತರಿಸಿಕೊಳ್ಳಬಹುದು ಜಾಹಿರಾತು ಅಥವಾ ಮಾರ್ಕೆಟಿಂಗ್ ನಂತಹ ವಿಭಾಗಗಳು ತಮ್ಮ ಅಭಿವೃದ್ದಿಯನ್ನು ವರ್ಚುವಲ್ ಫ್ಲಾಟ್ ಫಾರ್ಮಗಳಿಂದ (ಸಾಮಾಜಿಕ ನೆಟ್ ವರ್ಕಗಳು,ವೆಬ್ ಪುಟಗಳು ಇತ್ಯಾದಿಗಳಿಂದ) ಹೆಚ್ಚಿಸಲು ಸಮರ್ಥವಾಗಿವೆ. ಇದರ ರಚನೆಯು ವೈಜ್ಞಾನಿಕ ಜ್ಞಾನದ ಮೂಲಕ ಸಾಧ್ಯವಾಯಿತು.

**3.ಸ್ವಯಂ ಕಲಿಕೆಗೆ ಉತ್ತೇಜನ :** ತಂತ್ರಜ್ಞಾನವು ಜನರಿಗೆ ಹೆಚ್ಚಿನ ಬಿಡುವು ಸಮಯ ಇರುವಂತೆ ಅನುವು ಮಾಡಿಕೊಡುತ್ತದೆ.ಈಗ ಸ್ವಯಂ ಅದುವರೆಗೆ ಕಾರು ಚಾಲನೆ,ಓದು ಬರಹ,ಸಂಗೀತ ಮುಂತಾದ ತಿಳಿಯದ ವಿಷಯವನ್ನು ಸ್ವಯಂ ಆಗಿ ಚೆನ್ನಾಗಿ ಕಲಿಯಲು ತಂತ್ರಜ್ಞಾನ ಅನುವು ಮಾಡಿಕೊಡುತ್ತದೆ.

**4.ಮಾತೃಭಾಷೆಯ ಜಾಗತೀಕರಣ :** ಜಗತ್ತು ಎಂದಿಗಿಂತಲೂ ಇಂದು ವ್ಯಾಪಕವಾಗಿ ಸಂಪರ್ಕದ ಹಂತದಲ್ಲಿದೆ ಡಿಜಿಟಲ್ ತಂತ್ರಜ್ಞಾನವು ಬೇರೆ ಪ್ರಪಂಚದ ಜನರು,ರಾಷ್ಟ್ರಗಳು ಮತ್ತು ಸಂಸ್ಕೃತಿಗಳನ್ನು 'ಭೇಟಿ'ಮಾಡಲು ನಮಗೆ ಅವಕಾಶವನ್ನು ನೀಡಿದೆ.ನಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನು ಎಲ್ಲಿಯೋ ದೂರದ,ಸಪ್ತಸಾಗರದಾಚೆಗಿನ ನಾಗರಿಕ ಜಗತ್ತಿಗೂ ಪರಿಚಯಿಸಲು ಮತ್ತು ಅದನ್ನು ಅವರು ಇಷ್ಟಪಟ್ಟು ಕಲಿಯಲು ಅವಕಾಶಗಳನ್ನು ತೆರೆದಿಡುತ್ತದೆ.

**5.ಬೇರೆ ಭಾಷೆಯ ತರ್ಜುಮೆ ಮಾಡಿ ನಮ್ಮ ಭಾಷೆಯ ಮೂಲಕ ಅರ್ಥೈಸಿಕೊಳ್ಳುವುದು :** ನಮಗೆ ನಮ್ಮ ಭಾಷೆಯ ಜ್ಞಾನವಷ್ಟೇ ಅಲ್ಲದೆ ಪರಭಾಷೆಯ ಸೊಗಡು ಮತ್ತು ಅವರ ಅವಶ್ಯಕತೆಗಳನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ಅರಿತು, ಕಲಿತು, ಕುಳಿತಲ್ಲಿಯೇ ಅನೇಕ ವಿಷಯಗಳನ್ನು ಮನನ ಮಾಡಿಕೊಳ್ಳಬಹುದು.ಇದು ವ್ಯಾಪಾರೀ ಜಗತ್ತಿಗೆ ವರದಾನವಾಗಿದೆ.

**6.ಕನ್ನಡ ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ತಂತ್ರಜ್ಞಾನದ ಬಳಕೆ (ಪ್ರೊಜೆಕ್ಟರ್ ಮೂಲಕ ಕಲಿಕೆ) :** ತಂತ್ರಜ್ಞಾನದ ಬಳಕೆಯಿಂದ ಮಕ್ಕಳಿಗೆ ಪಾಠ ಕಲಿಯಲು ಸುಲಭವಾಯಿತು.ತಂತ್ರಜ್ಞಾನವನ್ನು ಬೋಧನೆ ಮತ್ತು ಕಲಿಕೆಗಳೆರಡನ್ನು ಬೆಂಬಲಿಸಲು ಬಳಸಲಾಗುತ್ತದೆ.ತರಗತಿಗಳಲ್ಲಿ ಕಂಪ್ಯೂಟರ್ ಜೊತೆ ಡಿಜಿಟಲ್ ಕಲಿಕೆಯನ್ನೂ ಪರಿಚಯಿಸಲಾಗುತ್ತಿದೆ. ಇಂತಹ ಸೌಲಭ್ಯಗಳು ವಿಧ್ಯಾರ್ಥಿಗಳ ಭಾಗವಹಿಸುವಿಕೆ ಮತ್ತು ಇತರ ತಂತ್ರಜ್ಞಾನಗಳ ಬಳಕೆಯಿಂದ ಕಲಿಕೆ ಹೆಚ್ಚು ಉತ್ಪಾದನಾ ಶೀಲವಾಗುತ್ತದೆ.

**7.ಕನ್ನಡದ ಪ್ರಾದೇಶಿಕ ವೈವಿಧ್ಯತೆಯ ಸೊಗಡನ್ನು ಅರಿಯಲು ತಂತ್ರಜ್ಞಾನದ ಬಳಕೆ :** ತಂತ್ರಜ್ಞಾನದ ಬಳಕೆಯಿಂದ ಇಂದು ಸಂವಹನ ಅತ್ಯಂತ ಸುಲಭವಾಗಿದೆ.ಮೊಬೈಲ್,ದೂರವಾಣಿಗಳಂತಹ ಅನನ್ಯ ಸಾಧನಗಳನ್ನು ಪರಿಚಯಿಸಲಾಗಿ,ಇವುಗಳ ಸಹಾಯದಿಂದ ಎಷ್ಟೇ ದೂರದಲ್ಲಿದ್ದರೂ ಜನರು ಒಬ್ಬರಿಗೊಬ್ಬರು ಸಂಪರ್ಕವಿಟ್ಟುಕೊಳ್ಳುವುದು ಸುಲುಭವಾಗಿದೆ.ಉದಾ; ಧಾರವಾಡ ಕನ್ನಡಿಗರು ಬೆಂಗಳೂರು ಕನ್ನಡಿಗರ ಜೊತೆ ಸಂಪರ್ಕ ಬೆಳೆಸಿದಾಗ,ಒಂದೇ ಭಾಷೆಯ ಇಬ್ಬರಿಗೂ ಆಗುವ ಪರಸ್ಪರ ಭಾಷಾ ಸೊಗಡಿನ ವೈವಿಧ್ಯತೆಯ ಅರಿವಾಗುತ್ತದೆ.ಇದು ಒಂದು ಸಣ್ಣ ಉದಾಹರಣೆ ಮಾತ್ರ.

**8.ವ್ಯವಸಾಯಕ್ಕಾಗಿ ಕನ್ನಡ ಭಷೆಯಲ್ಲಿ ತಂತ್ರಜ್ಞಾನದ ಬಳಕೆ :** ವ್ಯವಸಾಯದ ಅನುಕೂಲಕ್ಕಾಗಿ ಕನ್ನಡ ಭಾಷೆ ಅಥವಾ ಮಾತೃಭಾಷೆಯಲ್ಲಿ ತಂತ್ರಜ್ಞಾನವು ಕೃಷಿ ಉದ್ಯಮ ಬೆಳೆಸುವಲ್ಲಿ ದೊಡ್ಡ ಪಾತ್ರವಹಿಸಿದೆ.ಸಸ್ಯಗಳು ಬರ ಪರಿಸ್ಥಿತಿಯಲ್ಲಿಯೂ ಬದುಕುವುದು ತಂತ್ರಜ್ಞಾನದಿಂದ ಸಾಧ್ಯವಾಗಿದೆ.ಕೆಲವೊಂದು ಬೆಳೆಗಳ ಬಗ್ಗೆ ಕನ್ನಡದಲ್ಲಿಯೇ ಮಾಹಿತಿಯನ್ನು ಅರಿಯಲು ಈ ತಂತ್ರಜ್ಞಾನ ಬಹಳಷ್ಟು ಸಹಕಾರಿಯಾಗಿದೆ.

**ಕನ್ನಡದ ಪತಾಕೆ ಹಾರಿಸುತ್ತಿರುವ ತಂತ್ರಾಂಶಗಳು**

ಕನ್ನಡ ಕುರಿತಾದ ವಿವಿಧ ತಂತ್ರಾಂಶ,ನಿಘಂಟು,ಕೀಬೋರ್ಡ,ಆಪ್‌ಗಳು....ಹೀಗೆ ಕನ್ನಡಕ್ಕೆ ಸಂಭಂದಿಸಿದ ಸಾಕಷ್ಟು ಟೂಲ್‌ಗಳಿವೆ.

**ನಿಘಂಟುಗಳು ಮತ್ತು ಜ್ಞಾನಕೋಶ**

1.**ಅಲರ್** ( **Alar.ink**) ಇದು ಅತ್ಯಂತ ಜನಪ್ರಿಯ ಮತ್ತು ಬಳಸಲು ಸುಲಭ ಆನಲೈನ್ ನಿಘಂಟು

2.**ಪದಕಣಜ**(**Padakanaja** )ಕರ್ನಾಟಕ ಸರ್ಕಾರದ ಅಧಿಕೃತ ನಿಘಂಟು ಜಾಲತಾಣ.

3.**ಬರಹ**(**Baraha**) ಬರಹ ತಂತ್ರಾಂಶವು ತನ್ನೊಳಗೆ ಒಂದು ನಿಘಂಟನ್ನು ಸಹ ಒಳಗೊಂಡಿದೆ.

**ಕನ್ನಡ ಟೈಪಿಂಗ್ ಮತ್ತು ಕೀಬೋರ್ಡಗಳು**

1. **ವಿಂಡೋಸ್**(**windos**) ; ಕರ್ನಾಟಕ ಸರ್ಕಾರದ 'ನುಡಿ' ತಂತ್ರಾಂಶ,ಬರಹ ಸಾಫ್ಟವೇರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೈಕ್ರೋಸಾಫ್ಟನ ಇನ್‌ಬಿಲ್ಟ್ ಕನ್ನಡ ಇನ್ಪುಟ್ ಕನ್ನಡ (ಫೋನೆಟಿಕ್/ಇನ್ ಸ್ಕ್ರಿಪ್ಟ್)ಲಭ್ಯವಿದೆ.

2. **ಮ್ಯಾಕ್**(**Mac**); ಆಪಲನ ಸ್ವಂತ ಕನ್ನಡ ಕೀಬೋರ್ಡ್ ಹಾಗೂ ನುಡಿ ತಂತ್ರಾಶವನ್ನು ಬಳಸಬಹುದು. ಮ್ಯಾಕ್ ಓಸ್ ಈ ಕೀಬೋರ್ಡ್‌ನಲ್ಲಿ ಕನ್ನಡವನ್ನು ಸುಲಭವಾಗಿ ಟೈಪ್ ಮಾಡಿಕೊಡಲು ಅನುವು ಮಾಡಿಕೊಡುತ್ತದೆ.

3.**ಆಂಡ್ರಾಯ್ಡ್**(**Android**); ಗೂಗಲ್‌ನ 'ಜಿಬೋಡ್' ಅತ್ಯಂತ ಜನಪಿಯವಾಗಿದ್ದು ಇದು ಫೊನೆಟಿಕ್(ಟ್ರಾನ್ಸ್‌ಲಿಟರೇಶನ್ ) ಬೆಂಬಲಿಸುತ್ತದೆ.ಜೊತೆಗೆ ಜಸ್ಟ್ ಕನ್ನಡ ಮತ್ತು ಸ್ವಿಫ್ಟ್‌ಕೀ ಕೂಡ ಉತ್ತಮ ಆಯ್ಕೆಗಳು.

4. **ಐಫೋನ್**(**iPhone**); ಆಪಲ್ ನ ಇನ್‌ಬಿಲ್ಟ್‌ಕನ್ನಡ ಕೀಬೋರ್ಡ ಹಾಗೂ 'ತೇಜಸ್ವಿ ಕನ್ನಡ' ಆಪ್ ಲಭ್ಯವಿದೆ.

5 .**ಟ್ರಾನ್ಸ್‌ಲಿಟರೇಶನ್** ;ಹೆಚ್ಚಿನ ಕೀಬೋರ್ಡ ಗಳು(ಗೂಗಲ್,ಆಪಲ್) ಇಂಗ್ಲಿಷ್ನಲ್ಲಿ ಟೈಪ್ ಮಾಡಿದರೆ ಕನ್ನಡಕ್ಕೆ ತಿರುಗಿಸುವ ಸೌಲಭ್ಯವನ್ನು ಹೊಂದಿವೆ.'ಕಣಜ' ಪೋರ್ಟಲ್‌ನಲ್ಲಿಯು ಈ ಸೌಲಭ್ಯವಿದೆ.

**ಇ–ಪುಸ್ತಕಗಳು ಮತ್ತು ಆಡಿಯೋ ಪುಸ್ತಕಗಳು :**

**ಇ–ಪುಸ್ತಕಗಳು;** 'ಮೈಲಾಂಗ್(MyLang) ಆಪ್,'ಋತುಮಾನ'ಆನಲೈನ್ ಪತ್ರಿಕೆ.'ಗೂಗಲ್‌ಪ್ಲೇ ಬುಕ್'ಮತ್ತು ಸರ್ಕಾರದ 'ಕಣಜ' ಪೋರ್ಟಲ್ ನಲ್ಲಿ ಸಾವಿರಾರು ಇ–ಪುಸ್ತಕಗಳು ಲಭ್ಯ.

**ಆಡಿಯೋಪುಸ್ತಕಗಳು** : ಕನ್ನಡದ ಆಡಿಯೋಪುಸ್ತಕಗಳನ್ನು ಕೇಳಲು 'ಮೈಲಾಂಗ್ ಆಡಿಯೋ'ಕೇಳಿಕತೆಯ'ಮತ್ತು 'ಆಲಿಸಿರಿ'ಯಂತಹ ಆಪ್‌ಗಳು ಜನಪ್ರಿಯವಾಗಿವೆ.

**ಚಿತ್ರದಿಂದ ಅಕ್ಷರಕ್ಕೆ,(OCR) ಧ್ವನಿ ತಂತ್ರಜ್ಞಾನ**

**ಒಸಿಆರ್(ಚಿತ್ರದಿಂದ ಅಕ್ಷರಕ್ಕೆ)** : ಮುದ್ರಿತ ಅಥವಾ ಚಿತ್ರದಲ್ಲಿರುವ ಕನ್ನಡ ಪಠ್ಯವನ್ನುಡಿಜಿಟಲ್ ಅಕ್ಷರಗಳಾಗಿ ಪರಿವರ್ತಿಸಲು 'ಗೂಗಲ್ ಲೆನ್ಸ್'ಅತ್ಯಂತ ಸುಲಭ ಮಾರ್ಗ. ಜೊತೆಗೆ 'ಸಂಚಯ'ದಂತಹ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡಿವೆ.'ಅಕ್ಷರಟೈಪ್ ಸ್ಟುಡಿಯೋ' ಕೂಡ ಲಭ್ಯವಿದೆ.

**ಇಲೆವೆನ್ ಲ್ಯಾಬ್ಸ್ ಪಠ್ಯದಿಂದ ಧ್ವನಿಗೆ** ; ಕನ್ನಡ ಪಠ್ಯವನ್ನು ಸ್ಪಷ್ಟವಾಗಿ ಓದಲು'ಇಲೆವೆನ್‌ಲ್ಯಾಬ್ಸ್'ನಂತಹ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬಹುದು.ಕೃತಕಬುದ್ದಿಮತ್ತೆಯನ್ನುಬಳಸಿ ಸುಲಭವಾಗಿಕನ್ನಡ ಪಠ್ಯವನ್ನು ಭಾಷಣಕ್ಕೆ ಪರಿವರ್ತಿಸಬಹುದು.

**ಭವಿಷ್ಯದ ಭರವಸೆ; ಏಐ(AI) ಮತ್ತು ಕನ್ನಡ**

ತಂತ್ರಜ್ಞಾನದ ಅತ್ತಂತ ದೊಡ್ಡ ಕೊಡುಗೆ ಎಂದರೆ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಇಂದು **'ಜೆಮಿನಿ'ಚಾಟ್‌ಜಿಪಿಟಿ'** ಮತ್ತು **'ಡೀಪ್ ಸೀಕ್'**ನಂತಹ ಎಐ ಉಪಕರಣಗಳು ಕನ್ನಡವನ್ನು ಅತ್ಯುತ್ತಮವಾಗಿ ಅರ್ಥಮಾಡಿಕೊಳ್ಳುತ್ತಿವೆ.ಇವುಗಳನ್ನು ಕೇವಲ ಇಂಗೀಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಲು ಮಾತ್ರವಲ್ಲ ಬದಲಾಗಿ ನಾವು ಬರೆದ ಕನ್ನಡ ಲೇಖನಗಳಲ್ಲಿನ ವ್ಯಾಕರಣ ದೋಷಗಳನ್ನು ತಿದ್ದಲು ಭಾಷೆಯನ್ನು ತಿದ್ದಲು ಭಾಷೆಯನ್ನು ಸುಧಾರಿಸಲು ಮತ್ತು ಹೊಸದಾಗಿ ಲೇಖನಗಳನ್ನು ಬರೆಯಲು ಕೂಡ ಬಳಸಬಹುದು.ಕನ್ನಡದಲ್ಲಿ ಕಂಟೆಂಟ್ ರಚಿಸುವವರಿಗೆ,ವಿಧ್ಯಾರ್ಥಿಗಳಿಗೆ,ಮತ್ತು ಲೇಖಕರಿಗೆ ಇದು ಒಂದು ದೊಡ್ಡ ವರದಾನವಾಗಿದೆ.

ಕನ್ನಡ ಭಾಷೆಯು ಕೇವಲ ಕಾಗದದ ಮೇಲಲ್ಲ ಇಂದು ಕೀ ಬೋರ್ಡಗಳು ಮತ್ತು ಮೊಬೈಲ್ ಸ್ಕ್ರೀನ್ ಗಳ ಮೇಲೂ ರಾರಾಜಿಸುತ್ತಿದೆ.ಕನ್ನಡ ಬಳಕೆ ಮಾಡಲು ನೆರವಾಗುವ ಈ ಆಧುನಿಕ ತಂತ್ರಾಂಶಗಳನ್ನು ಬಳಸುವುದರ ಮೂಲಕ ಮತ್ತು ಮುಖ್ಯವಾಗಿ **'ಯೂನಿಕೋಡ್'** ಅನ್ನು ಬಳಸುವುದರ ಮೂಲಕ ನಾವು ಕನ್ನಡವನ್ನು ಡಿಜಿಟಲ್ ಯುಗದಲ್ಲಿ ಇನ್ನಷ್ಟು ಶ್ರೀಮಂತಗೊಳಿಸೋಣ.

*****

## ಶಿಕಾರಿಪುರ ತಾಲ್ಲೂಕಿನ ಐತಿಹಾಸಿಕ ಬಂದಳಿಕೆ ದೇವಸ್ಥಾನ



# ಹೆತ್ತ ತಾಯಿಗೆ ಕೊಟ್ಟಷ್ಟೇ ಗೌರವ, ಕನ್ನಡಕ್ಕೂ ನೀಡೋಣ.

**ಕಲ್ಮೇಶ ಓ ಕೊಂಡಿಕೊಪ್ಪ**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ




ಮನುಷ್ಯನ ಬದುಕಿನಲ್ಲಿ ಎರಡು ತಾಯಿಗಳು ಅವನನ್ನು ಪೋಷಿಸುತ್ತವೆ– ಒಬ್ಬಳು ಜೀವ ಕೊಟ್ಟ ಹೆತ್ತ ತಾಯಿ, ಮತ್ತೊಬ್ಬಳು ಆತ್ಮದ ಸ್ವರ ರೂಪಿಸಿದ ತಾಯ್ನಾಡು ಮತ್ತು ತಾಯಿಭಾಷೆ. ಹೆತ್ತ ತಾಯಿ ನಮ್ಮ ದೇಹವನ್ನು ರೂಪಿಸಿದರೆ, ಭಾಷೆ ನಮ್ಮ ಅಸ್ತಿತ್ವವನ್ನು ರೂಪಿಸುತ್ತದೆ. ಹೆತ್ತ ತಾಯಿ ಮಡಿಲಿನಲ್ಲಿ ಬೆಳೆದ ಮಮತೆ, ಅದರ ಬೆನ್ನುಬಲ ಹಾಗೂ ಮಮತೆಯ ರಾಗಗಳು ನಾವು ಯಾರು ಎಂಬುದನ್ನು ಹೇಳಿಕೊಡುತ್ತವೆ. ಅದೇ ರೀತಿ ಕನ್ನಡ ಭಾಷೆಯ ಮೃದುವಾದ ಅಕ್ಷರಗಳು, ಅದರ ಸೊಬಗು, ಕವಿಗಳ ಕಾವ್ಯ, ಕೀರ್ತನೆಗಳ ರಾಗಗಳು — ನಮ್ಮ ಮನಸ್ಸನ್ನು ರೂಪಿಸುವ ಮಹತ್ವದ ಶಕ್ತಿಗಳು. ಆದ್ದರಿಂದ "ಹೆತ್ತ ತಾಯಿಗೆ ಕೊಟ್ಟಷ್ಟೇ ಗೌರವ ಕನ್ನಡಕ್ಕೆ ಕೂಡ ಕೊಡೋಣ" ಎಂಬ ವಾಕ್ಯವು ಕೇವಲ ಕೋರಿಕೆಯಲ್ಲ, ಇದು ನಮ್ಮ ಸಂಸ್ಕೃತಿಗೆ ನೀಡಬೇಕಾದ ನೈತಿಕ ಜವಾಬ್ದಾರಿ.

ಕನ್ನಡವು ಜಗತ್ತಿನ ಅತ್ಯಂತ ಪ್ರಾಚೀನ ಹಾಗೂ ವೈಭವಶಾಲಿ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ. ನೂರಾರು ವರ್ಷಗಳ ಇತಿಹಾಸವನ್ನು ಹೊತ್ತು, ಪ್ರಮುಖ ರಾಜವಂಶಗಳ ಮಾರ್ಗದಲ್ಲಿ ಬೆಳೆಯುತ್ತಾ, ಮಹಾಕಾವ್ಯಗಳು, ವಚನಗಳು, ಜಾನಪದ ಕಲೆಗಳು, ತತ್ವಶಾಸ್ತ್ರ, ನಾಟಕ, ಕತೆ, ಕಾದಂಬರಿ ಸೇರಿದಂತೆ ಎಲ್ಲಾ ಕಲಾ ಪ್ರಕಾರಗಳಲ್ಲಿ ತನ್ನದೇ ಆದ ವಿಶಿಷ್ಟ ಗುರುತನ್ನು ಸ್ಥಾಪಿಸಿದೆ. ಪಂಪನ "ವಿಕ್ರಮಾರ್ಜುನ ವಿಜಯ", ರನ್ನನ "ಸಾಹಸ ಭೀಮ ವಿಜಯ", ಜನ್ನನ "ಯಶೋಧರ ಚರಿತೆ"ಂಥ ಮಹಾಕಾವ್ಯಗಳಿಂದ ಹಿಡಿದು, ವಚನ ಸಾಹಿತ್ಯದ ಸಾಮಾಜಿಕ ಕ್ರಾಂತಿ, ಕುವೆಂಪುವಿನ ರಾಮಾಯಣ ದರ್ಶನಂ, ಬೇಂದ್ರೆಯ ನವೋದಯ ಕಾವ್ಯ, ಶಿವರಾಮ ಕಾರಂತರ ಸಾಹಿತ್ಯ ಕ್ರಾಂತಿ — ಇಂತಹ ಸಾಹಿತ್ಯವಂತಿಕೆ ಕನ್ನಡಕ್ಕೆ ವಿಶ್ವ ಮಟ್ಟದ ಮಾನವನ್ನು ತಂದಿದೆ. ಇಂತಹ ಮಹಾಸಂಪತ್ತನ್ನು ನಾವು ಗೌರವಿಸದೆ ಹೋದರೆ ಯಾರು ಗೌರವಿಸುತ್ತಾರೆ?

ಇಂದಿನ ಜಗತ್ತಿನಲ್ಲಿ ಅನೇಕ ಭಾಷೆಗಳು ಮಾಯವಾಗುತ್ತಿರುವ ಸಂದರ್ಭದಲ್ಲಿ ಕನ್ನಡ ತನ್ನ ಬಲಿಷ್ಠ ಪರಂಪರೆಯನ್ನು ಉಳಿಸಿಕೊಂಡಿದೆ. ಆದರೆ ಜಾಗತೀಕರಣದ ಗಾಳಿ ಕೆಲವೊಮ್ಮೆ ಕನ್ನಡದ ಬಳಕೆಯನ್ನು ಕುಗ್ಗಿಸಲು ಪ್ರಯತ್ನಿಸುತ್ತದೆ. ಮಕ್ಕಳ ಮೊದಲ ಪಾಠಗಳು ಇಂಗ್ಲಿಷ್‌ನಲ್ಲಿ ಆರಂಭವಾಗುತ್ತಿವೆ, ಮನೆ–ಶಾಲೆಗಳಲ್ಲಿ ಕನ್ನಡದ ಸದ್ದು ಕಡಿಮೆ ಆಗುತ್ತಿದೆ, ಕೆಲಸದ ಜಾಗಗಳಲ್ಲಿ ಕನ್ನಡ ಬದಲಿಗೆ ವಿದೇಶಿ ಭಾಷೆಗಳು ಪ್ರಾಧಾನ್ಯತೆ ಪಡೆಯುತ್ತಿವೆ. ಹೆತ್ತ ತಾಯಿ ನಮ್ಮನ್ನು ಬಿಟ್ಟುಬಿಟ್ಟರೆ ನಾವು ಅನಾಥರಾಗುವಂತೆ, ನಮ್ಮ ಭಾಷೆಯನ್ನು ಬಿಟ್ಟು ಬಿಟ್ಟರೆ ನಮ್ಮ ಸಂಸ್ಕೃತಿ ಅನಾಥವಾಗುತ್ತದೆ. ನಾವು ಕನ್ನಡವನ್ನು ಉಪಯೋಗಿಸುವುದೇ ಅದರ ಬದುಕು ನಾವು ಕನ್ನಡದಲ್ಲಿ ಮಾತನಾಡುವ,

ಓದುವ, ಬರೆಯುವಾಗ ನಮ್ಮ ಭಾಷೆ ಜೀವಂತವಾಗುತ್ತದೆ. "ತಾಯಿಯ ಹಾಲು ನಮ್ಮ ದೇಹ ಕಟ್ಟುತ್ತೆ; ಕನ್ನಡದ ಮಾತು ನಮ್ಮ ವ್ಯಕ್ತಿತ್ವ ಕಟ್ಟುತ್ತದೆ"

ಕನ್ನಡಕ್ಕೆ ಗೌರವ ನೀಡುವುದು ಎಂದರೆ ಕೇವಲ ಅದು ಮಾತನಾಡುವುದಲ್ಲ ಅದನ್ನು ಮನಸ್ಸಿನಿಂದ ಸ್ವೀಕರಿಸುವುದು. ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ನೆಲ, ನಮ್ಮ ನಾಡು — ಇವೆಲ್ಲವೂ ಪರಸ್ಪರ ಜೋಡಿಕೊಂಡಿವೆ. ಕನ್ನಡದ ಪ್ರತಿಯೊಂದು ಅಕ್ಷರದಲ್ಲಿ ನಮ್ಮ ತಾತಮ್ಮನ ಕಥೆಗಳು, ಊರು–ಹಳ್ಳಿಗಳ ಸುವಾಸನೆ, ಜನಪದದ ಕುಣಿತಗಳು, ಹುಲಿವೆಸರದ ಘೋಷಣೆ, ಭಕ್ತರ ಕೀರ್ತನೆ, ಕವಿಗಳ ನಯ, ಕರ್ಮಯೋಗಿಗಳ ಮಾರ್ಗದರ್ಶನ — ಇವೆಲ್ಲವೂ ತುಂಬಿವೆ. ನಾವು ತಾಯಿಗೆ ಗೌರವ ಕೊಡುವಾಗ ನಮ್ಮ ಹೃದಯದಲ್ಲಿ ಪ್ರೀತಿಯ ಹಾಗೂ ಕೃತಜ್ಞತೆಯ ಭಾವ ಉದ್ದೀಪನಗೊಳ್ಳುತ್ತದೆ; ಕನ್ನಡಕ್ಕೂ ಇದೇ ಭಾವವಿರಬೇಕು.

ಮನೆಗಳಲ್ಲಿ ಕನ್ನಡ ಮಾತನಾಡಿದಾಗ ಮಕ್ಕಳು ತಮ್ಮ ಮೂಲದೊಂದಿಗೆ ನಂಟಾಗಿರುತ್ತಾರೆ. ಶಾಲೆಗಳಲ್ಲಿ ಕನ್ನಡಕ್ಕೆ ಸ್ಥಾನ ನೀಡಿದಾಗ ಮಕ್ಕಳು ಸಂಸ್ಕೃತಿಯನ್ನು ಅರಿಯುತ್ತಾರೆ. ಸಮಾಜದಲ್ಲಿ ಕನ್ನಡದ ಗೌರವ ಹೆಚ್ಚಿದಾಗ ತಲೆಮಾರುಗಳು ತಮ್ಮ ಅಸ್ತಿತ್ವದ ಬಗ್ಗೆ ಹೆಮ್ಮೆಪಡುತ್ತವೆ. ಸರ್ಕಾರ, ಮಾಧ್ಯಮ, ಶಿಕ್ಷಣ ಸಂಸ್ಥೆಗಳು, ವ್ಯಾಪಾರಸ್ಥರು, ಸಾರ್ವಜನಿಕರು — ಎಲ್ಲರೂ ಸೇರಿ ಕನ್ನಡಕ್ಕೆ ಸರಿಯಾದ ಸ್ಥಾನ ನೀಡಿದಾಗ ಮಾತ್ರ ಅದು ಸತ್ಯಸ್ವರೂಪವಾಗಿ ಬೆಳೆಯುತ್ತದೆ. ಕನ್ನಡಾಭಿಮಾನ ಎಂದರೆ ಇತರ ಭಾಷೆಗಳನ್ನು ತಳ್ಳುವುದು ಅಲ್ಲ; ಬದಲಿಗೆ, ನಮ್ಮ ಭಾಷೆಯನ್ನು ಗೌರವದಿಂದ ಬೆಳೆಸುವುದು.

ಭಾಷೆ ನಾಶವಾದರೆ ಜನಾಂಗ ನಾಶವಾಗುತ್ತದೆ. ಇತಿಹಾಸ ಹೇಳುತ್ತದೆ — ಬದುಕಿದ್ದ ಅನೇಕ ಸಂಸ್ಕೃತಿಗಳು ತಮ್ಮ ಭಾಷೆ ಕಳೆದುಕೊಂಡಾಗ ಅವರು ತಮ್ಮ ಅಸ್ತಿತ್ವವೇ ಕಳೆದುಕೊಂಡರು. ನಾವು ಕನ್ನಡವನ್ನು ಕಳೆದುಕೊಳ್ಳಬಾರದು. ಇದು ಕೇವಲ ನಮ್ಮ ತಲೆಮಾರಿಗೆ ಸೇರಿದುದಲ್ಲ; ಇದು ನಮ್ಮ ಮುಂದಿನ ಪೀಳಿಗೆಯ ಹಕ್ಕು. ಅವರಿಗೆ ಕನ್ನಡದ ಸೊಬಗು, ಕಾವ್ಯದ ಮಧುರತೆ, ವಚನಗಳ ಸಾಮಾಜಿಕ ಸಂದೇಶ, ಗಾದೆಗಳ ಜ್ಞಾನ — ಇವೆಲ್ಲವನ್ನೂ ಕೊಡುವುದು ನಮ್ಮ ದೌತ್ಯ. ಅಂತೆಯೇ ಕನ್ನಡವನ್ನು ಗೌರವಿಸುವುದು ನಮ್ಮ ಸಾಮಾನ್ಯ ಬದುಕಿನ ಎಲ್ಲಾ ಹಂತಗಳಲ್ಲಿ ನಡೆಯಬೇಕು. ದೈನಂದಿನ ಮಾತುಕತೆ, ಅಂಗಡಿಯ ಪ್ಲೇಟ್‌ಗಳು, ಸರ್ಕಾರಿ ಕಛೇರಿಗಳು, ಶಿಕ್ಷಣದ ಹಂತಗಳು, ಬಸವನ ಗುಡ್ಡ–ಗೋಕರ್ಣದ ತೀರ್ಥಕ್ಷೇತ್ರಗಳು, ಬೆಂಗಳೂರು–ಮೈಸೂರು–ಧಾರವಾಡದ ವಿಶ್ವವಿದ್ಯಾಲಯಗಳು — ಎಲ್ಲೆಡೆ ಕನ್ನಡದ ಪ್ರೀತಿಯನ್ನು ಬೆಳೆಸಬೇಕು. ಕನ್ನಡದಲ್ಲಿ ಮಾತನಾಡುವಾಗ ನಮ್ಮ ಒಳಗಿನಿಂದಲೇ ಒಂದು ಸ್ವಾಭಿಮಾನ ಮೂಡುತ್ತದೆ; ಇದು ಯಾವುದೇ ವಿದೇಶಿ ಭಾಷೆಯಲ್ಲಿ ಸಾಧ್ಯವಿಲ್ಲ.

ಹೆತ್ತ ತಾಯಿ ನಮ್ಮನ್ನು ಜಗತ್ತಿಗೆ ತಂದಳಾದರೆ, ಕನ್ನಡ ನಮ್ಮನ್ನು ಜಗತ್ತಿನಲ್ಲಿ ಗುರುತಿಸುವ ಶಕ್ತಿಯನ್ನು ನೀಡುತ್ತದೆ. ಹೆತ್ತ ತಾಯಿಗೆ ನಾವು ಮಾಡುವ ಸೇವೆ, ಪ್ರೀತಿ, ಗೌರವ — ಎಲ್ಲಾ ಕನ್ನಡಕ್ಕೂ ಸಮಾನವಾಗಿ ಸಲ್ಲಿಸಬೇಕಾದದ್ದು ಒಂದು ಭಾಷೆಯ ಬಗೆಗಿನ ಸಂವೇದನೆಯಷ್ಟೇ ಅಲ್ಲ; ಇದು ನಮ್ಮ ನಾಡಿನತ್ತ ಇರುವ ಕರ್ತವ್ಯ. ಈ ಕರ್ತವ್ಯವನ್ನು ನಿಭಾಯಿಸಿದಾಗ ಮಾತ್ರ ಕನ್ನಡ ನಾಡಿನ ಪುಟ್ಟ ದನಿ ಜಗತ್ತಿನ ದೊಡ್ಡ ವೇದಿಕೆಗೆ ತಲುಪುತ್ತದೆ.

"ಮಾತೃಭಾಷೆ ಕಳೆದುಕೊಂಡರೆ, ಮನುಷ್ಯನೇ ತನ್ನ ನೆರಳನ್ನು ಕಳೆದುಕೊಂಡಂತಾಗುತ್ತದೆ."

# ಡಿಜಿಟಲ್ ಯುಗದಲ್ಲಿ ಕನ್ನಡದ ಬಳಕೆ: ಹೊಸ ಸಾಧ್ಯತೆಗಳು ಮತ್ತು ಸವಾಲುಗಳು

**ಗಗನ್ ಎಲ್ ನಾಯಕ್**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ



ಡಿಜಿಟಲ್ ಯುಗವು ಕನ್ನಡ ಭಾಷೆಗೆ ಹೊಸ ಆಯಾಮ ಮತ್ತು ಅಭಿವೃದ್ಧಿಯ ಮಹತ್ವದ ಅವಕಾಶಗಳನ್ನು ತಂದಿದೆ. ಅಂತರ್ಜಾಲ, ಸ್ಮಾರ್ಟ್ಫೋನ್ಗಳು ಮತ್ತು ತಂತ್ರಜ್ಞಾನದ ಪ್ರಗತಿಯಿಂದಾಗಿ ಕನ್ನಡದ ಬಳಕೆ ಕೇವಲ ಮುದ್ರಣ ಮಾಧ್ಯಮಕ್ಕೆ ಸೀಮಿತವಾಗದೆ, ಜಾಗತಿಕ ಮಟ್ಟದಲ್ಲಿ ಬೆಳೆಯಲು ಸಾಧ್ಯವಾಗಿದೆ.

ಪ್ರಮುಖ ಬೆಳವಣಿಗೆಗಳು

- ಯೂನಿಕೋಡ್ ಅಳವಡಿಕೆ: ಕನ್ನಡ ಅಕ್ಷರಗಳನ್ನು ಯಾವುದೇ ಸಾಧನ ಅಥವಾ ಆಪರೇಟಿಂಗ್ ಸಿಸ್ಟಮ್ನಲ್ಲಿ ಸುಲಭವಾಗಿ ಬಳಸಲು ಯೂನಿಕೋಡ್ (Unicode) ತಂತ್ರಜ್ಞಾನ ಸಹಕಾರಿಯಾಗಿದೆ. ಇದರಿಂದ ಕನ್ನಡದಲ್ಲಿ ಟೈಪ್ ಮಾಡುವುದು ಮತ್ತು ವಿಷಯವನ್ನು ವಿನಿಮಯ ಮಾಡಿಕೊಳ್ಳುವುದು ಸರಳವಾಗಿದೆ.
- ಸಾಮಾಜಿಕ ಮಾಧ್ಯಮ ಮತ್ತು ಬ್ಲಾಗಿಂಗ್: ಫೇಸ್ಬುಕ್, ವಾಟ್ಸ್ ಅಪ್ ಟ್ವಿಟರ್ (X), ಮತ್ತು ಯೂಟ್ಯೂಬ್ಗಳಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಕನ್ನಡದ ವಿಷಯಗಳು, ಚರ್ಚೆಗಳು, ಕಲೆ ಮತ್ತು ಸಾಹಿತ್ಯವು ಅಗಾಧ ಪ್ರಮಾಣದಲ್ಲಿ ಹರಿದಾಡುತ್ತಿದೆ. ಬ್ಲಾಗ್ಗಳು ಮತ್ತು ವೆಬ್‌ಸೈಟುಗಳು ಕನ್ನಡ ಲೇಖನ ಮತ್ತು ಮಾಹಿತಿಯ ದೊಡ್ಡ ಭಂಡಾರವಾಗಿ ಮಾರ್ಪಟ್ಟಿವೆ.
- ಇ–ಪುಸ್ತಕಗಳು ಮತ್ತು ಆಡಿಯೋ ಪುಸ್ತಕಗಳು: ಕನ್ನಡ ಸಾಹಿತ್ಯವು ಇ–ಪುಸ್ತಕಗಳು (E-books), ಆಡಿಯೋ ಪುಸ್ತಕಗಳು (Audio books) ಮತ್ತು ಪಾಡ್ಕಾಸ್ಟ್ಗಳ ಮೂಲಕ ದೇಶ–ವಿದೇಶಗಳಲ್ಲಿ ಹೊಸ ಓದುಗರನ್ನು ತಲುಪುತ್ತಿದೆ.
- ತಂತ್ರಜ್ಞಾನದ ಸ್ಥಳೀಕರಣ (Localization): ಗೂಗಲ್, ಮೈಕ್ರೋಸಾಫ್ಟ್ನಂತಹ ದೊಡ್ಡ ಕಂಪನಿಗಳು ತಮ್ಮ ಉತ್ಪನ್ನಗಳಲ್ಲಿ ಕನ್ನಡವನ್ನು ಬೆಂಬಲಿಸುತ್ತಿವೆ. ಕನ್ನಡ ಅನುವಾದಕಗಳು, ಧ್ವನಿ ಆಧಾರಿತ ಸಹಾಯಕಗಳು (ವಾಯ್ಸ್ ಅಸಿಸ್ಟೆಂಟ್ಗಳು) ಮತ್ತು ಕನ್ನಡ ಕೀಲಿಮಣೆ ತಂತ್ರಾಂಶಗ½ ಬಳಕೆಯಲ್ಲಿವೆ.

❖ **ಎದುರಿಸುತ್ತಿರುವ ಸವಾಲುಗಳು**

- ಕನ್ನಡದ ವಿಷಯದ ಕೊರತೆ: ಇಂಗ್ಲಿಷ್ಗೆ ಹೋಲಿಸಿದರೆ ಡಿಜಿಟಲ್ ಜಗತ್ತಿನಲ್ಲಿ ಕನ್ನಡದ ಉತ್ತಮ ಗುಣಮಟ್ಟದ ಮತ್ತು ವೈವಿಧ್ಯಮಯ ವಿಷಯ (Content) ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಇಲ್ಲ.
- ಒಸಿಆರ್ (OCR) ಮತ್ತು ಕಾಗುಣಿತ ತಂತ್ರಜ್ಞಾನ: ಹಳೆಗನ್ನಡದ ಕೃತಿಗಳನ್ನು ಮತ್ತು ಮುದ್ರಿತ ಪಠ್ಯಗಳನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಲು ಬೇಕಾದ ದೃಶ್ಯ ಅಕ್ಷರ ಗುರುತಿಸುವಿಕೆ (OCR) ಮತ್ತು ಕಾಗುಣಿತ/ವ್ಯಾಕರಣ ತಿದ್ದುಪಡಿಯಂತಹ ಕೃತಕ ಬುದ್ಧಿಮತ್ತೆ (AI) ಆಧಾರಿತ ತಂತ್ರಜ್ಞಾನಗಳು ಇನ್ನಷ್ಟು ಸುಧಾರಣೆಗೊಳ್ಳಬೇಕಿದೆ.

- ಸರ್ಕಾರದ ಪಾತ್ರ: ಎಲ್ಲಾ ಸರ್ಕಾರಿ ಸೇವೆಗಳು, ಮೊಬೈಲ್ ಅಪ್ಲಿಕೇಶನ್ಗಳು ಮತ್ತು ವೆಬ್ಸೈಟ್ಗಳಲ್ಲಿ ಕನ್ನಡದ ಬಳಕೆಯನ್ನು ಕಡ್ಡಾಯಗೊಳಿಸುವಲ್ಲಿ ಇನ್ನೂ ಹೆಚ್ಚಿನ ಕ್ರಿಯಾ ಯೋಜನೆಗಳ ಅಗತ್ಯವಿದೆ.

### ❖ ಮುಂದಿನ ಹಾದಿ

ಡಿಜಿಟಲ್ ಯುಗದಲ್ಲಿ ಕನ್ನಡವನ್ನು ಬಲಪಡಿಸಲು ಸಮುದಾಯದ ಪಾತ್ರ ಬಹಳ ಮುಖ್ಯ. ತಂತ್ರಜ್ಞಾನ ಅಭಿವೃದ್ಧಿದಾರರು, ಭಾಷಾ ತಜ್ಞರು ಮತ್ತು ಸರ್ಕಾರದ ಸಹಯೋಗದೊಂದಿಗೆ ಇನ್ನಷ್ಟು ಕನ್ನಡ ಸ್ನೇಹಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಬೇಕು. ಕನ್ನಡಿಗರು ಡಿಜಿಟಲ್ ವೇದಿಕೆಗಳಲ್ಲಿ ಕನ್ನಡದಲ್ಲೇ ಹೆಚ್ಚು ವಿಷಯವನ್ನು ಸೃಷ್ಟಿಸಿ ಮತ್ತು ಬಳಸುವುದರಿಂದ, ಕನ್ನಡವು ಜಾಗತಿಕ ಜ್ಞಾನದ ಭಾಗವಾಗಿ ಮತ್ತು ಭವಿಷ್ಯದ ಭಾಷೆಯಾಗಿ ಬೆಳೆಯಲು ಸಾಧ್ಯವಿದೆ.

*****

## ಶಿಕಾರಿಪುರದ ಪ್ರಸಿದ್ದ ಹುಚ್ಚರಾಯ ಸ್ವಾಮಿ ಮಹಾರಥೋತ್ಸವ



# ಕನ್ನಡ ಭಾಷೆಯ ಚರಿತ್ರೆ

**ಶ್ರೀಶೈಲ್ ಇಂಚಲ್ ಸಿದ್ಧಪ್ಪ**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ




ಕನ್ನಡ ಎಂದರೆ ಕೇವಲ ವರ್ಣಮಾಲೆಯಲ್ಲ, ಅದು ಕರುನಾಡ ನೆಲ, ಜಲ, ಜನ, ಬದುಕು, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಎಲ್ಲವನ್ನೂ ಒಳಗೊಂಡಿದೆ. ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ ಕನ್ನಡ... ಕನ್ನಡ. ಕಸ್ತೂರಿ. ಕನ್ನಡ. ಹುಟ್ಟಿದರೆ ಕನ್ನಡ ನೋಡಲು ಹುಟ್ಟಬೇಕು. ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು. "ಕನ್ನಡ ಭಾಷೆ ನಮ್ಮ ಸಂಸ್ಕೃತಿ", ಭಾರತವು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದೆ ಮತ್ತು ಅದು ನಮ್ಮ ಗುರುತಾಗಿದೆ. ಧರ್ಮ, ಕಲೆ, ಬೌದ್ಧಿಕ ಸಾಧನೆಗಳು ಅಥವಾ ಪ್ರದರ್ಶನ ಕಲೆಗಳಲ್ಲಿ ಅದು ನಮ್ಮನ್ನು ವರ್ಣರಂಜಿತ, ಶ್ರೀಮಂತ ಮತ್ತು ವೈವಿಧ್ಯಮಯ ರಾಷ್ಟ್ರವನ್ನಾಗಿ ಮಾಡಿದೆ. ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯ ಮಾರ್ಗದರ್ಶಿಯಾಗಿ ಆಗಿದೆ.

ಕನ್ನಡ ಭಾಷೆ ಮತ್ತು ಸಂಸ್ಕೃತಿ ಉತ್ಕೃಷ್ಟವಾದದ್ದು, ಶ್ರೀಮಂತವಾದದ್ದು. ವಿಪುಲವಾಗಿ ದೊರಕುವ ಸಾಹಿತ್ಯ ಕೃತಿಗಳು, ಐತಿಹಾಸಿಕ ದಾಖಲೆಗಳು ಈ ಅಂಶವನ್ನು ದೃಢೀಕರಿಸುತ್ತವೆ. ಅನೇಕ ವಿಭಿನ್ನ ಯುಗಗಳು ಬಂದು ಹೋಗಿವೆ ಆದರೆ ನಿಜವಾದ ಸಂಸ್ಕೃತಿಯ ಪ್ರಭಾವವನ್ನು ಬದಲಾಯಿಸಲು ಯಾವುದೇ ಯುಗವು ತುಂಬಾ ಶಕ್ತಿಯುತವಾಗಿಲ್ಲ. ಆದ್ದರಿಂದ, ಯುವ ಪೀಳಿಗೆಯ ಸಂಸ್ಕೃತಿಯು ಇನ್ನೂ ಹಳೆಯ ತಲೆಮಾರುಗಳೊಂದಿಗೆ ಸಂಪರ್ಕ ಹೊಂದಿದೆ. ಅಲ್ಲದೆ, ನಮ್ಮ ಜನಾಂಗೀಯ ಸಂಸ್ಕೃತಿಯು ಯಾವಾಗಲೂ ಹಿರಿಯರನ್ನು ಗೌರವಿಸಲು, ಉತ್ತಮವಾಗಿ ವರ್ತಿಸಲು, ಅಸಹಾಯಕರನ್ನು ನೋಡಿಕೊಳ್ಳಲು ಮತ್ತು ನಿರ್ಗತಿಕರಿಗೆ ಮತ್ತು ಬಡವರಿಗೆ ಸಹಾಯ ಮಾಡಲು ನಮಗೆ ಕಲಿಸುತ್ತದೆ.

ಕರ್ನಾಟಕದಲ್ಲಿ ಬಳಸಲಾಗುವ ಕನ್ನಡ ಭಾಷೆಯನ್ನು ದೇಶದ ಪ್ರಮುಖ ಭಾಷೆಗಳಲ್ಲಿ ಒಂದಾಗಿ ಭಾರತೀಯ ಸಂವಿಧಾನವು ಗುರುತಿಸಿದೆ. ಕರ್ನಾಟಕದ ಬಹುತೇಕ ಜನರಿಗೆ ಕನ್ನಡವು ಮಾತೃಭಾಷೆಯಾಗಿದೆ. ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಗೋವಾ, ಹಾಗೂ ದಮನ್ ಹಾಗೂ ದಿಯುಗಳಲ್ಲಿ ಕನ್ನಡವನ್ನು ಮಾತೃ ಭಾಷೆಯಾಗಿ ಬಳಸುವ ಗಣನೀಯ ಸಂಖ್ಯೆಯ ಜನರಿದ್ದಾರೆ.ಪ್ರಸ್ತುತದಲ್ಲಿ, ಕನಿಷ್ಠ ಮೂರು ಪ್ರಾದೇಶಿಕ ಉಪಭಾಷೆಗಳಾದ, ಮೈಸೂರು ಕನ್ನಡ, ಧಾರವಾಡ–ಕನ್ನಡ ಹಾಗೂ ಮಂಗಳೂರು–ಕನ್ನಡಗಳ ಜನಪ್ರಿಯವಾದ ಭಾಷಾ ಶೈಲಿಗಳನ್ನು, ಕ್ರಮವಾಗಿ ಮೂರು ಸಾಂಸ್ಕೃತಿಕ ಕೇಂದ್ರಗಳಾದ ಮೈಸೂರು, ಧಾರವಾಡ ಹಾಗೂ ಮಂಗಳೂರು ಪ್ರದೇಶಗಳಲ್ಲಿ ಮಾತನಾಡಲಾಗುತ್ತದೆ.

ಅಶೋಕನ ಶಿಲಾಶಾಸನಗಳ ಮೂಲಕ ಭಾರತದೆಲ್ಲೆಡೆ ಆರಂಭಿಕ ಲಿಪಿಯಾಗಿ ಜನಪ್ರಿಯಗೊಂಡು, ಎಲ್ಲ ಆಧುನಿಕ ಭಾರತೀಯ ಭಾಷೆಗಳಿಗೆ ಮೂಲ–ಲಿಪಿಯಾದ ಬ್ರಾಹ್ಮ ಲಿಪಿಯಿಂದ ಕನ್ನಡ ಭಾಷೆಯ ಲಿಖಿತ

ಲಿಪಿರೂಪಗಳನ್ನೂ ಪಡೆದುಕೊಳ್ಳಲಾಗಿದೆ. ಕ್ರಿ.ಶ. 450ಕ್ಕೆ ಸೇರಿದ ಹಲ್ಮಡಿ ಶಾಸನದಲ್ಲಿ ಕನ್ನಡ ಲಿಪಿಯ ಪ್ರಾರಂಭಿಕ ರೂಪವು ದೊರೆತಿದೆ.

ಬಾದಾಮಿ ಚಾಲುಕ್ಯರ ಸಂಸ್ಕೃತದ ಅನೇಕ ಶಾಸನಗಳನ್ನು ಈ ಲಿಪಿಯಲ್ಲೆ ಬರೆಯಲಾಗಿದೆ. ಕನ್ನಡ ಲಿಪಿಯು ನಿರಂತರವಾಗಿ ಬದಲಾವಣೆ ಆಗುತ್ತಲೇ ಇದ್ದು ಇಂದಿನ ಕನ್ನಡ ಲಿಪಿಯು, ಸುಮಾರು 9,000 ವರ್ಷಗಳ ಕಾಲಾವಧಿಯಲ್ಲಿ ಇಂತಹ ವಿಕಸನೀಯ ಬದಲಾವಣೆಗಳಿಂದ ಉಂಟಾದುದು. ಬದಲಾಗದ ಏಕರೂಪ ದೊಂದಿಗೆ ಯಾಂತ್ರಿಕವಾಗಿ ನಕಲಾಗುವ ಅಕ್ಷರ ರೂಪಗಳನ್ನು ನೀಡುವ ಮುದ್ರಣವನ್ನು ಪರಿಚಯಿಸಿದ ಮೇಲೆ, ಪ್ರಸ್ತುತ ಲಿಪಿರೂಪವನ್ನು ಪ್ರಮಾಣೀಕೃತಗೊಳಿಸಲಾಯಿತು.

ಕ್ರಿ.ಶ. ಆರನೆಯ ಶತಮಾನದಿಂದ ಕನ್ನಡದಲ್ಲಿ ಹೊರಡಿಸಿದ ಅನೇಕ ರಾಜಾಜ್ಞೆಗಳನ್ನು ನೋಡಿದಾಗ, ಪ್ರಾಕೃತ ಹಾಗೂ ಕನ್ನಡ ಭಾಷೆಗಳನ್ನು ಪ್ರಾರಂಭಿಕ ಮತ್ತು ನಂತರದ ಕಾಲಗಳಲ್ಲಿ ಕ್ರಮವಾಗಿ ಬಳಸಿದರೂ, ನಂತರ ಬಂದ ಕರ್ನಾಟಕದ ಅರಸರು ಆಡಳಿತ ಉದ್ದೇಶಕ್ಕಾಗಿ ಕನ್ನಡವನ್ನೂ ಬಳಸುತ್ತಿದ್ದರು ಎಂದು ತಿಳಿದು ಬರುತ್ತದೆ. ಕದಂಬರ ಹಲ್ಮಡಿ ಶಿಲಾಶಾಸನ ಹಾಗೂ ಚಾಲುಕ್ಯರ ಬಾದಾಮಿ ಗುಹಾ ಶಾಸನೆಗಳು ರಾಜಾನುದಾನಗಳನ್ನು ಘೋಷಿಸುವ ಅತ್ಯಂತ ಪುರಾತನ ಕನ್ನಡ ದಾಖಲೆಗಳಾಗಿವೆ. ಕಾರ್ಯರೂಪಕ ಭಾಗವನ್ನು ಕನ್ನಡದಲ್ಲಿ ಬರೆಯಲಾಗಿದೆ. ವಿಜಯನಗರ ಅರಸರಿಗೆ ಸೇರಿದ ಅನೇಕ ದಾಖಲೆಗಳು ಕನ್ನಡದಲ್ಲಿವೆ. ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಗಳಾದ ಕೆಳದಿಯ ನಾಯಕರು ಹಾಗೂ ಮೈಸೂರಿನ ಒಡೆಯರೂ ಕೂಡ, ರಾಜ್ಯದ ಏಕೈಕ ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸಿದರು

ಸ್ವಂತ ಲಿಪಿ, ಸ್ವಂತ ಸಂಖ್ಯೆ, ಸ್ವಂತ ವ್ಯಾಕರಣ, ದೊಡ್ಡ ವರ್ಣಮಾಲೆ, ಉಚ್ಚರಿಸುವುದನ್ನೇ ಬರೆಯುವ ಬರೆದಿದ್ದನ್ನೇ ಉಚ್ಚರಿಸುವ, ಸಾವಿರಾರು ವರ್ಷಗಳ ಇತಿಹಾಸವಿರುವ ಭೂಮಂಡಲದ ಏಕೈಕ ಭಾಷೆ ನಮ್ಮ ಹೆಮ್ಮೆಯ..

**“ಭೂಮಂಡಲದ ಏಕೈಕ ಭಾಷೆ ನಮ್ಮ ಹೆಮ್ಮೆಯ”**

*****

# "ಕನ್ನಡ ಜಾನಪದ ಸೊಗಡು : ಮಣ್ಣಿನ ಮೂಲ ಸಂಸ್ಕೃತಿಯ ಜೀವಧಾರೆ"

**ಅರ್ಚನಾ, ಸಿ**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

## ❖ ಜಾನಪದದ ವ್ಯಾಪ್ತಿ ಮತ್ತು ಅಸ್ಮಿತೆ :

ಕನ್ನಡ ಜಾನಪದ, ಅರ್ಥಾತ್ 'ಜನರ ಪದ' ಅಥವಾ 'ಜನರ ಸಂಸ್ಕೃತಿ', ಕನ್ನಡಿಗರ ಬಹುಮಟ್ಟದ ಅಲಿಖಿತ ಇತಿಹಾಸ ಮತ್ತು ಬದುಕಿನ ದರ್ಶನವಾಗಿದೆ. ಶಾಲೆ–ಕಾಲೇಜುಗಳ ಶಿಕ್ಷಣದ ವ್ಯಾಪ್ತಿಗೆ ಬರದಿದ್ದರೂ, ಇದು ಅನುಭವ ಮತ್ತು ಮೌಖಿಕ ಪರಂಪರೆಯ ಮೂಲಕ ತಲೆಮಾರುಗಳಿಂದ ಹರಿದು ಬಂದಿದೆ. ಕನ್ನಡ ನಾಡಿನ ಮಲೆನಾಡು, ಕರಾವಳಿ, ಬಯಲುಸೀಮೆ ಮತ್ತು ಗಡಿ ಪ್ರದೇಶಗಳ ಭೌಗೋಳಿಕ ವೈವಿಧ್ಯತೆಯು ಜಾನಪದ ಕಲೆ ಮತ್ತು ಸಾಹಿತ್ಯದ ಮೇಲೆ ಪ್ರಭಾವ ಬೀರಿ, ಅದನ್ನು ಹೆಚ್ಚು ಶ್ರೀಮಂತಗೊಳಿಸಿದೆ. ಕನ್ನಡದ ಜಾನಪದವು ಕೇವಲ ಹಿಂದಿನ ವಿಷಯವಲ್ಲ; ಇದು ವರ್ತಮಾನದ ಬದುಕಿಗೆ ನೈತಿಕ ಮೌಲ್ಯಗಳನ್ನು, ಸಾಮಾಜಿಕ ಜ್ಞಾನವನ್ನು ಮತ್ತು ಬದುಕುವ ಕಲೆಗಳನ್ನು ಸಾರುವ ಒಂದು ನಿರಂತರವಾದ ಜೀವಧಾರೆ. ಜಾನಪದವು ಒಂದು ಸಮುದಾಯದ ಸಾಮೂಹಿಕ ಪ್ರಜ್ಞೆಯನ್ನು ಪ್ರತಿನಿಧಿಸುತ್ತದೆ, ಅಲ್ಲಿ ಪ್ರತಿಯೊಬ್ಬರೂ ಕಥೆ ಹೇಳುವವರು, ಹಾಡುವವರು ಮತ್ತು ಕೇಳುವವರಾಗಿರುತ್ತಾರೆ.

## ❖ ಜಾನಪದದ ಹೃದಯ: ಮೌಖಿಕ ಸಾಹಿತ್ಯದ ವೈವಿಧ್ಯತೆ :

ಕನ್ನಡ ಜಾನಪದದ ಮೂಲಾಧಾರ ಅದರ ಮೌಖಿಕ ಸಾಹಿತ್ಯದಲ್ಲಿದೆ. ಹಳ್ಳಿಯ ಸಾಮಾನ್ಯ ಮನುಷ್ಯನ ನೋವು–ನಲಿವು, ನಂಬಿಕೆ–ಭಕ್ತಿ ಮತ್ತು ವಿಚಾರಧಾರೆ ಇಲ್ಲಿ ಅಭಿವ್ಯಕ್ತಗೊಂಡಿವೆ.

**ಅ. ದುಡಿಮೆಯ ಮತ್ತು ಸಂಸ್ಕಾರದ ಹಾಡುಗಳು :**

ಜಾನಪದ ಗೀತೆಗಳನ್ನು ಅವುಗಳ ಕಾರ್ಯಕ್ಕೆ ಅನುಗುಣವಾಗಿ ವಿಂಗಡಿಸಬಹುದು:

- ಶ್ರಮ ಗೀತೆಗಳು: ಹೊಲದಲ್ಲಿ ನಾಟಿ, ಕಳೆ ತೆಗೆಯುವಿಕೆ ಅಥವಾ ಧಾನ್ಯ ಬೀಸುವಂತಹ ಶ್ರಮದಾಯಕ ಕೆಲಸಗಳಲ್ಲಿ ಲಯ ಮತ್ತು ಹುರುಪು ತುಂಬಲು ಈ ಹಾಡುಗಳು ಹುಟ್ಟಿಕೊಂಡಿವೆ. ಉದಾಹರಣೆಗೆ, ಹಂತಿ ಪದಗಳು ಅಥವಾ ಬೀಸುವ ಪದಗಳು. ಇವು ಕೆಲಸದ ಒತ್ತಡವನ್ನು ಮರೆಸಿ, ಸಹಕಾರ ಮನೋಭಾವವನ್ನು ಬೆಳೆಸುತ್ತವೆ.
- ಸಂಸ್ಕಾರ ಗೀತೆಗಳು : ಮಗು ಹುಟ್ಟಿದಾಗ ಹಾಡುವ ತೊಟ್ಟಿಲು ಗೀತೆಗಳಿಂದ ಹಿಡಿದು, ಮದುವೆಯಲ್ಲಿ ಹಾಡುವ ಸೋಬಾನೆ ಪದಗಳು ಮತ್ತು ಹೆಣ್ಣುಮಗಳು ತವರು ಮನೆಯನ್ನು ಬಿಡುವಾಗ ಹಾಡುವ ವಿರಹ ಗೀತೆಗಳವರೆಗೆ, ಪ್ರತಿಯೊಂದು ಜೀವನದ ಸಂಕ್ರಮಣಕ್ಕೂ ಇಲ್ಲಿ ಹಾಡುಗಳಿವೆ. ಇವು ಕುಟುಂಬದ ಮತ್ತು ಸಂಬಂಧಗಳ ಮಹತ್ವವನ್ನು ಎತ್ತಿ ಹಿಡಿಯುತ್ತವೆ.
- ತತ್ವ ಪದಗಳು: ಶರೀರದ ಅನಿತ್ಯತೆ, ಬದುಕಿನ ಸತ್ಯ ಮತ್ತು ವೈರಾಗ್ಯದ ಕುರಿತು ಹೇಳುವ ಈ ಹಾಡುಗಳು ಜನಸಾಮಾನ್ಯರ ಆಳವಾದ ಆಧ್ಯಾತ್ಮಿಕ ಮತ್ತು ತಾತ್ವಿಕ ಚಿಂತನೆಗಳನ್ನು ಒಳಗೊಂಡಿರುತ್ತವೆ.

**ಆ. ಜಾನಪದ ಕಥೆಗಳು, ಗಾದೆಗಳು ಮತ್ತು ಒಗಟುಗಳು :**

ಇವು ಜಾನಪದರ ಬುದ್ಧಿಮತ್ತೆ ಮತ್ತು ಜ್ಞಾನದ ಸಾರವನ್ನು ಸಾರುತ್ತವೆ.

- ಕಥನಗಳು: ಜನಪದ ಕಥೆಗಳಲ್ಲಿ ನೀತಿ ಪಾಠಗಳು, ದೇವರು ಮತ್ತು ರಾಕ್ಷಸರ ಕಥೆಗಳು, ಸ್ಥಳೀಯ ಪವಾಡಗಳು ಮತ್ತು ಐತಿಹಾಸಿಕ ವೀರರ ಕಥೆಗಳು ಸೇರಿವೆ. ಈ ಕಥೆಗಳು ಮೌಲ್ಯಗಳನ್ನು ಮತ್ತು ನಂಬಿಕೆಗಳನ್ನು ಸರಳ ಮತ್ತು ಮನರಂಜನಾತ್ಮಕ ರೀತಿಯಲ್ಲಿ ಸಮಾಜಕ್ಕೆ ತಿಳಿಸುತ್ತವೆ.
- ಗಾದೆಗಳು: ಜಾನಪದದ ಜ್ಞಾನವು ಸಾವಿರಾರು ಗಾದೆಗಳ ರೂಪದಲ್ಲಿ ಸಂಗ್ರಹಗೊಂಡಿದೆ. "ಮನೆಯಲ್ಲಿ ಇಲಿ, ಹೊರಗಡೆ ಹುಲಿ" ಅಥವಾ "ಆಗೊಮ್ಮೆ ಈಗೊಮ್ಮೆ ಬಂದವನು ನೆಂಟ, ದಿನಾಲು ಬಂದವನು ಹೆಂಟೆ" – ಇವುಗಳು ಹಾಸ್ಯದ ಜೊತೆಗೆ ಜೀವನದ ಕಠಿಣ ಸತ್ಯಗಳನ್ನು ಹೇಳುತ್ತವೆ.

❖ **ಜಾನಪದ ಕಲೆಗಳ ಜೀವಂತಿಕೆ: ದೃಶ್ಯ ಮತ್ತು ಪ್ರದರ್ಶನ ಕಲೆಗಳು:**

ಕನ್ನಡದ ಜಾನಪದ ಕಲೆಗಳು ಕೇವಲ ಸಾಹಿತ್ಯಕ್ಕೆ ಸೀಮಿತವಾಗದೆ, ದೃಶ್ಯ ಮತ್ತು ಚಲನೆಯ ಮೂಲಕ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಈ ಕಲೆಗಳು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿದ್ದು, ನಮ್ಮ ನಾಡಿನ ವೈವಿಧ್ಯಮಯತೆಯನ್ನು ತೋರಿಸುತ್ತವೆ.

**ಅ. ಕರಾವಳಿ ಮತ್ತು ಮಲೆನಾಡಿನ ಸಿರಿ:**

- ಯಕ್ಷಗಾನ: ಇದು ಕರಾವಳಿ ಮತ್ತು ಮಲೆನಾಡು ಭಾಗದ ಪ್ರಮುಖ ಪ್ರದರ್ಶನ ಕಲೆ. ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂದು ಎರಡು ಪ್ರಮುಖ ಶೈಲಿಗಳನ್ನು ಹೊಂದಿರುವ ಯಕ್ಷಗಾನವು ನೃತ್ಯ, ಸಂಗೀತ, ಸಂಭಾಷಣೆ, ವೇಷಭೂಷಣ ಮತ್ತು ಮುಖವರ್ಣಿಕೆಯ ಸಮಾಗಮ. ಪೌರಾಣಿಕ ಕಥೆಗಳನ್ನು ಆಧರಿಸಿ, ಕಲಾವಿದರು ಮಾಡುವ ಪಾತ್ರಾಭಿನಯವು ಪ್ರೇಕ್ಷಕರನ್ನು ಅತೀಂದ್ರಿಯ ಲೋಕಕ್ಕೆ ಕರೆದೊಯ್ಯುತ್ತದೆ. ಈ ಕಲೆಯು ಸಾಮಾಜಿಕ ಟೀಕೆ ಮತ್ತು ವೈಚಾರಿಕ ಸಂಭಾಷಣೆಗಳಿಗೂ ವೇದಿಕೆಯಾಗಿದೆ.

**ಆ. ಬಯಲುಸೀಮೆಯ ಶೌರ್ಯ: ಡೊಳ್ಳು ಕುಣಿತ, ಕಂಸಾಳೆ ಮತ್ತು ವೀರಗಾಸೆ**

- ಡೊಳ್ಳು ಕುಣಿತ: ಇದು ದೇವತಾ ಪ್ರಾರ್ಥನೆ ಮತ್ತು ಧಾರ್ಮಿಕ ಉತ್ಸವಗಳಲ್ಲಿ ಪ್ರದರ್ಶನಗೊಳ್ಳುವ ಶಕ್ತಿಯುತ ಸಮೂಹ ನೃತ್ಯ. ಇದು ಸಾಮೂಹಿಕ ಶಕ್ತಿ ಮತ್ತು ಒಗ್ಗಟ್ಟನ್ನು ಪ್ರದರ್ಶಿಸುತ್ತದೆ.
- ಕಂಸಾಳೆ: ಮೈಸೂರು, ಮಂಡ್ಯ ಭಾಗದಲ್ಲಿ ಮಹದೇಶ್ವರನ ಭಕ್ತರು ಕಂಸಾಳೆ (ಹಿತ್ತಾಳೆಯ ತಾಳ) ಬಾರಿಸುತ್ತಾ ಮಾಡುವ ನೃತ್ಯ. ಇದು ಭಕ್ತಿಯನ್ನು ನೃತ್ಯ ಮತ್ತು ಗಾಯನದ ಮೂಲಕ ಅಭಿವ್ಯಕ್ತಿಸುವ ಅನನ್ಯ ಕಲೆಯಾಗಿದೆ.
- ವೀರಗಾಸೆ: ಶಿವನ ಪೂಜೆಯಲ್ಲಿ ಪ್ರಮುಖವಾದ ಈ ನೃತ್ಯವು, ವೀರಭದ್ರನ ಕೋಪ ಮತ್ತು ಶೌರ್ಯವನ್ನು ಪ್ರದರ್ಶಿಸುತ್ತದೆ. ಕಲಾವಿದರ ಭಯಂಕರ ವೇಷಭೂಷಣ ಮತ್ತು ರುಂಡಮಾಲೆಗಳು ಪ್ರದರ್ಶನಕ್ಕೆ ರೋಮಾಂಚಕತೆಯನ್ನು ನೀಡುತ್ತವೆ.

**ಇ. ಉತ್ತರ ಕರ್ನಾಟಕದ ಕಥಾ ಕಲಿಕೆ: ದೊಡ್ಡಾಟ ಮತ್ತು ಸಣ್ಣಾಟ**

- ಬಯಲಾಟಗಳು: ಬಯಲಾಟ ಅಥವಾ ದೊಡ್ಡಾಟಗಳು ಉತ್ತರ ಕರ್ನಾಟಕದ ಹಬ್ಬ ಮತ್ತು ಜಾತ್ರೆಗಳಲ್ಲಿ ಪ್ರಮುಖ ಮನರಂಜನಾ ರೂಪಗಳು. ಕಥೆ, ಹಾಡು, ನೃತ್ಯ ಮತ್ತು ಹಾಸ್ಯವನ್ನು ಒಳಗೊಂಡಿರುವ ಈ ಪ್ರದರ್ಶನಗಳು ರಾತ್ರಿಯಿಡೀ ನಡೆಯುತ್ತವೆ. ಇವು ಸಾಮಾಜಿಕ ಸಂದೇಶಗಳನ್ನು ಸರಳವಾಗಿ ಜನರಿಗೆ ತಲುಪಿಸುತ್ತವೆ.

❖ **ಕೃಷಿ ಸಂಸ್ಕೃತಿ ಮತ್ತು ಜಾನಪದ: ಒಂದು ಅಧ್ಯಯನ**

- ಕನ್ನಡದ ಜನಪದ ಜ್ಞಾನವು ಕೇವಲ ಸಾಹಿತ್ಯಕ್ಕೆ ಸೀಮಿತವಾಗಿಲ್ಲ; ಅದು ಕೃಷಿ ಪದ್ಧತಿಗಳು, ದೇಸಿ ವೈದ್ಯಕೀಯ ಮತ್ತು ಪರಿಸರ ಜ್ಞಾನದೊಂದಿಗೆ ಹಾಸುಹೊಕ್ಕಾಗಿದೆ. ರೈತನಿಗೆ ಮಳೆಯ ಬಗ್ಗೆ, ಬಿತ್ತನೆ ಮತ್ತು ಕಟಾವಿನ ಸಮಯದ ಬಗ್ಗೆ ಇರುವ ಅನುಭವ ಆಧಾರಿತ ಜ್ಞಾನವು ಜಾನಪದ ಹಾಡುಗಳು ಮತ್ತು ಆಚರಣೆಗಳಲ್ಲಿ ಅಡಗಿದೆ. ಭೂತಾರಾಧನೆ ಮತ್ತು ನಾಗಾರಾಧನೆಯಂತಹ ನಂಬಿಕೆಗಳು ಪರಿಸರ ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯತೆಯ ಅರಿವನ್ನು ಸೂಚಿಸುತ್ತವೆ.
- ಸಮಕಾಲೀನ ಸವಾಲುಗಳು ಮತ್ತು ನಶಿಸಿಹೋಗುವ ಅಪಾಯ
- ಆಧುನಿಕತೆ ಮತ್ತು ಜಾಗತೀಕರಣದ ಯುಗದಲ್ಲಿ, ಕನ್ನಡ ಜಾನಪದ ಸೊಗಡು ಹಲವಾರು ಸವಾಲುಗಳನ್ನು ಎದುರಿಸುತ್ತಿದೆ.
- ಮೌಖಿಕ ಪರಂಪರೆಯ ಅಳಿವಿನ ಅಪಾಯ: ಹಿಂದಿನ ತಲೆಮಾರಿನ ಜ್ಞಾನಿಗಳು ಮತ್ತು ಕಲಾವಿದರು ಇಲ್ಲವಾದಂತೆ, ಅವರೊಂದಿಗೆ ದಾಖಲಾಗದ ಜಾನಪದ ಸಂಪತ್ತು ನಶಿಸಿ ಹೋಗುತ್ತಿದೆ. ಹಲವು ಪ್ರಾದೇಶಿಕ ಹಾಡುಗಳು ಮತ್ತು ಕಥೆಗಳು ಶಾಶ್ವತವಾಗಿ ಕಣ್ಮರೆಯಾಗುವ ಅಪಾಯವಿದೆ.
- ಹೊಸ ಪೀಳಿಗೆಯ ಅನಾಸಕ್ತಿ: ಸಿನಿಮಾ, ಸಾಮಾಜಿಕ ಮಾಧ್ಯಮಗಳು ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಯುವಜನರು ಜಾನಪದ ಕಲೆ ಮತ್ತು ಸಾಹಿತ್ಯದ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಸ್ಥಳೀಯ ಕಲೆಗಳಿಗೆ ದೊರೆಯಬೇಕಾದ ಸ್ಥಾನಮಾನ ಮತ್ತು ಪ್ರೋತ್ಸಾಹದ ಕೊರತೆ ಇದಕ್ಕೆ ಒಂದು ಕಾರಣ.
- ಕಲಾವಿದರ ಆರ್ಥಿಕ ಸಂಕಷ್ಟ: ಜಾನಪದ ಕಲೆಯನ್ನು ನಂಬಿಕೊಂಡಿರುವ ಕಲಾವಿದರಿಗೆ ಸೂಕ್ತ ಆರ್ಥಿಕ ಭದ್ರತೆ, ಗೌರವ ಮತ್ತು ಸರ್ಕಾರದ ಬೆಂಬಲದ ಕೊರತೆಯಿದೆ. ಇದರಿಂದಾಗಿ ಅವರು ತಮ್ಮ ಕಲೆಯನ್ನು ತ್ಯಜಿಸಿ ಇತರ ಉದ್ಯೋಗಗಳನ್ನು ಅರಸಬೇಕಾದ ಅನಿವಾರ್ಯತೆ ಬಂದಿದೆ.

❖ **ಜಾನಪದ ಸೊಗಡಿನ ಸಂರಕ್ಷಣೆ ಮತ್ತು ಪುನರುಜ್ಜೀವನ**

- ಕನ್ನಡ ಜಾನಪದ ಸೊಗಡು ಕೇವಲ ಹಿಂದಿನ ವೈಭವದ ಕುರುಹಲ್ಲ; ಇದು ನಮ್ಮ ಸಂಸ್ಕೃತಿಯ ಹೆಮ್ಮೆಯ ಆಸ್ತಿ. ಈ ಪರಂಪರೆಯನ್ನು ಉಳಿಸಲು ಮತ್ತು ಮುಂಬರುವ ಪೀಳಿಗೆಗೆ ರವಾನಿಸಲು ನಾವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.
- ವಿದ್ಯಾರ್ಜನೆಯಲ್ಲಿ ಅಳವಡಿಕೆ: ಶಾಲಾ ಮತ್ತು ಕಾಲೇಜುಗಳಲ್ಲಿ ಜಾನಪದ ಕಲೆಯನ್ನು ಪಠ್ಯಕ್ರಮದ ಭಾಗವಾಗಿಸುವುದು ಮತ್ತು ಜಾನಪದ ಉತ್ಸವಗಳನ್ನು ಆಯೋಜಿಸುವುದು.
- ತಂತ್ರಜ್ಞಾನದ ಬಳಕೆ: ಜಾನಪದ ಸಾಹಿತ್ಯ ಮತ್ತು ಕಲೆಗಳನ್ನು ಡಿಜಿಟಲ್ ರೂಪದಲ್ಲಿ (ವೀಡಿಯೋ, ಆಡಿಯೋ, ಇ–ಬುಕ್) ದಾಖಲಿಸುವುದು ಮತ್ತು ಇಂಟರ್ನೆಟ್ ಮೂಲಕ ಪ್ರಚಾರ ಮಾಡುವುದು.

- ಕಲಾವಿದರಿಗೆ ಪ್ರೋತ್ಸಾಹ: ಜಾನಪದ ಕಲಾವಿದರಿಗೆ ಗೌರವ ಧನ, ಮಾಸಾಶನ ಮತ್ತು ಪ್ರದರ್ಶನಕ್ಕೆ ಸೂಕ್ತ ವೇದಿಕೆಗಳನ್ನು ಒದಗಿಸುವುದು.
- ಸಂಶೋಧನೆ ಮತ್ತು ಪ್ರಕಟಣೆ: ವಿಶ್ವವಿದ್ಯಾಲಯಗಳು ಮತ್ತು ಅಕಾಡೆಮಿಗಳು ಜಾನಪದದ ಮೇಲೆ ಆಳವಾದ ಸಂಶೋಧನೆಗಳನ್ನು ನಡೆಸಿ, ಅವುಗಳನ್ನು ಸುಲಭವಾಗಿ ಓದಲು ಲಭ್ಯವಾಗುವಂತೆ ಪ್ರಕಟಿಸುವುದು.
- ಕನ್ನಡ ಜಾನಪದ ಸೊಗಡು ಕನ್ನಡಿಗರ ಬದುಕಿನ ಸಾರ, ನಮ್ಮ ಮಣ್ಣಿನ ಮೌಲ್ಯ ಮತ್ತು ಆತ್ಮಗೌರವದ ಸಂಕೇತ. ಇದನ್ನು ಉಳಿಸುವುದು, ಬೆಳೆಸುವುದು ಕೇವಲ ಸಾಂಸ್ಕೃತಿಕ ಜವಾಬ್ದಾರಿ ಮಾತ್ರವಲ್ಲ, ನಮ್ಮ ಭಾಷೆ ಮತ್ತು ಅಸ್ಮಿತೆಯ ಉಳಿವಿನ ಪ್ರಶ್ನೆಯಾಗಿದೆ. ಈ ಮೂಲಕವೇ ಕನ್ನಡದ ಹಿರಿಮೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಜ್ವಲಿಸಲು ಸಾಧ್ಯ.

ಇಂತಹ ಕನ್ನಡ ನಾಡು ನುಡಿಯ ಸೊಬಗನ್ನು ನಾವೆಲ್ಲರೂ ಬಳಸುವುದರ ಮೂಲಕ ಉಳಿಸ ಬೇಕಾದರೆ ನಾವು ದಿನನಿತ್ಯ ಬಳಸಿದಾಗ ಮಾತ್ರ ಆದ್ದರಿಂದ ನಾವು ನೀವೇಲ್ಲರೂ ದಿನನಿತ್ಯ ಬಳಸೋಣ ಮುಂದಿನ ಪೀಳಿಗೆಗೆ ಕನ್ನಡದ ಅಸ್ಮಿತೆಯನ್ನು ಜಗತ್ತಿಗೆ ಸಾರೋಣ.

*****

## ಭಾರತದ ಮೊದಲು ಸ್ವಾತಂತ್ರ್ಯ ಘೋಷಿಸಿಕೊಂಡ ಹಳ್ಳಿ ಈಸೂರಿನ ಹೋರಾಟಗಾರರ ಸ್ಮಾರಕ



# ಕನ್ನಡ ಭಾಷೆಯ ಶಿಕ್ಷಣದಲ್ಲಿನ ಸ್ಥಾನಮಾನ

**ಪೂಜಾ ಎ ಎಸ್.,**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಕನ್ನಡ ನಮ್ಮ ರಾಜ್ಯದ ಜೀವಾಳ, ಜನರ ನಾಡಿನ ನಾಡಿ. ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಪರಂಪರೆಯನ್ನು ಹೊತ್ತಿರುವ ಕನ್ನಡ ಭಾಷೆಗೆ ಶಿಕ್ಷಣ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ತರವಾದ ಸ್ಥಾನವಿದೆ. ಭಾಷೆ ಎಂದರೆ ಕೇವಲ ಸಂವಹನದ ಸಾಧನ ಮಾತ್ರವಲ್ಲ; ಅದು ಜ್ಞಾನ, ಮೌಲ್ಯ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಮುಂದಿನ ಪೀಳಿಗೆಗಳಿಗೆ ಸಾಗಿಸುವ ಶಕ್ತಿಪೂರ್ಣ ಮಾಧ್ಯಮ.ಭಾಷಾ ಹಿನ್ನಲೆಯಲ್ಲಿ, ಕನ್ನಡವು ಶಿಕ್ಷಣ ಕ್ಷೇತ್ರದಲ್ಲಿ ಪಡೆದಿರುವ ಸ್ಥಾನಮಾನವು ರಾಜ್ಯದ ಮೌಲ್ಯಗಳ ಬಲವರ್ಧನೆಗೆ ಹಾಗೂ ವಿದ್ಯಾರ್ಥಿಗಳ ಸಮಗ್ರ ಶಿಕ್ಷಣಕ್ಕೆ ಅತೀವ ಅಗತ್ಯ.

**ಕನ್ನಡ – ಬಾಲ್ಯಶಿಕ್ಷಣದ ಮೂಲಾಧಾರ**

ಶಿಕ್ಷಣ ತಜ್ಞರ ಅಭಿಪ್ರಾಯ ಪ್ರಕಾರ, ಮಕ್ಕಳಿಗೆ ತಾಯಿ ಭಾಷೆಯಲ್ಲಿಯೇ ಶಿಕ್ಷಣ ನೀಡಿದರೆ ಅರ್ಥಗ್ರಹಣ ಶಕ್ತಿ ಹೆಚ್ಚುವುದು, ವಿವೇಕಶೀಲತೆ ವೃದ್ಧಿಯಾಗುವುದು ಮತ್ತು ಕಲಿಕೆಯ ಮೇಲೆ ಆಸಕ್ತಿ ಬಲವಾಗುವುದು. ಈ ದೃಷ್ಟಿಯಿಂದ ನೋಡಿದರೆ, ಕನ್ನಡವು ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಅತ್ಯಂತ ಪರಿಣಾಮಕಾರಿ ಪಾತ್ರ ವಹಿಸುತ್ತಿದೆ. ಮಕ್ಕಳ ಮನಸ್ಸಿನಲ್ಲಿ ಜ್ಞಾನ ಬೀಜ ಬಿತ್ತುವ ಮೊದಲ ಹೆಜ್ಜೆಯೇ ಭಾಷೆ. ಕನ್ನಡದಲ್ಲಿ ಪಾಠವನ್ನು ಕಲಿಸಿದಾಗ ಮಕ್ಕಳು ಅಕ್ಷರಗಳ ಅರ್ಥವನ್ನು ಸ್ವಾಭಾವಿಕವಾಗಿ ಗ್ರಹಿಸುತ್ತಾರೆ. ಕಥೆಗಳು, ಗೀತಗಳು, ಪರಿಸರ ಅಧ್ಯಯನ—ಇವೆಲ್ಲವೂ ಕನ್ನಡದಲ್ಲಿ ಬರುವಾಗ ಮಕ್ಕಳು ಕಲಿಕೆಯನ್ನು ಆನಂದವಾಗಿ ಅನುಭವಿಸುತ್ತಾರೆ.

**ಕನ್ನಡ ಭಾಷೆ – ವ್ಯಕ್ತಿತ್ವ ರೂಪಿಸುವ ಶಕ್ತಿ:**

ಕನ್ನಡ ಸಾಹಿತ್ಯದಲ್ಲಿ ವಚನಗಳು, ಕೀರ್ತನೆಗಳು, ಕಾವ್ಯಗಳು, ಜನಪದ ಗೀತೆಗಳು, ಹಾಗೂ ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಅನೇಕ ಪಾಠಗಳು ಒಳಗೊಂಡಿವೆ. ಇವು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. 'ಸತ್ಯ', 'ಧರ್ಮ', 'ನೈತಿಕತೆ', 'ದಯೆ', 'ಸಮಾನತೆ' ಇಂತಹ ಮೌಲ್ಯಗಳನ್ನು ಮಕ್ಕಳ ಮನೆಯಲ್ಲಿ ಹಾಗೂ ಶಾಲೆಯಲ್ಲಿ ಬೆಳೆಸುವಲ್ಲಿ ಕನ್ನಡ ಪಾಠಗಳು ದೊಡ್ಡ ಕೊಡುಗೆ ನೀಡುತ್ತವೆ. ಇದರಿಂದ ವಿದ್ಯಾರ್ಥಿಗಳು ಕೇವಲ ಪಾಠ ಪುಸ್ತಕದ ಜ್ಞಾನವನ್ನೇ ಕಲಿಯುವುದಲ್ಲ, ಬದುಕಿನ ಜ್ಞಾನವನ್ನೂ ಹುತ್ತಿಕೊಳ್ಳುತ್ತಾರೆ.

**ಮಧ್ಯಮ ಮತ್ತು ಪ್ರೌಢ ಶಿಕ್ಷಣದಲ್ಲಿನ ಕನ್ನಡದ ಸ್ಥಾನ :**

ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಕನ್ನಡ ಪಾಠಗಳು ಭಾಷಾ ಕೌಶಲ್ಯಗಳನ್ನು ಹೆಚ್ಚಿಸುವತ್ತ ಒತ್ತು ನೀಡುತ್ತವೆ. ಓದು, ಬರವಣಿಗೆ, ಮಾತನಾಡುವುದು, ಅರ್ಥೈಸುವುದು, ವಿಶ್ಲೇಷಿಸುವುದು ಹಾಗೂ ಅಭಿವ್ಯಕ್ತಿಶಕ್ತಿಯನ್ನು ವೃದ್ಧಿಸುವ ತರಬೇತಿಯನ್ನು ಕನ್ನಡ ಪಾಠಕ್ರಮ ಒದಗಿಸುತ್ತದೆ. ಸಾಹಿತ್ಯದ ಮೂಲಕ ಮಾನವೀಯತೆ, ಸಾಮಾಜಿಕ ಜವಾಬ್ದಾರಿ, ರಾಷ್ಟ್ರೀಯತೆ ಮತ್ತು ಸಂಸ್ಕೃತಿಜ್ಞಾನ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತದೆ. ವಿಶೇಷವಾಗಿ, ಪಂಪ, ರನ್ನ, ಕುವೆಂಪು, ಬೇಂದ್ರೆ, ಕಂಬಾರ ಮೊದಲಾದವರ ಸಾಹಿತ್ಯ ಕೃತಿಗಳು ವಿದ್ಯಾರ್ಥಿಗಳ ಹೃದಯದಲ್ಲಿ ಕನ್ನಡದ ಬಗ್ಗೆ ಪ್ರೀತಿ ಮತ್ತು ಗೌರವ ಬೆಳೆಸುತ್ತವೆ.ಇದೇ ಸಂದರ್ಭದಲ್ಲಿ, ಕನ್ನಡವು ಎರಡನೇ ಭಾಷೆಯಾಗಿ ಅಥವಾ ಆಯ್ಕೆಯ ವಿಷಯವಾಗಿ ಅನೇಕ

ಶಾಲೆಗಳಲ್ಲಿಯೂ ಕಲಿಸಲಾಗುತ್ತಿದೆ. ಇದು ಕನ್ನಡ ಭಾಷೆಯ ವ್ಯಾಪ್ತಿಯನ್ನು ಹೆಚ್ಚಿಸುವುದರ ಜೊತೆಗೆ ಬಾಹ್ಯ ವಿದ್ಯಾರ್ಥಿಗಳಿಗೂ ಕನ್ನಡ ಕಲಿಯುವ ಅವಕಾಶವನ್ನು ಕಲ್ಪಿಸುತ್ತದೆ.

**ಉನ್ನತ ಶಿಕ್ಷಣ ಮತ್ತು ಕನ್ನಡದ ಶೈಕ್ಷಣಿಕ ವ್ಯಾಪ್ತಿ :**

ಉನ್ನತ ಶಿಕ್ಷಣದಲ್ಲಿ ಕನ್ನಡಕ್ಕೆ ದಿನೇದಿನೇ ಹೆಚ್ಚುತ್ತಿರುವ ಸ್ಥಾನಮಾನವು ಸಂತಸಕರ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಕನ್ನಡವನ್ನು ಪದವಿ, ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ ಮಟ್ಟದಲ್ಲಿ ಕಲಿಸಲಾಗುತ್ತಿದೆ. ಕನ್ನಡದಲ್ಲಿ ಸಂಶೋಧನೆ, ಪ್ರಬಂಧ ಬರವಣಿಗೆ, ಸಾಹಿತ್ಯ ವಿವೇಚನೆ, ಭಾಷಾ ಅಧ್ಯಯನ ಇತ್ಯಾದಿಗಳ ಮೂಲಕ ಕನ್ನಡದ ಜ್ಞಾನ ಪರಂಪರೆ ವಿಸ್ತರಿಸುತ್ತಿದೆ.ಕನ್ನಡ ವಿಷಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಅವಕಾಶವಿದೆ. ಕೆ.ಎ.ಎಸ್, ಪಿ.ಎಸ್ಸಿ, ಟಿ.ಇ.ಟಿ, ಸಿ.ಟಿ.ಇ.ಟಿ ಮೊದಲಾದ ಪರೀಕ್ಷೆಗಳಲ್ಲಿ ಕನ್ನಡ ಕಡ್ಡಾಯ ವಿಷಯವಾಗಿರುವುದು ಈ ಭಾಷೆಯ ಶಿಕ್ಷಣ ಮಹತ್ವವನ್ನು ಇನ್ನಷ್ಟು ಬಲಪಡಿಸುತ್ತದೆ.

**ಆಡಳಿತ ಮತ್ತು ಕಾನೂನುಗಳಲ್ಲಿ ಕನ್ನಡದ ಸ್ಥಾನ :**

ಕರ್ನಾಟಕದ ಅಧಿಕೃತ ಭಾಷೆಯಾಗಿ ಕನ್ನಡಕ್ಕೆ ಶಾಸ್ತ್ರೀಯ ಮಾನ್ಯತೆ ಇದೆ. ಸರ್ಕಾರಿ ಕಚೇರಿಗಳು, ಜಿಲ್ಲಾ ಪಂಚಾಯತಿಗಳು, ಗ್ರಾಮ ಪಂಚಾಯತಿಗಳು, ನ್ಯಾಯಾಲಯಗಳು—ಇವೆಲ್ಲೆಡೆ ಕನ್ನಡ ಬಳಕೆಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಿವೆ. ಶಿಕ್ಷಣದ ಮೂಲಕ ಕನ್ನಡದ ಆಡಳಿತಮಟ್ಟದ ಬಳಕೆಗೆ ಅಗತ್ಯವಿರುವ ಭಾಷಾ ಜ್ಞಾನವನ್ನು ವಿದ್ಯಾರ್ಥಿಗಳು ಸಂಪಾದಿಸಬಹುದು. ಇದು ಆಡಳಿತದಲ್ಲಿ ಸಮಾನತೆ ಮತ್ತು ಸುಗಮ ಸಂವಹನಕ್ಕೆ ದಾರಿಯಿಡುತ್ತದೆ.

**ತಂತ್ರಜ್ಞಾನ ಮತ್ತು ಡಿಜಿಟಲ್ ಯುಗದಲ್ಲಿ ಕನ್ನಡ :**

ಇಂದಿನ ಡಿಜಿಟಲ್ ಯುಗದಲ್ಲಿ ಕನ್ನಡ ತನ್ನ ಸ್ಥಾನಮಾನವನ್ನು ಕಳೆದುಕೊಳ್ಳದೇ, ತಂತ್ರಜ್ಞಾನವನ್ನು ಆಧರಿಸಿಕೊಂಡು ಮುಂದುವರಿಯುತ್ತಿದೆ. ಕನ್ನಡ ಯುನಿಕೋಡ್, ಕನ್ನಡ ಕಂಪ್ಯೂಟಿಂಗ್, ಕನ್ನಡ ಸಾಫ್ಟ್ವೇರ್, ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡ ಬಳಕೆ—ಇವೆಲ್ಲವೂ ಕನ್ನಡದ ತಂತ್ರಜ್ಞಾನೀಕರಣದ ಉದಾಹರಣೆಗಳು. ಆನ್ಲೈನ್ ಶಿಕ್ಷಣ, ಇ–ಲೈಬ್ರರಿಗಳು, ಅಪ್ಲಿಕೇಶನ್ಗಳು ಹಾಗೂ ಡಿಜಿಟಲ್ ಪಾಠಪುಸ್ತಕಗಳಲ್ಲಿ ಕನ್ನಡ ಹೆಚ್ಚಾಗಿ ಬಳಕೆಯಾಗುತ್ತಿರುವುದು ಸಂತೋಷದ ವಿಷಯ.

**ಕನ್ನಡದ ಶಿಕ್ಷಣಕ್ಕೆ ಎದುರಾಗಿರುವ ಸವಾಲುಗಳು :**

- ಇಂಗ್ಲೀಷ್‌ಗೆ ಹೆಚ್ಚುತ್ತಿರುವ ಪ್ರಾಶಸ್ತ್ಯನಗರ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಿರುವುದುಕೆಲವು ಖಾಸಗಿ ಶಾಲೆಗಳಲ್ಲಿ ಕನ್ನಡವನ್ನು ಸಮರ್ಪಕವಾಗಿ ಕಲಿಸದಿರುವುದುಕನ್ನಡ ಸಾಹಿತ್ಯವನ್ನು ಓದುವ ಆಸಕ್ತಿ ಕುಸಿಯುತ್ತಿರುವುದು.ಈ ಸವಾಲುಗಳನ್ನು ಎದುರಿಸಲು, ಮನೆ, ಶಾಲೆ, ಸಮಾಜ ಹಾಗೂ ಸರ್ಕಾರ ಎಲ್ಲರೂ ಕನ್ನಡವನ್ನು ಉತ್ತೇಜಿಸುವ ಜವಾಬ್ದಾರಿಯನ್ನು ಹೊತ್ತು ಮುಂದುವರಿಯಬೇಕು.


**ಶಿಕ್ಷಣವನ್ನು ಬಲಪಡಿಸುವ ಮಾರ್ಗಗಳು :**

1. ಮಕ್ಕಳಿಗೆ ತಾಯಿ ಭಾಷೆಯಲ್ಲೇ ಮೊದಲ ಶಿಕ್ಷಣ.
2. ಕನ್ನಡ ಪಾಠಗಳನ್ನು ಆಕರ್ಷಕವಾಗಿ, ಚಟುವಟಿಕೆ ಆಧಾರಿತವಾಗಿ ಕಲಿಸುವುದು.
3. ಕನ್ನಡದಲ್ಲಿ ತಂತ್ರಜ್ಞಾನ ಆಧಾರಿತ ಅಧ್ಯಯನ ಸಾಮಗ್ರಿ ಅಭಿವೃದ್ಧಿ
4. ಶಾಲೆ–ಮಹಾವಿದ್ಯಾಲಯಗಳಲ್ಲಿ ಕನ್ನಡದ ಬಳಕೆಯನ್ನು ಉತ್ತೇಜಿಸುವುದು
5. ಕನ್ನಡ ಸಾಹಿತ್ಯ, ನಾಟಕ, ಕಲೆ, ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೇ ಪರಿಚಯಿಸುವುದು.
6. ಪೋಷಕರೂ ಕನ್ನಡ ಮಾತನಾಡಲು ಪ್ರೋತ್ಸಾಹ ನೀಡುವುದು.

ಕನ್ನಡ ಭಾಷೆಯ ಶಿಕ್ಷಣದಲ್ಲಿನ ಸ್ಥಾನಮಾನವು ಕೇವಲ ಭಾಷಾ ಅಭಿವ್ಯಕ್ತಿಗೆ ಮಾತ್ರ ಸೀಮಿತವಾಗಿಲ್ಲ. ಇದು ನಮ್ಮ ಸಂಸ್ಕೃತಿ, ಪರಂಪರೆ, ಮೌಲ್ಯ, ಚಿಂತನೆ, ಸಾಹಿತ್ಯ ಇವೆಲ್ಲದರ ಮೂಲ. ಕನ್ನಡವನ್ನು ಶಿಕ್ಷಣದ ಮೂಲಕ ಯುವಪೀಳಿಗೆಗೆ ಪ್ರಸಾರ ಮಾಡುವುದೇ ನಮ್ಮ ಕರ್ತವ್ಯ. ಏಕೆಂದರೆ ಒಂದು ಭಾಷೆ ಉಳಿದಾಗ ಮಾತ್ರ ಒಂದು ಸಂಸ್ಕೃತಿ ಉಳಿಯುತ್ತದೆ. ಕನ್ನಡದ ಶಿಕ್ಷಣ ಬಲವಾಗಿದಾಗ ಮಾತ್ರ ನಮ್ಮ ನಾಡಿನ ಬೌದ್ಧಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ರಚನೆ ಬಲವಾಗಿರುತ್ತದೆ. ಕನ್ನಡ ಕಲಿಸುವುದು, ಮಾತನಾಡುವುದು, ಓದುವುದು—ಇವೆಲ್ಲವೂ ನಮ್ಮ ಗೌರವ, ನಮ್ಮ ಪರಂಪರೆ, ನಮ್ಮ ಗುರುತಿನ ಪರಿಪಾಲನೆ. ಆದ್ದರಿಂದ, ಕನ್ನಡಕ್ಕೆ ಶಿಕ್ಷಣದಲ್ಲಿ ಗೌರವಯುತ ಸ್ಥಾನಮಾನ ನೀಡುವುದು ಮತ್ತು ಅದನ್ನು ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ.

*****

## ಸಮನ್ವಯ ಕವಿ, ರಾಷ್ಟ್ರಕವಿ ಜಿ ಎಸ್ ಶಿವರುದ್ರಪ್ಪನವರ ಜನ್ಮಸ್ಥಳ ಶಿಕಾರಿಪುರ ತಾಲ್ಲೂಕು



# ವಚನ ಸಾಹಿತ್ಯದ ಇತಿಹಾಸ

**ರೋಹಿಣಿ ಎಂ.,**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

**"ವಚನದ ಜ್ಯೋತಿಯಲ್ಲಿ ಜ್ಞಾನವ ಬೆಳಕು,**
**ಮಾನವ ಮೌಲ್ಯಗಳೇ ಅದರ ಉಸಿರು."**

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿರುವ ವಚನ ಸಾಹಿತ್ಯವು 12ನೇ ಶತಮಾನದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಪ್ರಮುಖ ಶಿಲ್ಪವಾಗಿದೆ. ಜನಸಾಮಾನ್ಯರ ಭಾಷೆಯಲ್ಲಿ, ಅವರ ನೋವು, ಸಂತೋಷ, ಭಕ್ತಿ, ನೈತಿಕತೆ ಹಾಗೂ ಸಮಾನತೆಯ ಸಂದೇಶಗಳನ್ನು ಸಾರಿದ ವಚನಗಳು ಕನ್ನಡದ ಭಾವಜಗತ್ತನ್ನು ಹೊಸ ದಾರಿಯಲ್ಲಿ ಬೆಳಗಿಸಿದವು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣರ ಚಳವಳಿಯು ಈ ವಚನಗಳ ಬೆನ್ನಿಗೆ ನಿಂತಿದ್ದ ಪ್ರಮುಖ ಶಕ್ತಿ.

12ನೇ ಶತಮಾನ ಕರ್ನಾಟಕವು ಜಾತಿ, ವರ್ಗ, ಅಸಮಾನತೆ, ಶೋಷಣೆ ಮತ್ತು ಆಚರಣೆಗಳ ಜಂಜಾಟದಲ್ಲಿ ಸಿಲುಕಿಕೊಂಡಿತ್ತು. ಇಂಥ ಸಂದರ್ಭದಲ್ಲಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಮುಂತಾದ ಮಹತ್ವದ ಶರಣರು ಸಮಾಜದಲ್ಲಿ ಸಮಾನತೆ, ಕಾರ್ಯಪ್ರಾಮುಖ್ಯತೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಜಾಗೃತಗೊಳಿಸಲು ಮುಂದಾದರು. ಇವರ ಆಳವಾದ ಅನುಭವ ಮತ್ತು ತತ್ವಚಿಂತನೆಗಳು ವಚನ ಎಂಬ ಸರಳ, ನೇರ ಮತ್ತು ಗಾಢವಾದ ಸಾಹಿತ್ಯರೂಪವನ್ನು ಪಡೆದವು. ವಚನ ಎಂಬ ಪದವೇ "ಹೇಳುವುದು", "ಉಚ್ಚಾರಣೆ" ಎಂಬ ಅರ್ಥವನ್ನು ನೀಡುತ್ತದೆ. ಈ ಕಾವ್ಯರೂಪಕ್ಕೆ ಯಾವುದೇ ಛಂದಸ್ಸಿನ ಬಲಾಪೂರ್ತಿ ಇಲ್ಲ; ಇದು ಸ್ವತಂತ್ರವಾಗಿ ಹರಿಯುವ ಗದ್ಯ–ಪದ್ಯ ಮಿಶ್ರಿತ ಶೈಲಿ.

ವಚನ ಸಾಹಿತ್ಯದ ಬೆಳವಣಿಗೆಗೆ ಕಲ್ಯಾಣ (ಇಂದಿನ ಬಸವಕಲ್ಯಾಣ) ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಸ್ಥಾಪಿತವಾದ ಅನುಭವ ಮಂಟಪವನ್ನು ವಿಶ್ವದ ಮೊದಲ 'ಪ್ರಜಾತಂತ್ರಾತ್ಮಕ ಆಧ್ಯಾತ್ಮಿಕ ಮತ್ತು ಸಾಮಾಜಿಕ ಚಿಂತನೆಗಳ ವೇದಿಕೆ' ಎಂದು ಪರಿಗಣಿಸಲಾಗಿದೆ. ಇಲ್ಲಿ ಶರಣರು ತಮ್ಮ ಅನುಭವ, ವಿಚಾರ, ಆತ್ಮಪರಿಶೀಲನೆ ಹಾಗೂ ವಿದ್ಯಾಭ್ಯಾಸವನ್ನು ಹಂಚಿಕೊಂಡು ಸಮಾಜದ ಪರಿವರ್ತನೆಗೆ ದಾರಿತೋರಿದರು. ಈ ಮಂಟಪದಲ್ಲಿ ನಡೆದ ಚರ್ಚೆಗಳು ವಚನ ರೂಪದಲ್ಲಿ ಉಳಿದು ಇಂದಿಗೂ ಸಾಹಿತ್ಯರಾಜ್ಯದಲ್ಲಿ ಶಾಶ್ವತ ಸ್ಥಾನ ಪಡೆದಿವೆ.

**"ವಚನದ ನುಡಿಯಲಿ ಸತ್ಯದ ನೋಟ,**
**ಸಮಾನತೆಯ ಸಮಾಜಕ್ಕೆ ಇದು ಮೂಲ ಕೋಟೆ."**

ವಚನ ಸಾಹಿತ್ಯದ ಮಹತ್ವ ಅದರ ಸರಳ ಹಾಗೂ ಜನಪರ ಭಾಷೆಯಲ್ಲಿ ನಿಕ್ಷಿಪ್ತವಾಗಿದೆ. ಕಠಿಣ ಸಂಸ್ಕೃತಪದಗಳಿಗಿಂತ, ಜನರ ಮಾತಿನ ಕನ್ನಡಕ್ಕೆ ಹೆಚ್ಚಿನ ಮೌಲ್ಯ ನೀಡಲಾಯಿತು. "ಕೆಲಸವೇ ಪೂಜೆ", "ಸಮಾನತೆ", "ಸ್ತ್ರೀ–ಪುರುಷ ಸಮಾನ ಹಕ್ಕು", "ಭಕ್ತಿಯ ನೈಜ ಅರ್ಥ" ಇಂತಹ ವಿಷಯಗಳನ್ನೆಲ್ಲ ವಚನಗಳಲ್ಲಿ ಬಲವಾಗಿ ಪ್ರತಿಪಾದಿಸಲಾಯಿತು. ಅಕ್ಕಮಹಾದೇವಿಯವರು ತಮ್ಮ ವೈರಾಗ್ಯ, ಭಕ್ತಿ ಮತ್ತು ಅಂತರ್ಮುಖ ಚಿಂತನೆಯ ಮೂಲಕ ಮಹಿಳೆಯರ ಸ್ಥಾನಮಾನವನ್ನು ಹೊಸ ಮಟ್ಟಕ್ಕೆ ಎತ್ತಿದರು. ಅಲ್ಲಮಪ್ರಭುವಿನ ವಚನಗಳು ಆಳವಾದ

ತತ್ವಶಾಸ್ತ್ರವನ್ನು ಹೊತ್ತಿದ್ದು, ಆತ್ಮಜ್ಞಾನ ಮತ್ತು ಪರಮತತ್ವದ ವಿಚಾರಗಳನ್ನು ನಿರೂಪಿಸುತ್ತವೆ. ಬಸವಣ್ಣನವರ ವಚನಗಳು ಸಮಾಜದ ಅಸಮಾನತೆಗಳ ವಿರುದ್ಧದ ಹೋರಾಟಕ್ಕೆ ಶಕ್ತಿ ನೀಡುತ್ತವೆ.

ಒಟ್ಟಾರೆಯಾಗಿ 300ಕ್ಕೂ ಹೆಚ್ಚು ಶರಣರು ಸುಮಾರು 12,000ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ ಎನ್ನುವುದು ಸಂಶೋಧಕರ ಅಭಿಪ್ರಾಯ. ಇವುಗಳಲ್ಲಿ ಭಕ್ತಿಯೊಂದಿಗೆ ಸಮಾಜದ ನೈತಿಕತೆ, ಮೌಲ್ಯಗಳು, ಅನುಭವ ಮತ್ತು ಮಾನವೀಯತೆಯ ಸಂದೇಶಗಳು ಒಗ್ಗೂಡಿವೆ. ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ದಿಕ್ಕನ್ನು ಬದಲಿಸಿದಷ್ಟೇ ಅಲ್ಲ, ಸಮಾಜ ಸುಧಾರಣೆಯ ಬೃಹತ್ ವೇದಿಕೆಯಾಗಿಯೂ ಪರಿಣಮಿಸಿತು. ಜಾತಿಭೇದ, ಮತಾಧಿಪತ್ಯ, ಆಚರಣೆ ಮತ್ತು ಮೂಢನಂಬಿಕೆಗಳನ್ನು ತೊಡೆದುಹಾಕುವಲ್ಲಿ ವಚನಗಳು ನಿರ್ಣಾಯಕ ಪಾತ್ರ ವಹಿಸಿವೆ.

ಇಂದಿಗೂ ವಚನ ಸಾಹಿತ್ಯವು ಪಠ್ಯಪುಸ್ತಕಗಳಲ್ಲಿ, ಕಲೆ–ಸಂಗೀತಗಳಲ್ಲಿ, ಸಂಸ್ಕೃತಿಯ ಆಚರಣೆಗಳಲ್ಲಿ ಜೀವಂತವಾಗಿದೆ. ಅದರ ಮೌಲ್ಯಗಳು ಕಾಲಾಂತರಕ್ಕೂ ಶೋಷಣೆಯ ವಿರುದ್ಧದ ಶಕ್ತಿ, ಸಮಾನತೆಯ ದಾರಿ ಮತ್ತು ಮಾನವೀಯತೆಯ ಬೆಳಕು ಎಂದು ಪರಿಗಣಿಸಲ್ಪಡುತ್ತವೆ. ಜೀವನಕ್ಕೆ ನೈಜವಾದ ಅರ್ಥ ನೀಡುವ ವಚನ ಸಾಹಿತ್ಯವು ಕೇವಲ ಭಕ್ತಿಗೀತೆಗಳ ಸಂಕಲನವೇ ಅಲ್ಲ, ಅದು ಒಂದು ಸಾಮಾಜಿಕ ಕ್ರಾಂತಿಯ ಘೋಷಣೆ. ಇದರಿಂದಾಗಿ ವಚನ ಸಾಹಿತ್ಯವು ಕನ್ನಡ ಸಂಸ್ಕೃತಿ–ಸಾಹಿತ್ಯದ ಅನನ್ಯ ಹೆಮ್ಮೆ ಮತ್ತು ಅಮೂಲ್ಯ ಪರಂಪರೆ ಎಂದು ಪರಿಗಣಿಸಲಾಗುತ್ತದೆ.

*****

## ಐತಿಹಾಸಿಕ ರಾಮೇಶ್ವರ ದೇಗುಲ ಕೆಳದಿ



# ಕನ್ನಡದ ಕೀರ್ತನಾಕಾರರು

**ರೂಪಿಣಿ ಜಿ**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಕನ್ನಡ ಸಾಹಿತ್ಯ ಸೃಷ್ಟಿ ಮಾನವ ಭಾವನೆಗಳ ನಿತ್ಯವೂ ಹಸಿವಿನ ಮಾತು. ಕಾವ್ಯಗಳಲ್ಲಿ, ಕಥೆಗಳಲ್ಲಿ, ನಾಟಕಗಳಲ್ಲಿ, ಗಾನದ ಪರಂಪರೆಗಳಲ್ಲಿ, ಸಮಾಜ ಬಾಳಿನ ಮೌಲ್ಯ, ಧರ್ಮ, ನೈತಿಕತೆ, ಭಕ್ತಿ, ನೀತಿ ಮತ್ತು ಮಾನವೀಯತೆಯ ಸುಗಂಧ ತುಂಬಿದೆ. ಕನ್ನಡದ ಭಕ್ತಿ ಸಾಹಿತ್ಯದಲ್ಲಿ ಕೀರ್ತನೆಗಳು ಅತ್ಯಂತ ಜನಪ್ರಿಯ ಹಾಗೂ ಜೀವಂತ ಕಲೆ. ಕೀರ್ತನೆ ಎಂದರೆ ದೇವರನ್ನು ಬಲ್ಲುದಕ್ಕೂ, ಭಕ್ತಿಯನ್ನು ಬೆಳೆಸುವುದಕ್ಕೂ, ಜೀವನದ ಸತ್ಯವನ್ನು ತಿಳಿಸುವ ಭಾವಗೀತೆ. ಕೀರ್ತನೆಗಳಲ್ಲಿ ಹೆಸರಾಂತರು ಕನಕದಾಸರು, ಪುರಂದರ ದಾಸರು, ವಿಜಯ ದಾಸರು, ಗೋಪಾಲ ದಾಸರು, ಜಗನ್ನಾಥ ದಾಸರು ಮುಂತಾದವರು.

ಕೀರ್ತನೆಗಳು ಭಕ್ತಿ ಕಾವ್ಯದ ಪರಿಪೂರ್ಣ ರೂಪವಾಗಿವೆ. ಕೇವಲ ಹಾಡುಗಳಲ್ಲ; ಅದು ನೈತಿಕ ಚಿಂತನೆ, ಸತ್ವವೃತ್ತಿ, ಜೀವನ ಶಿಕ್ಷಣ ನೀಡುವ ಪವಿತ್ರ ಕಾವ್ಯ. ಇಲ್ಲಿ ಕೇವಲ ದೇವರ ಹೆಸರು ಹಾಡಿಲ್ಲ; ಮಾನವ ಪರಮ ಶ್ರೇಷ್ಠತೆ, ಸಮಾಜ ಸುಧಾರಣೆ, ಜಾತಿಮತ ಭೇದ ನಿವಾರಣೆ, ಮಾನವೀಯತೆ ಮತ್ತು ಪ್ರೀತಿ ಪರಮ ಧರ್ಮವೆಂದು ಸಾರಲಾಗಿದೆ.

**ಕೀರ್ತನೆಗಳ ಸ್ವರೂಪ ಮತ್ತು ವೈಶಿಷ್ಟ್ಯಗಳು**

ಕೀರ್ತನೆಗಳು ಕನ್ನಡ ಭಕ್ತಿ ಸಾಹಿತ್ಯದ ಅತ್ಯಂತ ಜೀವಂತ ಪರಂಪರೆ. ಇವುಗಳ ಒಳನೋಟ ಈ ಕೆಳಗಿನಂತಿವೆ:

❖ **ಭಕ್ತಿ ಮತ್ತು ಮಾನವೀಯ ಮೌಲ್ಯಗಳು**

ದೇವರ ಇಚ್ಛೆಗೆ ಶರಣಾಗಬೇಕು ಎನ್ನುವ ಭಾವನೆ ಎಲ್ಲರೂ ಒಂದೇ ದೇವರ ಮಕ್ಕಳು ಎಂಬ ತತ್ವ ಜಾತಿ, ಮತ, ವರ್ಣ ಪರಮಾರ್ಥವನ್ನು ಕಡೆಗಣಿಸುವ ಸತ್ಯ. ಸಂಗೀತಮಯ ಕಾವ್ಯ ರಾಗ, ತಾಳ, ಲಯಕ್ಕೆ ಹೊಂದುವ ಸರಳ ಪದಗಳು ವಾಚ್ಯ, ಗಾಯನ ಮತ್ತು ಭಾವದ ಸಂಯೋಜನೆ ಎಲ್ಲರಿಗೂ ಅರ್ಥವಾಗುವ ಭಾಷೆ. ನೀತಿ–ನೈತಿಕತೆ ನ್ಯಾಯ, ದಯೆ, ಸತ್ಯ, ಪ್ರೀತಿ ಧರ್ಮಕ್ಕಿಂತ ಮಾನವೀಯತೆ ಮುಖ್ಯ ಎಂಬ ಸಂದೇಶ
ಕೆಟ್ಟ ಚಾಳಿ, ದುರುದ್ದೇಶಗಳ ವಿರೋಧ ಜನಜೀವನದ ಅನುಭವ ರೈತನ ನೋವು, ಬಡವರ ಕಷ್ಟ, ಸಮಾಜದ ಅನ್ಯಾಯ ದೇವರ ಕೃಪೆ, ಪರಕಾಯ ಪ್ರವೇಶದಂತೆ "ಜೀವನದ ಹಾಡು".

❖ **ಪ್ರಮುಖ ಕನ್ನಡ ಕೀರ್ತನೆಕಾರರು ಮತ್ತು ಅವರ ಕೊಡುಗೆ**

- **ಪುರಂದರ ದಾಸರು (1484–1564)** ; "ಕನ್ನಡದ ದಾಸಸಾಹಿತ್ಯದ ಪಿತಾಮಹ" ಪುರಂದರ ದಾಸರು ಕೀರ್ತನೆಗಳ ಮೂಲಕ ಭಕ್ತಿ, ಸಮಾಜ ಸುಧಾರಣೆ ಮತ್ತು ಸಂಗೀತ ಶಿಕ್ಷಣವನ್ನು ನೀಡಿದವರು. ಇವರು ಜನರಿಗೆ ಸಂಗೀತ ಕಲಿಸುವ ಗಮಕರ ರೂಪವನ್ನು ನಿರ್ಮಿಸಿದರು. ಪುರಂದರ ದಾಸರ ಕೀರ್ತನೆಗಳಲ್ಲಿ: ದುಷ್ಟತನಕ್ಕೆ ತೀವ್ರ ವಿರೋಧ, ಅಹಂಕಾರದ ಖಂಡನೆ, "ಸತ್ಯವೇ ದೇವರು" ಎಂಬ ಸಂದೇಶ ಪ್ರಸಿದ್ಧ ಕೀರ್ತನೆಗಳು **"ಜಗದೋದ್ಧಾರಣ ಆದಿಸಿ"** ಸಾಮಾಜಿಕ ಸಂದೇಶ ಪುರಂದರ ದಾಸರು ಸಮಾಜದಲ್ಲಿ ಜಾತಿ ಹಾಗೂ ಅನ್ಯಾಯವಿರುದ್ಧ ಹೋರಾಡಿದರು. ದೇವನ ಭಕ್ತಿ ಎಲ್ಲರಿಗೂ ಎಂಬ ಸಮಾನತೆಯ ದೃಷ್ಟಿ ಅವರ ಕೀರ್ತನೆಗಳಲ್ಲಿ ಸ್ಪಷ್ಟ.

- ಕನಕ ದಾಸರು (1509–1609) : "ಸಮಾನತೆಯ ಭಕ್ತ ಕವಿ" ಕನಕದಾಸರು ಕನ್ನಡ ಭಕ್ತ ಕಾವ್ಯದ ಆತ್ಮಗಾಳಿ. "ಜಾತಿ ಮನುಷ್ಯನನ್ನು ಮೇಲ್ಮೈಯಲ್ಲಿ ಮಾತ್ರ ಬೇರ್ಪಡಿಸುತ್ತದೆ; ದೇವರಿಗೆ ಎಲ್ಲರೂ ಸಮಾನ" ಎಂಬ ತತ್ತ್ವ ಹೇಳಿದವರು. ಅವರ ತತ್ವಗಳು: ಮಾನವೀಯತೆ ದೇವರ ಮಾರ್ಗ ಬುದ್ದಿ ಮತ್ತು ಭಕ್ತಿ — ಎರಡೂ ಅಗತ್ಯ

ಅಧರ್ಮಕ್ಕೆ ವಿರುದ್ಧವಾದ ಕಾವ್ಯ ಪ್ರಸಿದ್ಧ ಕೃತಿಗಳು "ಬಾಗಿಲು ತೇರಯ್ಯಾ" "ನೀನೇಕರುಣಾಸಿಂಧು" "ಹಗಲಿರುಳು" ವಿಶೇಷತೆ ಕನಕದಾಸರು ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಿ ಪ್ರವೇಶಕ್ಕೆ ಅನುಮತಿ ಇಲ್ಲದಿದ್ದರೂ, ದೇವರ ಮುಖ "ಕನಕ ಕಿಂಡಿ" ಮೂಲಕ ಅವರಿಗೆ ಕಾಣಿಸಿಕೊಂಡುದು, ಸಮಾನತೆಗೆ ದೇವರು ಕೊಟ್ಟ ಆದರ್ಶ.

- **ವಿಜಯ ದಾಸರು (1682–1755)** ವಿಜಯ ದಾಸರು ಭಾಗವತ ಪರಂಪರೆಯ ಮಹಾನ್ ತತ್ತ್ವಜ್ಞರು. ಅವರ ಕೀರ್ತನೆಗಳು: ಆತ್ಮಜ್ಞಾನ, ಭಕ್ತಿ, ಸತ್ಸಂಗ ಮತ್ತು ಧ್ಯಾನ, ದೇವರೊಂದಿಗೆ ನಂಟು, ಪ್ರಖ್ಯಾತ ಕೀರ್ತನೆ "ಕೃಷ್ಣಾ ನೀ ಬೇಗನೆ ಬಾರೋ" ವೈಶಿಷ್ಟ್ಯ ವಿಜಯದಾಸರ ಸಂಗೀತ ಕೀರ್ತನೆಗಳು ಭಾವನಾತ್ಮಕವಾಗಿದ್ದು, ಜನರನ್ನು ಭಗವಂತನೊಂದಿಗೆ ಭಕ್ತಿಗುರಿಗೆ ಕೊಂಡೊಯ್ಯುತ್ತವೆ.
- **ಜಗನ್ನಾಥ ದಾಸರು (1728–1809)** "ತತ್ತ್ವದ ದಾಸಕವಿ" ಜಗನ್ನಾಥ ದಾಸರು ತತ್ತ್ವಪರ ದಾಸಕವಿ. ಮುಖ್ಯ ಕೃತಿ: "ಹರಿಕಥಾ ಅಮೃತಸಾರ" — ಜೀವನ, ಆತ್ಮ, ದೇವ, ಭಕ್ತಿ, ಮೌಲ್ಯಗಳನ್ನು ಬಿಂಬಿಸುವ ಮಹಾಕಾವ್ಯ. ತತ್ತ್ವ– ಜೀವ–ಬ್ರಹ್ಮ ತತ್ತ್ವ, ಭಾಗವತ ಧರ್ಮ, ಶರಣಾಗತಿ ಅವರ ಕೀರ್ತನೆಗಳಲ್ಲಿ ಭಕ್ತಿ ಭಾವನೆಗೆ ಜೊತೆ ಜ್ಞಾನ, ತತ್ತ್ವ ಮತ್ತು ಧ್ಯಾನ ಬಲವಾಗಿ ಕಾಣುತ್ತದ

- ಗೋಪಾಲ ದಾಸರು – ಗೋಪಾಲದಾಸರು ದಾಸಪಂಥದಲ್ಲಿ ಜನಜೀವನ ತತ್ವವನ್ನು ಹಾಡಿದ ಭಕ್ತ ಕವಿ.

ಕೃತಿಗಳ ಸ್ವರೂಪ ಸಂಕಟದ ಪರಿಹಾರವಾಗಿ ಭಕ್ತಿ, ದುಃಖ–ಸುಖಗಳ ಸಮತೋಲನ, ಪರಮಾತ್ಮನ ಕೃಪೆಯ ಮೇಲೆ ನಂಬಿಕೆ. ಸಾಮಾಜಿಕ ಸಂದೇಶ "ದೇವರನ್ನು ಅರಿತುಕೊಂಡರೆ ಕಷ್ಟ ಕಡಿಮೆಯಾಗುತ್ತದೆ" ಎನ್ನುವ ಮಾನವೀಯ ದೃಷ್ಟಿಕೋನ, ಕೀರ್ತನೆಗಳ ಸಾಮಾಜಿಕ ಕೊಡುಗೆ

ಕೀರ್ತನೆಗಳಲ್ಲಿದೆ:

- ಜಾತಿ ಅಸಮಾನತೆ ವಿರೋಧ
- ಸೇವೆಯ ಮಹತ್ವ
- ಅಂಧನಂಬಿಕೆಗಳಿಗೆ ತಿರುಗೇಟು
- ಸಾಖ್ಷಾತ ಸತ್ಯ — ಮಾನವೀಯತೆ
- ದುರುದ್ದೇಶಗಳ ವಿರೋಧ
- ಮಹಿಳೆಯರ ಗೌರವ ಮತ್ತು ಸಮಾನತೆ
- ದಾಸ ಸಾಹಿತ್ಯವೇ ಸಮಾಜದ ವೈಚಾರಿಕ ಶೋಧನೆ.

ಕನ್ನಡದ ಕೀರ್ತನೆ ಪರಂಪರೆ ಭಕ್ತಿ, ಸಂಗೀತ, ಕಾವ್ಯ ಮತ್ತು ಬದುಕಿನ ತಾತ್ವಿಕ ಬೋಧನೆಯ ದೇವಾಲಯ. ಪುರಂದರ ದಾಸರು ಕೀರ್ತನೆಗಳ ಗಂಗೆಯನ್ನು ಹರಿಸಿದರು; ಕನಕದಾಸರು ಮಾನವೀಯತೆ ಎನ್ನುವ ನದಿಯನ್ನು ಒಳಗೊಳಿಸಿದರು; ವಿಜಯ, ಗೋಪಾಲ, ಜಗನ್ನಾಥ ದಾಸರು ಅದನ್ನು ತತ್ತ್ವಪರ ಜ್ಞಾನ ಸಾಗರವಾಗಿಸಿದರು. ಕೀರ್ತನೆಗಳು ಹಿಂದೂ ಪರಂಪರೆಯಷ್ಟೇ ಅಲ್ಲ; ಅವು ಮಾನವತೆ, ಸಮಾನತೆ ಮತ್ತು ನೀತಿವಾದದ ಶಾಶ್ವತ ದಾರಿ. ಕನ್ನಡದ ಕೀರ್ತನೆಕಾರರು ನಮ್ಮ ಬದುಕಿಗೆ ಅನಾವರಣ ಮಾಡಿದ ಪಾಠಗಳು ಇಂದು ಕೂಡ ಸಮಾಜದ ಬೆಳಕಾಗಿ ಉಳಿದಿವೆ.

# ಕನ್ನಡದ ಬರವಣಿಗೆ

**ಸಾಜನ್ ಬಾನು ಬಾಗಿಲಮನೆ**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಕನ್ನಡವು ಭಾರತದ ಅತ್ಯಂತ ಪ್ರಾಚೀನ ಮತ್ತು ಶ್ರೀಮಂತ ಭಾಷೆಗಳಲ್ಲಿ ಒಂದಾಗಿದೆ. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಈ ಭಾಷೆಯ ಬೆಳವಣಿಗೆಯಲ್ಲಿ ಕನ್ನಡ ಬರವಣಿಗೆಯ ಪಾತ್ರ ಅತ್ಯಂತ ಮಹತ್ವದ್ದು. ಬರವಣಿಗೆ ಮಾನವನ ಆಲೋಚನೆಗಳನ್ನು, ಭಾವನೆಗಳನ್ನು ಮತ್ತು ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಶಕ್ತಿಯ ಮಾಧ್ಯಮವಾಗಿದೆ.

ಬರವಣಿಗೆ ಎಂದರೆ ಕೇವಲ ಅಕ್ಷರಗಳನ್ನು ಬರೆಯುವುದು ಮಾತ್ರವಲ್ಲ, ಅದು ಮನಸ್ಸಿನ ಭಾವನೆಗಳನ್ನು ಶಬ್ದಗಳ ಮೂಲಕ ವ್ಯಕ್ತಪಡಿಸುವ ಕಲೆಯಾಗಿದೆ. ಕನ್ನಡ ಬರವಣಿಗೆಯಿಂದ ಸಾಹಿತ್ಯ, ಕಾವ್ಯ, ಕತೆ, ನಾಟಕ, ಜೀವನ ಚರಿತ್ರೆ ಮೊದಲಾದ ಸಾಹಿತ್ಯ ರೂಪಗಳು ರೂಪುಗೊಂಡಿವೆ. ಕನ್ನಡ ಬರವಣಿಗೆ ಪ್ರಾಚೀನ ಕಾಲದಲ್ಲಿ ಶಿಲಾಶಾಸನಗಳು, ತಾಳೆಗರಿ ಗ್ರಂಥಗಳು ಹಾಗೂ ಕೈಬರಹ ಮೂಲಕ ಬೆಳವಣಿಗೆಯಾಯಿತು. ಕಾಲಕ್ರಮೇಣ ಮುದ್ರಣ ಯಂತ್ರಗಳ ಆಗಮನದಿಂದ ಕನ್ನಡ ಪುಸ್ತಕಗಳು ಜನರಿಗೆ ಸುಲಭವಾಗಿ ಲಭ್ಯವಾದವು. ಇಂದಿನ ಡಿಜಿಟಲ್ ಯುಗದಲ್ಲಿ ಕಂಪ್ಯೂಟರ್, ಮೊಬೈಲ್ ಹಾಗೂ ಇಂಟರ್ನೆಟ್ ಮೂಲಕ ಕನ್ನಡ ಬರವಣಿಗೆ ಇನ್ನಷ್ಟು ವಿಸ್ತಾರಗೊಂಡಿದೆ.

ಕನ್ನಡ ಬರವಣಿಗೆಯು ವಿದ್ಯಾರ್ಥಿಗಳ ಬೌದ್ಧಿಕ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳು ಪ್ರಬಂಧ, ರಚನೆ, ಪತ್ರ ಬರವಣಿಗೆಯ ಮೂಲಕ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಕಲಿಯುತ್ತಾರೆ. ಇದರಿಂದ ಅವರ ಚಿಂತನಾ ಶಕ್ತಿ, ಕಲ್ಪನಾ ಶಕ್ತಿ ಮತ್ತು ಭಾಷಾ ಸಾಮರ್ಥ್ಯವು ಹೆಚ್ಚುತ್ತದೆ. ಕನ್ನಡ ಬರವಣಿಗೆಯನ್ನು ಅಭ್ಯಾಸ ಮಾಡುವುದರಿಂದ ಶಬ್ದಕೋಶ ವಿಸ್ತಾರವಾಗುತ್ತದೆ. ಸರಿಯಾದ ವ್ಯಾಕರಣ ಬಳಕೆ, ಶುದ್ಧ ಅಕ್ಷರ ಬರವಣಿಗೆ ಹಾಗೂ ಶೈಲಿಬದ್ಧ ಬರವಣಿಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿಯಾಗಿದೆ. ಒಳ್ಳೆಯ ಬರವಣಿಗೆ ವ್ಯಕ್ತಿಯನ್ನು ಸಮಾಜದಲ್ಲಿ ಗೌರವ ಪಡೆದವನಾಗಿಸುತ್ತದೆ.

ಕನ್ನಡ ಬರವಣಿಗೆ ಕೇವಲ ಭಾಷೆಯ ಬಳಕೆಯಷ್ಟೇ ಅಲ್ಲ, ಅದು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಚಿಂತನೆಯ ಪ್ರತಿಬಿಂಬವಾಗಿದೆ. ಬರವಣಿಗೆಯ ಮೂಲಕ ನಾವು ನಮ್ಮ ಆಲೋಚನೆಗಳನ್ನು ಶಾಶ್ವತವಾಗಿ ದಾಖಲಿಸಬಹುದು. ಮಾತು ಕಣ್ಮರೆಯಾಗಬಹುದು, ಆದರೆ ಬರವಣಿಗೆ ಶಾಶ್ವತವಾಗಿರುತ್ತದೆ.

ಪ್ರಾಚೀನ ಕಾಲದಲ್ಲಿ ಕನ್ನಡ ಬರವಣಿಗೆ ಶಿಲಾಶಾಸನಗಳು, ತಾಳೆಗರಿ ಗ್ರಂಥಗಳು, ಓಲೆಗರಿ ಬರಹಗಳ ಮೂಲಕ ಆರಂಭವಾಯಿತು. ನಂತರ ಮುದ್ರಣ ತಂತ್ರಜ್ಞಾನದ ಬೆಳವಣಿಗೆಯಿಂದ ಕನ್ನಡ ಪುಸ್ತಕಗಳು ವ್ಯಾಪಕವಾಗಿ ಲಭ್ಯವಾಯಿತು. ಇಂದಿನ ಯುಗದಲ್ಲಿ ಮೊಬೈಲ್, ಕಂಪ್ಯೂಟರ್, ಸಾಮಾಜಿಕ ಮಾಧ್ಯಮಗಳ ಮೂಲಕ ಕನ್ನಡ ಬರವಣಿಗೆ ಇನ್ನಷ್ಟು ಜನಪ್ರಿಯವಾಗಿದೆ.

ವಿದ್ಯಾರ್ಥಿಗಳ ಜೀವನದಲ್ಲಿ ಕನ್ನಡ ಬರವಣಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಇದು ಅವರ ಅಭಿವ್ಯಕ್ತಿ ಶಕ್ತಿಯನ್ನು ಹೆಚ್ಚಿಸುತ್ತದೆ. ಪ್ರಬಂಧ, ಪತ್ರ, ಕವನ, ಕಥೆ ಬರವಣಿಗೆಯಿಂದ ಅವರ ಕಲ್ಪನಾಶಕ್ತಿ ಹಾಗೂ ಸೃಜನಶೀಲತೆ ವೃದ್ಧಿಸುತ್ತದೆ. ಕನ್ನಡ ಬರವಣಿಗೆಯು ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೂ ಸಹಕಾರಿಯಾಗಿದೆ. ಒಬ್ಬ ವ್ಯಕ್ತಿಯ ಆಲೋಚನೆಗಳನ್ನು ಸಮಾಜಕ್ಕೆ ತಲುಪಿಸುವಲ್ಲಿ ಬರವಣಿಗೆ ಸೇತುವೆಯಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಶುದ್ಧ ಕನ್ನಡ ಬರೆಯುವ ಅಭ್ಯಾಸ ಹೊಂದಬೇಕು.

**"ಕನ್ನಡ ಬರವಣಿಗೆಯ ಮಹತ್ವ":**

ಕನ್ನಡ ಬರವಣಿಗೆ ನಮ್ಮ ಭಾಷೆಯ ಜೀವಾಳವಾಗಿದೆ. ಬರವಣಿಗೆ ಇಲ್ಲದೆ ಭಾಷೆಯ ಅಸ್ತಿತ್ವ ಸಂಪೂರ್ಣವಾಗುವುದಿಲ್ಲ. ಕನ್ನಡ ಬರವಣಿಗೆಯು ನಮ್ಮ ಸಂಸ್ಕೃತಿಯನ್ನು ಉಳಿಸುವ ಮಹತ್ತರ ಸಾಧನವಾಗಿದೆ. ಹಳೆಯ ಕಾಲದಲ್ಲಿ ನಮ್ಮ ಪೂರ್ವಿಕರು ಶಿಲಾಶಾಸನಗಳ ಮೂಲಕ ತಮ್ಮ ಇತಿಹಾಸವನ್ನು ದಾಖಲಿಸಿದರು. ಇಂದು ನಾವು ಪುಸ್ತಕಗಳು, ಪತ್ರಿಕೆಗಳು ಹಾಗೂ ಡಿಜಿಟಲ್ ಮಾಧ್ಯಮಗಳ ಮೂಲಕ ಕನ್ನಡವನ್ನು ಉಳಿಸಿ ಬೆಳೆಸುತ್ತಿದ್ದೇವೆ.

ಕನ್ನಡ ಬರವಣಿಗೆಯು ವಿದ್ಯಾರ್ಥಿಗಳ ಕಲಿಕಾ ಜೀವನಕ್ಕೆ ಬಹಳ ಸಹಾಯಕವಾಗಿದೆ. ಬರೆಯುವುದರಿಂದ ಸ್ಮರಣಶಕ್ತಿ ಹೆಚ್ಚಾಗುತ್ತದೆ, ವಿಚಾರಶಕ್ತಿ ವಿಕಸನಗೊಳ್ಳುತ್ತದೆ ಮತ್ತು ಭಾಷೆಯ ಮೇಲೆ ಪ್ರಾಭುತ್ವ ಬರುತ್ತದೆ. ಒಳ್ಳೆಯ ಬರವಣಿಗೆ ವ್ಯಕ್ತಿಯನ್ನು ಸಮಾಜದಲ್ಲಿ ಗೌರವಪಾತ್ರನಾಗಿಸುತ್ತದೆ.

ಅದ್ದರಿಂದ ನಾವು ಕನ್ನಡ ಬರವಣಿಗೆಯನ್ನು ಪ್ರೀತಿಸಿ, ದಿನನಿತ್ಯ ಜೀವನದಲ್ಲಿ ಹೆಚ್ಚು ಬಳಸಬೇಕು. ನಮ್ಮ ಮಾತೃಭಾಷೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ

ಅಕ್ಷರಗಳ ನಡುವೆ ನಾನು,<br>
ಕನಸುಗಳನ್ನು ಸೇರುತ್ತೇನೆ,<br>
ಬರಹದ ಚುಕ್ಕಿಗಳಲ್ಲಿ<br>
ಮನದ ಮಾತುಗಳ ತುಂಬುತ್ತೇನೆ.

ಕನ್ನಡ ಬರವಣಿಗೆ ನಮ್ಮ ಸಂಸ್ಕೃತಿ ಮತ್ತು ಗುರುತಿನ ಪ್ರತೀಕವಾಗಿದೆ. ನಾವು ಕನ್ನಡ ಭಾಷೆಯನ್ನು ಪ್ರೀತಿಸಿ, ಸರಿಯಾಗಿ ಬಳಸುವ ಮೂಲಕ ಅದನ್ನು ಮುಂದಿನ ತಲೆಮಾರಿಗೆ ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ.

*****

## ಕನ್ನಡದ ಮೊದಲ ಶಾಸನ ತಾಳಗುಂದದ ಸಿಂಹಕಟಾಂಜನ ಶಾಸನ



# ಕನ್ನಡದ ಸಾಹಿತ್ಯದಲ್ಲಿ ಛಂದಸ್ಸು

**ರಂಜಿತಾ ಎನ್.,**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಕಾವ್ಯವು ಮಾನವನ ಭಾವನೆಗಳನ್ನು ಲಯಬದ್ಧವಾಗಿ ವ್ಯಕ್ತಪಡಿಸುವ ಸಾಹಿತ್ಯ ಪ್ರಕಾರ. ಕವಿತೆಯ ಗೆಜ್ಜೆ ನಾದವೇನಿದ್ದರೂ ಅದು ಛಂದಸ್ಸೇ. 'ಛಂದಸ್ಸಿಲ್ಲದ ಕವಿತೆ ಶರೀರವಿಲ್ಲದ ಪ್ರಾಣಿಯಂತೆ' ಎಂದು ಕವಿಗಳು ಹೇಳುತ್ತಾರೆ. ಪದ್ಯದಲ್ಲಿ ನಿಗದಿತ ಅಕ್ಷರ, ಗಣ, ಮಿತ್ರೆ, ವಿರಾಮ ಮತ್ತು ಲಯಗಳ ವಿನ್ಯಾಸದಿಂದ ಮೂಡುವ ಸಂಗೀತಾತ್ಮಕತೆಗೆ ಛಂದಸ್ಸು ಕಾರಣ. ಕನ್ನಡ ಸಾಹಿತ್ಯದ ಕಾವ್ಯ ಪರಂಪರೆಯಲ್ಲಿ ಛಂದಸ್ಸು ಶತಮಾನಗಳಿಂದ ಪ್ರಮುಖ ಸ್ಥಾನ ಹೊಂದಿದೆ. ಜನಪದ ಕಾವ್ಯದಿಂದ ಪ್ರಾರಂಭವಾಗಿ ವಚನ ಸಾಹಿತ್ಯ, ಹರಿದಾಸ ಸಂಪ್ರದಾಯ, ನವೋದಯ ಚಳವಳಿ, ಆಧುನಿಕ ಕಾವ್ಯ ಇವೆಲ್ಲದರ ಬೆಳವಣಿಗೆಯ ಹಿಂದೆ ಛಂದಸ್ಸಿನ ವೈಶಿಷ್ಟ್ಯತೆಗಳು ಗೋಚರಿಸುತ್ತವೆ.

**ಛಂದಸ್ಸಿನ ಅರ್ಥ ಮತ್ತು ಸ್ವರೂಪ**

ಛಂದಸ್ಸು ಎನ್ನುವುದು ಪದ್ಯರಚನೆಯ ಲಯಾತ್ಮಕವ್ಯವಸ್ಥೆ.ಪದ್ಯದ ಅಕ್ಷರಗಳ ಸಂಖ್ಯೆ, ಅವುಗಳ ಉಚ್ಚಾರದ ಬಲ–ದೌರ್ಬಲ್ಯ (ಲಘು–ಗುರು), ಸಾಲುಗಳ ಉದ್ದ, ವಿರಾಮಗಳ ಸ್ಥಾನ, ಮತ್ತು ಲಯೆಯ ಸುತ್ತಲೂ ಕಟ್ಟಿಕೊಳ್ಳುವ ಕಾವ್ಯ ವಿನ್ಯಾಸವೇ ಛಂದಸ್ಸು.

**ಕನ್ನಡ ಸಾಹಿತ್ಯದಲ್ಲಿ ಛಂದಸ್ಸಿನ ಅಭಿವೃದ್ಧಿ**

1. ಜನಪದ ಮೂಲಗಳು :

ಕನ್ನಡದಲ್ಲಿನ ಆರಂಭಿಕ ಛಂದಸ್ಸು ಜನಪದ ಗೀತೆಗಳಲ್ಲಿಯೇ ಕಂಡುಬರುತ್ತದೆ. ಅಲ್ಲಿ ನಿಶ್ಚಿತ ಅಕ್ಷರಗಳ ಮರುಕಳಿಕೆ, ಲಯ, ತಾಳ, ಪಲ್ಲವಿ, ಅನೇಕ ನಾದಗಳು ಛಂದಸ್ಸಿನ ಆಧಾರವಾಗಿದ್ದವು.

2. ಹಳೆಯ ಕನ್ನಡ ಸಾಹಿತ್ಯ :

ಮಹಾಕವಿಗಳಾದ ಪಂಪ, ರನ್ನ, ಪೊನ್ನರು ತಮ್ಮ ಕಾವ್ಯಗಳಲ್ಲಿ ಅಕ್ಷರಗಣ ಛಂದಸ್ಸು (ಗಣಗಳು) ಮತ್ತು ಮಿತ್ರೆ ಛಂದಸ್ಸು (ಅಕ್ಷರ ಸಂಖ್ಯೆ) ಗಳನ್ನು ಬಳಸಿದರು.ಶ್ರೀಮದ್ಭಾಗವತ, ಆದಿಪುರಾಣ ಮತ್ತಿತರ ಕೃತಿಗಳಲ್ಲಿ ಗಂಭೀರ ಛಂದಸ್ಸಿನ ಬಳಕೆ ಕಾಣುತ್ತದೆ.

3. ವಚನ ಸಾಹಿತ್ಯ :

ವಚನಕಾರರು ಛಂದಸ್ಸಿನ ಕಟ್ಟುನಿಟ್ಟನ್ನು ಬಿಟ್ಟು ಸ್ವತಂತ್ರ ಛಂದಸ್ಸಿನ ಪರಂಪರೆಯನ್ನು ಉದ್ಘಾಟಿಸಿದರು. "ವಚನ" ಗಳು ನಿರ್ಬಂಧಿತ ಛಂದಸ್ಸಿಗಿಂತ ಭಾವಕ್ಕೆ ಹೆಚ್ಚು ಮಹತ್ವ ನೀಡಿದ್ದವು.

4. ಹರಿದಾಸ ಸಾಹಿತ್ಯ :

ಪದಗಳು, ಸುಳಾದಿಗಳು, ದಾಸರ ಪದಗಳು, ಲಯ, ರಾಗ—ಇವುಗಳೊಂದಿಗೆ ಲಲಿತ ಛಂದಸ್ಸಿನ ಪರಂಪರೆಯನ್ನು ಬೆಳೆಸಿದವು.

5. ನವೋದಯ ಮತ್ತು ಆಧುನಿಕ ಕಾಲ :

ಬೇಂದ್ರೆಯವರು, ಕುವೆಂಪು, ಪುಟ್ಟಪ್ಪ, ಗೋಪಾಲಕೃಷ್ಣ ಅಡಿಗ ಮೊದಲಾದವರು ಛಂದಸ್ಸಿನ ಜೊತೆಗೆ ಸ್ವತಂತ್ರ ಕಾವ್ಯವನ್ನೂ ಬೆಳೆಸಿದರು.

ಈ ಕಾಲದಲ್ಲಿ ಛಂದಸ್ಸು ಸಾಂಪ್ರದಾಯಿಕ ಛಂದಸ್ಸು , ಸ್ವಚ್ಛಂದ ಕಾವ್ಯ ಎಂಬ ಎರಡು ರೀತಿಗಳಲ್ಲಿ ಬೆಳವಣಿಗೆ ಕಂಡಿತು.

ಛಂದಸ್ಸಿನ ಲಕ್ಷಣಗಳು

- ಅಕ್ಷರಗಳ ನಿರ್ದಿಷ್ಟ ಕ್ರಮ ಮತ್ತು ಸಂಖ್ಯೆ.
- ಲಘು–ಗುರುಗಳ ಗಣವಿನ್ಯಾಸ.
- ಸಾಲುಗಳ ನಡುವೆ ಸಮಾನತೆಯ ನಿರ್ವಹಣೆ.
- ಲಯ, ತಾಳ, ಪ್ರಾಸಗಳ ಸಮನ್ವಯ.
- ಪದ್ಯಕ್ಕೆ ನಾದಸೌಂದರ್ಯ ಮತ್ತು ಗಂಭೀರತೆ ನೀಡುವುದು.

**ಕನ್ನಡದ ಪ್ರಮುಖ ಛಂದಸ್ಸುಗಳ ವಿಧಗಳು**

1. **ಅಕ್ಷರ ಛಂದಸ್ಸು** (ಅಕ್ಷರಗಳ ಸಂಖ್ಯೆ ಆಧಾರಿತ): ರಗಳೆ, ರಾಗಲೆ, ಶತಪದಿ, ಸಾಮ್ರಾಜ್ಯ ಪದಿ
2. **ಗಣ ಛಂದಸ್ಸು** (ಲಘು–ಗುರುಗಳ ಗಣ ವಿನ್ಯಾಸ ಆಧಾರಿತ): ವಸಂತತಿಲಕ, ಶಾರದಾ, ಮಲಿನಿ, ಮಂದ್ರಾಕಾಂತ
3. **ಮಿಶ್ರ ಛಂದಸ್ಸು** ಅಕ್ಷರ ಮತ್ತು ಗಣ ಎರಡರ ಆಧಾರವಾಗಿರುವ ಪಂಚಚಾಮರ, ದಂಡಕ ಇತ್ಯಾದಿ.
4. **ಸ್ವಚ್ಛಂದ ಛಂದಸ್ಸು:** ವಚನಗಳು, ಆಧುನಿಕ ಸ್ವತಂತ್ರ ಕವನಗಳು, ಲಯಾಭಾಸವಿದ್ದರೂ ನಿಯಮಬದ್ಧತೆ ಕಡಿಮೆ.

**ಛಂದಸ್ಸಿನ ಮಹತ್ವ**

1. ಪದ್ಯಕ್ಕೆ ಸುಂದರ ಲಯ ಮತ್ತು ನಾದ ಕೊಡುತ್ತದೆ.
2. ಓದುಗರಲ್ಲಿ ಭಾವಾನುಭವವನ್ನು ಗಾಢಗೊಳಿಸುತ್ತದೆ.
3. ಕವಿತೆಗೆ ವಿನ್ಯಾಸ ಮತ್ತು ಸಮನ್ವಯ ಒದಗಿಸುತ್ತದೆ.
4. ಕಾವ್ಯವನ್ನು ಕರ್ಣಪ್ರಿಯ ಮತ್ತು ನೆನಪಾಗುವಂತೆ ಮಾಡುತ್ತದೆ.
5. ಕಾವ್ಯದ ಕಲ್ಪನೆ ಮತ್ತು ರಸಸೃಷ್ಟಿಗೆ ಜೀವ ತುಂಬುತ್ತದೆ.
6. ಪದ್ಯದಲ್ಲಿ ಶಿಸ್ತಿನ ಅಭಿವೃದ್ಧಿಗೆ ಸಹಕಾರಿ.

ಕನ್ನಡ ಸಾಹಿತ್ಯದಲ್ಲಿ ಛಂದಸ್ಸು ಕಾವ್ಯದ ನಾದ, ಲಯ ಮತ್ತು ರಸದ ಮೂಲಾಧಾರವಾಗಿದೆ. ಜನಪದ ಪರಂಪರೆಯಿಂದ ಪ್ರಾರಂಭಿಸಿ ಪಂಪ–ರನ್ನರ ಶಾಸ್ತ್ರೀಯ ಕಾವ್ಯ, ವಚನಗಳ ಸ್ವಚ್ಛಂದತೆ, ಹರಿದಾಸರ ಲಾಲಿತ್ಯ ಮತ್ತು ಆಧುನಿಕ ಕಾವ್ಯದ ನವೀನ ಪ್ರಯೋಗಗಳವರೆಗೆ ಛಂದಸ್ಸು ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ನಿರಂತರ ಪಾತ್ರ ವಹಿಸಿದೆ. ಕವನದ ರೂಪಕ್ಕೆ ಶಿಸ್ತು, ಭಾವಕ್ಕೆ ಆಳ, ಹಾಗೂ ಓದಿಗೆ ಸೌಂದರ್ಯ ನೀಡುವ ಶಕ್ತಿಯೇ ಛಂದಸ್ಸು. ಆದ್ದರಿಂದ ಕನ್ನಡ ಕಾವ್ಯಸೃಷ್ಟಿಯಲ್ಲಿ ಛಂದಸ್ಸು ಶಾಶ್ವತವಾಗಿ ಕವಿಯ ಸಹಚರವಾಗಿದ್ದು, ಸಾಹಿತ್ಯದ ಸೌಂದರ್ಯವನ್ನು ಹೆಚ್ಚಿಸುವ ಮಹತ್ವದ ಅಂಶವಾಗಿಯೇ ಉಳಿಯುತ್ತದೆ.

*****

# ಭಾಷಾ ಪ್ರಯೋಗಾಲಯ

**ಇಂದು ಪಿ**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಭಾಷಾ ಪ್ರಯೋಗಾಲಯ ಎಂದರೆ ಭಾಷೆಯ ಕೇಳುವಿಕೆ, ಮಾತನಾಡುವಿಕೆ, ಉಚ್ಚಾರಣೆ, ಶಬ್ದಸಂಪತ್ತು ಮತ್ತು ಸಂವಹನ ಕೌಶಲ್ಯಗಳನ್ನು ವೃದ್ಧಿಸುವುದಕ್ಕಾಗಿ ವಿನ್ಯಾಸಗೊಳಿಸಲಾದ ತಾಂತ್ರಿಕ ಉಪಕರಣಗಳಿರುವ ವಿಶೇಷ ಕಲಿಕಾ ಕೊಠಡಿ. ಇದು ವಿದ್ಯಾರ್ಥಿಗಳಿಗೆ ಭಾಷೆಯನ್ನು ಅನುಭವಾತ್ಮಕವಾಗಿ ಕಲಿಯಲು ಸಹಕಾರಿಯಾಗುತ್ತದೆ.

## ❖ ಭಾಷಾ ಪ್ರಯೋಗಾಲಯದ ಉದ್ದೇಶಗಳು

1. ಕೇಳುವಿಕೆ (Listening) ಕೌಶಲ್ಯ ವೃದ್ಧಿ : ಶುದ್ಧ ಉಚ್ಚಾರಣೆ, ಸ್ವರ, ಲಯ, ಒತ್ತನ್ನು ತಿಳಿದುಕೊಳ್ಳಲು ಸಹಾಯ.
2. ಮಾತನಾಡುವ (Speaking) ಕೌಶಲ್ಯ ಅಭಿವೃದ್ಧಿ
3. ವಿದ್ಯಾರ್ಥಿಗಳು ತಮ್ಮ ಭಾಷಣವನ್ನು ರೆಕಾರ್ಡ್ ಮಾಡಿ ಪುನಃ ಕೇಳಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ.
4. ಸಂಭಾಷಣಾ ಕೌಶಲ್ಯ (Communication Skills) ಬೆಳವಣಿಗೆ
5. ಗುಂಪು ಚರ್ಚೆ, ಸಂವಾದ, ಪ್ರಸ್ತುತಿಕೆಗಳಲ್ಲಿ ಪಾಲ್ಗೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ.
6. ಉಚ್ಚಾರಣೆಯಲ್ಲಿ ನಿಖರತೆ : ಫೋನೆಟಿಕ್ (Phonetics) ತರಬೇತಿಯ ಮೂಲಕ ಸರಿಯಾದ ಧ್ವನಿರೂಪಣೆಯನ್ನು ಕಲಿಸುತ್ತದೆ.
7. ಸ್ವಯಂ ಕಲಿಕೆ (Self-Learning) ಅಭ್ಯಾಸ : ವಿದ್ಯಾರ್ಥಿಗಳು ತಮ್ಮ ವೇಗಕ್ಕೆ ತಕ್ಕಂತೆ ಕಲಿಯಬಹುದಾದ ವಾತಾವರಣ.

## ❖ ಭಾಷಾ ಪ್ರಯೋಗಾಲಯದ ಘಟಕಗಳು (Components)

1. ಗಣಕಯಂತ್ರಗಳು ಅಥವಾ ಲ್ಯಾಪ್ಟಾಪ್ಗಳು
2. ಹೆಡ್ಸೆಟ್ಗಳು (Headphones + Microphone)
3. ರೆಕಾರ್ಡಿಂಗ್ ಸಾಧನಗಳು
4. ಭಾಷಾ ಕಲಿಕೆ ಸಾಫ್ಟ್ವೇರ್ಗಳು
5. ಆಡಿಯೋ–ವೀಡಿಯೋ ಕಲಿಕಾ ಸಾಮಗ್ರಿಗಳು
6. ಶಿಕ್ಷಕರ ನಿಯಂತ್ರಣ ಯಂತ್ರ (Teacher Console)

## ❖ ಭಾಷಾ ಪ್ರಯೋಗಾಲಯದ ವೈಶಿಷ್ಟ್ಯಗಳು

- ವೈಯಕ್ತಿಕ ಕಲಿಕೆಯ ಅವಕಾಶ
- ತ್ವರಿತ ಪ್ರತಿಕ್ರಿಯೆ (Immediate feedback)
- ಆಡಿಯೋ–ವಿಜುವಲ್ ಕಲಿಕೆಯ ಅನುಸ್ಥಾನ
- ಮಲ್ಟಿಮೀಡಿಯಾದ ಮೂಲಕ ಕಲಿಕೆ ಆಕರ್ಷಕವಾಗುವುದು

- ಎಲ್ಲಾ ಕೌಶಲ್ಯಗಳ (LSRW – Listening, Speaking, Reading, Writing) ಸಮಗ್ರ ಅಭ್ಯಾಸ

❖ **ಭಾಷಾ ಪ್ರಯೋಗಾಲಯದ ಪ್ರಕಾರಗಳು**

1. ಸಾಂಪ್ರದಾಯಿಕ ಭಾಷಾ ಪ್ರಯೋಗಾಲಯ
   ಕ್ಯಾಸೆಟ್/ಸಿಡಿ ಪ್ಲೇಯರ್ಗಳ ಸಹಾಯದಿಂದ ಕಲಿಕೆ.
1. ಡಿಜಿಟಲ್ ಭಾಷಾ ಪ್ರಯೋಗಾಲಯ
   ಕಂಪ್ಯೂಟರ್, ಸಾಫ್ಟ್ವೇರ್, ಮಲ್ಟಿಮೀಡಿಯಾ ಉಪಕರಣಗಳ ಸಹಾಯ.
2. ವರ್ಚುವಲ್ ಭಾಷಾ ಪ್ರಯೋಗಾಲಯ
   ಇಂಟರ್ನೆಟ್ ಮೂಲಕ ಎಲ್ಲೆಂದರಲ್ಲಿ ಲಾಗಿನ್ ಮಾಡಿ ಕಲಿಯುವ ವ್ಯವಸ್ಥೆ.

❖ **ಭಾಷಾ ಪ್ರಯೋಗಾಲಯದ ಪ್ರಯೋಜನಗಳು**

1. ವಿದ್ಯಾರ್ಥಿಗಳಿಗೆ ಮಾತನಾಡುವ ಭಯ ನಿವಾರಣೆ
2. ಶುದ್ಧ ಉಚ್ಚಾರಣೆಯ ಅಭ್ಯಾಸ
3. ಉತ್ತಮ ಸಂವಹನ ಕೌಶಲ್ಯ
4. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಕಾರ
5. ಆತ್ಮವಿಶ್ವಾಸ ವೃದ್ಧಿ
6. ಶಿಕ್ಷಕರಿಗೆ ವಿದ್ಯಾರ್ಥಿಗಳ ಪ್ರಗತಿ ಗಮನಿಸಲು ಸುಲಭ
7. ಪಾಠ ಕಲಿಕೆಯಲ್ಲಿ ವೈವಿಧ್ಯತೆ
8. ಸಂವಹನಾತ್ಮಕ ಪಾಠಗಳು ಸಾಧ್ಯ

**ಶಿಕ್ಷಕರ ಪಾತ್ರ**

1. ವಿದ್ಯಾರ್ಥಿಗಳಿಗೆ ಬಳಸುವ ವಿಧಾನ ತಿಳಿಸುವುದು
2. ಪ್ರತಿ ವಿದ್ಯಾರ್ಥಿಯ ದೋಷಗಳನ್ನು ಗುರುತಿಸಿ ತಿದ್ದುಪಡಿ ಮಾಡಿಸುವುದು
3. ಸಂವಹನ ಚಟುವಟಿಕೆಗಳನ್ನು ನಡೆಸುವುದು
4. ಫೋನೆಟಿಕ್ ತರಬೇತಿ ನೀಡುವುದು
5. ತಂತ್ರಜ್ಞಾನ ಬಳಕೆಯನ್ನು ಉತ್ತೇಜಿಸುವುದು

ಭಾಷಾ ಪ್ರಯೋಗಾಲಯವು ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅತ್ಯಂತ ಅಗತ್ಯವಾದ ಸಾಧನ. ಇದು ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲ್ಯ, ಉಚ್ಚಾರಣೆ, ಮಾತನಾಡುವ ಆತ್ಮವಿಶ್ವಾಸ ಮತ್ತು ಭಾಷಾ ಪ್ರವಾಹ ವೃದ್ಧಿಸಲು ಮಹತ್ವದ ಪಾತ್ರ ವಹಿಸುತ್ತದೆ. 21ನೇ ಶತಮಾನದ ಭಾಷಾ ಶಿಕ್ಷಣದಲ್ಲಿ ಭಾಷಾ ಪ್ರಯೋಗಾಲಯದ ಬಳಕೆ ಅತ್ಯಂತ ಪರಿಣಾಮಕಾರಿಯಾಗಿದೆ.

*****

# ಪತ್ರಲೇಖನ

**ಮೇಘನಾ ಎಂ.ಎಸ್**
ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಪತ್ರಲೇಖನವು ಮಾನವ ಸಂವಹನ ಇತಿಹಾಸದಲ್ಲಿ ಒಂದು ಪ್ರಮುಖ ಮತ್ತು ಶಾಶ್ವತವಾದ ಮಾಧ್ಯಮವಾಗಿದೆ. ದೂರದಲ್ಲಿರುವ ವ್ಯಕ್ತಿಗಳು, ಸಂಸ್ಥೆಗಳು ಅಥವಾ ಅಧಿಕಾರಿಗಳೊಂದಿಗೆ ತಮ್ಮ ವಿಚಾರ, ಭಾವನೆ, ಮಾಹಿತಿ ಅಥವಾ ಮನವಿಗಳನ್ನು ಲಿಖಿತ ರೂಪದಲ್ಲಿ ವಿನಿಮಯ ಮಾಡಿಕೊಳ್ಳಲು ಬಳಸುವ ಸಾಧನವೇ ಪತ್ರ (ಓಲೆ/ಕಾಗದ). ನಾವು ಮಾತಿನ ಮೂಲಕ ವ್ಯಕ್ತಪಡಿಸಲಾಗದ ಅಥವಾ ದಾಖಲೆಯಾಗಿ ಉಳಿಯಬೇಕಾದ ವಿಷಯಗಳನ್ನು ಪತ್ರಗಳ ಮೂಲಕ ಸ್ಪಷ್ಟವಾಗಿ ಮತ್ತು ಶಾಶ್ವತವಾಗಿ ನಿರೂಪಿಸಬಹುದು. ಪ್ರಾಚೀನ ಕಾಲದಿಂದಲೂ, ರಾಜರು ತಮ್ಮ ಸಂದೇಶಗಳನ್ನು ರವಾನಿಸಲು, ವಿದ್ವಾಂಸರು ಜ್ಞಾನ ವಿನಿಮಯ ಮಾಡಲು ಮತ್ತು ಸಾಮಾನ್ಯ ಜನರು ತಮ್ಮ ಕ್ಷೇಮ ಸಮಾಚಾರಗಳನ್ನು ತಿಳಿಸಲು ಪತ್ರಗಳನ್ನು ಬಳಸುತ್ತಿದ್ದರು. ವೇಗವಾದ ಇಮೇಲ್ ಮತ್ತು ಮೆಸೇಜಿಂಗ್ ಯುಗದಲ್ಲಿಯೂ ಸಹ, ಪತ್ರಲೇಖನವು ತನ್ನದೇ ಆದ ವಿಶಿಷ್ಟ ಸ್ಥಾನಮಾನ ಮತ್ತು ಮೌಲ್ಯವನ್ನು ಉಳಿಸಿಕೊಂಡಿದೆ.

ಪತ್ರ ಬರೆಯುವುದು ಕೇವಲ ಒಂದು ಸಂದೇಶ ರವಾನೆ ಮಾಡುವ ಕ್ರಿಯೆಯಲ್ಲ; ಇದು ಒಂದು ಕಲೆ. ಈ ಕಲೆಯು ಬರಹಗಾರನ ಸ್ಪಷ್ಟತೆ, ಸಂಕ್ಷಿಪ್ತತೆ, ಭಾಷಾ ಪ್ರಭುತ್ವ ಮತ್ತು ಉದ್ದೇಶವನ್ನು ಸಮರ್ಥವಾಗಿ ತಲುಪಿಸುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಪತ್ರವು ಬಾಂಧವ್ಯಗಳನ್ನು ಬೆಸೆಯುವ, ವ್ಯಾಪಾರ–ವಹಿವಾಟುಗಳನ್ನು ನಡೆಸುವ ಮತ್ತು ಸರ್ಕಾರಿ ಕೆಲಸಗಳನ್ನು ಸುಗಮಗೊಳಿಸುವ ಶಕ್ತಿಯುತ ಮಾಧ್ಯಮವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಯಶಸ್ವಿಯಾಗಲು ಈ ಪತ್ರಲೇಖನ ಕೌಶಲ್ಯವನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ. ಪತ್ರಲೇಖನದ ವಿಧಗಳು ಮತ್ತು ರಚನಾಕ್ರಮ

ಪತ್ರಗಳನ್ನು ಮುಖ್ಯವಾಗಿ ಅವುಗಳ ಉದ್ದೇಶ ಮತ್ತು ಸಂವಹನದ ಸ್ವರೂಪದ ಆಧಾರದ ಮೇಲೆ ಎರಡು ವಿಶಾಲ ವರ್ಗಗಳಾಗಿ ವಿಂಗಡಿಸಬಹುದು: ವೈಯಕ್ತಿಕ ಪತ್ರಗಳು (ಖಾಸಗಿ ಪತ್ರಗಳು) ಮತ್ತು ವ್ಯಾವಹಾರಿಕ/ಔಪಚಾರಿಕ ಪತ್ರಗಳು (ಕಚೇರಿ ಪತ್ರಗಳು).

❖ **ವೈಯಕ್ತಿಕ/ಖಾಸಗಿ ಪತ್ರಗಳು:**

ಇವು ಕುಟುಂಬ ಸದಸ್ಯರು, ಸ್ನೇಹಿತರು ಅಥವಾ ಆತ್ಮೀಯರ ನಡುವೆ ಕ್ಷೇಮ ಸಮಾಚಾರ, ಭಾವನೆಗಳು ಮತ್ತು ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಲು ಬರೆಯಲ್ಪಡುವ ಪತ್ರಗಳು. ಈ ಪತ್ರಗಳ ಶೈಲಿ ಸರಳ, ಆತ್ಮೀಯ ಮತ್ತು ಅನೌಪಚಾರಿಕವಾಗಿರುತ್ತದೆ.

**ಮುಖ್ಯ ಅಂಶಗಳು:** ಸ್ಥಳ ಮತ್ತು ದಿನಾಂಕ: ಪತ್ರದ ಬಲಭಾಗದಲ್ಲಿ ಬರೆಯಲಾಗುತ್ತದೆ. ಸಂಬೋಧನೆ: "ಪ್ರೀತಿಯ ಅಪ್ಪ/ಅಮ್ಮ/ಗೆಳೆಯ/ಗೆಳತಿ" (ಉದಾ: ತೀರ್ಥರೂಪರಿಗೆ, ಮಾತೃಶ್ರೀಯವರಿಗೆ, ಆತ್ಮೀಯ ನಲ್ಮೆಯ) ಎಂದು ಆತ್ಮೀಯತೆಯಿಂದ ಸಂಬೋಧಿಸಬೇಕು.

**ವಿಷಯ ನಿರೂಪಣೆ:** ಮುಖ್ಯ ವಿಷಯವನ್ನು ಸರಳ, ಸಹಜ ಮತ್ತು ಭಾವನಾತ್ಮಕ ಭಾಷೆಯಲ್ಲಿ ಬರೆಯಬೇಕು.

ವಂದನೆ/ಮುಕ್ತಾಯ: "ನಿನ್ನ ಪ್ರೀತಿಯ ಮಗ/ಮಗಳು/ಗೆಳೆಯ/ಗೆಳತಿ" ಎಂದು ಬರೆದು ಸಹಿ ಮಾಡಲಾಗುತ್ತದೆ.

❖ **ವ್ಯಾವಹಾರಿಕ/ಔಪಚಾರಿಕ ಪತ್ರಗಳು:**

ಇವು ಕಚೇರಿಗಳು, ಸರ್ಕಾರಿ ಇಲಾಖೆಗಳು, ಸಂಸ್ಥೆಗಳು, ಶಾಲೆಗಳು, ಬ್ಯಾಂಕ್ಗಳು ಅಥವಾ ವ್ಯಾಪಾರ ಉದ್ದೇಶಗಳಿಗಾಗಿ ಬರೆಯಲ್ಪಡುವ ಪತ್ರಗಳು. ಈ ಪತ್ರಗಳ ಶೈಲಿ ನಿಖರ, ಸ್ಪಷ್ಟ, ಸಂಕ್ಷಿಪ್ತ ಮತ್ತು

ಗೌರವಯುತವಾಗಿರಬೇಕು. ಇಲ್ಲಿ ವೈಯಕ್ತಿಕ ಭಾವನೆಗಳಿಗೆ ಜಾಗವಿಲ್ಲ, ಕೇವಲ ವಿಷಯಕ್ಕೆ ಮಾತ್ರ ಪ್ರಾಮುಖ್ಯತೆ ಇರುತ್ತದೆ.

**ಮುಖ್ಯ ಅಂಶಗಳು (ಪತ್ರದ ನಿಖರ ರಚನಾ ಕ್ರಮ):** ಇಂದ (ಕಳುಹಿಸುವವರ ವಿಳಾಸ): ಪತ್ರದ ಎಡಭಾಗದಲ್ಲಿ ಕಳುಹಿಸುವವರ ಹೆಸರು ಮತ್ತು ಸಂಪೂರ್ಣ ವಿಳಾಸ. ಸ್ಥಳ ಮತ್ತು ದಿನಾಂಕ: ಬಲಭಾಗದಲ್ಲಿ ಬರೆಯುವುದು ರೂಢಿ. ಇವರಿಗೆ (ಸ್ವೀಕರಿಸುವವರ ವಿಳಾಸ): ಪತ್ರದ ಎಡಭಾಗದಲ್ಲಿ, ಹುದ್ದೆ ಮತ್ತು ಸಂಸ್ಥೆಯ ಹೆಸರಿನೊಂದಿಗೆ ಸಂಪೂರ್ಣ ವಿಳಾಸ. ಮಾನ್ಯರೇ/ಪೂಜ್ಯರೇ: ಗೌರವಯುತ ಸಂಬೋಧನೆ. ವಿಷಯ (Subject): ಪತ್ರದ ಸಾರಾಂಶವನ್ನು ಒಂದೇ ಸಾಲಿನಲ್ಲಿ ಸ್ಪಷ್ಟವಾಗಿ ತಿಳಿಸಬೇಕು (ಉದಾ: ರಜೆ ಮಂಜೂರು ಮಾಡುವ ಬಗ್ಗೆ, ಬೀದಿ ದೀಪ ಅಳವಡಿಸುವ ಬಗ್ಗೆ).

**ಪತ್ರದ ಮುಖ್ಯ ಭಾಗ:** ವಿಷಯಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವಾಕ್ಯವೃಂದಗಳಲ್ಲಿ ಸ್ಪಷ್ಟವಾಗಿ ನಿರೂಪಿಸಬೇಕು. ವಂದನೆಗಳು: "ಧನ್ಯವಾದಗಳೊಂದಿಗೆ" ಎಂದು ಮುಗಿಸಬೇಕು. ವಂದನಾಪೂರ್ವಕ ಮುಕ್ತಾಯ: "ತಮ್ಮ ವಿಶ್ವಾಸಿ/ವಿಧೇಯ" ಎಂದು ಬರೆದು ಸಹಿ ಮಾಡಬೇಕು. **ಲಗತ್ತುಗಳು :** ಯಾವುದಾದರೂ ದಾಖಲೆಗಳನ್ನು ಲಗತ್ತಿಸಿದ್ದರೆ, ಅವುಗಳ ವಿವರ. ಸಂವಹನ ಮಾಧ್ಯಮವಾಗಿ ಪತ್ರಲೇಖನದ ಇಂದಿನ **ಮಹತ್ವ:–** ಪತ್ರಲೇಖನವು ಆಧುನಿಕ ತಂತ್ರಜ್ಞಾನದ ಯುಗದಲ್ಲಿಯೂ ತನ್ನ ಮಹತ್ವವನ್ನು ಕಳೆದುಕೊಂಡಿಲ್ಲ. ವಾಸ್ತವವಾಗಿ, ಇದು ದಾಖಲೆಯ ನಿರ್ವಹಣೆ ಮತ್ತು ವೃತ್ತಿಪರ ಸಂವಹನಕ್ಕೆ ಅತ್ಯಂತ ಪ್ರಬಲ ಮಾಧ್ಯಮವಾಗಿದೆ. **ದೊಡ್ಡತನ ಮತ್ತು ಶಾಶ್ವತ ದಾಖಲೆ:** ಇಂದಿನ ಇಮೇಲ್ಗಳು ಮತ್ತು ತ್ವರಿತ ಸಂದೇಶಗಳಿಗೆ ಹೋಲಿಸಿದರೆ, ಭೌತಿಕ ಪತ್ರವು ಮತ್ತು ಔಪಚಾರಿಕ ಇಮೇಲ್ಗಳು (ಸರಿಯಾದ ರಚನೆಯೊಂದಿಗೆ) ಹೆಚ್ಚಿನ ದೊಡ್ಡತನ ಮತ್ತು ವಿಶ್ವಾಸಾರ್ಹತೆಯನ್ನು ಹೊಂದಿರುತ್ತವೆ. ಕಾನೂನು ಅಥವಾ ವಾಣಿಜ್ಯ ವಿಷಯಗಳಲ್ಲಿ, ಸ್ಪಷ್ಟ ಮತ್ತು ಸರಿಯಾದ ರಚನೆಯಲ್ಲಿ ಬರೆದ ಪತ್ರಗಳು ಅಥವಾ ಇಮೇಲ್ಗಳು ಪ್ರಮುಖ ಶಾಶ್ವತ ದಾಖಲೆಗಳಾಗಿ ಕಾರ್ಯನಿರ್ವಹಿಸುತ್ತವೆ. ಒಂದು ಪತ್ರವನ್ನು ವ್ಯವಸ್ಥಿತವಾಗಿ ಸಂಗ್ರಹಿಸಬಹುದು ಮತ್ತು ವರ್ಷಗಳ ನಂತರವೂ ಉಲ್ಲೇಖಿಸಬಹುದು.

**ಕೌಶಲ್ಯದ ಅಭಿವೃದ್ಧಿ:** ಪತ್ರ ಬರೆಯುವುದರಿಂದ ಭಾಷಾ ಕೌಶಲ್ಯಗಳು ಸುಧಾರಿಸುತ್ತವೆ. ಪತ್ರದಲ್ಲಿ ಬಳಸುವ ಭಾಷೆ, ವ್ಯಾಕರಣ ಮತ್ತು ಶಬ್ದಕೋಶವು ವ್ಯಕ್ತಿಯ ಬೌದ್ಧಿಕ ಮಟ್ಟವನ್ನು ಮತ್ತು ವೃತ್ತಿಪರತೆಯನ್ನು ಪ್ರತಿಬಿಂಬಿಸುತ್ತದೆ. ಯೋಚಿಸಿದ ವಿಷಯಗಳನ್ನು ಸ್ಪಷ್ಟವಾಗಿ, ಸಂಕ್ಷಿಪ್ತವಾಗಿ ಮತ್ತು ಸಂಘಟಿತವಾಗಿ ಬರೆಯುವ ಅಭ್ಯಾಸವು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಯಶಸ್ಸಿಗೆ ಮುಖ್ಯವಾಗಿದೆ.

**ಸಂಸ್ಕೃತಿ ಮತ್ತು ಬಾಂಧವ್ಯ:** ವೈಯಕ್ತಿಕ ಮಟ್ಟದಲ್ಲಿ, ಕೈಬರಹದ ಪತ್ರಗಳು ಡಿಜಿಟಲ್ ಸಂದೇಶಗಳಿಗೆ ಹೋಲಿಸಿದರೆ ಹೆಚ್ಚಿನ ಪ್ರೀತಿ ಮತ್ತು ಭಾವನಾತ್ಮಕ ಮೌಲ್ಯವನ್ನು ಹೊಂದಿರುತ್ತವೆ. ಪ್ರೀತಿಪಾತ್ರರ ಕೈಬರಹದ ಓಲೆಗಳು ಒಂದು ಸುಂದರವಾದ ನೆನಪು ಮತ್ತು ಬಾಂಧವ್ಯವನ್ನು ಗಟ್ಟಿಗೊಳಿಸುತ್ತವೆ. ಈ ಸಾಂಸ್ಕೃತಿಕ ಮೌಲ್ಯವನ್ನು ಉಳಿಸಿಕೊಳ್ಳುವ ಅಗತ್ಯವಿದೆ.

ಪತ್ರಲೇಖನವು ಕೇವಲ ಹಿಂದಿನ ಕಾಲದ ಸಂವಹನ ವಿಧಾನವಲ್ಲ, ಬದಲಿಗೆ ಇದು ಇಂದಿಗೂ ಪ್ರಬಲವಾದ, ಅತ್ಯಗತ್ಯವಾದ ಮತ್ತು ಗೌರವಯುತವಾದ ಮಾಧ್ಯಮವಾಗಿದೆ. ವೈಯಕ್ತಿಕ ಬಾಂಧವ್ಯಗಳನ್ನು ಗಟ್ಟಿಗೊಳಿಸುವುದರಿಂದ ಹಿಡಿದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳನ್ನು ನಡೆಸುವವರೆಗೆ, ಪತ್ರಲೇಖನದ ಪಾತ್ರ ಅನನ್ಯ ಮತ್ತು ಅನಿವಾರ್ಯ. ಆದ್ದರಿಂದ, ಪ್ರತಿಯೊಬ್ಬರೂ ಪತ್ರಲೇಖನದ ಸರಿಯಾದ ವಿಧಾನ ಮತ್ತು ಅದರ ಮೌಲ್ಯವನ್ನು ಅರಿತುಕೊಂಡು, ಈ ಕೌಶಲ್ಯವನ್ನು ಅಭ್ಯಾಸ ಮಾಡುವುದು ಮತ್ತು ಉಳಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

*****

# ಮಲೆನಾಡಿನ ಸೊಬಗು

**ಮುರುಗೇಶ್ ಎಲ್.,**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಕರ್ನಾಟಕದ ನೈಸರ್ಗಿಕ ರಮ್ಯತೆ, ಸಾಂಸ್ಕೃತಿಕ ಶ್ರೀಮಂತಿಕೆ ಮತ್ತು ಹಸಿರು ತುಂಬಿದ ಭೂಭಾಗಗಳನ್ನು, ಮೊದಲಿಗೆ ಮನಸ್ಸಿಗೆ ಬರುವುದು ಮಲೆನಾಡು. ಪಶ್ಚಿಮ ಘಟ್ಟಗಳ ಎತ್ತರದ ಪರ್ವತ ಶ್ರೇಣಿಗಳ ನಡುವೆ ಹರಿಯುತ್ತಿರುವ ಈ ಮಲೆನಾಡು, ಪ್ರಕೃತಿಯ ಅದ್ಭುತ ವೈಭವವನ್ನು ತನ್ನೊಳಗೆ ಅಡಗಿಸಿಕೊಂಡಿದೆ. 'ಮಳೆನಾಡು' ಎಂದೇ ಪ್ರಸಿದ್ಧವಾಗಿರುವ ಈ ಪ್ರದೇಶದಲ್ಲಿ ವರ್ಷ ಪೂರ್ತಿ ಹಸಿರು ಆವರಣೆ,

ಕರ್ನಾಟಕದ ಭೂಗೋಳದಲ್ಲೇ ವಿಶಿಷ್ಟ ಸ್ಥಾನ ಪಡೆದಿರುವ ಮಲೆನಾಡು, ಪಶ್ಚಿಮ ಘಟ್ಟಗಳ ಮಡಿಲಲ್ಲಿ ನೆಲೆಸಿರುವ ವೈವಿಧ್ಯಮಯ ನೈಸರ್ಗಿಕ ರಾಜ್ಯ. ಇಲ್ಲಿ ಮೋಡಗಳ ಕಣ್ಣಾವಲು, ಮಂಜಿನ ಅಲಿಂಗನ ಮತ್ತು ಮಳೆಯ ಮಧುರ ಗಾನ ಮಲೆನಾಡು ಎಂದರೆ ಪ್ರಕೃತಿಯ ನಾಡು, ಮಳೆಗಳ ಮನೆ, ಹಸಿರಿನ ಹಬ್ಬ, ನದಿಗಳ ಜನ್ಮಸ್ಥಾನ ಮತ್ತು ಮಾನವ–ಪ್ರಕೃತಿ ಸ್ನೇಹದ ಶಾಶ್ವತ ಉದಾಹರಣೆ.

❖ **ಪ್ರಕೃತಿಯ ಅಪರೂಪದ ಚಿತ್ತಾರ :** ಮಲೆನಾಡಿನ ಬೆಳಗಿನ ಜಾವದಲ್ಲಿ ಕಾಣುವ ಹಸಿರು ಹೊದಿಕೆ ಮನಸ್ಸಿಗೆ ಶಾಂತಿ ನೀಡುತ್ತದೆ. ಮರಗಳ ಎತ್ತರಕ್ಕೆ ತಾಕಿದ ಮಂಜಿನ ಸುತ್ತಾಟ, ಪಕ್ಷಿಗಳ ಸಿಹಿ ರಾಗಗಳು ಮತ್ತು ಹೊಳೆಯ ತೇಲುವ ಹರಿವು. ಮಳೆ ಬಿದ್ದ ನಂತರ ಮಣ್ಣಿನ ವಾಸನೆ, ತೇವಗೊಂಡ ಗಾಳಿಯ ಸ್ವಚ್ಛತೆ ಮತ್ತು ಮಸುಕಾಗಿ ಕಾಣುವ ಪರ್ವತ ಶ್ರೇಣಿಗಳು ದೈವಿಕ ಅನುಭವವನ್ನು ಸೃಷ್ಟಿಸುತ್ತವೆ.

❖ **ಮಾಲೆ–ಮಂಜಿನ ನಿತ್ಯ ಕಾವಲು :** ಮಲೆನಾಡಿನ ಹವಾಮಾನವೇ ಅದರ ಸೊಬಗಿಗೆ ಮೂಲ. ಇಲ್ಲಿನ ಮಳೆಯ ಶಬ್ದ ಪ್ರಕೃತಿಯ ಸಂಗೀತ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮುಂಗಾರು ಮೋಡಗಳು ಪರ್ವತಗಳನ್ನು ಕವಿದುಕೊಳ್ಳುವ ದೃಶ್ಯವನ್ನು ನೋಡಿದರೆ ಮನಸ್ಸು ತಣಿಯುತ್ತದೆ. ಕೆಲವೊಮ್ಮೆ ಒಂದೇ ದಿನದಲ್ಲಿ ಅನೇಕ ಬಾರಿ ಮಳೆ ಬರುವುದು

❖ **ಮಲೆನಾಡಿನ ಸಾಮಾನ್ಯ ಜೀವನ :** ಮಂಜು ಕೂಡ ಮಲೆನಾಡಿನ ಶಾಶ್ವತ ಸಂಗಾತಿ. ಪರ್ವತಗಳ ನಡುವೆ ಹಾರಾಡುವ ಬಿಳಿ ಮಂಜಿನ ರೆಕ್ಕೆಗಳು ಮನೆಮನೆಗೂ ತಾಕಿ ಹೋಗುವಾಗ ಅದು ಕನಸಿನ ಲೋಕದಂತೆ ಅನುಭವವಾಗುತ್ತದೆ. ಹಳ್ಳಿಗಳಲ್ಲಿ ಸಂಜೆ ವೇಳೆಗೆ ಮಂಜು ಮಲಗುವ ದೃಶ್ಯವು ಮನಸ್ಸಿಗೆ ಮೃದುವಾದ ಮೌನವನ್ನು ನೀಡುತ್ತದೆ.

❖ **ಜಲಪಾತಗಳ ಗರಿಮೆ :** ಮಲೆನಾಡನ್ನು ಪ್ರಸಿದ್ಧಿಗೊಳಿಸಿರುವ ಜಲಪಾತಗಳು ಅದರ ನೈಸರ್ಗಿಕ ಆಭರಣ.

- **ಜೋಗ ಜಲಪಾತ** : ಭಾರತದ ಎತ್ತರದ ಜಲಪಾತಗಳಲ್ಲಿ ಒಂದಾದ ಇದು ಮಳೆಗಾಲದಲ್ಲಿ ತನ್ನ ನಿಜವಾದ ವೈಭವ ತೋರುತ್ತದೆ. ನೀರು ಕೆಳಗೆ ಬೀಳುವಾಗ ಉಂಟಾಗುವ ಗರ್ಜನೆ ಪರ್ವತಗಳನ್ನು ಸಹ ಕಂಪಿಸುತ್ತದೆ.ಅಬ್ಬಿ ಫಾಲ್ಸ್ – ಮಡಿಕೇರಿಯ ಈ ಪ್ರಸಿದ್ಧ ಜಲಪಾತದ ಸುತ್ತ ಮೈಸೂರು ಕಾಫಿ ತೋಟಗಳ ಸುಂದರ ನೋಟಗಳು ಮನಸಿಗೆ ಹಬ್ಬವಾಗಿದೆ.ಶಿವನಸಮುದ್ರ, ಸಿರಿಮನೆ, ಹಬ್ಬೆ ಫಾಲ್ಸ್, ಬಾರಕಣ ಜಲಪಾತ—ಪ್ರತಿಯೊಂದು ತನ್ನದೇ ಆದ ವಿಶಿಷ್ಟತೆ ಹೊಂದಿದೆ. ಜಲಪಾತಗಳ ಸುತ್ತಲಿನ ಹಸಿರು ಕಾಡುಗಳು ಮತ್ತು ಮಂಜಿನ ತೇಲು ಚಿತ್ರದಂತೆ ಕಾಣುತ್ತದೆ.

- **ಸಸ್ಯ–ಪ್ರಾಣಿ ಸಾಮ್ರಾಜ್ಯ** : ಮಲೆನಾಡಿನ ಕಾಡುಗಳು ಜಗತ್ತಿನಲ್ಲೇ ಅತ್ಯಂತ ಸಮೃದ್ಧ ಜೈವಿಕ ವೈವಿಧ್ಯತೆಯ ಪ್ರದೇಶಗಳಲ್ಲಿ ಒಂದಾಗಿದೆ. ಇಲ್ಲಿನ ಗಟ್ಟಿಯಾದ ಕಾಡುಗಳಲ್ಲಿ ಹುಲಿ, ಗಜರಾಜ, ಕರಡಿ, ಕಾಡುಹಂದಿ, ಹರಿ, ನವಿಲು, ಕಿಂಗ್ಕೋಬ್ರಾ ಮೊದಲಾದ ಹಲವು ಪ್ರಾಣಿಗಳು ನೆಲೆಸಿವೆ.ಪಕ್ಷಿಗಳ ಗಾನ ಮಲೆನಾಡಿನ ಮುಂಜಾನೆಗಳನ್ನು ವಿಶೇಷಗೊಳಿಸುತ್ತದೆ. ಮಲಬಾರ್ ಟ್ರೋಗನ್, ಪಾರಿಜಾತ ಹಕ್ಕಿ, ಮಂಜುನಾಥನ ಕೋಯಿಲ್ ಹಕ್ಕಿ, ಹಾರ್ನ್‌ಬಿಲ್ ಅದೇ ರೀತಿ ಔಷಧಿ ಸಸ್ಯಗಳ ಸಂಪತ್ತು ಕೂಡ ಅಪಾರ. ಶತಾವರಿ, ಅರಣ್ಯ ಅತ್ತಿ, ಗಜೆಬಳ್ಳಿ, ತಿಪ್ಪೆ, ವಾಸೆ ಇತ್ಯಾದಿ ಸಸ್ಯಸಂಪತ್ತು ಮಲೆನಾಡಿನ ಹೆಮ್ಮೆ.
- **ತೋಟಗಳ ನೈಸರ್ಗಿಕ ಸುಂದರ** : ಮಲೆನಾಡು ಕಾಫಿ, ಮೆಣಸು, ಏಲಕ್ಕಿ ಮತ್ತು ಅಡಿಕೆ ತೋಟಗಳಿಗೂ ಪ್ರಸಿದ್ಧ.ಮಳೆಯ ನಂತರ ಕಾಫಿ ಪುಷ್ಪಗಳು ಅರಳಿದಾಗ ಗಾಳಿಯಲ್ಲಿ ಹರಡುವ ಸುಗಂಧ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಸುತ್ತ ತುಂಬಿರುವ ಏಲಕ್ಕಿ ಸುಗಂಧ, ಅಡಿಕೆಮರಗಳ ಉತ್ತುಂಗ ಮತ್ತು ತೋಟದ ಕೆಲಸಗಳಲ್ಲಿ ತೊಡಗುವ ಜನರ ನಿತ್ಯ.ತೋಟಗಳಲ್ಲಿ ಬೆಳಗಿನ ಮಂಜಿನ ಹನಿಗಳು ಎಲೆಗಳ ಮೇಲೆ ಹೊಳೆಯುವ ದೃಶ್ಯ ಮಲೆನಾಡಿನ ಸೊಗಸು.
- **ಜನಜೀವನದ ಸರಳತೆ** : ಮಲೆನಾಡಿನ ಜನರು ಪ್ರಕೃತಿಯೊಂದಿಗೆ ಬೆಸೆದುಕೊಂಡು ಸರಳ ಜೀವನ ನಡೆಸುತ್ತಾರೆ.ಇಲ್ಲಿನ ಮನೆಗಳ ವಿನ್ಯಾಸವೂ ಪರಿಸರ ಸ್ನೇಹಿ. ಮಳೆಯ ತೀವ್ರತೆಗೆ ತಾಕುವಂತೆ ಬಲವಾದ ಟೈಲು ಮನೆಗಳು, ಕಿರಿದಾದ ಕಂದಕ ರಸ್ತೆಗಳು, ಚಿಕ್ಕಚಿಕ್ಕ ಸೇತುವೆಇಲ್ಲಿನ ಆಹಾರವೂ ಪೌಷ್ಟಿಕತೆ ಮತ್ತು ಸರಳತೆಯ ಪ್ರತಿಬಿಂಬ ಅಕ್ಕಿ ರೊಟ್ಟಿ ನೆಲಗು ಬಟಾಣಿ ಸಾರು ಕೇಸರಿ–ಅಕ್ಕಿ ಸೌತೆಕಾಯಿ ಹಾಲು ಮೇಣಸಿನಕಾಯಿ ಬಜ್ಜಿ ಜೋಳದ ಅಂಬಿಲ ಮಳೆಗಾಲದಲ್ಲಿ ಕಷಾಯ, ಹುಳಿ ಮೆಣಸಿನಕಾಯಿ ಮತ್ತು ಬಿಸಿ ಅಕ್ಕಿ ರೊಟ್ಟಿ—ಇವು ಮಲೆನಾಡಿಗರ ವಿಶೇಷ ರುಚಿ.
- **ಹಬ್ಬ ಸಂಪ್ರದಾಯಗಳ ಸಂಭ್ರಮ** : ಮಲೆನಾಡಿನ ಬದರುಬಣಿಗಳು ಸಂಸ್ಕೃತಿಯಿಂದ ತುಂಬಿವೆ. ಹಬ್ಬ ಕರ್ಣಿಕೋತ್ಸವ ಹೆಬ್ಬಾಗಿಲು ಜಾತ್ರೆ ಕಡಂಬೋತ್ಸವದೀಪಾವಳಿ ಮತ್ತು ಕಾರ್ತಿಕ ಮಾಸದ ದೀಪ ಆರತಿ ಈ ಹಬ್ಬಗಳಲ್ಲಿ ಮಂಜಿಗೆ ಬೆರೆತ ದೀಪಗಳ ಬೆಳಕು, ಜನಪದ ಗೀತೆಗಳು, ದೋಳು ತಮಟೆಯ ನಾದ
- **ಪ್ರವಾಸಿಗರ ನುಡಿಗಟ್ಟು** : ಮಲೆನಾಡಿನಲ್ಲಿ ಪ್ರವಾಸಕ್ಕೆ ಬಂದವರು ಹೆಚ್ಚಿನವರು “ಇಲ್ಲಿ ಒಂದು ದಿನ ಕಳೆದರೆ ಮನಸ್ಸೇ ಇಲ್ಲಿ ಉಳಿದುಕೊಳ್ಳುತ್ತದೆ” ಎಂದು ಹೇಳುತ್ತಾರೆ.ಕುಮಾರಪರ್ವತದ ಹೈಕ್, ಕುದ್ರೆಮುಖದ ಶಿಖರ, ಆಗುಂಬೆಯ ಸೂರ್ಯಾಸ್ತ, ಸಿರ್ಸಿಯ ಕಾಡು, ಥೀರ್ಥಹಳ್ಳಿ, ಹರಗೆರೆ, ಚರ್ಮಾಡಿ ಘಾಟಪ್ರತಿಯೊಂದು ತಿರುವಿನಲ್ಲೂ ಹೊಸ ದೃಶ್ಯ, ಪ್ರತಿಯೊಂದು ದಾರಿಯಲ್ಲೂ ಹೊಸ ಮಂಜಿನ ತೇಲು—ಇದಕ್ಕೇ ಮಲೆನಾಡು ಅನನ್ಯ.ಪರಿಸರ ಸಂರಕ್ಷಣೆಯ ಅಗತ್ಯಮಲೆನಾಡಿನ ಅರಣ್ಯಗಳು ಕರ್ನಾಟಕದ ನೀರಿನ ಮೂಲ. ಜಲಾಶಯಗಳು, ನದಿಗಳು ಮತ್ತು ಮಳೆ. ಆದರೆ ಅತಿಯಾದ ಮನುಷ್ಯ ಚಟುವಟಿಕೆ, ಗಣಿಗಾರಿಕೆ ಮತ್ತು ಮರ ಕಟಾವು ಇದಕ್ಕೆ ಅಪಾಯ ತಂದಿದೆ. ಮಲೆನಾಡನ್ನು ರಕ್ಷಿಸುವುದು ಕೇವಲ ಅಲ್ಲಿನ ಜನರಲ್ಲ; ಇದು ಎಲ್ಲರ ಜವಾಬ್ಧಾರಿ.ಮಳೆಗಾಡುಗಳನ್ನು ಉಳಿಸಬೇಕು ನದಿಗಳನ್ನು ಸ್ವಚ್ಚವಾಗಿಡಬೇಕು ಪ್ರಕೃತಿ ಪ್ರವಾಸಿಗರು ಪರಿಸರ ನಾಶ ಮಾಡಬಾರದುಇದರಿಂದ ಭವಿಷ್ಯದ ಪೀಳಿಗೆಗೂ ಮಲೆನಾಡಿನ ಸೊಬಗು ಉಳಿದುಕೊಳ್ಳುತ್ತದೆ

ಮಲೆನಾಡು ಕೇವಲ ಒಂದು ಪ್ರದೇಶವಲ್ಲ ಅದು ಒಂದು ಅನುಭವ, ಒಂದು ಭಾವನೆ. ಮಂಜಿನ ಮೋಹ, ಮಳೆಗಾಳಿಯ ಗಾಯನ, ಜಲಪಾತಗಳ ಗರ್ಜನೆ, ತೋಟಗಳ ಸುಗಂಧ, ಜನಜೀವನದ ಸರಳತ ಈ ಸೊಬಗು ಕೇವಲ ನೋಡಲು ಮಾತ್ರವಲ್ಲ; ಮನಸ್ಸಿನಲ್ಲಿ ಹೊಕ್ಕು ಉಳಿಯುವ ಸೊಬಗು. ಪ್ರಕೃತಿಯನ್ನು ಪ್ರೀತಿಸುವ ಪ್ರತಿಯೊಬ್ಬರಿಗೂ ಮಲೆನಾಡು ಶಾಂತಿಯ ಮತ್ತು ಆನಂದದ ಮಂದಿರ.

# ಗೆಳೆತನವೆಂಬ ಆಪ್ತನಿಧಿ

**ನವನೀತಬಾಯಿ ಆರ್.,**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಒಂದು ಮಗು ಹುಟ್ಟಿ ಬೆಳೆದು ಶಾಲೆಗೆ ಹೋಗಲು ಆರಂಭಿಸಿದಾಗ ಸಿಗುವ ಪಾಠಕ್ಕಿಂತ ಅಮೂಲ್ಯ ಬಂಧನವೇ ಗೆಳೆತನ. ಅದು ನಿಜವೇ ಆಗಿದ್ದರೆ ಯಾರಿಂದಲೂ ಅದನ್ನು ಮುರಿಯಲು ಸಾಧ್ಯವಿಲ್ಲ. ಹಾಗೆಂದು ಗೆಳೆತನ ಯಾವಾಗ ಹೀಗೆ ಆರಂಭವಾಗುತ್ತದೆ ಎಂದು ಯಾರಿಗೂ ತಿಳಿಯದು. ಆದರೆ ಅದಕ್ಕಿರುವ ಶಕ್ತಿ ಅಪೂರ್ವ. ಅನೇಕ ಬಾರಿ ನಾವು ಸಂಕಷ್ಟದಲ್ಲಿ ಸಿಲುಕಿಕೊಂಡಾಗ ತಂದೆ–ತಾಯಿಗಿಂತ ಮೊದಲು ಗೆಳೆಯನ ಬಳಿ ಮುಜುಗರವಿಲ್ಲದೆ ಹೇಳಿಕೊಳ್ಳುತ್ತೇವೆ. ಹಿರಿಯರೂ ಅಷ್ಟೇ, ತಮ್ಮ ಮಕ್ಕಳ ಜೊತೆ ಒಳ್ಳೆಯ ಗೆಳೆಯರಿದ್ದಾರೆ ಎಂದಾದರೆ ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ. ನಿಜವಾದ ಗೆಳೆಯರೆಂದರೆ ಹಣ, ಸಂಪತ್ತು, ಆಸ್ತಿಯಿದ್ದಾಗ ಅಥವಾ ನಾವು ಸಂತೋಷದಲ್ಲಿದ್ದಾಗ ಮಾತ್ರ ಬರುವವರಲ್ಲ. ಬದಲಿಗೆ ದುಃ ಖದಲ್ಲಿರುವಾಗ, ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತನ್ನ ಕೈಲಾದಷ್ಟು ನೆರವಾಗುವವನೇ ನಿಜವಾದ ಗೆಳೆಯ. ಇಂತಹ ಒಬ್ಬ ಗೆಳೆಯ ನಮಗೆ ಸಿಕ್ಕಿದರೆ ನಾವು ಪುಣ್ಯವಂತರು ಎಂದೇ ಹೇಳಬಹುದು. ಗಮನಿಸಿ ನೋಡಿ, ನೀವು ಸಂತೋಷದಿಂದ ಇದ್ದೀರಿ ಎಂದಾದರೆ ಹೆಚ್ಚಿನ ಬಾರಿ ಅದಕ್ಕೆ ನಿಮ್ಮ ಗೆಳೆಯರೇ ಕಾರಣರಾಗಿರುತ್ತಾರೆ.

ಅದೃಷ್ಟವಶಾತ್, ನನಗೂ ಜೀವನದಲ್ಲಿ ಅದ್ಭುತ ಗೆಳೆಯರು ಸಿಕ್ಕಿದ್ದಾರೆ. ಅವರ್ಯಾರೂ ಕಷ್ಟದ ಸಮಯದಲ್ಲಿ ನನ್ನನ್ನು ಒಂಟಿಯಾಗಿ ಬಿಟ್ಟುಹೋದವರಲ್ಲ. ಒಳ್ಳೆಯ ಕೆಲಸ ಮಾಡಲು ಹೊರಟಾಗ ಅಪಹಾಸ್ಯ ಮಾಡಿದವರಿಲ್ಲ, ಪ್ರೋತ್ಸಾಹಿಸಿದವರೇ ಎಲ್ಲಾ. ನನ್ನ ಸಂತೋಷದಲ್ಲಿ ಬಹುದೊಡ್ಡ ಪಾತ್ರ ವಹಿಸಿರುವ ನನ್ನ ಗೆಳೆಯರು, ನನಗೆ ಅನೇಕ ಪಾಠಗಳನ್ನು ಹೇಳಿಕೊಟ್ಟಿದ್ದಾರೆ. ಹೊಸ ವಿಚಾರಗಳನ್ನು ಕಲಿಸಿದ್ದಾರೆ.

ಎಷ್ಟೋ ಮಂದಿ ಪ್ರೀತಿಯಲ್ಲಿ ಸೋತು, ಜೀವನವೇ ಮುಗಿಯಿತು ಎಂದು ಕೂತವರಿಗೆ ಬೈದು ಬುದ್ಧಿ ಹೇಳಿದ ಸ್ನೇಹಿತರನ್ನು ನೋಡಿದ್ದೇನೆ. ಇನ್ನು ತನಗೇನಾದರೂ ಆಗಲಿ ಚಿಂತೆಯಿಲ್ಲ, ನನ್ನ ಸ್ನೇಹಿತನಿಗೆಕಷ್ಟಪಟ್ಟವರನ್ನು ಕಂಡಿದ್ದೇನೆ. ಹೀಗಾಗಿಯೇ ಈ ಗೆಳೆತನ ಎಂಬುದು ಯಾವುದೇ ಒಂದು ಸ್ವಾರ್ಥವಿಲ್ಲದ ಸಂಬಂಧ.

ಸ್ವಾಮಿ ವಿವೇಕಾನಂದರೂ ತಮಗೆ ಬಾಲ್ಯದಲ್ಲಿ ಮನಸ್ಸನ್ನು ಕಷ್ಟಗಳು ಎದುರಾದಾಗ ಅರ್ಥಮಾಡಿಕೊಂಡು ಸಹಾಯ ಮಾಡಿದ ಸ್ನೇಹಿತರನ್ನು ನೆನಪಿಸಿಕೊಳ್ಳುತ್ತಾರೆ. ಸ್ನೇಹ ಎನ್ನುವುದು ಬಡವಬಲ್ಲಿದ, ಜಾತಿ ಧರ್ಮ, ವಯಸ್ಸಿನ ಹಂಗಿಲ್ಲದೆ ಎಲ್ಲೆಡೆ ಬೆಳೆಯುತ್ತದೆ. ಪ್ರತಿ ವ್ಯಕ್ತಿಯೂ ತನಗೆ ಧೈರ್ಯ ಧೈರ್ಯ ತುಂಬುವ, ಕಷ್ಟ–ಸುಖಗಳನ್ನು ಹಂಚಿಕೊಳ್ಳಬಲ್ಲ, ಕೆಟ್ಟ ಪರಿಸ್ಥಿತಿಯಲ್ಲಿ ನೈತಿಕ ಸ್ಥೈರ್ಯ ತುಂಬುವ ಸ್ನೇಹಿತರ ಬಳಗವನ್ನು ಸೃಷ್ಟಿಸಿಕೊಂಡಿರುತ್ತಾನೆ.

ನೀವೂ ಅಷ್ಟೆ, ನಿಮ್ಮ ಗೆಳೆತನ ನಿಜವಾಗಿದ್ದರೆ ಎಂದಿಗೂ ಅದನ್ನು ಕಳೆದುಕೊಳ್ಳಬೇಡಿ.

*****

## ಕುಟುಂಬವೆಂಬ ನಂದಗೋಕುಲ

**ರಮೇಶ್ ಮಾನ್ಯ ಗುತ್ತೇದಾರ್**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಮನೆಯ ಸುತ್ತ ಕಾಂಪೌಂಡು,
ಗೇಟು ಭದ್ರ..
ಒಳಗಿರುವ ಮನಸುಗಳೇ
ಏಕೋ ಛಿದ್ರ ಛಿದ್ರ...!

ಬಂಧುಗಳೇ ಬಾರದ,
ಸ್ನೇಹಿತರೂ ಸೇರದ
ಮನೆಗಳ ಮುಂದೆ
ಸದಾ ಕಾವಲುಗಾರ...!

ಇಂದು ಮನೆಯಲ್ಲಿ
ಅನ್ನವೇ ಬೇಯುತ್ತಿಲ್ಲ,
ಮನಸುಗಳು ಮಾತ್ರ
ಕುದಿಯುತ್ತಿವೆಯಲ್ಲ...!

ಅಡುಗೆ ಮನೆ,
ಸದಾ ಖಾಲಿ ಖಾಲಿ ಇರುತ್ತೆ.
ಫೋನಿಂದ ಕೂತಲ್ಲಿಗೆ
ಊಟ ತಿಂಡಿ ಬರುತ್ತೆ...!

ಮನೆಗಳಾಗುತ್ತಿವೆ ಮಹಡಿಗಳಿಂದ
ಎತ್ತರ, ಎತ್ತರ...
ಮನಸ್ಸುಗಳೇ ಆಗುತ್ತಿಲ್ಲ

ಹತ್ತಿರ, ಹತ್ತಿರ...!
ಸಂತೋಷ ಏನೆಂಬುದಕ್ಕೆ
ಸಿಗುತ್ತಿಲ್ಲ ಉತ್ತರ...!

ಅಂದು...ಬಿಸಿಲು, ಮಳೆ,
ಚಳಿಗೆ ಮೈ ಒಗ್ಗಿತ್ತು,
ಮನೆ ತಣ್ಣಗಿತ್ತು,
ಒಲೆ ಹೊಗೆಯಾಡುತ್ತಿತ್ತು,
ಬಿಸಿನೀರ ಹಂಡೆ
ಹಬೆಯಾಡುತ್ತಿತ್ತು...!

ಕಣಜದ ತುಂಬಾ
ದವಸ ಧಾನ್ಯ ತುಂಬಿತ್ತು,
ಬಂಧು ಬಳಗದ
ನಡುವೆ ಅನುಬಂಧವಿತ್ತು..

ಎಲ್ಲರೊಟ್ಟಿಗೆ ಮನೆಯೂ
ನಗೆಯಾಡುತಿತ್ತು...!
ಮನೆ ಚಿಕ್ಕದಾದ್ರೂ,
ಮನಸು ಚೊಕ್ಕವಾಗಿತ್ತು...!

ಅಂದು ನನ್ನಜ್ಜ ಕಟ್ಟಿದ
ಮನೆಯಲ್ಲಿ ನಲಿವಿತ್ತು,
ಒಲವಿತ್ತು, ಸಂತಸದ ಸೆಲೆಯಿತ್ತು...!

ಮುಖ್ಯ ಬಾಗಿಲು
ಚಿಕ್ಕದಿತ್ತು,
ತಲೆಬಾಗಬೇಕಿತ್ತು...

ಮಣ್ಣಿನ ಗೋಡೆ
ಸಾರಿಸಿದ ನೆಲವಿತ್ತು
ಮಾಡು ಚಿಕ್ಕದಿತ್ತು,
ಬದುಕು ದೊಡ್ಡದಿತ್ತು,
ನೋವುಗಳಿದ್ದರೂ
ಬದುಕಿಗೆ ಬೆಲೆಯಿತ್ತು,
ಚಾಪೆಯಲಿ ಕಣ್ಣಿಗೆ
ಚೆಂದದ ನಿದ್ರೆಯಿತ್ತು...

ಅಂದು ಆಸ್ಪತ್ರೆಯ
ಹಂಗೇ ಇರಲಿಲ್ಲ
ಎಲ್ಲ ಸಮಸ್ಯೆಗಳಿಗೂ
ಮನೆಯಲ್ಲೇ ಮದ್ದಿತ್ತು
ಮಗುವೂ ಕೂಡಾ
ಮನೆಯಲ್ಲೇ ಹುಟ್ಟುತಿತ್ತು...

ಮದುವೆ ಕೂಡ ಮನೆಯಲ್ಲೇ ನಡೆಯುತಿತ್ತು...
ಚಿತ್ರ ವಿಚಿತ್ರದ ಛತ್ರವೇ ಬೇಕಿರಲಿಲ್ಲ...
ಕೆಲಸಕ್ಕೆ ಶ್ರದ್ಧೆ, ದೇವರ ಮೇಲೆ ನಂಬಿಕೆಯಿತ್ತು...
ಸಾವಿಗೂ ಸಹ ಮನೆಯೇ ಸಾಕ್ಷಿಯಾಗುತ್ತಿತ್ತು...

ಹಲವು ಮಕ್ಕಳು
ಹುಟ್ಟಿದ ಸಂತಸವಿತ್ತು
ಅವರ ಬಾಲ್ಯದ,
ಬದುಕಿನ ಸಂಭ್ರಮವಿತ್ತು...

ನೆಂಟರು ಬಂದರೆ,
ಹಬ್ಬದ ಸಡಗರವಿತ್ತು
ಕೆಲವು ಸಾವುಗಳ
ಸೂತಕವೂ ಇತ್ತು
ಸತ್ತ ಹಿರಿಯರ ನೆನಪು
ಅಚ್ಚಳಿಯದೇ ಉಳಿದಿತ್ತು...!

ಕಷ್ಟಗಳ ಗೆದ್ದ ಗೆಲುವಿನ
ಧ್ಯೋತಕವೂ ಇತ್ತು...
ಬದುಕಿನ ಸಾಧಕ
ಭಾದಕಗಳೆಲ್ಲವೂ ಇತ್ತು...

ಇಂದು, ಮನೆ ರಾಜನಿಲ್ಲದ
ಅರಮನೆಯಂತೆ,
ಸಕಲ ಸವಲತ್ತುಗಳಿರುವ
ದರ್ಬಾರಿನಂತೆ,
ನೆರೆ ಮನೆಯ ಹಂಗಿಲ್ಲದ
ಸೆರೆಮನೆಯಂತೆ,
ಆದ್ರೂ ಎಲ್ಲರಿಗೂ
ಬರೀ ದುಡ್ಡಿನದೇ
ಚಿಂತೆ ಚಿಂತೆ...

ಶುಭ ಕಾರ್ಯಗಳು,
ಸಂತೋಷ ಕೂಟಗಳು,
ಮನೆಬಿಟ್ಟು, ಹೋಟೆಲ್ಲುಗಳ
ಸೇರಿಕೊಂಡಿವೆ..
ಬಂಧುತ್ವ ಮಿತೃತ್ವಗಳು
ಬಂಧನದಲ್ಲಿವೆ...

ನೆಂಟರಿಷ್ಟರು ಮನೆಗೆ
ಬಂದರೆ, ಬರೀ ನಕ್ಕೂ
ನಗದೇ ಕೋಣೆ ಸೇರಿಕೊಳ್ಳುತ್ತಿದ್ದಾರೆ
ಮನೆ ಮಕ್ಕಳು...

ಸ್ನೇಹ, ಸಂಬಂಧಗಳಲ್ಲೂ ತೋರಿಕೆ,
ತಾತ್ಸಾರ, ನಂಬಿಕೆ
ಒಗ್ಗಟ್ಟುಗಳಂತೂ ಬಹಳವೇ ದೂರ...!
ಮತ್ತೆ ಬರಲಿ ಆ ತುಂಬು ಕುಟುಂಬದ
ಕಾಲ,
ಆಗಲಿ ಮನೆ ಮನಗಳೂ
ನಂದಗೋಕುಲ...!

ಅರ್ಥವಾಗಲಿ ಸರ್ವರಿಗೂ ಸಂಬಂಧದ ಬೆಲೆ...!
ಕಲಿಯಲಿ ಎಲ್ಲರೂ ಸಂತಸದಿ, ಒಟ್ಟಾಗಿ ನಗುವ ಕಲೆ...!

ಆಗಲಿ ದ್ವೇಷ ಸ್ವಾರ್ಥ ಮತ್ಸರಗಳಿಗೆ ಸೋಲು,
ಶ್ರೀಮಂತಿಕೆಗಿಂತ ಹೃದಯವಂತಿಕೆ ಮೇಲು...!

*****

# ಗಿರೀಶ್ ಕಾರ್ನಾಡ್

**ನಾಗರತ್ನ ಎಂ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ



ಗಿರೀಶ್ ಕಾರ್ನಾಡ್ ಅವರು ಕನ್ನಡ ಸಾಹಿತ್ಯ, ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ ನಾಟಕಕಾರ, ಲೇಖಕ, ನಟ ಮತ್ತು ನಿರ್ದೇಶಕರಾಗಿದ್ದಾರೆ. 1998ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಇವರು, ಇತಿಹಾಸ ಮತ್ತು ಪುರಾಣಗಳನ್ನು ಆಧರಿಸಿ ಬರೆದ 'ಯಯಾತಿ' ಮತ್ತು 'ತುಘಲಕ್' ನಂತಹ ನಾಟಕಗಳಿಗೆ ಹೆಸರುವಾಸಿಯಾಗಿದ್ದಾರೆ. ಕನ್ನಡ, ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಅವರು ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಜೀವನ: 1938ರ ಮೇ 19ರಂದು ಜನಿಸಿದ ಇವರು, ಕರ್ನಾಟಕ ವಿಶ್ವವಿದ್ಯಾಲಯದಿಂದ ಪದವಿ ಪಡೆದ ನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದರು. 2019ರ ಜೂನ್ 10ರಂದು ನಿಧನರಾದರು.

- **ಸಾಹಿತ್ಯ ಕೃತಿಗಳು:** 'ಯಯಾತಿ' (1961) ನಾಟಕದ ಮೂಲಕ ಕನ್ನಡ ಸಾಹಿತ್ಯಕ್ಕೆ ಪರಿಚಿತರಾದರು. 'ತುಘಲಕ್' (1964) ನಾಟಕವು ಅವರ ಅತ್ಯಂತ ಪ್ರಸಿದ್ಧ ಕೃತಿಗಳಲ್ಲಿ ಒಂದಾಗಿದೆ. ಇತರ ನಾಟಕಗಳೆಂದರೆ 'ಹಯವದನ', 'ರಾಕ್ಷಸ ತಂಗಡಿ' ಮತ್ತು 'ಬೇಯಿಸಿದ ಬೀನ್ಸ್ ಆನ್ ಟೋಸ್ಟ್'.
- **ಚಲನಚಿತ್ರ ಮತ್ತು ರಂಗಭೂಮಿ:** ಕನ್ನಡ, ಹಿಂದಿ, ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲಿ ನಟಿಸಿದ್ದಾರೆ. 'ವಂಶವೃಕ್ಷ', 'ಮಾಲ್ಗುಡಿ ಡೇಸ್' ಮತ್ತು 'ಹೇ ರಾಮ್' ಸೇರಿದಂತೆ ಅನೇಕ ಚಿತ್ರಗಳಲ್ಲಿ ನಟಿಸಿದ್ದಾರೆ. ನಿರ್ದೇಶಕರಾಗಿ ಮತ್ತು ಚಿತ್ರಕಥೆಗಾರರಾಗಿ ಕೆಲಸ ಮಾಡಿದ್ದಾರೆ. 'ಟರ್ನಿಂಗ್ ಪಾಯಿಂಟ್' ಎಂಬ ವಾರಪತ್ರಿಕೆ ವಿಜ್ಞಾನ ಕಾರ್ಯಕ್ರಮವನ್ನು ನಿರೂಪಿಸಿದರು.
- **ಪ್ರಶಸ್ತಿಗಳು:** ಜ್ಞಾನಪೀಠ ಪ್ರಶಸ್ತಿ (1998), ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಗಳು, ನಾಲ್ಕು ಫಿಲ್ಮ್‌ಫೇರ್ ಪ್ರಶಸ್ತಿಗಳು.

ಕಾರ್ನಾಡ್ ಅವರಿಗೆ ಪ್ರಶಸ್ತಿ ಬಂದಾಗ ಸೌಜನ್ಯದಿಂದಲೇ ಮರಾಠಿಯ ವಿಜಯತೆಂಡೂಲ್ಕರ್ ಅವರಂಥವರಿಗೆ ಈ ಪ್ರಶಸ್ತಿ ಬರಬೇಕಿತ್ತು ಎಂದು ಹೇಳಿ ದೊಡ್ಡತನ ಮೆರೆದಿದ್ದರು. ಇಬ್ಬರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕಾದಂಬರಿಗಳನ್ನು ಕುವೆಂಪುರ ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಯು.ಆರ್ ಅನಂತಮೂರ್ತಿಯವರ ಸಂಸ್ಕಾರ ಸಿನಿಮಾ ಮಾಡಿದ ಏಕೈಕ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೆಂಬ ಗೌರವಕ್ಕೆ ಕಾರ್ನಾಡ್ ಪಾತ್ರರಾಗಿದ್ದಾರೆ.

ತಮ್ಮ 42ರ ವಯಸ್ಸಿನಲ್ಲಿ ಕೊಡಗಿನ ವೀರಯೋಧ ಕೋದಂಡೇರ ಗಣಪತಿಯವರ ಪುತ್ರಿ, ಡಾ. ಸರಸ್ವತಿ ಗಣಪತಿಯವರನ್ನು ಅಧಿಕೃತವಾಗಿ ಮದುವೆಯಾದ ಗಿರೀಶರಿಗೆ 2 ಮಕ್ಕಳು, ಶಾಲ್ಮಲಿ ರಾಧಾ ಮತ್ತು ರಘು ಅಮಯ್. 10 ವರ್ಷಗಳ ಕಾಲ, ಲಿವ್-ಇನ್ ಆಗಿ ಸಂಸಾರ ನಡೆಸಿದ ಹಿರಿಮೆ ಕಾರ್ನಾಡರದು. ತುಘಲಕ್ ನಾಟಕವನ್ನು ತಮ್ಮ ಮಿತ್ರ ಮತ್ತು ಸಹಾಯಕ ನಿರ್ದೇಶಕ ಕೃಷ್ಣ ಬಸರೂರುರೊಡಗೂಡಿ ಬರೆದಿದ್ದಾಗಿ, ಆ ನಾಟಕದ ಅರ್ಪಣೆಯಲ್ಲಿ ಹೇಳಿದ್ದಾರೆ. ಒಂದಾನೊಂದು ಕಾಲದಲ್ಲಿ ಚಿತ್ರವನ್ನು 1977ರಲ್ಲಿ ನಿರ್ದೇಶಿಸುವಾಗ ಕಳರಿಪಯಟ್ಟು ಮತ್ತು ಮುಂತಾದ ಸಾಹಸಕಲೆಗಳನ್ನು ಮೊದಲ ಬಾರಿ ಕನ್ನಡ ತೆರೆಯಲ್ಲಿ ಅಳವಡಿಸಿದ ಹಿರಿಮೆ ಕಾರ್ನಾಡರದ್ದು.

"ಕಾರ್ನಾಡರು ವಸ್ತುವನ್ನು ಗ್ರಹಿಸುವ ಕ್ರಮದಲ್ಲೇ ಅವರ ಅನನ್ಯತೆ ಇದೆ. ಈ ಗ್ರಹಿಕೆಗೆ ಪೂರಕವಾದ ರಚನಾಕ್ರಮವನ್ನು ಅವರು ಕಂಡುಕೊಂಡಿದ್ದಾರೆ. ಒಂದು ಸಮಸ್ಯೆಯನ್ನು ನಾಟಕ ರೂಪಕ್ಕೆ ಒಗ್ಗಿಸಿಕೊಂಡು ಅದಕ್ಕೊಂದು Structure ಕೊಟ್ಟು ಜನರ ಮುಂದಿಡುವುದರಲ್ಲೇ ನಾಟಕಕಾರನ ಸೋಲು ಗೆಲುವು ಎರಡೂ ಅಡಗಿದೆ." ಎಂದು ಕಾರ್ನಾಡರ ನಾಟಕಗಳ ವಸ್ತು, ಗ್ರಹಿಕೆ ಬಗ್ಗೆ ಭಾರತೀಯ ರಂಗಭೂಮಿಯ ಹಿರಿಯ ನಿರ್ದೇಶಕ ಬಿ. ವಿ. ಕಾರಂತರು ದಾಖಲಿಸುತ್ತಾರೆ. ಗಿರೀಶ್ ಕಾರ್ನಾಡ್‌ರವರ ಸಾಹಿತ್ಯವು ನಾಟಕೀಯ ರೂಪದಲ್ಲಿದ್ದರೂ, ಅದರಲ್ಲಿ ಕಾವ್ಯದ ಆಳ ಮತ್ತು ಸೌಂದರ್ಯವಿದೆ.

*****

**ಏಷ್ಯಾ ಖಂಡದಲ್ಲಿಯೆ ಅತ್ಯಂತ ಎತ್ತರದಿಂದ ಶರಾವತಿ ನದಿಯಿಂದ ಧುಮ್ಮಿಕ್ಕುವ ಜೋಗ ಜಲಪಾತ ಶಿಕಾರಿಪುರ ತಾಲ್ಲೂಕಿನ ಪಕ್ಕದ ತಾಲ್ಲೂಕು ಸಾಗರದಲ್ಲಿದೆ.**



# ಭಾಷೆಯು ಭಾವನೆ ಕೆರಳಿಸುವ ಅಸ್ತ್ರ ಆಗದಿರಲಿ

**ನಿರ್ಮಲಾ ಎಂ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಭಾಷೆ ಎನ್ನುವುದು ಮಾನವ ಸಮಾಜದ ಅತ್ಯಮೂಲ್ಯ ಸೃಷ್ಟಿಗಳಲ್ಲೊಂದು. ಅದು ಕೇವಲ ಸಂವಹನದ ಸಾಧನವಾಗಿರದೆ, ಸಂಸ್ಕೃತಿ, ಪರಂಪರೆ, ಜ್ಞಾನ ಮತ್ತು ಒಗ್ಗಟ್ಟಿನ ಸಂಕೇತವೂ ಹೌದು. ರಾಷ್ಟ್ರದ ಗುರುತನ್ನು ಕಟ್ಟಿಕೊಡುವ ಮಹತ್ವದ ಅಂಶಗಳಲ್ಲಿ ಭಾಷೆಯೂ ಒಂದು. ಆದರೆ ಕೆಲವು ಸಂದರ್ಭಗಳಲ್ಲಿ ಭಾಷೆಯನ್ನು ಭಾವನೆ ಕೆರಳಿಸುವ ಅಸ್ತ್ರವನ್ನಾಗಿ ಬಳಸುವ ದುರುಪಯೋಗವೂ ಕಂಡುಬರುತ್ತದೆ. ಇದು ಸಮಾಜದ ಸಮಗ್ರ ಅಭಿವೃದ್ಧಿಗೆ ಅಪಾಯಕಾರಿಯಾಗುತ್ತದೆ.

ಭಾಷೆಗಳ ವೈವಿಧ್ಯತೆ ನಮ್ಮ ದೇಶದ ಶಕ್ತಿಯಾಗಿದ್ದು, ದುರ್ಬಲತೆ ಅಲ್ಲ. ಕನ್ನಡ, ತಮಿಳು, ತೆಲುಗು, ಹಿಂದಿ, ಮಲಯಾಳಂ, ಮರಾಠಿ, ಒರಿಯಾ ಪ್ರತಿಯೊಂದು ಭಾಷೆಯಲ್ಲಿಯೂ ವಿಶಿಷ್ಟತೆ, ಸಾಹಿತ್ಯ ಪರಂಪರೆ ಮತ್ತು ಸಂಸ್ಕೃತಿ ಅಡಗಿದೆ. ಹೀಗಿರುವಾಗ ಒಂದನ್ನು ಮತ್ತೊಂದರಿಗಿಂತ ಮೇಲುಮಾಡಿ ತೋರಿಸುವ ಪ್ರಯತ್ನಗಳು ಅಸಮಾಧಾನಕ್ಕೆ ಕಾರಣವಾಗುತ್ತವೆ. ಈ ಪ್ರಯತ್ನಗಳು ಜನರ ಮನಸ್ಸಿನಲ್ಲಿ ವೈಷಮ್ಯವನ್ನು ಉಂಟುಮಾಡಿ, ಅನಾವಶ್ಯಕವಾದ ಭಾವನಾತ್ಮಕ ಅಲೆಮಾಲೆಗೆ ದಾರಿಯಾಗುತ್ತವೆ.

ಭಾಷೆಯ ಹೆಮ್ಮೆಯನ್ನು ಹೊಂದುವುದು ಸಹಜ; ಆದರೆ ಆ ಹೆಮ್ಮೆಯ ಹೆಸರಿನಲ್ಲಿ ಮತ್ತೊಬ್ಬರ ಭಾಷೆಯನ್ನು ತಿರಸ್ಕರಿಸುವ ಮನೋಭಾವ ಒಳ್ಳೆಯದೇ ಅಲ್ಲ. ಭಾಷೆಯನ್ನು ರಾಜಕೀಯ, ಪ್ರಾದೇಶಿಕ ಅಥವಾ ವೈಯಕ್ತಿಕ ಸ್ವಾರ್ಥಕ್ಕಾಗಿ ಬಳಸುವವರಿಂದ ಸಮಾಜದಲ್ಲಿ ಅಂತರಗಳು ನಿರ್ಮಾಣವಾಗುತ್ತವೆ. ಇಂತಹ ಪರಿಸ್ಥಿತಿ ರಾಷ್ಟ್ರದ ಸಮಗ್ರತೆಗೆ ಹಾನಿಕಾರಕ. ಪರಸ್ಪರ ಗೌರವ, ಸಹಾನುಭೂತಿ ಮತ್ತು ಸಹಬಾಳ್ವೆಯಿಂದಲೇ ಭಾಷಾ ವೈವಿಧ್ಯತೆ ಸುಂದರವಾಗಿರುತ್ತದೆ.

ಕನ್ನಡ ಭಾಷೆಯನ್ನು ಪ್ರೀತಿಸುವುದು ನಮ್ಮ ಕರ್ತವ್ಯ. ಅದನ್ನು ಬೆಳೆಯುವ, ಉಳಿಸುವ ಮತ್ತು ಪ್ರಸಾರ ಮಾಡುವ ಜವಾಬ್ದಾರಿ ನಮ್ಮದು. ಆದರೆ ಈ ಪ್ರೀತಿಯ ಅಭಿವ್ಯಕ್ತಿಯು ಶಾಂತ, ಸುಸಂಸ್ಕೃತ ಮತ್ತು ಸಹಕಾರಿ ಆಗಬೇಕು. ಇತರ ಭಾಷೆಗಳ ಗೌರವ ಕಾಪಾಡಿದಾಗ ಮಾತ್ರ ಕನ್ನಡಕ್ಕೆ ಗೌರವ ಹೆಚ್ಚುತ್ತದೆ. "ನಮ್ಮದು ನಮ್ಮದೇ, ನಿಮ್ಮದು ಕೆಟ್ಟದು" ಎಂಬ ಮನೋಭಾವವನ್ನು ಬಿಟ್ಟು, ಎಲ್ಲ ಭಾಷೆಗಳೂ ಸಮಾನ ಮೌಲ್ಯದವು ಎಂಬ ದೃಷ್ಟಿಕೋಣವನ್ನು ಬೆಳೆಸಬೇಕು.

ಆದ್ದರಿಂದ ಭಾಷೆಯು ಜನರ ನಡುವೆ ಭಾವನೆ ಕೆರಳಿಸುವ ಅಸ್ತ್ರವಾಗಬಾರದು. ಅದು ಸೌಹಾರ್ದ, ಸಮಾನತೆ, ಪ್ರೀತಿ ಮತ್ತು ಒಗ್ಗಟ್ಟನ್ನು ಬೆಳೆಸುವ ಸೇತುವೆಯಾಗಿರಲಿ. ಭಾಷಾ ವೈವಿಧ್ಯತೆಯನ್ನು ಗೌರವಿಸುವುದು ರಾಷ್ಟ್ರದ ವೈಭವವನ್ನು ಹೆಚ್ಚಿಸುತ್ತದೆ. ಎಲ್ಲ ಭಾಷೆಗಳೂ ನಮ್ಮ ದೇಶದ ಸಂಪತ್ತು ಎಂಬುದನ್ನು ಅರಿತು, ಪರಸ್ಪರ ಗೌರವದಿಂದ ಬದುಕುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ.

*****

# ಕನ್ನಡಕ್ಕಾಗಿ ಬಾನುವಿನ ಸಾಧನೆ ನಮ್ಮ ಹೆಮ್ಮೆ

**ಸಂಗೀತ ಪಿ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ




ಬಾನು ಮುಷ್ತಾಕ್ (1948 ರಲ್ಲಿ ಜನನ) ಭಾರತದ ದಕ್ಷಿಣ ರಾಜ್ಯವಾದ ಕರ್ನಾಟಕದ ಒಬ್ಬ ಕಾರ್ಯಕರ್ತೆ, ವಕೀಲೆ ಮತ್ತು ಬರಹಗಾರ್ತಿ. ಇವರು ಕನ್ನಡ ಭಾಷೆಯಲ್ಲಿ ಬರೆಯುತ್ತಾರೆ ಮತ್ತು ಅವರ ಕೃತಿಗಳು ಉರ್ದು, ಹಿಂದಿ, ತಮಿಳು, ಮಲಯಾಳಂ ಮತ್ತು ಇತ್ತೀಚೆಗೆ ಆಂಗ್ಲ ಭಾಷೆಗಳಲ್ಲಿಯೂ ಪ್ರಕಟವಾಗಿವೆ. 2025 ರಲ್ಲಿ, ದೀಪಾ ಭಸ್ತಿ ಅವರಿಂದ ಆಂಗ್ಲ ಭಾಷೆಗೆ ಅನುವಾದಿಸಲ್ಪಟ್ಟ ಸಣ್ಣ ಕಥಾಸಂಕಲನ, ಹಾರ್ಟ್ ಲ್ಯಾಂಪ್, ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಬಾನು ಮುಷ್ತಾಕ್ 1948 ರಲ್ಲಿ ಕರ್ನಾಟಕದ ಹಾಸನದಲ್ಲಿ ಮುಸ್ಲಿಂ ಕುಟುಂಬದಲ್ಲಿ ಜನಿಸಿದರು. 8 ನೇ ವಯಸ್ಸಿನಲ್ಲಿ ಮುಷ್ತಾಕ್ ಅವರನ್ನು ಶಿವಮೊಗ್ಗದಲ್ಲಿರುವ ಕನ್ನಡ ಭಾಷೆಯ ಮಿಷನರಿ ಶಾಲೆಗೆ ಸೇರಿಸಲಾಯಿತು, "ಆರು ತಿಂಗಳಲ್ಲಿ ಕನ್ನಡ ಓದಲು ಮತ್ತು ಬರೆಯಲು" ಕಲಿಯಬೇಕು ಎಂಬ ಷರತ್ತಿನ ಮೇಲೆ; ಕೆಲವು ದಿನಗಳ ಶಾಲೆಯ ನಂತರ ಬರೆಯಲು ಪ್ರಾರಂಭಿಸುವ ಮೂಲಕ ಅವರು ನಿರೀಕ್ಷೆಗಳನ್ನು ಮೀರಿದರು.ಸಮುದಾಯದ ನಿರೀಕ್ಷೆಗಳಿಗೆ ವ್ಯತಿರಿಕ್ತವಾಗಿ, ಅವರು ವಿಶ್ವವಿದ್ಯಾಲಯಕ್ಕೆ ಹೋಗಿ 26 ನೇ ವಯಸ್ಸಿನಲ್ಲಿ ಪ್ರೇಮ ವಿವಾಹವಾದರು. ಇವರು ಕನ್ನಡ, ಹಿಂದಿ, ದಖ್ನಿ ಉರ್ದು ಮತ್ತು ಇಂಗ್ಲಿಷ್ ಮಾತನಾಡುತ್ತಾರೆ.

ಮುಷ್ತಾಕ್ ಚಿಕ್ಕ ವಯಸ್ಸಿನಿಂದಲೂ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದರು, ಆದರೆ 29 ನೇ ವಯಸ್ಸಿನಲ್ಲಿ ಮಾತ್ರ ಬರಹಗಾರರಾಗಲು ಸಾಧ್ಯವಾಯಿತು, ಏಕೆಂದರೆ ಅವರು ಪ್ರಸವಾನಂತರದ ಖಿನ್ನತೆಯಿಂದ ಬಳಲುತ್ತಿದ್ದ ಹೊಸ ತಾಯಿಯಾಗಿದ್ದರು. ಮುಷ್ತಾಕ್ ತನ್ನ ಭಾವನೆಗಳು ಮತ್ತು ಅನುಭವಗಳನ್ನು ಅನ್ವೇಷಿಸಲು ಬರವಣಿಗೆಯತ್ತ ಹೊರಳಿದರು. ಅವರ ಹೆಚ್ಚಿನ ಬರವಣಿಗೆಗಳು ಮಹಿಳೆಯರ ಸಮಸ್ಯೆಗಳನ್ನು ನೋಡುತ್ತವೆ. ಮುಷ್ತಾಕ್ ಆರು ಸಣ್ಣ ಕಥೆಗಳ ಸಂಪುಟಗಳು, ಒಂದು ಕಾದಂಬರಿ, ಒಂದು ಪ್ರಬಂಧಗಳ ಸಂಗ್ರಹ ಮತ್ತು ಒಂದು ಕವನ ಸಂಕಲನವನ್ನು ಪ್ರಕಟಿಸಿದ್ದಾರೆ.ಅವರ " ಕರಿ ನಾಗರಗಳು " ಎಂಬ ಕಥೆಯನ್ನು 2003 ರಲ್ಲಿ "ಹಸೀನಾ" ಎಂಬ ಚಲನಚಿತ್ರವಾಗಿ ರೂಪಾಂತರಿಸಲಾಯಿತು.

❖ **ಕಥಾ ಸಂಕಲನ : –** ಬದಲಾಯಿಸಿ, ಹೆಜ್ಜೆ ಮೂಡಿದ ಹಾದಿ, ಬೆಂಕಿ ಮಳೆ, ಎದೆಯ ಹಣತೆ, ಸಫೀರಾ, ಬಡವರ ಮಗಳು ಹೆಣ್ಣು, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ,ದೀಪಾ ಭಸ್ತಿ ಅವರ ಹಸೀನಾ ಮತ್ತು ಇತರ ಕಥೆಗಳ ಅನುವಾದಕ್ಕಾಗಿ 2024 ರ ಪೆನ್ ಇಂಗ್ಲಿಷ್ ಅನುವಾದ ಪ್ರಶಸ್ತಿ ,ದೀಪಾ ಭಸ್ತಿ ಅವರಿಂದ ಅನುವಾದಿಸಲಾದ 'ಹಾರ್ಟ್ ಲ್ಯಾಂಪ್' ಕಾದಂಬರಿಗೆ 2025 ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ದೊರೆತಿವೆ.

1980 ರ ದಶಕದಿಂದಲೂ, ಮುಷ್ತಾಕ್ ಕರ್ನಾಟಕದಲ್ಲಿ "ಮೂಲಭೂತವಾದ ಮತ್ತು ಸಾಮಾಜಿಕ ಅನ್ಯಾಯಗಳನ್ನು" ದುರ್ಬಲಗೊಳಿಸಲು ಕೆಲಸ ಮಾಡುವ ಕಾರ್ಯಕರ್ತ ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.2000 ರಲ್ಲಿ, ಮುಷ್ತಾಕ್ ಮತ್ತು ಅವರ ಕುಟುಂಬದವರ "ಮುಸ್ಲಿಂ ಮಹಿಳೆಯರ ಮಸೀದಿಗಳ

ಪ್ರವೇಶ ಹಕ್ಕಿನ ಪ್ರತಿಪಾದನೆ"ಗೆ ಪ್ರತಿಕ್ರಿಯೆಯಾಗಿ ಅವರ ವಿರುದ್ಧ ಮೂರು ತಿಂಗಳ "ಸಾಮಾಜಿಕ ಬಹಿಷ್ಕಾರ " ಘೋಷಿಸಲಾಯಿತು.

2000 ದಶಕದ ಆರಂಭದಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಬಾಬಾ ಬುಡನ್ಗಿರಿಯಲ್ಲಿರುವ ಸಿಂಕ್ರೆಟಿಕ್ ದೇವಾಲಯಕ್ಕೆ ಮುಸ್ಲಿಮರು ಭೇಟಿ ನೀಡುವುದನ್ನು ತಡೆಯುವ ಪ್ರಯತ್ನಗಳನ್ನು ಪ್ರತಿಭಟಿಸಿ ಮುಷ್ತಾಕ್ ನಾಗರಿಕ ಸಮಾಜ ಗುಂಪು ಕೋಮು ಸೌಹಾರ್ದ ವೇದಿಕೆಯನ್ನು ಸೇರಿದರು.

ಕರ್ನಾಟಕದಲ್ಲಿ ಶಾಲೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳು ಹಿಜಾಬ್ ಧರಿಸುವ ಹಕ್ಕನ್ನು ಮುಷ್ತಾಕ್ ಬೆಂಬಲಿಸಿದ್ದಾರೆ.

ಕನ್ನಡಕ್ಕಾಗಿ ಹೋರಾಡಿದ ಕನ್ನಡದ ಕಣ್ಮಣಿ
ಕನ್ನಡದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿದ ಕನ್ನಡದ ಕೀರ್ತ
ಹೇಗೆ ವರ್ಣಿಸಲಿ ನಿಮ್ಮ ಈ ವ್ಯಕ್ತಿತ್ವವನ್ನ
ಪ್ರತಿನಿತ್ಯವು ಕನ್ನಡವನ್ನು ಬೆಳೆಸುತ್ತಿವೆ ಕನ್ನಡಕ್ಕಾಗಿ ಚಿರಋಣಿಯಾಗಿರುತ್ತಿವಿ
ನಮ್ಮ ಹೆಮ್ಮೆಯ ಬಾನು ನಿಮಗೆ ನನ್ನ ಕಡೆಯಿಂದ
ತುಂಬು ಹೃದಯದ ಧನ್ಯವಾದಗಳು.

*****

## ಶಿಕಾರಿಪುರ ಹತ್ತಿರದ ಅಂಜನಾಪುರ ಜಲಾಶಯದ ಉದ್ಯಾನವನ



# ಆಧುನಿಕ ಕನ್ನಡದಲ್ಲಿ ಆಡುಭಾಷೆಯ ಪ್ರಭಾವ

**ಭಾಗ್ಯಶ್ರೀ ಮರೀಗೌಡ್ರು**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವಿನ ವ್ಯತ್ಯಾಸ ಮತ್ತು ಸರಳೀಕರಣ ಕನ್ನಡ ಭಾಷೆಯ ನಿರಂತರ ವಿಕಾಸದಲ್ಲಿ ಆಡುಭಾಷೆಯು (Colloquial Language) ಯಾವಾಗಲೂ ಪ್ರಮುಖ ಪಾತ್ರ ವಹಿಸಿದೆ. ಲಿಖಿತ ಅಥವಾ ಗ್ರಾಂಥಿಕ ಕನ್ನಡವು ಸಾಹಿತ್ಯ ಮತ್ತು ಶಾಸ್ತ್ರಗಳ ನಿಯಮಗಳಿಂದ ಹೆಚ್ಚು ಸ್ಥಿರವಾಗಿದ್ದರೆ, ಆಡುಭಾಷೆಯು ದೈನಂದಿನ ಸಂಭಾಷಣೆ, ಪ್ರಾದೇಶಿಕ ವೈವಿಧ್ಯತೆ ಮತ್ತು ಸಾಮಾಜಿಕ ಬದಲಾವಣೆಗಳಿಗೆ ಅನುಗುಣವಾಗಿ ವೇಗವಾಗಿ ಹೊಸ ರೂಪಗಳನ್ನು ಪಡೆದುಕೊಳ್ಳುತ್ತದೆ.

ಆಧುನಿಕ ಕನ್ನಡವು ಆಡುಭಾಷೆಯಿಂದ ಹಲವಾರು ಬದಲಾವಣೆಗಳನ್ನು ಅಳವಡಿಸಿಕೊಂಡಿದೆ. ಪ್ರಮುಖವಾಗಿ, ಧ್ವನಿ ಮತ್ತು ಉಚ್ಚಾರಣೆಯ ಬದಲಾವಣೆಗಳು ಪ್ರಬಲವಾಗಿವೆ. ಆಡುಮಾತಿನಲ್ಲಿ, "ಬರುತ್ತಾನೆ" ಎಂಬ ಗ್ರಾಂಥಿಕ ರೂಪವು "ಬರ್ತಾನೆ" ಎಂದು ಸಂಕ್ಷಿಪ್ತಗೊಳ್ಳುತ್ತದೆ, ಅಥವಾ "ಮಾಡುತ್ತಿದ್ದೇವೆ" ಎಂಬುದು "ಮಾಡ್ತಿದೀವಿ" ಎಂದು ಸರಳಗೊಳ್ಳುತ್ತದೆ. ಪದಗಳ ಮಧ್ಯದಲ್ಲಿರುವ ಸ್ವರಗಳು ಮಾತನಾಡುವಾಗ ಲೋಪವಾಗುತ್ತವೆ (ಸ್ವರ ಲೋಪ), ಉದಾಹರಣೆಗೆ "ಅವನಿಗೆ" ಎಂಬುದು "ಅವ್ನಿಗೆ" ಆಗುತ್ತದೆ. ಇದೇ ರೀತಿ, ಆಡುಭಾಷೆಯು ವ್ಯಾಕರಣ ಮತ್ತು ಪ್ರತ್ಯಯಗಳ ಸರಳೀಕರಣಕ್ಕೆ ಸಹಕಾರಿಯಾಗಿದೆ. "ಬಂದೆನು" ನಂತಹ ಉದ್ದನೆಯ ಕ್ರಿಯಾಪದ ರೂಪಗಳು "ಬಂದೆ" ಎಂದು ಸರಳ ರೂಪ ಪಡೆಯುತ್ತವೆ. ಚತುರ್ಥಿ ವಿಭಕ್ತಿಯಂತಹ ಪ್ರತ್ಯಯಗಳು "ನನಗಾಗಿ" ಬದಲು "ನಂಗ್ಗೆ" ಎಂಬಂತಹ ಸಂಕ್ಷಿಪ್ತ, ಪ್ರಾದೇಶಿಕ ರೂಪಗಳಿಗೆ ಬದಲಾಗುತ್ತವೆ. ಈ ರೀತಿಯ ಸರಳೀಕೃತ ಮತ್ತು ಸಂಕ್ಷಿಪ್ತ ರೂಪಗಳು ಆಧುನಿಕ ಲಿಖಿತ ಕನ್ನಡದಲ್ಲಿಯೂ ಹೆಚ್ಚು ಮಾನ್ಯತೆಯನ್ನು ಪಡೆಯುತ್ತಿವೆ.ಸಾಹಿತ್ಯ, ಮಾಧ್ಯಮ ಮತ್ತು ಶೈಲಿಯ ಮೇಲೆ ಪ್ರಭಾವ

ಆಧುನಿಕ ಕನ್ನಡದಲ್ಲಿ ಆಡುಭಾಷೆಯ ಪ್ರಭಾವವು ಕೇವಲ ವ್ಯಾಕರಣ ಅಥವಾ ಉಚ್ಚಾರಣೆಗೆ ಸೀಮಿತವಾಗಿಲ್ಲ, ಇದು ಸಾಹಿತ್ಯ ಮತ್ತು ಮಾಧ್ಯಮದ ಶೈಲಿಯನ್ನೂ ಆಮೂಲಾಗ್ರವಾಗಿ ಬದಲಾಯಿಸಿದೆ. ಸಾಹಿತ್ಯದಲ್ಲಿ ಆಡುಭಾಷೆಯ ಬಳಕೆ ಯು ನವ್ಯ, ದಲಿತ–ಬಂಡಾಯ ಸಾಹಿತ್ಯ ಚಳುವಳಿಗಳ ನಂತರ ಹೆಚ್ಚಾಯಿತು. ಲೇಖಕರು ತಮ್ಮ ಕೃತಿಗಳಲ್ಲಿ ಪಾತ್ರಗಳ ಸಂಭಾಷಣೆಗಳಲ್ಲಿ ಆಡುಮಾತನ್ನು ಬಳಸುವುದು ಮಾತ್ರವಲ್ಲದೆ, ನಿರೂಪಣೆಯಲ್ಲಿಯೂ ಸ್ಥಳೀಯ ಮತ್ತು ಪ್ರಾದೇಶಿಕ ಸೊಗಡನ್ನು ಸೇರಿಸಲು ಆಡುಭಾಷೆಯನ್ನು ಅಳವಡಿಸಿಕೊಂಡರು. ಉದಾಹರಣೆಗೆ, ದೇವನೂರು ಮಹಾದೇವರಂತಹ ಲೇಖಕರು, ನಿರ್ಲಕ್ಷಿತ ಸಮುದಾಯಗಳ ವಿಶಿಷ್ಟ ಆಡುಭಾಷೆ ಮತ್ತು ನುಡಿಗಟ್ಟುಗಳನ್ನು (ದೇಸಿ ಅಭಿವ್ಯಕ್ತಿ) ಬಳಸಿ, ಆ ಸಮುದಾಯಗಳ ಸಂವೇದನೆಗಳನ್ನು ಹೆಚ್ಚು ನೈಜವಾಗಿ ಮತ್ತು ಪರಿಣಾಮಕಾರಿಯಾಗಿ ಓದುಗರಿಗೆ ತಲುಪಿಸಿದರು.

ಈ ಬಳಕೆಯಿಂದಾಗಿ ಸಾಹಿತ್ಯವು ಕಟ್ಟುನಿಟ್ಟಾದ ಗ್ರಾಂಥಿಕತೆಯಿಂದ ಹೊರಬಂದು ಜನಸಾಮಾನ್ಯರ ಬಳಿಗೆ ತಲುಪಿತು. ಇದರ ಜೊತೆಗೆ, ಮಾಧ್ಯಮ ಮತ್ತು ಮನರಂಜನೆಯಲ್ಲಿ ಪ್ರಭಾವ ಬೀರಿದ್ದು ಅಗಾಧವಾಗಿದೆ. ಕನ್ನಡ ಚಲನಚಿತ್ರಗಳು, ಕಿರುತೆರೆ ಕಾರ್ಯಕ್ರಮಗಳು ಮತ್ತು ಇತ್ತೀಚಿನ ಡಿಜಿಟಲ್ ಕಂಟೆಂಟ್ಗಳು ಮೈಸೂರು, ಬೆಂಗಳೂರು, ಉತ್ತರ ಕರ್ನಾಟಕ ಮತ್ತು ಮಂಗಳೂರು ಮುಂತಾದ ವಿವಿಧ ಪ್ರಾದೇಶಿಕ ಆಡುಭಾಷೆಗಳನ್ನು ನೈಜತೆಗೆ ಹತ್ತಿರವಾಗುವಂತೆ ಬಳಸುತ್ತವೆ, ಇದು ಈ ವಿಭಿನ್ನ ಶೈಲಿಗಳನ್ನು ಸಾರ್ವಜನಿಕವಾಗಿ ಅಂಗೀಕರಿಸಲು ಮತ್ತು ಜನಪ್ರಿಯಗೊಳಿಸಲು ನೆರವಾಗಿದೆ.

**ಪ್ರಾದೇಶಿಕ ಭೇದಗಳು, ವೈವಿಧ್ಯತೆ ಮತ್ತು ಸವಾಲುಗಳು**

ಆಧುನಿಕ ಕನ್ನಡದಲ್ಲಿ ಆಡುಭಾಷೆಯ ಪ್ರಭಾವವು ಬಹುಮುಖ್ಯವಾಗಿ ಪ್ರಾದೇಶಿಕ ಆಡುಭಾಷೆಗಳ ವೈವಿಧ್ಯತೆಯನ್ನು ಪ್ರದರ್ಶಿಸುತ್ತದೆ. ಕರ್ನಾಟಕದ ಪ್ರತಿ ಭಾಗವೂ ತನ್ನದೇ ಆದ ವಿಶಿಷ್ಟ ಪದ ಸಂಪತ್ತು (Lexicon) ಮತ್ತು ನುಡಿಗಟ್ಟುಗಳನ್ನು ಹೊಂದಿದೆ, ಇದು ಆಯಾ ಪ್ರದೇಶದ ಸಂಸ್ಕೃತಿ ಮತ್ತು ಇತರೆ ಭಾಷೆಗಳ ಪ್ರಭಾವದಿಂದ ರೂಪುಗೊಂಡಿದೆ. ಉದಾಹರಣೆಗೆ, ಬೆಂಗಳೂರು ಆಡುಭಾಷೆಯು ವೇಗದ ನಗರೀಕರಣ ಮತ್ತು ಬಹುಭಾಷಾ ಸಂಸ್ಕೃತಿಯ ಪ್ರಭಾವದಿಂದ ಇಂಗ್ಲಿಷ್ ಮತ್ತು ಹಿಂದಿ ಪದಗಳನ್ನು ಹೆಚ್ಚು ಸೇರಿಸಿಕೊಂಡು "ಚೇಂಜ್ ಇಲ್ಲ ಗುರು" ಎಂಬಂತಹ ಮಿಶ್ರಣ ಪದಗಳನ್ನು ಬಳಸಿದರೆ, ಮಂಗಳೂರು ಕನ್ನಡವು ತುಳು ಮತ್ತು ಕೊಂಕಣಿಯ ಪ್ರಭಾವದಿಂದ "ಕೋರಿ" (ಕೋಳಿ) ಯಂತಹ ಸ್ಥಳೀಯ ಪದಗಳನ್ನು ಉಳಿಸಿಕೊಂಡಿದೆ.

ಈ ಆಡುಭಾಷೆಯ ಒಳಹರಿವು ಆಧುನಿಕ ಕನ್ನಡವನ್ನು ಹೆಚ್ಚು ಲವಲವಿಕೆಯ ಮತ್ತು ಪ್ರಭಾವಶಾಲಿ ಭಾಷೆಯನ್ನಾಗಿ ಮಾಡಿದೆ. ಆದರೂ, ಇದು ಕೆಲವು ಸವಾಲುಗಳನ್ನು ಸಹ ಹುಟ್ಟುಹಾಕಿದೆ. ಆಡುಭಾಷೆಯ ಸರಳೀಕರಣದಿಂದಾಗಿ ಲಿಖಿತ ಭಾಷೆಯಲ್ಲಿ ಉಚ್ಚಾರಣೆ ಅಥವಾ ಕಾಗುಣಿತದ ಬಗ್ಗೆ ಕೆಲವೊಮ್ಮೆ ಗೊಂದಲಗಳು ಉಂಟಾಗಬಹುದು. ಜೊತೆಗೆ, ಪ್ರಾದೇಶಿಕ ಮತ್ತು ಆಡುಭಾಷೆಗಳ ಅತಿಯಾದ ಪ್ರಭಾವವು ಗ್ರಾಂಥಿಕ ಭಾಷೆಯ ಪ್ರಮಾಣೀಕರಣವನ್ನು (Standardization) ದುರ್ಬಲಗೊಳಿಸಬಹುದು ಎಂಬ ಅಭಿಪ್ರಾಯವಿದೆ. ಆದಾಗ್ಯೂ, ಭಾಷಾ ವಿಜ್ಞಾನಿಗಳ ಪ್ರಕಾರ, ಆಡುಭಾಷೆಯು ಭಾಷೆಯ ಬೆಳವಣಿಗೆಯ ಮೂಲ ಮತ್ತು ನಿರ್ಣಾಯಕ ಅಂಶವಾಗಿದ್ದು, ಅದರ ನಿರಂತರ ಸೇರ್ಪಡೆಯು ಕನ್ನಡ ಭಾಷೆಗೆ ಹೊಸ ಜೀವ ಮತ್ತು ಚೈತನ್ಯವನ್ನು ತುಂಬುತ್ತಿದೆ.

*****

## ಶಿಕಾರಿಪುರದ ಬ್ರಾಂತೇಶ ಉದ್ಯಾನವನ



# ಶಿಕ್ಷಣದಲ್ಲಿ ಕನ್ನಡದ ಪಾತ್ರ

**ಪ್ರಿಯಾ ಎನ್.,**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ



ಶಿಕ್ಷಣದಲ್ಲಿ ಕನ್ನಡದ ಪಾತ್ರವು ಸಾಂಸ್ಕೃತಿಕ ಸಂರಕ್ಷಣೆ, ಜ್ಞಾನದ ಪ್ರಸರಣ, ಮತ್ತು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಅತ್ಯಗತ್ಯವಾಗಿದೆ. ಇದು ಮಾತೃಭಾಷೆಯ ಮೂಲಕ ಕಲಿಕೆಯನ್ನು ಸುಗಮಗೊಳಿಸುತ್ತದೆ, ಸೃಜನಶೀಲತೆಯನ್ನು ಬೆಳೆಸುತ್ತದೆ, ಮತ್ತು ಕನ್ನಡಿಗರ ವಿಶಿಷ್ಟ ಸಂಸ್ಕೃತಿ ಹಾಗೂ ಅಸ್ಮಿತೆಯನ್ನ ಕಾಪಾಡುತ್ತದೆ ಕನ್ನಡವು ಕರ್ನಾಟಕದ ಶ್ರೀಮಂತ ಪರಂಪರೆ ಮತ್ತು ಸಂಸ್ಕೃತಿಯ ವಾಹಕವಾಗಿದೆ. ಶಿಕ್ಷಣದಲ್ಲಿ ಕನ್ನಡವನ್ನು ಬಳಸುವುದರಿಂದ ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ಅಡಿಪಾಯವನ್ನು ಬಲಪಡಿಸಿಕೊಳ್ಳುತ್ತದೆ.

ಮಾತೃಭಾಷೆಯಲ್ಲಿ ಕಲಿಯುವುದರಿಂದ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ, ಇದು ಅವರ ಕಲಿಕೆಯ ಫಲಿತಾಂಶಗಳನ್ನು ಸುಧಾರಿಸುತ್ತದೆ. ಕನ್ನಡದಲ್ಲಿ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಕೌಶಲ್ಯಗಳು ಮತ್ತು ಉತ್ತಮ ಸಂವಹನ ಸಾಮರ್ಥ್ಯಗಳನ್ನು ಬೆಳೆಸುತ್ತದೆ.

ಕನ್ನಡ ಭಾಷೆಯು ವಿಜ್ಞಾನ, ಕಲೆ ಮತ್ತು ಇತರ ವಿಷಯಗಳನ್ನು ತಿಳಿಯಲು ಒಂದು ಪರಿಣಾಮಕಾರಿ ಮಾಧ್ಯಮವಾಗಿದೆ. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡುವಾಗ ಜ್ಞಾನವು ಸುಲಭವಾಗಿ ತಲುಪುತ್ತದೆ. ಮನೆಯಲ್ಲಿ ಕಲಿಯುವ ವಾತಾವರಣವನ್ನು ಸೃಷ್ಟಿಸುವ ಮೂಲಕ, ಪೋಷಕರು ಮಕ್ಕಳ ಶೈಕ್ಷಣಿಕ ಪ್ರಯಾಣದಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು, ಶಿಕ್ಷಕರೊಂದಿಗೆ ಸಹಕರಿಸಬಹುದು.

ಕನ್ನಡದಲ್ಲಿ ಉತ್ತಮ ಶಿಕ್ಷಣ ಪಡೆಯುವುದರಿಂದ, ವಿದ್ಯಾರ್ಥಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉತ್ತಮ ಉದ್ಯೋಗಗಳನ್ನು ಪಡೆಯಲು ಸಾಧ್ಯವಾಗುತ್ತದೆ, ಇದರಿಂದ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಲು ಸಾಧ್ಯ. ಮಾತೃಭಾಷೆಯಲ್ಲಿ ಕಲಿಯುವುದರಿಂದ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮತ್ತು ಜ್ಞಾನವನ್ನು ಹೆಚ್ಚು ಪರಿಣಾಮಕಾರಿಯಾಗಿ ಗ್ರಹಿಸಲು ಸಹಾಯ ಮಾಡುತ್ತದೆ. ಕನ್ನಡವು ಕೇವಲ ಸಂವಹನ ಸಾಧನವಲ್ಲ, ಇದು ಸಮುದಾಯದ ಇತಿಹಾಸ, ಸಂಸ್ಕೃತಿ ಮತ್ತು ಮೌಲ್ಯಗಳ ಪ್ರತಿಕ್ರಿಯೆಯಾಗಿದೆ. ಈ ಮೂಲಕ ವಿದ್ಯಾರ್ಥಿಗಳ ಅರಿವಿನ ಪ್ರಕ್ರಿಯೆಗಳು ಸುಧಾರಿಸುತ್ತವೆ.

ಶಾಲಾ ಹಂತದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಬಳಸುವುದರಿಂದ ವಿದ್ಯಾರ್ಥಿಗಳ ಓದುವಿಕೆ, ಬರವಣಿಗೆ ಮತ್ತು ಮಾತನಾಡುವ ಕೌಶಲ್ಯಗಳು ಬೆಳೆಯುತ್ತವೆ. ಕನ್ನಡ ಭಾಷೆಯು ಸಂಸ್ಕೃತಿ, ಮೌಲ್ಯಗಳು ಮತ್ತು ಐತಿಹಾಸಿಕ ಸಂದರ್ಭಗಳನ್ನು ಒಳಕೊಂಡಿರುತ್ತದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಅಸ್ಮಿತೆಯನ್ನು ಅರಿತುಕೊಳ್ಳಲು ಹಾಗೂ ತಮ್ಮ ಸಮುದಾಯದೊಂದಿಗೆ ಬೆರೆಯಲು ಸಹಾಯವಾಗುತ್ತದೆ.

ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳು ಸುಲಭವಾಗಿ ಲಭ್ಯವಾಗುವಂತೆ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಕ್ರಮ ಕೈಗೊಳ್ಳಬೇಕು.

ಮಗುವಿಗೆ ಶಾಲೆ ಎನ್ನುವುದು ಹೊರೆಯಾಗದೆ, ಹಿತಕರ ಮತ್ತು ಸರಳ ವ್ಯವಸ್ಥೆಯಾಗಿ ಕಾಣಬೇಕಾದರೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂದು ಪರಿಗಣಿಸಲಾಗಿದೆ.

**ಶಿಕ್ಷಣದಲ್ಲಿ ಕನ್ನಡದ ಪ್ರಮುಖ ಪಾತ್ರಗಳು**

- ಅಭಿವೃದ್ಧಿ ಮತ್ತು ತಿಳುವಳಿಕೆ ಹೆಚ್ಚುತ್ತದೆ
- ಹೆಚ್ಚಿದ ಚಿಂತನ ಕೌಶಲ್ಯಗಳು
- ಸಂಸ್ಕೃತಿ ಸಂರಕ್ಷಣೆ
- ಸಂವಹನ ಕೌಶಲ್ಯಗಳ ವಿಕಾಸ
- ಉನ್ನತ ಶಿಕ್ಷಣದಲ್ಲಿ ಕನ್ನಡ
- ಇತರೆ ವಿಷಯಗಳು ಕಲಿಕೆಗೆ ಪೂರಕ
- ಮನೋವೈಜ್ಞಾನಿಕ ಅಭಿವೃದ್ಧಿಗೆ ಸಹಕಾರಿ
- ಆಡಳಿತ ಮತ್ತು ದೈನಂದಿನ ಜೀವನದ ಭಾಷೆ
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿನ ಭಾಷೆ
- ಸಮಾಜದಲ್ಲಿ ಹೊಂದಿಕೊಳ್ಳಲು ಸಹಕಾರಿ

ಶಿಕ್ಷಣದಲ್ಲಿ ಕನ್ನಡ ಭಾಷೆಯ ಪಾತ್ರ ಅತ್ಯಂತ ಪ್ರಮುಖವಾಗಿದ್ದು, ಅದು ವಿದ್ಯಾರ್ಥಿಯ ಸಂಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಆಧಾರ ಸ್ತಂಭವಾಗುತ್ತದೆ. ತಾಯಿ ಭಾಷೆಯಲ್ಲಿ ಕಲಿಸುವುದು ಕಲಿಕೆಯನ್ನು ಸುಲಭ ಅರ್ಥಗರ್ಭಿತ ಮತ್ತು ಆನಂದದಾಯಕವಾಗುತ್ತದೆ.ಕನ್ನಡವೇ ಸಂಸ್ಕೃತಿ, ಮೌಲ್ಯಗಳು ,ಮಾನವೀಯತೆ ಹಾಗೂ ಸಾಮಾಜಿಕ ಅರಿವಿನ ದಾರಿಯಾಗಿದೆ .ಅದೇ ಸಮಯದಲ್ಲಿ ಇತರೆ ವಿಷಯಗಳ ಅಧ್ಯಯನಕ್ಕೂ ಇದು ಬಲವಾದ ನೆಲೆಯನ್ನು ಒದಗಿಸುತ್ತದೆ. ಹೀಗಾಗಿ ಜ್ಞಾನ, ಚಾತುರ್ಯ, ಸೃಜನಶೀಲತೆ ಹಾಗೂ ಸಂವಹನ ಸಾಮರ್ಥ್ಯಗಳನ್ನು ಬೆಳೆಸುವಲ್ಲಿ ಕನ್ನಡ ಶಿಕ್ಷಣ ಅನಿವಾರ್ಯವಾಗಿದ್ದು, ವಿದ್ಯಾರ್ಥಿಯನ್ನು ಜ್ಞಾನ ಸಂಪನ್ನ ಮತ್ತು ಜವಾಬ್ದಾರಿಯತ ನಾಗರಿಕ ನಾಗಿಸಲು ಕನ್ನಡ ಮಹತ್ವದ ಪಾತ್ರ ವಹಿಸುತ್ತದೆ.

*****

# ಸುಗ್ಗಿ ಕುಣಿತ

**ರಂಜಿತಾ ವಿ ಸಮ್ಮಸಗಿ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ



ಹೋಳಿ ಹಬ್ಬದ ಸಂಭ್ರಮವೂ ಉತ್ತರ ಕರ್ನಾಟಕದ ಕರಾವಳಿಯಾದ್ಯಂತ ಮನೆ ಮಾಡಿದಾಗ, ಉತ್ತರ ಕನ್ನಡ ಜಿಲ್ಲೆಯ ಕಣ್ಮನ ಸೆಳೆಯುವ ಸುಗ್ಗಿ ಕುಣಿತವು ತನ್ನ ವೈಶಿಷ್ಟದಿಂದ ಎದ್ದು ಕಾಣುತ್ತದೆ. ಹತ್ತು ಹನ್ನೆರಡು ಜನರ ತಂಡವು ತಲೆಯ ಮೇಲೆ ಬಣ್ಣ ಬಣ್ಣದ ಗರಿಗಳಿಂದ ಮಾಡಿದ ತುರಾಯಿ ಮತ್ತು ಪೊಗಡೆ ವೇಷಭೂಷಣಗಳನ್ನು ಧರಿಸಿ, ಕೈಯಲ್ಲಿ ಕುಂಚದ ಕೋಲು ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು 'ಘಲ್ ಘಲ್' ಎಂದು ಸದ್ದು ಮಾಡುತ್ತಾ ಹೆಜ್ಜೆ ಹಾಕುವ ದೃಶ್ಯವೇ ಒಂದು ಅದ್ಭುತ ಅನುಭವವಾಗಿದೆ.ಗುಮಟೆ, ಜಾಗಟೆ ಮತ್ತು ವಾದ್ಯಗಳ ಹಿಮ್ಮೇಳಕ್ಕೆ ಅನುಗುಣವಾಗಿ 'ಬಹೋ ಸೋಯ್. 'ಎಂದು ದನಿಗೂಡಿಸುತ್ತಾ, ಜಾನಪದ ಹಾಡುಗಳಿಗೆ ಜೀವ ತುಂಬುವ ಈ ಕಲೆಯು ಎಳೆಯಿಂದ ಹಿಡಿದು ಹಿರಿಯರವರೆಗೂ ಎಲ್ಲರನ್ನು ಮಂತ್ರಮುಗ್ದರನ್ನಗಿಸುತ್ತದೆ.ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಆಚರಿಸುವ ಒಂದು ಜಾನಪದ ಕಲೆ. ಇದನ್ನು ಹಾಲಕ್ಕಿ ಒಕ್ಕಲಿಗರು, ನಾಮಧಾರಿಗಳು, ಕೂರ್ಮಪಂಥರು, ಗ್ರಾಮ ಒಕ್ಕಲಿಗರು, ಅಂಬಿಗರು, ಮುಕ್ರಿಯರು ಮತ್ತು ಮಾರಾಟ ಸಮುದಾಯದವರು ಹೋಳಿ ಹಬ್ಬದ ಸಮಯದಲ್ಲಿ ಪ್ರದರ್ಶಿಸುತ್ತಾರೆ.

ಇದು ಸುಗ್ಗಿ (ಕೊಯ್ಲು) ಕಾಲದ ಸಂಭ್ರಮವನ್ನು ಸುಚಿಸುತ್ತದೆ ಮತ್ತು ಸಮೃದ್ಧಿಯ ಸಂಕೇತವಾಗಿದೆ. ಸುಗ್ಗಿ ಕುಣಿತದ ತಂಡಗಳು ಬಣ್ಣ ಬಣ್ಣದ ವೇಷಭೂಷಣಗಳನ್ನು, ತಲೆಗೆ ಹಕ್ಕಿ ಪುಕ್ಕ ಮತ್ತು ಹೂವುಗಳಿಂದ ಅಲಂಕರಿಸಿದ ಮುಕುಟವನ್ನು ಧರಿಸಿ, ಮನೆ ಮನೆಗೆ ತೆರಳಿ ಕುಣಿಯುತ್ತಾರೆ. ಅವರು ಕೋಲು, ನವಿಲುಗರಿ ಮತ್ತು ಗುಮ್ಮಟೆ ಎಂಬ ವಾದ್ಯವನ್ನು ಬಳಸಿಕೊಂಡು ನೃತ್ಯ ಮಾಡುತ್ತಾರೆ.

ಸುಗ್ಗಿ ಕುಣಿತವು ಒಂದು ಸಮುದಾಯದ ಸಂಸ್ಕೃತಿ ಮತ್ತು ನಂಬಿಕೆಗಳ ಪ್ರತಿಬಿಂಬವಾಗಿದೆ. ಇದನ್ನು ಹೆಚ್ಚಾಗಿ ಹಾಲಕ್ಕಿ ಸಮುದಾಯ ಸೇರಿದಂತೆ ಒಕ್ಕಲಿಗ ಗೌಡ, ದಿವರು, ಕುಣಬಿ, ಗೊಂಡ ಮುಂತಾದ ಸಮುದಾಯಗಳು ನಡೆಸಿಕೊಂಡು ಬಂದಿವೆ. ಈ ನೃತ್ಯವೂ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ವರಪ್ರಸಾದವೆಂಬ ನಂಬಿಕೆಇದೆ. ಹಾಗಾಗಿ, ಸುಗ್ಗಿಕುಣೀತವು ತಮ್ಮ ಕುಲ ದೇವರಾದ 'ಕರಿದೇವರ' ಸೇವೆಗಾಗಿ ಸಮರ್ಪಣೆ ಆಗಿದೆ. ಒಮ್ಮೆ ವೇಷಬೋಷಣ ತೊಟ್ಟು, ಹಣೆಗೆ ಗಂಧ ಇಟ್ಟುಕೊಂಡು ಹೊರಟರೆ. ಏಳು ದಿನಗಳ ಕಾಲ ಸುಗ್ಗಿ ಕುಣಿತ ಮುಗಿಸುವವರೆಗೂ ಮನೆಗೆ ಹಿಂತಿರುಗುವಂತಿಲ್ಲ. ತಂಡದ ಸದಸ್ಯರು ಈ ಅವಧಿಯಲ್ಲಿ ಮಾಂಸಹಾರ ಮತ್ತು ಮದ್ಯಪಾನವನ್ನು ತ್ಯಜಿಸಬೇಕು. ಅಲ್ಲದೆ, ಕಾಲಿಗೆ ಚಪ್ಪಲಿ ಹಾಕಬಾರದು ಎಂಬ ಸಂಪ್ರದಾಯವನ್ನು ಪಾಲಿಸುತ್ತಾರೆ.

ಹೋಳಿಗೆ ಎಂಟು ದಿನಗಳ ಮೊದಲೇ ತಯಾರಿಯನ್ನು ಪ್ರಾರಂಬಿಸುವ ತಂಡವು ಮನೆ ಮನೆಗಳಿಗೆ ಭೇಟಿ ನೀಡಿ ಕುಣಿತ ಪ್ರದರ್ಶಿಸುತ್ತದೆ. ಈ ಸಂಧರ್ಭದಲ್ಲಿ ಮನೆಯವರು ನೀಡುವ ದೇಣಿಗೆ, ಅಕ್ಕಿ, ತೆಂಗಿನಕಾಯಿ, ಮತ್ತು ಊಟವನ್ನು ಸ್ವೀಕರಿಸುವುದು ಒಂದು ಸಂಪ್ರದಾಯ. ಹೀಗೆ ಮಾಡುವುದರಿಂದ ತಮ್ಮ ಮನೆಗೆ ರೋಗ ರೂಜಿನೆಗಳು ಬರುವುದಿಲ್ಲ ಮತ್ತು ಕರಿದೇವರು ಕಾಪಾಡುತ್ತಾರೆ ಎಂಬ ನಂಬಿಕೆ ಜನರಲ್ಲಿದೆ. ಇದಕ್ಕೆ ಪ್ರತಿಯಾಗಿ, ತಂಡದವರು ಆ ಮನೆಯಲ್ಲಿ ವರ್ಷಪೂರ್ತಿ ಸುಗ್ಗಿ ಹಿಗ್ಗು ತುಂಬಿರಲಿ ಎಂದು ಪ್ರಾರ್ಥಿಸುತ್ತಾತೆ.


ತಲೆ ತಲಾಂತರದಿಂದ ನಡೆದುಕೊಂಡು ಬಂದಿರುವ ಈ ಅದ್ಭುತ ಜಾನಪದ ಕಲೆಯು ಇಂದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ವೇಷಭೂಷಣ, ತುರಾಯಿಗಳ ತಯಾರಿ ಸೇರಿದಂತೆ ಸುಗ್ಗಿ ಕುಣಿತಕ್ಕೆ ಸಾಕಷ್ಟು ಖರ್ಚು ತಗಲ್ಲುತ್ತದೆ. ಸೂಕ್ತ ಆರ್ಥಿಕ ಬೆಂಬಲವಿಲ್ಲದ ಕಾರಣ, ಅನೇಕ ತಂಡಗಳು ಈ ಕಲೆಯನ್ನು ಮುಂದುವರೆಸಲು ಹಿಂದೇಟು ಹಾಕುತ್ತಿವೆ. ಸರ್ಕಾರವು ಸಹಾಯ ಧನ ನೀಡಬೇಕೆಂದು ತಂಡದ ಸದಸ್ಯರು ಅಗ್ರಹಿಸುತ್ತಿದ್ದಾರೆ. ಆಧುನಿಕ ಜೀವನದಲ್ಲಿ ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಯುವಕರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದರಿಂದ ಸುಗ್ಗಿ ಕುಣಿತದಲ್ಲಿ ಪಾಲ್ಗೊಳ್ಳಲು ಆಸಕ್ತಿ ಮತ್ತು ಸಮಯದ ಕೊರತೆ ಎದುರಾಗಿದೆ. ಕರಾವಳಿ ಭಾಗದಲ್ಲಿ ಕೆಲವು ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಕ್ಷಿಣಿಸುತ್ತಿರುವುದು ಸುಗ್ಗಿ ಕುಣಿತ ತಂಡಗಳನ್ನು ರಚಿಸಲು ದೊಡ್ಡ ಸಮಸ್ಯೆಯಾಗಿದೆ.

ಈ ಸವಾಲುಗಳ ಮಧ್ಯಯು ಹಿರಿಯರು ತಮ್ಮ ಮಕ್ಕಳನ್ನು ಈ ಕಲೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿರುವುದು ನಿಜಕ್ಕೂ ಶ್ಲಾಘನಿಯ. ಈ ಪ್ರಯತ್ನಗಳಿಂದಗಿ ಮುಂದಿನ ಪೀಳಿಗೆಗೆ ಸುಗ್ಗಿ ಕುಣಿತದ ಪರಂಪರೆಯು ತಿಳಿಯುತ್ತಿದೆ. ಸುಗ್ಗಿ ಕುಣಿತವು ಸಮುದಾಯದ ಜನರನ್ನು ಒಟ್ಟುಗುಡಿಸುತ್ತಾ, ಮೌಲ್ಯಗಳು ಮತ್ತು ಸಹೋದರತ್ವವನ್ನು ಬೆಳೆಸುವ ಒಂದು ಉತ್ತಮ ಮಾರ್ಗವಾಗಿದೆ. ಈ ಅತ್ಯಮೂಲ್ಯ ಜಾನಪದ ಕಲೆಯನ್ನು ಉಳಿಸಲು ಮತ್ತು ಬೆಳೆಸಲು ಸರ್ಕಾರ ಮತ್ತು ನಮ್ಮೆಲ್ಲರ ಸಹಕಾರ ಅತ್ಯಗತ್ಯ.

*****

# ಡಾ. ಜಿ ಎಸ್ ಶಿವರುದ್ರಪ್ಪ

**ಯೆಲ್ಲೇಶ್ವರಿ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ



ಡಾ. ಜಿ.ಎಸ್. ಶಿವರುದ್ರಪ್ಪ: ಕಾವ್ಯ ಸೌಂದರ್ಯದ ಮಹಾನ್ ಚೇತನ. ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ – ಅವರು ಕನ್ನಡ ಸಾಹಿತ್ಯದ ನವ್ಯ ಮತ್ತು ಸಮನ್ವಯ ಪಂಥಗಳ ಪ್ರಮುಖ ಕವಿ, ವಿಮರ್ಶಕ, ಸಂಶೋಧಕ ಮತ್ತು ಪ್ರಾಧ್ಯಾಪಕರಾಗಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ಅವರು ಸಲ್ಲಿಸಿದ ಸೇವೆ ಅನನ್ಯವಾದದ್ದು.

❖ **ಸಾಹಿತ್ಯ ಮತ್ತು ಬದುಕು** : ಜಿ.ಎಸ್.ಎಸ್. ಅವರು 1926ರ ಫೆಬ್ರುವರಿ 7ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ (M.A.) ಪಡೆದ ನಂತರ, 'ಸೌಂದರ್ಯ ಸಮೀಕ್ಷೆ' ಎಂಬ ಪ್ರೌಢ ಪ್ರಬಂಧಕ್ಕಾಗಿ ಕುವೆಂಪು ಅವರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ (ಪಿ.ಎಚ್.ಡಿ.) ಪದವಿ ಪಡೆದರು. ಇದು ಕನ್ನಡದಲ್ಲಿ ಸೌಂದರ್ಯಶಾಸ್ತ್ರಕ್ಕೆ ಸಂಬಂಧಿಸಿದ ಮಹತ್ವದ ಕೃತಿಯಾಗಿದೆ.

ಅವರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಪಾಠ ಹೇಳಿದ್ದಾರೆ. ಅವರ ಅಧ್ಯಾಪನ ಮತ್ತು ಆಡಳಿತಾತ್ಮಕ ಕೊಡುಗೆಯೂ ಮಹತ್ವದ್ದು.

❖ **ಕಾವ್ಯ ಲೋಕದ ಕೊಡುಗೆ** : ಜಿ.ಎಸ್.ಎಸ್. ಅವರು ತಮ್ಮ ಕಾವ್ಯದಲ್ಲಿ ಬದುಕು ಮತ್ತು ಸಮಾಜದ ಕುರಿತು ಆಳವಾದ ಒಳನೋಟಗಳನ್ನು ನೀಡಿದ್ದಾರೆ. ಅವರ ಕವಿತೆಗಳಲ್ಲಿ ನವ್ಯದ ಪ್ರಯೋಗಶೀಲತೆ ಇದ್ದರೂ, ಮನುಷ್ಯ ಸಂಬಂಧಗಳು, ಪ್ರಕೃತಿಯ ಸೌಂದರ್ಯ ಮತ್ತು ಜಾಗತಿಕ ಕಾಳಜಿಗಳು ಪ್ರಧಾನವಾಗಿವೆ.

ಅವರ ಪ್ರಮುಖ ಕವನ ಸಂಕಲನಗಳಲ್ಲಿ 'ಸಾಮಗಾನ', 'ಚೆಲುವು–ಒಲವು', 'ದೀಪದ ಹೆಜ್ಜೆ', 'ಅನಾವರಣ', 'ಗೋಡೆ' ಮತ್ತು 'ವ್ಯಕ್ತಮಧ್ಯ' ಸೇರಿವೆ. 'ಸಾಮಗಾನ' ಕವನ ಸಂಕಲನಕ್ಕೆ 1970ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರು ಕಾವ್ಯ ಮಾತ್ರವಲ್ಲದೆ, ವಿಮರ್ಶೆ ಮತ್ತು ಸಂಶೋಧನಾ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. 'ಕಾವ್ಯಾರ್ಥ ಚಿಂತನ', 'ಗತಿಬಿಂಬ', 'ಮಹಾಕಾವ್ಯ ಸ್ವರೂಪ' ಮತ್ತು 'ಪರಿಶೀಲನ' ಅವರ ಪ್ರಮುಖ ವಿಮರ್ಶಾ ಕೃತಿಗಳು. ಅವರ ಪ್ರವಾಸ ಕಥನಗಳಾದ 'ಮಾಸ್ಕೋದಲ್ಲಿ 22 ದಿನ' ಮತ್ತು 'ಗಂಗೆಯ ಶಿಖರಗಳಲ್ಲಿ' ಓದುಗರನ್ನು ಸೆಳೆಯುತ್ತವೆ.

❖ **ಪ್ರಶಸ್ತಿಗಳು ಮತ್ತು ಗೌರವಗಳು** : ಜಿ.ಎಸ್.ಎಸ್. ಅವರಿಗೆ ಸಂದ ಪ್ರಮುಖ ಗೌರವಗಳಲ್ಲಿ:

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1970 – 'ಸಾಮಗಾನ'), ಪಂಪ ಪ್ರಶಸ್ತಿ (1998), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ

ಅವರು 2006ರಲ್ಲಿ ಕರ್ನಾಟಕ ಸರ್ಕಾರದ ಅತ್ಯುನ್ನತ ಗೌರವವಾದ ರಾಷ್ಟ್ರಕವಿ ಪುರಸ್ಕಾರಕ್ಕೆ ಭಾಜನರಾದರು. ಇದು ಅವರ ಸಾಹಿತ್ಯ ಸೇವೆಗೆ ಸಂದ ಕಿರೀಟಪ್ರಾಯ ಗೌರವವಾಗಿದೆ. ಸಮನ್ವಯ ಸಾಹಿತ್ಯದ ಮಹಾನ್ ಪ್ರತಿಭೆಯಾದ

ಜಿ.ಎಸ್. ಶಿವರುದ್ರಪ್ಪ ಅವರು 2013ರ ಡಿಸೆಂಬರ್ 23ರಂದು ನಿಧನರಾದರು. ಆದರೆ, ಅವರ ಸಾಹಿತ್ಯ ಮತ್ತು ವಿಚಾರಧಾರೆಗಳು ಕನ್ನಡ ಓದುಗರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿವೆ.

❖ **ವಿದ್ಯಾಭ್ಯಾಸ ಮತ್ತು ವೃತ್ತಿಜೀವನ :**

- ಗುರುಗಳ ಪ್ರಭಾವ: ಜಿ.ಎಸ್.ಎಸ್. ಅವರಿಗೆ ಕುವೆಂಪು ಅವರ ಮಾರ್ಗದರ್ಶನ ಮತ್ತು ಪ್ರಭಾವ ಅತಿದೊಡ್ಡ ಪ್ರೇರಣೆಯಾಗಿತ್ತು. ಕುವೆಂಪು ಅವರ ವಿಚಾರಧಾರೆ ಮತ್ತು ಸೌಂದರ್ಯಮೀಮಾಂಸೆಯ ಆಳವಾದ ಅಧ್ಯಯನವು ಅವರ ವಿಮರ್ಶಾ ಪಥವನ್ನು ರೂಪಿಸಿತು.
- ಪ್ರಥಮ ಪಿಎಚ್.ಡಿ.: ಅವರು ತಮ್ಮ 'ಸೌಂದರ್ಯ ಸಮೀಕ್ಷೆ' ಮಹಾಪ್ರಬಂಧದ ಮೂಲಕ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದರು. ಕನ್ನಡದಲ್ಲಿ ಸೌಂದರ್ಯಶಾಸ್ತ್ರವನ್ನು ವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ ಮಾಡಿದ ಮೊದಲಿಗರಲ್ಲಿ ಇವರು ಒಬ್ಬರು.
- ಬೆಂಗಳೂರು ವಿ.ವಿ. ನಿರ್ದೇಶಕರು: ಅವರು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ (ಈಗ ಕನ್ನಡ ಅಧ್ಯಯನ ಸಂಸ್ಥೆ) ನಿರ್ದೇಶಕರಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ.

❖ **ಸಾಹಿತ್ಯದ ವಿಶಿಷ್ಟತೆ ಮತ್ತು ಕೊಡುಗೆ**

- ಸಮನ್ವಯ ಪಂಥ: ಜಿ.ಎಸ್.ಎಸ್. ಅವರನ್ನು ನವೋದಯ ಮತ್ತು ನವ್ಯದ ನಡುವಿನ 'ಸಮನ್ವಯ ಕವಿ' ಎಂದು ಕರೆಯಲಾಗುತ್ತದೆ. ಅವರು ನವ್ಯದ ಪ್ರಯೋಗಶೀಲತೆಯನ್ನು ಅಳವಡಿಸಿಕೊಂಡರೂ, ಬದುಕಿನ ಮೌಲ್ಯಗಳು, ಸಾಮಾಜಿಕ ಕಳಕಳಿ ಮತ್ತು ಮಾನವೀಯತೆಯಂತಹ ನವೋದಯದ ಸಕಾರಾತ್ಮಕ ಅಂಶಗಳನ್ನು ಎಂದಿಗೂ ಕೈಬಿಡಲಿಲ್ಲ.
- ಗೇಯ ಕಾವ್ಯ: ಅವರ ಅನೇಕ ಕವನಗಳು ಸುಲಭವಾಗಿ ಹಾಡಲು ಯೋಗ್ಯವಾಗಿವೆ (ಗೇಯತೆ). ಅವರ 'ಎದೆ ತುಂಬಿ ಹಾಡಿದೆನು ಅಂದು ನಾನು' ಎಂಬ ಕವನವು ಅತ್ಯಂತ ಜನಪ್ರಿಯ ಗೀತೆಯಾಗಿದೆ.
- 'ಮಾಸ್ಕೋದಲ್ಲಿ 22 ದಿನ': ಈ ಕೃತಿಯು ಕನ್ನಡದ ಅತ್ಯುತ್ತಮ ಪ್ರವಾಸ ಕಥನಗಳಲ್ಲಿ ಒಂದಾಗಿದೆ. ರಷ್ಯಾದ ಸಮಾಜ, ಸಂಸ್ಕೃತಿ ಮತ್ತು ಕಮ್ಯುನಿಸ್ಟ್ ಆಡಳಿತದ ಬಗ್ಗೆ ಅವರ ಸೂಕ್ಷ್ಮ ಅವಲೋಕನಗಳನ್ನು ಇದು ಒಳಗೊಂಡಿದೆ.
- ಕಾವ್ಯಾರ್ಥ ಚಿಂತನ: ಇದು ವಿಮರ್ಶಾತ್ಮಕ ದೃಷ್ಟಿಕೋನವನ್ನು ಆಳವಾಗಿ ವಿಶ್ಲೇಷಿಸುವ ಅವರ ಪ್ರಮುಖ ವಿಮರ್ಶಾ ಕೃತಿಯಾಗಿದೆ.

❖ **ಇತರ ಚಟುವಟಿಕೆಗಳು**

- ಕರ್ನಾಟಕ ಸಾಹಿತ್ಯ ಪರಿಷತ್ತು: ಅವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.
- ಅಧ್ಯಕ್ಷತೆ: ಅವರು 1992ರಲ್ಲಿ ದಾವಣಗೆರೆಯಲ್ಲಿ ನಡೆದ 61ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

❖ **ರಾಷ್ಟ್ರಕವಿ ಗೌರವ**


- ಮೂರನೇ ರಾಷ್ಟ್ರಕವಿ: ಕುವೆಂಪು ಮತ್ತು ಎಂ. ಗೋವಿಂದ ಪೈ ಅವರ ನಂತರ, ಕನ್ನಡಕ್ಕೆ ರಾಷ್ಟ್ರಕವಿ ಗೌರವಕ್ಕೆ ಪಾತ್ರರಾದ ಮೂರನೇ ಕವಿ ಇವರಾಗಿದ್ದಾರೆ. ಈ ಗೌರವವು ಅವರ ಸಾಹಿತ್ಯ ಮತ್ತು ಬದುಕು ಎರಡಕ್ಕೂ ಸಂದ ಮನ್ನಣೆಯಾಗಿದೆ. ಈ ಹೆಚ್ಚುವರಿ ಅಂಶಗಳು ಜಿ.ಎಸ್. ಶಿವರುದ್ರಪ್ಪ ಅವರ ಬಹುಮುಖಿ ವ್ಯಕ್ತಿತ್ವ ಮತ್ತು ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆಯ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತವೆ.

ಹೀಗೆ ಬಹುಮುಖಿ ವ್ಯಕ್ತಿತ್ವವುಳ್ಳ ಮಹಾನ್ ಕವಿ, ದಾರ್ಶನಿಕ, ವಿಮರ್ಶಕ ಹಾಗೂ ಕನ್ನಡ ಸಾಹಿತ್ಯದಲ್ಲಿ ಅಪಾರ ಗೌರವವುಳ್ಳ ಕವಿಯ ಜೀವನ ಮತ್ತು ಸಾಹಿತ್ಯ ಸೇವೆಯನ್ನು ತಿಳಿದುಕೊಂಡು ಮುಂಬರುವ ವಿದ್ಯಾರ್ಥಿಗಳಲ್ಲಿ ಇಂತಹ ವ್ಯಕ್ತಿಗಳ ಬಗೆಗೆ ಉತ್ತಮ ಮಾರ್ಗದರ್ಶನ ನೀಡೋಣ.

*****

# ಮಾನವತಾವಾದಿ ಡಾ. ಕುವೆಂಪು

**ರಂಜಿತಾ ಅಣಜಿ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ



ಕುವೆಂಪು (ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ) ಕನ್ನಡ ಸಾಹಿತ್ಯ ಲೋಕದ ಹೆಮ್ಮೆಯ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಮತ್ತು ಚಿಂತಕರು. 'ವಿಶ್ವಮಾನವ ಸಂದೇಶ'ವನ್ನು ಸಾರಿದ ಇವರು ಕರ್ನಾಟಕದ ಸಾಹಿತ್ಯ ವಲಯದ ಸಾಂಸ್ಕೃತಿಕ ರಾಯಭಾರಿ ಎಂದೇ ಪ್ರಸಿದ್ಧರು.

### ❖ ಬಾಲ್ಯ ಮತ್ತು ಶಿಕ್ಷಣ

ಕುವೆಂಪು ಅವರು ಡಿಸೆಂಬರ್ 29, 1904 ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ ಜನಿಸಿದರು. ಅವರ ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ಅವರು ಚಿಕ್ಕವರಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಪೂರೈಸಿದರು. ನಂತರ ಮೈಸೂರಿಗೆ ತೆರಳಿ ಅಲ್ಲಿ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು.

### ❖ ವೃತ್ತಿ ಮತ್ತು ಸಾಧನೆ

ಶಿಕ್ಷಣ ಮುಗಿದ ನಂತರ, ಕುವೆಂಪು ಅವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಂತರ ಅದೇ ಕಾಲೇಜಿನ ಪ್ರಾಂಶುಪಾಲರಾಗಿ, ನಂತರ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ಕುವೆಂಪು ಅವರ ಸಾಹಿತ್ಯವು ಅವರ ಪ್ರಗತಿಪರ ವಿಚಾರಧಾರೆ, ಮಾನವೀಯ ಮೌಲ್ಯಗಳು ಮತ್ತು ಪ್ರಕೃತಿಯ ಮೇಲಿನ ಪ್ರೀತಿಯನ್ನು ಪ್ರತಿಬಿಂಬಿಸುತ್ತದೆ. ಅವರ ಕೆಲವು ಪ್ರಮುಖ ಕೃತಿಗಳು:

- ಮಹಾಕಾವ್ಯ: 'ಶ್ರೀ ರಾಮಾಯಣ ದರ್ಶನಂ' ಇವರ ಅಮೂಲ್ಯ ಮಹಾಕಾವ್ಯ. ಇದಕ್ಕಾಗಿ ಅವರಿಗೆ 1967 ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಇದು ಭಾರತೀಯ ಸಾಹಿತ್ಯದಲ್ಲಿಯೇ ಒಂದು ಮೈಲಿಗಲ್ಲು.
- ಕಾದಂಬರಿಗಳು: 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಅವರ ಪ್ರಮುಖ ಕಾದಂಬರಿಗಳು. ಇವು ಮಲೆನಾಡಿನ ಗ್ರಾಮೀಣ ಬದುಕಿನ ಚಿತ್ರಣವನ್ನು ಸೊಗಸಾಗಿ ಕಟ್ಟಿಕೊಡುತ್ತವೆ.
- ಕವನ ಸಂಕಲನಗಳು: 'ಕೊಳಲು', 'ಪಾಂಚಜನ್ಯ', 'ಕೃತ್ತಿಕೆ', 'ಪ್ರೇಮ ಕಾಶ್ಮೀರ', 'ಚಂದ್ರಮಂಚಕೆ ಬಾ ಚಕೋರಿ' ಮುಂತಾದವುಗಳು.
- ನಾಟಕಗಳು: 'ರಕ್ತಾಕ್ಷಿ', 'ಜಲಗಾರ', 'ಶ್ಮಶಾನ ಕುರುಕ್ಷೇತ್ರ' ಇತ್ಯಾದಿ.
- ಇತರ ಕೃತಿಗಳು: 'ವಿಮರ್ಶಕನ ದಿನಚರಿ', 'ಸಾಹಿತ್ಯ ವಿಹಾರ' ಮತ್ತು ಅವರ ಆತ್ಮಕಥೆಯಾದ 'ನೆನಪಿನ ದೋಣಿ'.

ಕುವೆಂಪು ಅವರು ಕರ್ನಾಟಕ ರಾಜ್ಯದ ನಾಡಗೀತೆಯಾದ * *'ಜಯ ಭಾರತ ಜನನಿಯ ತನುಜಾತೆ'* * ಯನ್ನು ರಚಿಸಿದ್ದಾರೆ.

### ❖ ಪ್ರಶಸ್ತಿ ಮತ್ತು ಗೌರವಗಳು

ಕುವೆಂಪು ಅವರು ತಮ್ಮ ಸಾಹಿತ್ಯ ಸಾಧನೆಗಾಗಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ:

- ರಾಷ್ಟ್ರಕವಿ: 1964 ರಲ್ಲಿ ಕರ್ನಾಟಕ ಸರ್ಕಾರದಿಂದ 'ರಾಷ್ಟ್ರಕವಿ' ಎಂಬ ಗೌರವಕ್ಕೆ ಪಾತ್ರರಾದರು.
- ಪದ್ಮಭೂಷಣ: 1958 ರಲ್ಲಿ ಭಾರತ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿ.
- ಜ್ಞಾನಪೀಠ ಪ್ರಶಸ್ತಿ: 1967 ರಲ್ಲಿ 'ಶ್ರೀ ರಾಮಾಯಣ ದರ್ಶನಂ' ಕೃತಿಗೆ.
- ಪದ್ಮವಿಭೂಷಣ: 1988 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ.

ಕುವೆಂಪು ಅವರು ನವೆಂಬರ್ 11, 1994 ರಂದು ಈ ಲೋಕವನ್ನು ಅಗಲಿದರು. ಆದರೆ ಅವರ ವಿಚಾರಗಳು ಮತ್ತು ಸಾಹಿತ್ಯ ಕೃತಿಗಳು ಇಂದಿಗೂ ಕನ್ನಡ ಸಾಹಿತ್ಯದ ಮೇಲೆ ಅಚ್ಚಳಿಯದ ಪ್ರಭಾವ ಬೀರಿವೆ. ಅವರ 'ಮಂತ್ರ ಮಾಂಗಲ್ಯ' ಎಂಬ ಸರಳ ವಿವಾಹ ಪದ್ಧತಿಯು ಅವರ ವೈಚಾರಿಕತೆಗೆ ಸಾಕ್ಷಿಯಾಗಿದೆ. 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂಬ ಅವರ ಕವನವು 'ವಿಶ್ವಮಾನವ' ತತ್ವದ ಸಾರಾಂಶವಾಗಿದೆ.

ಕುವೆಂಪು ಅವರ ಜೀವನ ಮತ್ತು ಸಾಹಿತ್ಯದ ಕುರಿತು ಅಗಾಧವಾದ ಸಂಪತ್ತು ಇದೆ. ಮುಂಬರುವ ದಿನಗಳಲ್ಲಿ ಮೇಧಾವಿ ಕವಿಗಳ ಪರಿಚಯ ಸಮುದ್ರದಲ್ಲಿನ ನೀರಿನಲ್ಲಿ ಬೊಗಸೆ ಅಷ್ಟು ಮಾತ್ರ.

*****

## ಕನ್ನಡ ಭುವನೇಶ್ವರಿ ದೇವಿ



# ಕನ್ನಡ ನಾಡಗೀತೆಯ ವೈಶಿಷ್ಟ್ಯ

**ಮೌನೇಶ್ ಚಿತ್ತಾಪುರ**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ರಾಷ್ಟ್ರಕವಿ ಕುವೆಂಪು ವಿರಚಿತ ಜಯ ಭಾರತ ಜನನಿಯ ತನುಜಾತೆ। ಜಯ ಹೇ ಕರ್ನಾಟಕ ಮಾತೆ ಗೀತೆಯನ್ನು ಕರ್ನಾಟಕದ ನಾಡಗೀತೆಯನ್ನಾಗಿ ಕರ್ನಾಟಕ ಸರ್ಕಾರ ನಿರ್ಧರಿಸಿದೆ. ಕೆ ವಿ ಪುಟ್ಟಪ್ಪ (ಕುವೆಂಪು) ಈ ಪದ್ಯವನ್ನು 1924ರಲ್ಲಿ 'ಕಿಶೋರಚಂದ್ರವಾಣಿ' ಎಂಬ ಕಾವ್ಯನಾಮದಡಿ ಬರೆದರು. 2004ರಲ್ಲಿ ಕುವೆಂಪು ಜನ್ಮ ಶತಮಾನೋತ್ಸವದ ಸಮಯದಲ್ಲಿ ಕರ್ನಾಟಕ ಸರ್ಕಾರ ಈ ಗೀತೆಯನ್ನು ಅಧಿಕೃತ ನಾಡ ಗೀತೆಯನ್ನಾಗಿ ಮಾಡಲು ನಿರ್ಧರಿಸಿತು.

ರಾಷ್ಟ್ರಕವಿ ಕುವೆಂಪು ರಚಿಸಿದ 'ಜಯ ಭಾರತ ಜನನಿಯ ತನುಜಾತೆ' ಕವನವು ಅವರ ಕೈಯಲ್ಲೇ ಮುಂದೆ ಸಣ್ಣಪುಟ್ಟ ಮಾರ್ಪಾಡುಗಳನ್ನು ಪಡೆಯಿತು. 2004ರ ಜನವರಿ 6 ರಂದು ರಾಜ್ಯ ಸರ್ಕಾರ ಅದನ್ನು 'ನಾಡಗೀತೆ'ಯಾಗಿ ಗೌರವಿಸಿ ಅದಕ್ಕೊಂದು ವಿಶೇಷ ಸ್ಥಾನ ನೀಡಿತು.

**ಜೈ ಭಾರತ ಜನನಿಯ ತನುಜಾತೆ**
**ಜಯಹೇ ಕರ್ನಾಟಕ ಮಾತೆ!**

ಇಲ್ಲಿ ಕುವೆಂಪು ಭಾರತವನ್ನು ತಾಯಿಯಂತೆ ಮತ್ತು ಕರ್ನಾಟಕವನ್ನು ಮಗಳಂತೆ ಕಲ್ಪಿಸಿಕೊಂಡಿದ್ದಾರೆ. ಭಾರತಮಾತೆಯ ಮಗಳಾದ ಕರ್ನಾಟಕಮಾತೆಗೆ ಜಯವಾಗಲಿ ಎಂದು ನಾಡಗೀತೆ ಪ್ರಾರಂಭವಾಗುತ್ತದೆ. ಇಡೀ ಗೀತೆಯ ಉದ್ದಕ್ಕೂ ಅತ್ತ ಭಾರತಮಾತೆಯ ಹಿರಿಮೆ, ಇತ್ತ ಕರ್ನಾಟಕಮಾತೆಯ ಹಿರಿಮೆ ಇವುಗಳನ್ನು ಒಟ್ಟಿಗೆ ಕೊಂಡಾಡುವ ವಿಶಿಷ್ಟ ಪ್ರಯೋಗವನ್ನು ಕುವೆಂಪು ಮಾಡಿದ್ದಾರೆ.

**ಜಯ ಸುಂದರ ನದಿ ವನಗಳ ನಾಡೇ,**
**ಜಯ ಹೇ ರಸಋಷಿಗಳ ಬೀಡೆ!**
**ಜಯ ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ನಾಟಕ ಮಾತೆ!**

ಕರ್ನಾಟಕದಲ್ಲಿ ಅದೆಷ್ಟು ಸುಂದರ ನದಿ–ವನಗಳಿವೆ! ಅದೆಷ್ಟು ಜನ ಕಲಾವಿದರಿಗೆ (ರಸಋಷಿಗಳಿಗೆ) ಕರ್ನಾಟಕಮಾತೆ ಜನ್ಮ ನೀಡಿದ್ದಾಳೆ! ಅಂಥ ಕರ್ನಾಟಕಮಾತೆಗೆ ಜಯವಾಗಲಿ!

**ಭೂದೇವಿಯ ಮಕುಟದ ನವಮಣಿಯೆ,**
**ಗಂಧದ ಚಂದದ ಹೊನ್ನಿನ ಗಣಿಯೆ;**
**ರಾಘವ ಮಧುಸೂಧನರವತರಿಸಿದ**
**ಭಾರತ ಜನನಿಯ ತನುಜಾತೆ !**
**ಜಯ ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ನಾಟಕ ಮಾತೆ!**

ಭಾರತವು ಭೂದೇವಿಯ ಕಿರೀಟದಲ್ಲಿನ ಒಂದು ಪ್ರಜ್ವಲಿಸುವ ಹೊಸ ಮಣಿಯಂತೆ. ಕರ್ನಾಟಕವೋ ಗಂಧದ ಗಣಿ, ಹೊನ್ನಿನ ಗಣಿ, ಚಂದದ ಗಣಿ! ಶ್ರೀಗಂಧಕ್ಕೆ ಕರ್ನಾಟಕವು ಎಂದೆಂದೂ ಪ್ರಸಿದ್ಧ. ಒಮ್ಮೆ ಕೋಲಾರದಲ್ಲಿ

ಚಿನ್ನದಗಣಿಗಳಿದ್ದವು. ಪ್ರಕೃತಿ ಸೌಂದರ್ಯಕ್ಕೆ ಕರ್ನಾಟಕವು ಎಂದೆಂದೂ ಹೆಸರುವಾಸಿಯಾಗಿದೆ. ಶ್ರೀರಾಮ ಮತ್ತು ಶ್ರೀಕೃಷ್ಣರಂಥವರು ಜನಿಸಿದ ನಾಡು ಭಾರತ. ಅಂಥ ಭಾರತಮಾತೆಯ ಮಗಳಾದ ಕರ್ನಾಟಕ ಮಾತೆಗೆ ಜಯವಾಗಲಿ!

**ಜನನಿಯ ಜೋಗುಳ ವೇದದ ಘೋಷ,**
**ಜನನಿಗೆ ಜೀವವು ನಿನ್ನಾವೇಶ,**
**ಹಸುರಿನ ಗಿರಿಗಳ ಸಾಲೇ,**
**ನಿನ್ನಯ ಕೊರಳಿನ ಮಾಲೆ,**
**ಕಪಿಲ ಪತಂಜಲ ಗೌತಮ ಜಿನನುತ,**
**ಭಾರತ ಜನನಿಯ ತನುಜಾತೆ!**

ಭಾರತಮಾತೆಯು ತನ್ನ ಮಗಳಿಗಾಗಿ ಹಾಡಿದ ಜೋಗುಳ ಬೇರಾವುದೂ ಅಲ್ಲ, ವೇದಘೋಷ! ಈ ಜೋಗುಳ ಕೇಳುತ್ತಾ ಮಗು ತನ್ನ ಶಿಶುಶಹಜ ಆವೇಶದಿಂದ ಕೆನೆದಾಗ ತಾಯಿಗೆ ಜೀವಸ್ಪರ್ಶವಾಗುತ್ತದೆ. (ಮಗಳಾದ) ಕರ್ನಾಟಕ ಮಾತೆಯ ಕೊರಳಿನಲ್ಲಿ ಹೊಳೆಯುತ್ತಿರುವ ಹಾರ ಬೇರೇನಲ್ಲ, ಹಸುರು ಹೊದ್ದ ಬೆಟ್ಟಗಳ ಸಾಲು! ಕಪಿಲ–ಪತಂಜಲಿ–ಗೌತಮ ಬುದ್ಧ–ಜಿನ ಇವರೆಲ್ಲರಿಂದ ಪ್ರಶಂಸೆಗೆ ಪಾತ್ರಳಾದವಳು ಭಾರತಮಾತೆ. ಅಂಥ ಭಾರತಮಾತೆಯ ಮಗಳಾದ ಕರ್ನಾಟಕಮಾತೆಗೆ ಜಯವಾಗಲಿ!

**ಶಂಕರ ರಾಮಾನುಜ ವಿದ್ಯಾರಣ್ಯ,**
**ಬಸವೇಶ್ವರ ಮಧ್ವರ ದಿವ್ಯಾರಣ್ಯ**
**ರನ್ನ ಷಡಕ್ಷರಿ ಪೊನ್ನ,**
**ಪಂಪ ಲಕುಮಿಪತಿ ಜನ್ನ**
**ಕುಮಾರವ್ಯಾಸರ ಮಂಗಳ ಧಾಮ,**
**ಕವಿ ಕೋಗಿಲೆಗಳ ಪುಣ್ಯಾರಾಮ**
**ನಾನಕ ರಾಮಾ ನಂದ ಕಬೀರರ**
**ಜಯ ಹೇ ಕರ್ನಾಟಕ ಮಾತೆ!**

ಶಂಕರಾಚಾರ್ಯ, ರಾಮಾನುಜಾಚಾರ್ಯ, ವಿದ್ಯಾರಣ್ಯ ಇಂಥ ಪುಣ್ಯಪುರುಷರನ್ನು ಪಡೆದದ್ದು ಭಾರತಮಾತೆಯ ಭಾಗ್ಯ. ಕರ್ನಾಟಕಮಾತೆಯೂ ಬಸವೇಶ್ವರ, ಮಧ್ವಾಚಾರ್ಯರಂಥ ಪುಣ್ಯಪುರುಷರಿಗೆ ಜನ್ಮ ನೀಡಿದ್ದಾಳೆ. ಅದೆಷ್ಟು ಮಂದಿ ಕವಿಗಳು ಕರ್ನಾಟಕದಲ್ಲಿ ಹುಟ್ಟಿದ್ದಾರೆ – ರನ್ನ, ಷಡಕ್ಷರಿ, ಪೊನ್ನ, ಪಂಪ, ಲಕ್ಷ್ಮೀಶ, ಜನ್ನ, ಕುಮಾರವ್ಯಾಸ! ಈ ಕವಿಗಳು ಆಡಿದ ಮಂಗಳ ಧಾಮ (ಮನೆ) ಕರ್ನಾಟಕವನ್ನು ಕುವೆಂಪು ಕವಿ–ಕೋಗಿಲೆಗಳ ಗೂಡಿಗೆ ಹೋಲಿಸುತ್ತಾರೆ. ಅತ್ತ ಭಾರತಮಾತೆಯ ಹೊಟ್ಟೆಯಲ್ಲಿ ಗುರು ನಾನಕ್, ರಾಮಾನಂದ, ಕಬೀರರಂತಹ ಸಂತಕವಿಗಳು ಜನಿಸಿದ್ದಾರೆ. ಇಂಥ ಭಾರತಮಾತೆಯ ಪುತ್ರಿಯಾದ ಕರ್ನಾಟಕಮಾತೆಗೆ ಜಯವಾಗಲಿ!

**ತೈಲಪ ಹೊಯ್ಸಳರಾಳಿದ ನಾಡೇ,**
**ಡಂಕಣ ಜಕಣರ ನೆಚ್ಚಿನ ಬೀಡೆ**
**ಕೃಷ್ಣ ಶರಾವತಿ ತುಂಗಾ,**
**ಕಾವೇರಿಯ ವರ ರಂಗಾ**
**ಚೈತನ್ಯ ಪರಮಹಂಸ ವಿವೇಕರ,**
**ಭಾರತ ಜನನಿಯ ತನುಜಾತೆ !**

ಕರ್ನಾಟಕದ ಇತಿಹಾಸದಲ್ಲಿ ತೈಲಪರು, ಹೊಯ್ಸಳರ ಮೊದಲಾಗಿ ಅದೆಷ್ಟು ರಾಜವಂಶಗಳು ಆಳಿವೆ! ಡಂಕಣಾಚಾರ್ಯ–ಜಕಣಾಚಾರ್ಯರಂತಹ ಅಮರಶಿಲ್ಪಿಗಳಿಗೆ ಕರ್ನಾಟಕ ನೆಲೆಯಾಗಿತ್ತು. ಕೃಷ್ಣಾ, ಶರಾವತಿ, ತುಂಗಾ, ಕಾವೇರಿಯಂಥ ಪುಣ್ಯನದಿಗಳಿಗೆ ಕರ್ನಾಟಕ ಬೀಡಾಗಿದೆ. ಶ್ರೀರಂಗಪಟ್ಟಣದಲ್ಲಿ ಕಾವೇರಿಯ ಮಡಿಲಲ್ಲಿ ಶ್ರೀರಂಗನಾಥನೂ ಇದಾನೆ. ಭಾರತಮಾತೆಯ ಬಸಿರಿನಲ್ಲಿ ಚೈತನ್ಯ, ಪರಮಹಂಸ, ವಿವೇಕಾನಂಧರಂಥ ದಾರ್ಶನಿಕರು ಜನಿಸಿದರು. ಇಂಥ ಭಾರತಮಾತೆಯ ಮಗಳಾದ ಕರ್ನಾಟಕಮಾತೆಗೆ ಜಯವಾಗಲಿ!

**ಸರ್ವ ಜನಾಂಗದ ಶಾಂತಿಯ ತೋಟ,**
**ರಸಿಕರ ಕಂಗಳ ಸೆಳೆಯುವ ನೋಟ**
**ಹಿಂದೂ ಕ್ರೈಸ್ತ ಮುಸಲ್ಮಾನ,**
**ಪಾರಸಿಕ ಜೈನರುದ್ಯಾನ**
**ಜನಕನ ಹೋಲುವ ದೊರೆಗಳ ಧಾಮ,**
**ಗಾಯಕ ವೈಣಿಕರಾರಾಮ**

ಭಾರತವು ಒಂದು ಶಾಂತಿವನ – ಅಲ್ಲಿ ಅನೇಕ ಧರ್ಮಗಳ ಹೂಗಳು ಅರಳಿ ರಸಿಕರ ಕಣ್ಮನಗಳನ್ನು ಸೆಳೆಯುತ್ತಿವೆ – ಹಿಂದೂ ಧರ್ಮ, ಕ್ರೈಸ್ತ ಧರ್ಮ, ಮುಸಲ್ಮಾನ ಧರ್ಮ, ಪಾರಸೀ ಧರ್ಮ, ಜೈನಧರ್ಮ – ಈ ಎಲ್ಲಾ ಧರ್ಮಗಳ ಉದ್ಯಾನವನ ಭಾರತ! ಭಾರತದಲ್ಲಿ ಜನಕರಾಜನಂಥ ಜನಾನುರಾಗಿ ದೊರೆಗಳಿದ್ದಾರೆ. ಭಾರತಮಾತೆಯ ಮಕ್ಕಳು ರಸಿಕರು – ಗಾಯಕರಿಗೆ, ವೈಣಿಕರಿಗೆ, ಕಲೆಯ ಆರಾಧಕರಿಗೆ ಭಾರತ ಒಂದು ಸುಖದ ಬೀಡಾಗಿದೆ.

**ಕನ್ನಡ ನುಡಿ ಕುಣಿದಾಡುವ ಗೇಹ,**
**ಕನ್ನಡ ತಾಯಿಯ ಮಕ್ಕಳ ದೇಹ**
**ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ನಾಟಕ ಮಾತೆ**
**ಜಯ ಸುಂದರ ನದಿ ವನಗಳ ನಾಡೇ,**
**ಜಯ ಹೇ ರಸಋಷಿಗಳ ಬೀಡೆ!**

ಇಂಥ ಭಾರತಮಾತೆಯ ಮಗಳಾದ ಕರ್ನಾಟಕಮಾತೆ ಕನ್ನಡನುಡಿ ಕುಣಿದಾಡುವ ಗೃಹವಾಗಿದ್ದಾಳೆ. ಕನ್ನಡ ಮಾತಾಡುವ ತನ್ನ ಮಕ್ಕಳಿಗೆ ತನ್ನ ಸರ್ವಸ್ವವನ್ನೂ ನೀಡಿದ್ದಾಳೆ. ಭಾರತಮಾತೆಯ ಮಗಳಾದ ಕರ್ನಾಟಕಮಾತೆಗೆ ಜಯವಾಗಲಿ! ಭಾರತವು ತಾಯಿಯಾಗಿ ಕರ್ನಾಟಕವು ಮಗಳಾದಾಗ ಅಲ್ಲಿ ವೈಮನಸ್ಯಕ್ಕೆ ಕಾರಣವಿಲ್ಲ. ಭಾರತವು ಎಷ್ಟೇ ಹಿರಿಮೆಯುಳ್ಳ ದೇಶವಾಗಲಿ, ಅಲ್ಲಿ ಕರ್ನಾಟಕಕ್ಕೆ ತನ್ನದೇ ಆದ ಸ್ಥಾನವಿದೆ, ಎಲ್ಲಾ ವಿಷಯಗಳಲ್ಲೂ ಕರ್ನಾಟಕವು ಭಾರತಮಾತೆಯ ಪ್ರತಿಬಿಂಬದಂತೆ ಅಷ್ಟೇ ಹಿರಿಮೆಯಿಂದ ಕಂಗೊಳಿಸುತ್ತಿದ್ದಾಳೆ ಎಂಬುದು ಕವಿತೆಯ ಧ್ವನಿ ಹಾಗೂ ಕನ್ನಡ ನಾಡಗೀತೆಗಿರುವ ಅಧಮ್ಯ ವೈಶಿಷ್ಟ್ಯ.

*****

# ಹಣ

**ಬಿ. ಸುಹೀಲ್**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

---

ಹಣನ ಕಂಡುಹಿಡಿದ ಪುಣ್ಯಾತ್ಮ ಯಾರೋ ಏನೋ,
ಸಿಕ್ರೆ ಮಾತ್ರ!!!
ಏನ್ ಮಾಡಕ್ಕೆ ಆಗುತ್ತೆ?
ಏನ್ ಮಾಡಕ್ಕೂ ಆಗಲ್ಲ,
ಯಾಕಂದ್ರೆ ಆ ಶಕ್ತಿ ನಮ್ಮಲ್ಲಿಲ್ಲ!
ಹಣ ಈ ಲೋಕದಲ್ಲೇ ಇಲ್ಲ ಅಂದಿದ್ರೆ ಜೀವನ ಸುಂದರವಾಗಿರುತ್ತಿತ್ತು ಅಲ್ವಾ!
ಜೀವನ ನಡೆಸೋಕೆ ಈ ಹಣ ಬೇಕಾಗಿರಲಿಲ್ಲ
ಏನಾದ್ರೂ ತಗೋಬೇಕು ಅಂದ್ರೆ ಹಣ, ಅದಕ್ಕೂ ಹಣ ಇದಕ್ಕೂಹಣ
ಎಲ್ಲದಕ್ಕೂ ಹಣ, ಹಣ, ಹಣ,..
ಉಫ್!! ಮನುಜ ಸೋತ ಇದರೆದುರಿಗೆ,
ಮನುಷ್ಯರನ್ನ ನುಂಗಿಬಿಟ್ಟಿದೆ.

ಹೆಣಗಳೇ ಉರುಳಿದವು ಧರೆಗೆ ಈ ಹಣದಾಸೆಯಿಂದ
ಪ್ರೀತಿ–ವಿಶ್ವಾಸ ಕಾಳಜಿ ಮಂಡಿಯೂರಿವೆ ಇದರ ಮುಂದೆ!
ಆಸೆ ದುರಾಸೆಯ ಹೆಮ್ಮರವಾಗಿ ಬೆಳೆದಿದೆ!
ಮಾತಿನ ಜಾಗದಲ್ಲಿ ಹಣ ಬಂದು ತಾಂಡವವಾಮಡುತ್ತಿದೆ
ಮಾತು ಸದ್ದಿಲ್ಲದೆ ಸುದ್ದಿ ಇಲ್ಲದೆ ಮೂಲೆಗುಂಪಾಗಿದೆ
ದುಡ್ಡಿದ್ದರೆ ಕೆಲಸವಾಯಿತು ಎಂಬ ಕಾಲ ಎದುರಾಗಿ ನಿಂತಿದೆ!

ಯಾಕಿಷ್ಟು ಪ್ರಶಂಸೆ ಈ ಹಣಕ್ಕೆ?
ಲಕ್ಷ್ಮೀ ಅಂತೇನೂ?
ಹಣವನ್ನ ದೇವತೆಗೆ ಹೋಲಿಸಿದ್ದು ನಮ್ಮ ಸಂಸ್ಕಾರವೇ ಸರಿ
ಓ! ಹಣ ನಾ ನಿನ್ನ ಅವ ಹೇಳನ ಮಾಡುತ್ತಿಲ್ಲ
ತಪ್ಪು ತಿಳಿದು ದೂರ ಬೇಡ ನನ್ನ
ನೀ ನಮಗಾವಾಗ ಒಲಿಯೋದು?
ನಿನ್ನ ಸಲುವಾಗಿ ಸಾಕಾಗಿದೆ ನನಗೀಗ
ನಾನು ಸೋತೆ
ನನ್ನೆದುರಿಗೆ!!!

ಜೀವನದಲ್ಲಿ ಹಣ ಮುಖ್ಯ ಅಂತ ಗೊತ್ತಿತ್ತು
ಆದರೆ ಹಣನೇ ಮುಖ್ಯ ಅಂತ ತಿಳಿದಿರಲಿಲ್ಲ.
ಈ ಏಳುಬೀಳಿನ ಪಯಣದಲ್ಲಿ ಯಾಕಾದ್ರೂ ಬಂದೆಯಯ್ಯ?
ಓ! ಹಣ, ಓ! ಹಣ ನೀನೇ ಜಣ ಜಣ ಕಾಂಚಾಣ!!

# ಕನ್ನಡ ನಾಡು ನುಡಿ ಭಾಷೆ

**ಚಿನ್ಮಯ್**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ

ಕನ್ನಡ ನಾಡು, ಕನ್ನಡ ನುಡಿ ಮತ್ತು ಕನ್ನಡ ಭಾಷೆ – ಇವು ಮೂರೂ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಅಸ್ತಿತ್ವದ ಮುಖ್ಯ ಕಂದಾಯಗಳು. ಇವು ಒಂದೊಂದಾಗಿ ವಿಭಿನ್ನವಾದರೂ, ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ. ಕನ್ನಡಿಗನ ಜೀವನ, ಚಿಂತನೆ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಈ ಮೂರು ಪದಗಳ ಅರ್ಥವನ್ನು ತಿಳಿದುಕೊಳ್ಳುವುದು ಅತ್ಯಗತ್ಯ.

1. ಕನ್ನಡ ನಾಡು

ಕನ್ನಡ ನಾಡು ಎಂದರೆ ಕನ್ನಡಿಗರು ವಾಸಿಸುವ, ಕನ್ನಡ ಸಂಸ್ಕೃತಿ ಜೇಡಿಸುವ ಭೂ ಭಾಗ. ಇದರಲ್ಲಿ ಇಂದಿನ ಕರ್ನಾಟಕ ರಾಜ್ಯ ಮಾತ್ರವಲ್ಲದೇ, ಇತಿಹಾಸದಲ್ಲಿ ಕನ್ನಡ ಪ್ರಾಬಲ್ಯ ಇದ್ದ ಅನೇಕ ಪ್ರದೇಶಗಳೂ ಸೇರಿವೆ.

ಕನ್ನಡ ನಾಡಿನ ವೈಶಿಷ್ಟ್ಯಗಳು

- ಸಂಪ್ರದಾಯ, ಹಬ್ಬ–ಹರಿದಿನಗಳು (ಉದಾ: ದಸರಾ, ಉಗಾದಿ, ದೀಪಾವಳಿ)
- ಜನಪದ ಕಲೆಗಳು (ಯಕ್ಷಗಾನ, ವೀರಗಾಸೆ, ದೊಳಕುನ್ನಿತ)
- ಇತಿಹಾಸ ಪ್ರಸಿದ್ಧ ಸಾಮ್ರಾಜ್ಯಗಳು (ಕದಂಬ, ಚಾಲುಕ್ಯ, ಹೊಯ್ಸಳ, ವಿಜಯನಗರ)
- ಸಮೃದ್ಧ ತಾಣಗಳು (ಹಂಪಿ, ಬಾದಾಮಿ, ಪಟ್ಟದಕಲ್ಲು, ಶೃಂಗೇರಿ)

2. ಕನ್ನಡ ನುಡಿ

ನುಡಿ ಎಂದರೆ ಮಾತಿನ ರೂಪವಾದ ಪರಮಾರ್ಥಿಕ ಭಾಷೆ/ಉಚ್ಚಾರಣೆ. ಕನ್ನಡ ನುಡಿ ನಮ್ಮ ಮನಸ್ಸಿನ ಭಾವನೆಗಳನ್ನು, ಸಂಸ್ಕಾರಗಳನ್ನು, ಮೌಲ್ಯಗಳನ್ನು ರಾಜ್ಯದ ಪ್ರತಿಯೊಂದು ಮೂಲೆಗೂ ತಲುಪಿಸುವ ಸೇತುವೆಯಂತೆ ಕೆಲಸ ಮಾಡುತ್ತದೆ.

ಕನ್ನಡ ನುಡಿಯ ವೈಶಿಷ್ಟ್ಯಗಳು

- ಮೃದು, ಸೊಗಸಾದ, ಲಾಲಿತ್ಯಪೂರ್ಣ ಉಚ್ಚಾರಣೆ
- ಜನಪದ ಗೀತೆಗಳು, ಗಾದೆಗಳು, ಹನಿಗವನಗಳ ಮೂಲಕ ಅರ್ಥಪೂರ್ಣ ಅಭಿವ್ಯಕ್ತಿ
- ವಿಭಿನ್ನ ಪ್ರಾದೇಶಿಕ ಉಚ್ಚಾರಣಾ ಶೈಲಿಗಳು (ಮೈಸೂರು ಕನ್ನಡ, ಉತ್ತರ ಕನ್ನಡ ನುಡಿ, ಮಂಗಳೂರು ಕನ್ನಡ ಇತ್ಯಾದಿ)
- ನುಡಿಹಬ್ಬ, ನುಡಿನಮನ, ನುಡಿನಾಡು ಎಂಬ ಸಂಕಲ್ಪಗಳು ನುಡಿಯ ಮಹತ್ವವನ್ನು ಹೀರಿಕೊಳ್ಳುತ್ತವೆ

3. ಕನ್ನಡ ಭಾಷೆ

ಭಾಷೆ ಎಂದರೆ ಶಬ್ದಕೋಶ, ವ್ಯಾಕರಣ ಮತ್ತು ಲಿಪಿ ಹೊಂದಿರುವ ಸಂಪೂರ್ಣ ಸಂವಹನ ವ್ಯವಸ್ಥೆ. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಅದು ಜಗತ್ತಿನ ಅತ್ಯಂತ ಹಳೆಯ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ.

ಕನ್ನಡ ಭಾಷೆಯ ವೈಶಿಷ್ಟ್ಯಗಳು

- 2500ಕ್ಕೂ ಹೆಚ್ಚು ವರ್ಷಗಳ ಪ್ರಾಚೀನ ಪರಂಪರೆ

- ಕನ್ನಡ ಲಿಪಿ, ವ್ಯಾಕರಣ, ಛಂದಃಶಾಸ್ತ್ರ ಚೆನ್ನಾಗಿ ವಿಕಸಿತ
- ಕಾವ್ಯ, ಪ್ರಬಂಧ, ನಾಟಕ, ಕಥೆ, ವಿಜ್ಞಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಸಮೃದ್ಧ ಸಾಹಿತ್ಯ
- ಪಂಪ, ರನ್ನ, ಪುನ್ನ, ಬೇಂದ್ರೆ, ಪೂರ್ಣಚಂದ್ರ ತೇಜಸ್ವಿ, ಕುವೆಂಪು ಮುಂತಾದ ಮಹಾನ್ ಸಾಹಿತ್ಯಪುರುಷರು.
- ಜ್ಞಾನಪೀಠ ಪ್ರಶಸ್ತಿಗಳನ್ನು ಹೆಚ್ಚು ಪಡೆದಿರುವ ಭಾಷೆಗಳಲ್ಲಿ ಕನ್ನಡವೂ ಒಂದು ನಡುಕೊಂಡಿನ ಸಂಬಂಧ

ಕನ್ನಡ ನಾಡು ನಮ್ಮ ಒಗ್ಗಟ್ಟಿನ ನೆಲೆ, ಕನ್ನಡ ನುಡಿ ನಮ್ಮ ಮನಸ್ಸಿನ ಮಾತು, ಕನ್ನಡ ಭಾಷೆ ನಮ್ಮ ಜ್ಞಾನ ಮತ್ತು ಸಂಸ್ಕಾರದ ಸಂಪತ್ತು, ಈ ಮೂರು ಸೇರಿ ಕನ್ನಡಿಗರ ಅಸ್ತಿತ್ವವನ್ನು ನಿರ್ಮಿಸುತ್ತವೆ, ನಾಡಿಲ್ಲದೆ ನುಡಿ ಇರದು; ನುಡಿಯಿಲ್ಲದೆ ಭಾಷೆ ಇರದು; ಭಾಷೆಯಿಲ್ಲದೆ ಸಂಸ್ಕೃತಿ ಉಳಿಯದು.

ಖಂಡಿತ ಇನ್ನೂ ಹೆಚ್ಚಿನ, ಸಮಗ್ರ ಮತ್ತು ಆಳವಾದ ಮಾಹಿತಿಯನ್ನು ಆರ್ಟಿಕಲ್‌ಗೆ ಸೂಕ್ತವಾಗಿ ಕೊಡುತ್ತೇನೆ. ಇದನ್ನು ನೀವು ಸಂಪೂರ್ಣ ಲೇಖನ, ಪ್ರಬಂಧ ಅಥವಾ ಯೋಜನೆ ಕೆಲಸಕ್ಕೆ ಕೂಡ ಬಳಸಬಹುದು.

**ಕನ್ನಡ ನಾಡು – ನುಡಿ – ಭಾಷೆ : ವಿಭಿನ್ನ ಆಯಾಮಗಳ ಸಮಗ್ರ ಅಧ್ಯಯನ**

ಭೂಮಿಕೆ : ಭೂತಕಾಲದ ವೈಭವ, ವರ್ತಮಾನ ಬದುಕಿನ ಚೈತನ್ಯ ಮತ್ತು ಭವಿಷ್ಯದ ಆಶಯ – ಇವೆಲ್ಲವನ್ನು ಒಂದೇ ನಾಡು, ಒಂದೇ ನುಡಿ, ಒಂದೇ ಭಾಷೆ ಒಗ್ಗಟ್ಟಾಗಿ ಜೋಡಿಸುವ ಅದ್ಭುತ ಸಾಮರ್ಥ್ಯ ಕನ್ನಡಕ್ಕೆ ಇದೆ. 'ಕನ್ನಡ ನಾಡು–ನುಡಿ–ಭಾಷೆ' ಎಂಬುದು ಕೇವಲ ಒಂದು ಸಾಂಸ್ಕೃತಿಕ ಪರಿಕಲ್ಪನೆಯಲ್ಲ; ಇದು ಒಂದು ಬದುಕಿನ ತತ್ವ, ಮನಸ್ಸಿನ ಶ್ರೀಮಂತಿಕೆ ಮತ್ತು ಜನಾಂಗದ ಗುರುತಿನ ಪ್ರತೀಕ.

❖ **ಕನ್ನಡ ನಾಡು – ಇತಿಹಾಸ, ಭೌಗೋಳಿಕತೆ ಮತ್ತು ಸಂಸ್ಕೃತಿ**

1.1 **ಕನ್ನಡ ನಾಡಿನ ಇತಿಹಾಸ :** ಕನ್ನಡ ನಾಡು 2,500ಕ್ಕೂ ಹೆಚ್ಚು ವರ್ಷಗಳಿಂದಲೂ ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಪ್ರಸಕ್ತವಾಗಿತ್ತು. ಇತಿಹಾಸದಲ್ಲಿ ಕನ್ನಡ ನಾಡು ಹಲವು ಮಹಾ ಸಾಮ್ರಾಜ್ಯಗಳನ್ನು ಕಂಡಿದೆ:

- ಕದಂಬರು (ಮೂರು ಶತಮಾನ) – ಮೊದಲ ಕನ್ನಡ ಆಡಳಿತವ್ಯವಸ್ಥೆ
- ಪಶ್ಚಿಮ ಚಾಲುಕ್ಯರು – ಕಲೆ ಮತ್ತು ವಾಸ್ತುಶಿಲ್ಪದ ಚೇತನ
- ರಾಷ್ಟ್ರಕೂಟರು – ಸಾಹಿತ್ಯ ಮತ್ತು ಶಿಲ್ಪಕಲೆಯ ಉತ್ತುಂಗ
- ಹೊಯ್ಸಳರು – ಶಿಲಾಶೈಲಿ, ಸೊಗಸಾದ ದೇವಾಲಯ ವಾಸ್ತುಶಿಲ್ಪ (ಬೆಳೂರು–ಹಳೇಬೀಡು)
- ವಿಜಯನಗರ ಸಾಮ್ರಾಜ್ಯ – ಕನ್ನಡ–ತಲುಗು–ಸಂಸ್ಕೃತ ಸಂಯುಕ್ತ ಸಂಸ್ಕೃತಿ

**1.2 ಭೌಗೋಳಿಕ ವ್ಯಾಪ್ತಿ :** ಇಂದಿನ ಕರ್ನಾಟಕ ರಾಜ್ಯ ಮಾತ್ರವಲ್ಲ, ಕನ್ನಡ ನಾಡು ಐತಿಹಾಸಿಕವಾಗಿ ಕೆಳಗಿನ ಪ್ರದೇಶಗಳವರೆಗೆ ವಿಸ್ತಾರವಾಗಿತ್ತು:

- ಉತ್ತರದಲ್ಲಿ: ಮಹಾರಾಷ್ಟ್ರದ ದಕ್ಷಿಣ ಭಾಗ
- ದಕ್ಷಿಣದಲ್ಲಿ: ನಾಡಿನ ಕೆಲ ಭಾಗ
- ಪಶ್ಚಿಮದಲ್ಲಿ: ಗೋವಾ ಮತ್ತು ಕೊಂಕಣ ಕರಾವಳಿ
- ಪೂರ್ವದಲ್ಲಿ: ಆಂಧ್ರಪ್ರದೇಶದ ಕನ್ನಡ ಭಾಷಾಭಿಮಾನಿ ಪ್ರದೇಶಗಳು

**1.3 ಕನ್ನಡ ನಾಡಿನ ಸಂಸ್ಕೃತಿ : ಕನ್ನಡ ನಾಡು ಅನನ್ಯ ಸಂಸ್ಕೃತಿಯ ತವರೂರು:**

- ಜನಪದ ಕಲೆ – ಯಕ್ಷಗಾನ, ಗೂಮಗೆ, ಡೋಲ್‌ಕುನಿತ
- ಶಾಸ್ತ್ರೀಯ ಕಲೆಗಳು – ಭರತನಾಟ್ಯ, ಶಿಲ್ಪಕಲೆ

- ಹಬ್ಬಗಳು – ಉಗಾದಿ, ದಸರಾ, ಕಾರ್ತಿಕ ಮಾಸ, ಸಂಕ್ರಾಂತಿ
- ಪಾಕಶಾಸ್ತ್ರ – ರಾಗಿಮುದ್ದೆ, ಬಿಸಿಬೇಳೆಬಾತ್, ಊಡಿ, ನ್ಯೂಗಿತ್ತ

**2. ಕನ್ನಡ ನುಡಿ – ಮಾತಿನ ಮಧುರತೆ ಮತ್ತು ಜನಪದ ಜೀವಾಳ**

**2.1 ನುಡಿಯ ಅರ್ಥ :** ತತ್ವಶಾಸ್ತ್ರೀಯವಾಗಿ 'ನುಡಿ' ಎಂದರೆ ಭಾವನೆಗಳ ಜೀವಂತ ಅಭಿವ್ಯಕ್ತಿ. ಬರವಣಿಗೆಗೆ ಸೀಮಿತವಾಗಿಲ್ಲದ, ಜೀವಂತ ಮಾತಿನ ಸಂವಹನ.

**2.2 ಕನ್ನಡ ನುಡಿಯ ಲಕ್ಷಣಗಳು**

- ಮೃದುಸ್ವರ, ಮಧುರತೆ, ಸುಲಲಿತತೆ
- ಪ್ರಾದೇಶಿಕ ವೈವಿಧ್ಯತೆ:
- ಮೈಸೂರು ಕನ್ನಡ
- ಕರಾವಳಿ ಕನ್ನಡ
- ಉತ್ತರ ಕರ್ನಾಟಕದ ಗಟ್ಟಿತನ
- ಮಂಗಳೂರು ತೂಲುವ ಪ್ರಭಾವ
- ನುಡಿಯಲ್ಲಿರುವ ಗಾದೆಗಳು, ಹನಿಗವನಗಳು, ಮಾತುಗಾರಿಕೆಗಳು ಜನಜೀವನದ ನಿಜ ಪ್ರತಿಬಿಂಬ

**2.3 ನುಡಿ ಮತ್ತು ಸಂಸ್ಕೃತಿ :** ಕನ್ನಡ ನುಡಿ ನಮ್ಮ ಸಂಸ್ಕೃತಿಯ ಒಳನೋಟ ಕೊಡುತ್ತದೆ:

- "ಮಾತು ಮೌನಕ್ಕಿಂತ ಶ್ರೇಷ್ಠವಾದಾಗ ಮಾತ್ರ ಬಳಸು" – ನುಡಿ ಮುತ್ತು
- ಗಾದೆಗಳು: "ಆಡು ಮುಟ್ಟದ ಸೊಪ್ಪಿಲ್ಲ", "ಕಲ್ಲಿದ್ದರೂ ಬಲ್ಲಿಬೇಡ"
- ಹನಿಗವನಗಳು: ಡಾ. ಪುತಿನ
- ನುಡಿನಾಡು, ನುಡಿಹಬ್ಬಗಳು – ನುಡಿಯ ಗೌರವಕ್ಕಾಗಿ

**3. ಕನ್ನಡ ಭಾಷೆ – ಸಾಹಿತ್ಯ, ಲಿಪಿ ಮತ್ತು ಜಾಗತಿಕ ಗುರುತು**

**3.1 ಕನ್ನಡ ಭಾಷೆಯ ವೈಶಿಷ್ಟ್ಯ**

- ದ್ರಾವಿಡ ಭಾಷಾ ಕುಟುಂಬದ ಅತ್ಯಂತ ಹಳೆಯ ಭಾಷೆ
- 3ನೇ ಶತಮಾನ ಈಸಾಪೂರ್ವದಿಂದಲೇ ಬಳಕೆಯಲ್ಲಿತ್ತು
- ಸುಸ್ಥಾಪಿತ ವ್ಯಾಕರಣ, ಲಿಪಿ, ಛಂದಸ್ಸು

**3.2 ಕನ್ನಡ ಸಾಹಿತ್ಯದ ವೈಭವ :** ಕನ್ನಡ ಸಾಹಿತ್ಯವು ಐದು ಪ್ರಮುಖ ಯುಗಗಳಲ್ಲಿ ಬೆಳೆಯಿತು:

1. ಪೂರ್ವ ಹಳೆ ಕನ್ನಡ
2. ಹಳೆ ಕನ್ನಡ ಯುಗ – ಪಂಪ, ರನ್ನ, ಪುನ್ನ
3. ನಡುಕನ್ನಡ ಯುಗ – ಹರಿಹರ, ರಾಘವಾಂಕ
4. ಹೆಚ್ಚಿನ ಕನ್ನಡ ಯುಗ – ಕುವೆಂಪು, ಬೇಂದ್ರೆ, ಮಾಸ್ತಿ
5. ಆಧುನಿಕ ಸಾಹಿತ್ಯ – ತೇಜಸ್ವಿ, ಆನಂತಮೂರ್ತಿ, ಪಾರಂಪರ್ಯ ಮತ್ತು ನವಚೇತನ

**3.3 ಕನ್ನಡದ ಜ್ಞಾನಪೀಠ ಹೆಮ್ಮೆ :** ಕನ್ನಡ ಸಾಹಿತ್ಯಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳು – ಭಾರತದ ಯಾವುದೇ ಭಾಷೆಯಲ್ಲಿ ಅತ್ಯಧಿಕ ಪ್ರಶಸ್ತಿ ಪಡೆದ ಭಾಷೆಗಳಲ್ಲಿ ಒಂದು.

**3.4 ಕನ್ನಡ ಲಿಪಿ :** ಕನ್ನಡ ಲಿಪಿ ಬ್ರಾಹ್ಮಿ ಮೂಲದಿಂದ ರೂಪುಗೊಂಡ ಸುಂದರ ಅಕ್ಷರರೂಪ:

- 49 ಅಕ್ಷರಗಳು
- 8 ಸ್ವರ, 34 ವ್ಯಂಜನ
- ಲಾಲಿತ್ಯಪೂರ್ಣ, ಓದಲು ಸುಲಭ

**4. ನಾಡು – ನುಡಿ – ಭಾಷೆ: ಪರಸ್ಪರ ಸಂಬಂಧ**

**4.1 ನಾಡು ನುಡಿಗೆ ನೆಲೆ :** ನಾಡೇ ನುಡಿ ಹುಟ್ಟುವ ಜಾಗ. ನಾಡಿನ ಪರಂಪರೆ, ಆಚಾರ–ವಿಚಾರ ನುಡಿಯಲ್ಲಿ ಮೂಡುತ್ತದೆ.

**4.2 ನುಡಿ ಭಾಷೆಗೆ ಜೀವ :** ನುಡಿಯಿಲ್ಲದೆ ಭಾಷೆ ಶಬ್ದಪೂರ್ವಕವಾಗಿದ್ದರೂ ಭಾವವಿಲ್ಲದ ಸಂಗ್ರಹ. ನುಡಿ ಭಾವನೆಗಳನ್ನು ಅನಾವರಣಗೊಳಿಸುತ್ತದೆ.

4.3 ಭಾಷೆ ಸಂಸ್ಕೃತಿಯನ್ನು ಉಳಿಸುವ ಶಕ್ತಿ : ಭಾಷೆ ಕೇವಲ ಸಂವಹನವನ್ನೇ ಅಲ್ಲ, ಪೀಳಿಗೆಯ ಜ್ಞಾನವನ್ನು ಮುಂದಕ್ಕೆ ಒಯ್ಯುವ ಶಕ್ತಿ.

**5. ಕನ್ನಡ ನಾಡು–ನುಡಿ–ಭಾಷೆಯ ಇಂದಿನ ಸ್ಥಿತಿ**

**5.1 ಅಭಿವೃದ್ಧಿ**

- ಕನ್ನಡವನ್ನು II ಭಾಷೆಯಾಗಿ ಕಡ್ಡಾಯಗೊಳಿಸಲಾಗಿದೆ
- ಡಿಜಿಟಲ್ ಕನ್ನಡ: ಗಟುಛಿಂಜಜ, ಕನ್ನಡ ಟೈಪಿಂಗ್, ಅಪ್ಲಿಕೇಶನ್‌ಗಳು
- ಕನ್ನಡ ಚಲನಚಿತ್ರ, ಸಂದರ್ಶನಗಳು, ಮೀಡಿಯಾ ವ್ಯಾಪಕ

**5.2 ಎದುರುನೋಡುವ ಸವಾಲುಗಳು**

- ಇಂಗ್ಲಿಷ್ ಪ್ರಾಬಲ್ಯ
- ನಗರೀಕರಣದಿಂದ ಉಚ್ಚಾರಣಾ ವ್ಯತ್ಯಾಸ
- ಯುವಜನರಲ್ಲಿ ಕನ್ನಡ ಬಳಕೆ ಕಡಿಮೆಯಾಗುವುದು

**5.3 ಪರಿಹಾರಗಳು**

- ಶಾಲೆಗಳಲ್ಲಿ ಕನ್ನಡ ಪ್ರೋತ್ಸಾಹ
- ಮನೆಗಳಲ್ಲಿ ಕನ್ನಡ ಮಾತು
- ಸಾಹಿತ್ಯ–ಕಲೆಗಳಿಗೆ ಉತ್ತೇಜನ
- ಕನ್ನಡ ಡಿಜಿಟಲ್ ಕಂಟೆಂಟ್ ರಚನೆ

**ಉಪಸಂಹಾರ**

ಕನ್ನಡ ನಾಡು ನಮ್ಮ ಇತಿಹಾಸದ ಹೆಮ್ಮೆ, ಕನ್ನಡ ನುಡಿ ನಮ್ಮ ಹೃದಯದ ಮಾತು, ಕನ್ನಡ ಭಾಷೆ ನಮ್ಮ ಜ್ಞಾನ ಮತ್ತು ಸಂಸ್ಕೃತಿಯ ಸಂಪತ್ತು. ಇವು ಮೂರು ಒಂದು ಗಿಡದ ಬೇರು–ಸೊಪ್ಪು–ಹಣ್ಣುಗಳಂತೆ ಪರಸ್ಪರ ಸಂಬಂಧ ಹೊಂದಿವೆ. ಇವುಗಳನ್ನು ಉಳಿಸುವುದು ನಮ್ಮ ಪೀಳಿಗೆಗಳ ಹೊಣೆ. ನಮ್ಮ ನುಡಿ ನಮ್ಮ ನೆಲೆ – ಕನ್ನಡವೇ ನಮ್ಮ ಹೆಮ್ಮೆ" ಎಂಬುದು ಪ್ರತಿಯೊಬ್ಬ ಕನ್ನಡಿಗನ ಬದುಕಿನ ಮಂತ್ರವಾಗಿರಬೇಕು.

# 2024-25ನೇ ಸಾಲಿನ ಭಾಷಾ ಸಂಘದ ವಾರ್ಷಿಕ ಚಟುವಟಿಕೆಗಳ ಛಾಯಾಚಿತ್ರಗಳು

























ಬರಹದ ವೈಶಿಷ್ಟ್ಯವೆಂದರೆ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನೂ ಆಕರ್ಷಿಸುವ ಗುಣವನ್ನು ಪಡೆದುಕೊಂಡಿರುತ್ತದೆ. ಓದುಗರಲ್ಲಿ ಅಭಿರುಚಿ ಮೂಡಿಸುವ ಕಾರ್ಯವನ್ನುರಹ ಮಾಡುತ್ತದೆ. ಬರಹಗಳು ಲೇಖಕರ ಆತ್ಮಕೇಂದ್ರಿತ. ಸಮಾಜ, ಸಾಹಿತ್ಯ, ಸಂಸ್ಕೃತಿ ಕೇಂದ್ರಿತವೆ ಎಂಬ ಪ್ರಶ್ನೆಯೂ ಇದೆ. ಸಾಮಾನ್ಯವಾಗಿ ಬರಹದಲ್ಲಿ ಲೇಖಕರು ನಾನು ಎಂಬ ಪ್ರತ್ಯಯವನ್ನು ಬಳಸಿದರೂ ಅದು ಆತ್ಮಕೇಂದ್ರಿತ ಅಥವಾ ಅಹಮಿಕೆಯನ್ನು ಸೂಚಿಸುವ ಪದವಾಗಿ ಉಳಿಯುವುದಿಲ್ಲ. ಬದಲಿಗೆ ಬರಹಕ್ಕೆ ಸಂವಾದ ಸ್ವರೂಪವನ್ನು ನೀಡುತ್ತದೆ. ಪ್ರಶಿಕ್ಷಣಾರ್ಥಿಗಳು,ಸಹಾಯಕ ಪ್ರಾಧ್ಯಾಪಕರುಗಳು ತಾವು ಕಂಡ ಕನ್ನಡದ ಬಗೆಗಿನ ಹಲವು ಆಯಾಮಗಳನ್ನು ಓದುಗರ ಪ್ರಜ್ಞೆಗೆಸಾಣೆ ಹಿಡಿಯವ, ಸತ್ಯದ ಪರ ಜನಾಭಿಪ್ರಾಯವನ್ನು ರೂಪಿಸುವ "ಚಿಗುರು" ವಾರ್ಷಿಕ ಸಂಚಿಕೆಯಾಗಿದೆ. ಬಹುತೇಕ ಕನ್ನಡ ಸಾಹಿತ್ಯ, ಸಾಹಿತ್ಯಕ ಚರ್ಚೆಗಳು, ರಂಗಭೂಮಿ, ಚಲನಚಿತ್ರ, ಕಲೆ, ಶಿಕ್ಷಣ, ಜಾನಪದ, ಕನ್ನಡ ನಾಡು ನುಡಿ ಹೀಗೆ ಹಲವು ಸಾಂಸ್ಕೃತಿಕ ವಿಷಯಗಳ ಕುರಿತು ಅನಾವರಣವಾದ ಸುಂದರ ಹೊತ್ತಿಗೆ ಇದಾಗಿದೆ ಎಂದು ಭಾವಿಸುತ್ತೇವೆ.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ

ಪ್ರಶಿಕ್ಷಣಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಕೌಶಲಗಳನ್ನು ಬೆಳೆಸುವುದರೊಂದಿಗೆ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಹೆಚ್ಚು ಉತ್ಸಾಹದಿಂದ ಭಾಗವಹಿಸುವಂತೆ ಮಾಡುವ ಉದ್ದೇಶದಿಂದ ಭಾಷಾ ಸಂಘವನ್ನು ಸ್ಥಾಪಿಸಲಾಗಿದೆ. ಈ ಸಂಘವು ಪ್ರಶಿಕ್ಷಣಾರ್ಥಿಗಳನ್ನು ಭಾಷಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಅಭಿಪ್ರೇರಿಸುವ ಕಾರ್ಯವನ್ನುಹ ಮಾಡುತ್ತಿದೆ. ಹಾಗೂ ಸಂಘದ ವತಿಯಿಂದ ಕೈಗೊಳ್ಳುವಂತಹ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚು ಮಾಹಿತಿ ಪೂರ್ಣವಾಗಿದ್ದು ಪ್ರಶಿಕ್ಷಣಾರ್ಥಿಗಳ ಭಾಷಾ ಪ್ರೌಢಿಮೆಯನ್ನು ಹೆಚ್ಚಿಸುವುದರೊಂದಿಗೆ ಲಭ್ಯವಿರುವ ಸಮಯಾವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಮಾಡುವ ಒಂದು ಉತ್ತಮ ವೇದಿಕೆಯಾಗಿದೆ. ಪ್ರಶಿಕ್ಷಣಾರ್ಥಿಗಳಲ್ಲಿಸೃಜನಾತ್ಮಕ ಬರವಣಿಗೆ ಹಾಗೂ ಓದುವ ಕೌಶಲಗಳನ್ನು ವೃದ್ಧಿಸುವ ದೃಷ್ಟಿಯಿಂದ ವಾರ್ಷಿಕವಾಗಿ "ಚಿಗುರು" ಎಂಬ ವಾರ್ಷಿಕ ಹೊತ್ತಿಗೆಯನ್ನು ಹೊರತರಲಾಗುತ್ತಿದೆ.

Price Rs 270.00
979-890269976-7
9 798902 699767